ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಂಯಿಷ್ ಆದ್ದು. [ನಂ. 23.

ಬೆಂಗಳೂರು, ಗುರುವಾರ, ಜೂನ್ ತಾ|| 9, ಸನ 1904.

IIನೆ ಭಾಗ.

ಇಂಡ್ಯಗವರ್ನಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್‌ರು ವಗ್ಗೈರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್, ತಾರೀಖು 7ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—1904–1905ನೆ ಇಸವಿಗೆ ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ಸ್ಟೇಟ್ ಫಾರೆಷ್ಟ್‌ಗಳ ಪಸೂರೆ ಜಿನಸಿಯ ಹಕ್ಕುದಾರಿಯನ್ನು ರೇಂಜ್ ಫಾರೆಷ್ಟ್ ಆಫಿಸರುಗಳು ಈ ಕೆಳಗೆ ಕಾಣಿಸಿ ಇರುವ ಸ್ಥಳಗಳಲ್ಲಿಯು ಆಯಾಯ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ:—

ಈ ಹರಾಜು ಡಿಸ್ಟ್ರಿಕ್ಟ್ ಫಾರೆಷ್ಟ್ ಆಫಿಸರವರ ಮುಂಜೂರಾತಿಗೆ ಒಳಪಟ್ಟು ಇರುತ್ತೆ. ಹರಾಜು ಆಯಾಯ ತಾರೀಖಿನ ಮಧ್ಯಾನ್ಹ 12 ಘಂಟೆಗೆ ಸುರು ಮಾಡಲ್ಪಡುವದು.

ನಂಬರ್.	ರೇಂಜ್.	ಸ್ಟೇಟ್ ಫಾರೆಷ್ಟ್‌ಗಳ ಹೆಸರು.	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
1	ಬೆಂಗಳೂರು ...	ಉಜನಿ, ಹುಲ್ಲಡಿ, ಮೂಕಳ, ದೇವರಬಟ್ಟ, ನಾಯಕನಹಳ್ಳಿ.	ದೊಡ್ಡಬಳ್ಳಾಪುರ	1ನೆ ಜುಲೈ 1904.
		ರಾಗಿಹಳ್ಳಿ ಫಾರೆಸ್ಟ್ ...	ಬನ್ನೇರಘಟ್ಟ	4ನೆ ಡಿಟೋ
		ಬಳನಕುಪ್ಪೆ ...		
		ತಮ್ಮೇನಾಯಕನಹಳ್ಳಿ ...		
2	ಕೋಲಾರ್‌ಪೇಟೆ ...	ಕುಂಬಳಗೋಡು ರಿಜರ್ವ್ ...	ಕೋಲಾರ್‌ಪೇಟೆ ರೇಂಜ್ ಫಾರೆಸ್ಟ್ ಆಫೀಸ್	8ನೆ ಡಿಟೋ
		ಹುಲತಾರು ...		
		ಮೂಕಳಿ ...		
		ತೆಂಗಿನಕಲ್ಲು ...		
		ಚಿಕ್ಕ ಮಂಣುಗುಡ್ಡೆ ...		
		ದೊಡ್ಡ ಮಂಣುಗುಡ್ಡೆ ...		
		ಅಚ್ಚಲ್ ...		
		ಸಾವನದುರ್ಗ ...	ನಾಯಕನದೊಳ್ಳ ಫಾರೆಸ್ಟ್ ಲಾಡ್ಜ್, ಮೂಗಡಿ ತಾಲ್ಲೂಕು	9ನೆ ಡಿಟೋ
		ಶಿದ್ದೇದೇವರಬೆಟ್ಟ ...		
		ಅತ್ತಿಂಗೆರೆ ...		
3	ಕಾನಕಾನಹಳ್ಳಿ ...	ಬಿಳಕಲ್ ಫಾರೆಸ್ಟ್ ...	ಕಾನಕಾನಹಳ್ಳಿ ರೇಂಜ್ ಫಾರೆಸ್ಟ್ ಆಫೀಸ್	11ನೆ ಡಿಟೋ
		ಬಾಣಂತಿಪೂರಿ ...		
		ಮುಗ್ಗೂರು ಫಾರೆಸ್ಟ್ ...	ಕೋಡಿಹಳ್ಳಿ ಮುಸಾಫರ ಬಂಗ್ಲೆ	12ನೆ ಡಿಟೋ
		ಚಿಲಂದೂಡಿ ...	ನಾತನೂರು ಮುಸಾಫರ ಬಂಗ್ಲೆ	13ನೆ ಡಿಟೋ
		ಬಸವನಬೆಟ್ಟ		
		ಕಬ್ಬಾಳು ..		

ಜಿನಸಿಯ ತಪಶೀಲ್.

1. ಹುಣಸೇಹಣ್ಣು, 2. ಹೊಂಗೇಬೀಜ, 3. ಬೀಗೇಕಾಯಿ, 4. ಗೋಂದು, 5. ಜೀನುತುಪ್ಪ, 6. ಜೀನುನೋಣ, 7. ಕಪಿ ಲಾರಂಗು, 8 ಗೇರುಬೀಜ, 9. ಬ್ಯಾಲದಹಣ್ಣು, 10. ಕಲ್ಲುಸುಪ್ಪು, 11 ಚಾರಪೊಪ್ಪು, 12. ತಾರೇಕಾಯಿ, 13. ಹಗಜೆಬೀಜ, 14. ಅಂಟುವಾಳದಕಾಯಿ, 15. ಕಾಡಹರಳು, 16. ಬೂರಗದ ಹತ್ತಿ, 17. ಕಿರಿ ಈಚಲು, 18. ಮಾಗಳಿಬೇರು, 19. ಸೊಗದೇ ಬೇರು, 20. ಹಿಪ್ಪೆಬೀಜ, 21. ಕೊಂಬುಗಳು, 22. ಅಳಲೆಕಾಯಿ.

2. ಚಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಒಟ್ಟು ಮೊಬಲಗಿನ ಪೈಕಿ ಕಾಲು ಹಿಸ್ಸೆ ಮೊಬಲಗನ್ನು ಪಾವತಿ ಮಾಡತಕ್ಕದ್ದು. ಈ ರೀತಿ ಪಾವತಿ ಮಾಡದೆ ತಪ್ಪಿದಲ್ಲಿ ಮರುಸರಾ ಹರಾಜು ಮಾಡಲ್ಪಡುವದಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಪೂರ್ತಿ ದರಖಾಸ್ತುದಾರನನ್ನು ಗುರಿಮಾಡಲ್ಪಡುತ್ತೆ. ಆದರೆ ಫಾಯಿದೆ ಉಂಟಾದಲ್ಲಿ ಈತನು ಭಾಗಿಯಾಗುವದಿಲ್ಲ.

3. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸುವ ಒಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಸದರಿ ಹಣವನ್ನು ಪಾವತಿ ಮಾಡದೇ ತಪ್ಪಿದಲ್ಲಿ ಮೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಕೇಸಿಸಿಕೊಳ್ಳುವದಲ್ಲದೆ ಇನ್ನು ಬಾಕಿ ಉಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ್ ಮಾಡಲಾಗುತ್ತೆ.

4. ರೇಂಜ್ ಫಾರ೸್ಟ್ ಆಫಿಸರು ಯಾವದೊಂದು ಕಾರಣವನ್ನು ತಿಳಿಸದೇ ದರಖಾಸ್ತು ಮಂಜೂರ್ಮಾಡುವದಕ್ಕೆ ಆಗಲೀ ತಿರಸ್ಕರಿಸುವದಕ್ಕಾಗಲೀ ಸ್ವತಂತ್ರರಾಗಿ ಇರುತ್ತಾರೆ.

5. ದರಖಾಸ್ತುದಾರನು ಇನ್ನೊಂದಾರಿಗೆ ಗೊತ್ತಾದ ಹಕ್ಕುಗಳಲ್ಲಿ ಪ್ರವೇಶಿಸಕೂಡದು.

6. ದರಖಾಸ್ತುದಾರನಾಗಲಿ ಅಥವಾ ಅವನ ಆಳುಗಳೇ ಆಗಲಿ ಪರವಾನಿಗೆ ಜಿನಸಿ ಜವಾಬಣಿ ನೆಪದಮೇಲೆ ಯಾವ ಗಿಡಗಳನ್ನಾಗಲೀ ನಾಶಪಡಿಸಕೂಡದು.

7. ದರಖಾಸ್ತುದಾರನು ತಾನು ಖರೀದಿಗೆ ಪಡದಿರುವ ಜಿನಸಿ ವಿನಃ ಇತರ ಯಾವ ಜಿನಸಿಯನ್ನೂ ಜವಾಯಿಸಕೂಡದು.

8. ದರಖಾಸ್ತುದಾರನ ಏಜಂಟರುಗಳಾಗಲೀ ಅಥವಾ ಆಳುಗಳುಗಲೀ ಪರವಾರೆ ಜಿನಸಿ ಜವಾಬಣೇ ಕಾಲದಲ್ಲಿ ಮಾಡಿದ ಕೃತ್ಯಕ್ಕೆ ದರಖಾಸ್ತುದಾರನನ್ನೇ ಗುರಿಪಡಿಸಲಾಗುತ್ತೆ.

9. ದರಖಾಸ್ತುದಾರನು 1905ನೆ ಇಸವಿ ಏಪ್ರಿಲ್ ತಾರೀಖು ವಳಗಾಗಿ ಎಲ್ಲಾ ಪರವಾನಿಗೆ ಜಿನಸಿಯನ್ನು ಸ್ಟೇಟ್ ಫಾರೆಸ್ಟ್ ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

10. ಸ್ಟೇಟ್ ಫಾರೆಸ್ಟಿಗೆ ದರಖಾಸ್ತುದಾರನ ಅಶ್ರದ್ಧೆಯಿಂದಲಾಗಲೀ ಅಥವಾ ಈತನ ಆಳುಗಳಿಂದಲಾಗಲೀ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟು ಇಲಾಖೆಯವರಿಗೆ ತಿಳಿಯುವಂದಲ್ಲಿ ಈ ಅಕೃತ್ಯಕ್ಕೆ ದರಖಾಸ್ತುದಾರನನ್ನು ಗುರಿಪಡಿಸಲಾಗುತ್ತೆ.

11. ದರಖಾಸ್ತುದಾರನೇ ಆಗಲೀ ಅಥವಾ ಈತನ ನೌಕರರೇ ಆಗಲಿ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತಮಯಾನಂತರ ಸ್ಟೇಟ್ ಫಾರೆಸ್ಟಿನಲ್ಲಿ ಪ್ರವೇಶ ಮಾಡಕೂಡದು.

12. ಹರಾಜು ದರಖಾಸ್ತುದಾರನು ತನ್ನ ಕಂಟ್ರಾಕ್ಟು ಷರತ್ತುಗಳಿಗೆ ಬದ್ಧನಾಗಿರಲು ಖಾತರೀ ಬಗ್ಗೆ 50 ರೂಪಾಯಿಗಳನ್ನು ನಗದಾಗಿ ಠೇವಣಿ ಇಡಬೇಕು. ಷರತ್ತುಗಳ ಪೈಕಿ ಯಾವ ಭಾಗದಲ್ಲಿಯಾದರೂ ವಿರೋಧವಾಗಿ ನಡದದ್ದೇ ಆದರೆ ಖಾತರೀ ಬಗ್ಗೆ ಠೇವಣಿ ಇಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತಗಪುಕೊಳ್ಳುವದಲ್ಲದೆ ಬಾಬು ರೂಢಿಸಿಕೊಳ್ಳುವ ಹಕ್ಕು ಸಹ ರದ್ದು ಪಡಿಸಲಾಗುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟ್.

1904ನೆ ಇಸವಿ ಮೇ ತಾರೀಖು 30ನೆಲ್ಲು.

ಫಾರೆಸ್ಟ್ ಸೆಟ್ಲ್‌ಮೆಂಟ್, ಬೆಂಗಳೂರು ಡಿಸ್ಟ್ರಿಕ್ಟ್.

ಚನ್ನಪಟ್ಣ ತಾಲ್ಲೂಕು, ಕೂರ್ಣಗೆರೆ ಫಾರಸ್ಟು.

ಸ೯ 1901ನೆ ಇಸವಿ 11ನೆ ಖಾನೂನಾದ ಮೈಸೂರ ಫಾರೆಸ್ಟ್ ರೆಗ್ಯುಲೇಷ್ನ್ 5ನೆ ಪ್ರಕರಣವನ್ನು ಅನುಸರಿಸಿ ಸಮಸ್ತ ಜನಗಳಿಗೂ ಇದರಿಂದ ಪ್ರಸಿದ್ಧಪಡಿಸುವದೇನಂದರೆ :—

1904ನೆ ಇಸವಿ ಮಾರ್ಚ್ ಮಾಹೆ 8ನೆ ತಾರೀಖಿನ ಮೈಸೂರ ಗೆಜೆಟ್ಟಿನಲ್ಲಿ ಪ್ರಕಟಪಡಿಸಿರುವ ಮೇರೆಗೆ ಈ ಕೆಳಗೆ ತಪಸೀಲು ಕಂಡ ಜವಿ೯ ಪ್ರದೇಶವನ್ನೆಲ್ಲಾ ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಬೇಕೆಂದು ನಿಶ್ಚಯಿಸಲ್ಪಟ್ಟಿದೆಯಾದ್ದರಿಂದ ಈ ಇಸ್ತಿಹಾರು ಫಾಯಿಷಾದ ಲಾಗಾಯಿತು ಮೈಸೂರ ಫಾರೆಸ್ಟ್ ರೆಗ್ಯುಲೇಷ್ನ್ 17ನೆ ಪ್ರಕರಣವನ್ನು ಅನುಸರಿಸಿ, ಇನ್ನೊಂದು ಹೊಸ ಇಸ್ತಿಹಾರು ಕೊಡಲ್ಪಡುವ ವರಿಗೆ, ಸದರೀ ಪ್ರದೇಶದಲ್ಲಿ ಅಡಗಿರುವ ಯಾವ ಜವಿನಿನಲ್ಲಾಗಲೀ ಯಾವ ಹಕ್ಕೂ ನೂತನವಾಗಿ ಸಂಪಾದಿಸಲ್ಪಡತಕ್ಕದ್ದಲ್ಲವು. ಆದರೆ ವಾರಸ್ದಾರಿಯಿಂದ ಪಡದ ಹಕ್ಕೂ, 1903ನೆ ಇಸವಿ ಫೆಬ್ರವರಿ ಮಾಹೆ 12ನೆ ತಾರೀಖಿಗೆ ಹಿಂದೆ ಸರ್ಕಾರದಿಂದಲಾಗಲೀ, ಅಥವಾ ಪೇರೆ ಬಾಧ್ಯಕರ್ತರಿಂದಾಗಲೀ ಮೊದಲೇ ಹುಟ್ಟಿ, ಲಿಖಿತಮೂಲಕ ನಿರ್ಧರಿಸಲ್ಪಟ್ಟಿರುವ ದಾನ, ದಕ್ಷ್ಯ, ವಗ್ಗರೆ ಲೇವಾದೇವಿಯಿಂದುಂಟಾದ ಯಾವ ಬಾಧ್ಯತೆಯೂ ಸಹ, ಇದರಿಂದ ನಿರೋಧಿಸಲ್ಪಡುವದಿಲ್ಲವು. [ಅನುಮಾನಾಸ್ಪದವಾದ ಸಂದರ್ಭಗಳಲ್ಲಿ ಈ ಕೆಳಗೆ ದಸ್ತತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರಿಗೆ ಬರದುಕೊಂಡು ಅವರಿಂದ ಲಿಖಿತಮೂಲಕವಾದ ಅಪ್ಪಣೆ ಪಡಿಬಿ ನಡೆದುಕೊಳ್ಳತಕ್ಕದ್ದು.]

965

ಸದರೀ ಪ್ರದೇಶದಲ್ಲಿ ಯಾವ ಕಡೆಯಲ್ಲೂ ಸಾಗುವಳೀಗಾಗಲೀ, ಇನ್ಯಾವ ಉದ್ದೇಶಕ್ಕಾಗಲಿ, ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರ ಅಪ್ಪಣೆ ಶಿವಾಯ್, ಗಿಡ ಕತರಾವಣಿ ವಗೈರೆ ಮಾಡಲ್ಬಡಕೂಡದು.

ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರ ಅನುಮತಿ ಇಲ್ಲದೆ ಆ ಪ್ರದೇಶದಲ್ಲಿ ಯಾವ ಜವಿನಿಗೂ ಸಾಗುವಳಿ ಪಟ್ಟೆ ಕೊಡಲ್ಪಡುವದಿಲ್ಲವೆ.

ಆದುದರಿಂದ ಮೇಲ್ಕಂಡ ಜವಿನಿನ ಪೈಕಿ ಯಾವದಕ್ಕಾದರೂ ಹಕ್ಕಧೆಯೆಂದು ಮಾಡಿಸುವ ಸಮಸ್ತ ಜನಗಳು, ಈ ಇಸ್ತಿಹಾರು ಮೈಸೂರ ಗೆಜೆಟ್ಟಿನಲ್ಲಿ ಘಾಯಿಷಾದ ತಾರೀಖು ಲಾಗಾಯಿತು ಮೂರು ತಿಂಗಳೊಳಗಾಗಿ, ತಮ್ಮ ಹಕ್ಕುಗಳ ಸ್ವಭಾವವನ್ನು ಈ ಕೆಳಗೆ ದಸ್ತತ್ ಮಾಡಿರುವ ಫಾರೆಸ್ಟ್ ಸೆಟಲ್‌ಮೆಂಟ್ ಆಫಿಸರವರಲ್ಲಿ ರೂಬರೂಬ್ ಹಾಜರಾಗಿ, ಮೂಜುಬಾನಿಯಿಂದಾಗಲೀ, ಅರ್ಜಿ ಮೂಲಕವಾಗಿಯಾಗಲೀ, ಮನಿವೆ ಮಾಡಿಕೊಳ್ಳತಕ್ಕದ್ದಲ್ಲದೆ ತಮ್ಮ ಹಕ್ಕುಗಳನ್ನು ಸ್ಥಾಪಿಸುವದಕ್ಕೆ ಸಾಧಕವಾಗಬಹುದಾದ ದಸ್ತ್ರವೇಜು ವಗೈರೆಗಳನ್ನು ಸಹ ಹಾಜರ್ಮಾಡತಕ್ಕದ್ದು.

ಫಾರೆಸ್ಟ್ ರೆಗ್ಯುಲೇಷನ್ 17ನೆ ಪ್ರಕರಣವನ್ನು ಅನುಸರಿಸಿ ಮೇಲ್ಕಂಡ ಜವಿನ್ ಪ್ರದೇಶವು ಸರ್ಕಾರಿ ಮನ್ನಾ ಜಂಗ್ಲಿಯಾಗಿ ಮಾಡಲ್ಪಟ್ಟ ಬಗ್ಗೆ ಮೈಸೂರ ಗೆಜೆಟ್ಟಿನಲ್ಲಿ ಇಸ್ತಿಹಾರ್ ಪ್ರಕಟನೆಯಾಗುವದಕ್ಕೆ ಮುಂಚೆ (ಅಂದರೆ ಮೇಲ್ಕಂಡ ನಾಯಿದೆಯೊಳಗಾಗಿ) ಯಾವ ಹಕ್ಕುಗಳ ಬಾಧ್ಯತೆಯು ಮಾಡಿಸಲ್ಪಡುವದಿಲ್ಲವೊ ಅಂಥ ತಮಾಂ ಹಕ್ಕುಗಳು ರದ್ದಾಗುವವಲ್ಲದೆ, ಅನಂತರ ಯಾವ ಮನಿವೆಯೂ ತಕರಾರೂ ಅಂಗೀಕರಿಸಲ್ಪಡುವದಿಲ್ಲವು.

ಪ್ರದೇಶದ ವಿವರ.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಮತ್ತು ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕ್‌ನ ಹೆಸರು.	ಸ್ಥಳ ಮತ್ತು ಚಕ್ಕುಬಂದಿ.
ಬೆಂಗಳೂರು.	ಜಿನ್ನಪಟ್ಟಣ ತಾಲ್ಲೂಕು ಮುದಿಗೆರೆ ಹೋಬಳಿ, ಕೂರ್ಣಗೆರೆ.	599 ಎಕರೆ, 20 ಗುಂಟೆ.	ಕೂರ್ಣಗೆರೆ ಫಾರೆಸ್ಟು.	ಸ್ಥಳ.—ಈ ಪ್ರದೇಶವು ಮೈಸೂರು–ಬೆಂಗಳೂರು ಹೈರೋಡಿನಲ್ಲಿ ಮುದಿಗೆರೆ ಸ್ಟೇಷನ್‌ಗೆ ಉತ್ತರಕ್ಕೆ ಸುಮಾರು ನಾಲ್ಕು ಮೈಲಿ ದೂರದಲ್ಲಿರುತ್ತದೆ. ಉತ್ತರಕ್ಕೆ.—ಬಳಕೆರೆ ಗ್ರಾಮದ ಸರ್ವೆ 44ನೆ ನಂಬರಿನ ದಕ್ಷಿಣ ಭಾಗದ ಬಂದು ಕೊನೆಯಿಂದ ಹೊರಟು, ವಡ್ಡರ್ಚಿನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ಈಶಾನ್ಯ ಮೂಲೆಯನ್ನು ಮುಟ್ಟಿ ಎಲ್ಲೆಯು ಬೆಳಕೆರೆ ಗ್ರಾಮದ ಸರ್ವೆ 44ನೆ ನಂಬರಿನ ದಕ್ಷಿಣ ಪಾರ್ಶ್ವವಾಗಿ ಗೋವಿಂದಹಳ್ಳಿ ಸರ್ವೆ 71ನೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಗೋವಿಂದ ಹಳ್ಳಿ ಸರ್ವೆ 71ನೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಕೂರ್ಣಗೆರೆ ಗ್ರಾಮದ ಸರ್ವೆ 148ನೆ ನಂಬರಿನ ವಾಯುವ್ಯ ಮೂಲೆಗೂ, ಅಲ್ಲಿಂದ ಅದೇನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ, ಕುಕ್ಕೂರು ಗ್ರಾಮದ ಸರ್ವೆ 15ನೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಕುಕ್ಕೂರು ಗ್ರಾಮದ ಸರ್ವೆ 15ನೆ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಅದರ ವಾಯುವ್ಯ ಮೂಲೆಗೂ, ಅಲ್ಲಿಂದ 101ನೆ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ $4\frac{3}{4}$ ಫರ್ಲಾಂಗ್ ದೂರದವರಿಗೂ ಹೋಗುತ್ತದೆ. ಪಶ್ಚಿಮಕ್ಕೆ.—ತರುವಾಯ ಕುಕ್ಕೂರು ಗ್ರಾಮದ ಸರ್ವೆ 101ನೆ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ, ವಡ್ಡರ್ಚಿನಹಳ್ಳಿ ಗ್ರಾಮದ ಸರ್ವೆ 85ನೆ ನಂಬರಿನ ನೈರುತ್ಯ ಮೂಲೆಗೂ, ಅಲ್ಲಿಂದ ಅದೇ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟ ಸ್ಥಳವನ್ನು ಕೇರುತ್ತದೆ.

ಬಿ. ರಾಮಸ್ವಾಮಯ್ಯರ್,
ಫಾರೆಸ್ಟ್ ಸೆಟ್ಲ್‌ಮೆಂಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 25—30ನೆ ಮೇ 1904ನೆ ಇಸವಿ.

1904ನೆ ಇಸವಿ ಜೂನ್ 2ನೆ ತಾರೀಖು 22ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 325ನೆ ಪೇಜಿನಲ್ಲಿ ಫಾಯಿಷು ಮಾಡಿರುವ ಮೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ಮಾಡಲ್ಪಡುವ ಚವುಬೀನಾ ಹರಾಜು ವಿಷಯದ ನೋಟಿಸನ್ನು ಸಮಸ್ತ ಜನಗಳೂ ನೋಡತಕ್ಕದ್ದು.

ತಾರೀಖು 31ನೆ ಮೇ 1904ನೆ ಇಸವಿ.

ಮೈಸೂರು ಡಿಸ್ಟ್ರಿಕ್ಟಿನ ಹುಣಸೂರು ಕೋಠಿಯಲ್ಲಿರುವ ಪಸಾರೆ ಜಿನಸಿ ಕೊಂಡುಕೊಳ್ಳಲು ಟೆಂಡರುಗಳನ್ನು ಅಪೇಕ್ಷಿಸಿರುವ ವಿಷಯದಲ್ಲಿ 26—5—04ನೆ ಮರ್ಕುಂ 21ನೆ ನಂಬರು ಮೈಸೂರು ಗೆಜೆಟ್ಟಿನ 2ನೆ ಭಾಗದ 308ನೆ ಪುಟದಲ್ಲಿ ಫಾಯಿಷು ಮಾಡಿರುವ $\frac{19}{21}$—5—1904ನೆ ಮರ್ಕುಂ ನೋಟಿಫಿಕೇಷನನ್ನು ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ಹಾಸನ ಡಿಸ್ಟ್ರಿಕ್ಟು ಅರಸೀಕೆರೆ ಡೆಪೋದಲ್ಲಿ ಕೆಲವು ಪಸಾರೇ ಜಿನಸಿ ಹರಾಜಾಗತಕ್ಕ ವಿಚಾರ 22ನೆ ನಂಬರ್ ಮೈಸೂರು ಗೆಜೆಟ್ 2-6-04ನೆ ಮರ್ಕುಂ 325ನೆ ಪೇಜಿನಲ್ಲಿ ಫಾಯಿಷ್ ಮಾಡಿರುವ ವಿಷಯ ಎಲ್ಲಾ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸಿಧೆ.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟು.

ನೋಟಿಫಿಕೇಷನ್, ತಾರೀಖು 4ನೆ ಜೂನ್ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಇದರಡಿ ಕಂಡ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಡಿಪೋಗಳ ಬಾಬತ್ತು ಚವುಬೀನೆ ಸಾಮಾನು ರೇಂಜು ಫಾರೆಸ್ಟ್ ಆಫಿಸರು ಅಥವಾ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಂದ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ಜಂಜರ್ ನಂಬರ್.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟಾ.	ಹೊಂನೆ ನಾಟಾ.	ನಂದಿ ನಾಟಾ.	ಮತ್ತಿ ನಾಟಾ.	ಅರ್ ರಿಜರ್ವ್ಡ್ ನಾಟಾ.	ಸಾಗವಾನಿ ಬೆಲಗು.	ಜಂಗಲಿ ಬೆಲಗು.	ಹೆಬ್ಬಿದರೆ.
1	ಶಿಕಾರಿಪುರ ...	18— 6—1904	..	1	5	17	7	281	65	...
2	ಆಯಿನೂರು ...	20— 6—1904	..	...	12	100	33	..	...	108
3	ಶಿವಮೊಗ್ಗಾ ...	21— 6—1904	54	48	23	..	8	..	...	..
4	ಉಂಬಳಿ ಬೈಲು ..	22— 6—1904	23	26	...	68	120	..	..	..
5	ಜೋಳರಹಾಳು ...	24— 6—1904	...	..	...	...	..	222	261	..
6	ಚಂನಗಿರಿ ..	25— 6—1904	...	...	...	..	..	1040	229	...
7	ಉಬ್ರಾಣಿ ...	27— 6—1904	...	...	..	...	...	1539	1	...

ಹರಾಜು ಷರತ್ತು :—15—3—1895ನೆ ಮರ್ಕುಂ ನಂಬರು 15229—R. F. 155-92ನೆ ಗವರ್ನಮೆಂಟ್ ನೋಟಿಫಿಕೇಷನ್ ನೋಡಬೇಕು. ಆದರೆ ಹರಾಜು ಆದಕೂಡ್ಲೆ ಪೂರಾ ಮೊಬಲಗು ಪಾವತಿ ಮಾಡಬೇಕು.

ಜೆ. ಮಾನ್ಟೈರೊ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ.

767

ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮಾಗಡಿ ತಾಲ್ಲೂಕು ಗುಡೇಮಾರ್ನಹಳ್ಳಿ ಹೋಬಳಿ ಜೋಡಿ ಮುಮ್ಮನಹಳ್ಳಿ ಗ್ರಾಮವು ಸ೯ 1904ನೆ ಇಸವಿ ಜುಲೈ 11ನೆ ತಾರೀಖುನಲ್ಲಿ ಮಾಗಡಿ ತಾಲ್ಲೂಕು ಕಛೇರಿ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂ೯ ತಿಂಗಳು 2ನೆ ತಾರೀಖು 22ನೆ ನಂಬರಿ ಮೈಸೂರು ಗೆಜೆಟ್ಟಿನ 2ನೆ ಭಾಗದ 326ನೆ ಪುಟದಲ್ಲಿ ಫಾಯಿಷ್ ಆಗಿ ಇದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮಾಗಡಿ ತಾಲ್ಲೂಕು ಗುಡೇಮಾರ್ನಹಳ್ಳಿ ಹೋಬಳಿ ಜೋಡಿ ಮುಮ್ಮನಹಳ್ಳಿ ಗ್ರಾಮವು ಸ೯ 1904ನೆ ಇಸವಿ ಜುಲೈ 9ನೆ ತಾರೀಖುನಲ್ಲಿ ಮಾಗಡಿ ತಾಲ್ಲೂಕು ಕಛೇರಿಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂ೯ ತಿಂಗಳು 2ನೆ ತಾರೀಖು 22ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 327ನೆ ಪುಟದಲ್ಲಿ ಫಾಯಿಷ್ ಆಗಿ ಇದೆ.

ಸ೯ 1904ನೆ ಇಸವಿ ತಾರೀಖು.

ರಾಮಸ್ವಾಮಯ್ಯನಿಂದ ಸ೯ 1903—04ನೆ ಸಾಲಿನ ಕಂದಾಯ ಬಾಕಿ ಬಗ್ಗೆ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಮಾಳಿಗೊಂಡಹಳ್ಳಿ ಎಂಬ ಗ್ರಾಯಂಗುತ್ತಾ ಪೂರಾಗ್ರಾಮವನ್ನು ಬೆಂಗಳೂರು ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ ವರ ರೂಬರೂಬ್ 1904ನೆ ಇಸವಿ ಜುಲೈ ತಾರೀಖು 11ನೆ ಸೋಮವಾರದ ದಿವಸ ದಿವಿ 11 ಘಂಟೆಗೆ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವುದು.

ತಪಶೀಲ್ 1904ನೆ ಜೂ೯ 2ನೆ ಮಾರ್ಕ್ಕಂ 22ನೆ ನಂಬರ್ ಮೈಸೂರು ಗೆಜೆಟ್ II ನೆ ಭಾಗದ 329ನೆ ಪುಟದಲ್ಲಿ ಫಾಯಿ ಷಾಗಿರುತ್ತೆ.

ಸ೯ 1904ನೆ ಇಸವಿ ತಾರೀಖು.

ರಾಮಚಂದ್ರರಾಯರಿಂದ ಸ೯ 1903—04ನೆ ಸಾಲಿನ ಕಂದಾಯ ಬಾಕಿ ಒಗ್ಗೆ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ವಸಂತಪುರವೆಂಬ ಜೋಡಿ ಪೂರಾ ಗ್ರಾಮವನ್ನು ಬೆಂಗಳೂರು ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರ ರೂಬ ರೂಬ್ 1904ನೆ ಇಸವಿ ಜುಲೈ ತಾರೀಖು 9ನೆ ಶನಿವಾರದ ದಿವಸ ದಿವಿ 11 ಘಂಟೆಗೆ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಬಹಿ ರಂಗವಾಗಿ ಹರಾಜು ಮಾಡಿಸಲ್ಪಡುವದು.

ತಪಶೀಲ್ 1904ನೆ ಜೂ೯ 2ನೆ ಮಾರ್ಕ್ಕಿಸ 22ನೆ ನಂಬರ್ ಮೈಸೂರು ಗೆಜೆಟ್ II ನೆ ಭಾಗದ 329ನೆ ಪುಟದಲ್ಲಿ ಫಾಯಿಷ್ ಆಗಿರುತ್ತೆ.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ತಾರೀಖು 19ನೆ ಮೇ 1904ನೆ ಇಸವಿ.

ಬವರಿಂಗ್‌ಪೇಟೆ ತಾಲ್ಲೂಕು ಬೇತಮಂಗಲದ ಹೋಬಳಿಗೆ ಸೇರಿದ ಜೋಡಿ ತಿಪ್ಪಬೋಯಿನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರ ಬೇಕಾದ ಜೋಡಿ ಬಾಕಿಗೋಸ್ಕರವಾಗಿ, ತಾಲ್ಲೂಕು ಅಮಲ್‌ದಾರ್ರ ಕಛೇರಿಯಲ್ಲಿ, 1904ನೆ ಇಸವಿ ಜುಲೈ ಮಾಹೆ 20ನೆ ತಾರೀ ಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

(ಹೆಚ್ಚು ತಪಶೀಲ್ ಬಗ್ಗೆ 1904ನೆ ಜೂ೯ 2ನೆ ಮಾರ್ಕ್ಕಂ 22ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 333ನೆ ನಂಬರ್ ಪೇಜು ನೋಡತಕ್ಕದ್ದು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡಪ್ಯುಟಿ ಕಮಿಷನರ್.

1904ನೆ ಇಸವಿ ಮಾರ್ಚಿ ಮಾಹೆ 29ನೆ ತಾ|| ವಂಗಳವಾರ ಕೋಲಾರ ಡಿ| ಬೋರ್ಡು ಮೆಂಬರುಗಳು ಕೋಲಾರದಲ್ಲಿ ಮೀಟಿಂಗು ಮಾಡಿ ನಡಿಸಿದ ನಡವಳಿಕೆಗಳ ಕೀರ್ಮಾನಗಳು.

ಹಾಜರು.

ಎಕ್ಸ್ ಅಫಿಷಿಯೋ ಮೆಂಬರುಗಳು.

1. ಡಿಪ್ಯೂಟಿ ಕಮಿಷನರ್ ಮತ್ತು ಪ್ರೆಸಿಡೆಂಟರವರು.
2. ಎಗ್ಸಿಕ್ಯೂಟಿವ್ ಇಂಜನೀಯರವರು.
3. ಚಿಕ್ಕಬಳ್ಳಾಪುರ ಸಬ್ ಡಿವೀಜನ್ ಆಫಿಸರವರು.
4. ಚಿಂತಾಮಣಿ ಡಿವಿಜನ್ ಅ' ಕಮಿಷನರವರು.
5. ಮಾಲೂರು ಡಿವಿಜನ್ ಅ' ಕಮಿಷನರವರು.
6. ಡಿಸ್ಟ್ರಿಕ್ಟ್ ಟ್ರೆಜರಿ ಆಫೀಸ್ ಆಫಿಸರವರು.
7. ಡಿಸ್ಟ್ರಿಕ್ಟ್ ಮೆಡಿಕಲ್ ಆಫಿಸರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮ|| ರಾ|| ಮುನಿನಾರಾಯಣ ಶೆಟ್ಟರವರು, ಕೋಲಾರ.
2. ,, ಉಮ್ಮತ್ತೂರಯ್ಯನವರು, ಬವರಿಂಗ್‌ಪೇಟೆ.
3. ,, ರಾಮುರಾಯರು, ಮಾಲೂರು.
4. ,, ಮರಸನಹಳ್ಳಿ ಚಿನ್ನಪ್ಪನವರು, ಶ್ರೀನಿವಾಸಪುರ.
5. ,, ನೂರನಾರಣಪ್ಪನವರು, ಚಿಂತಾಮಣಿ.
6. ,, ದೊಂತಿ ಚಿಕ್ಕ ಸುಬ್ರಾಯಪ್ಪನವರು, ಶಿಡ್ಲಘಟ್ಟ.
7. ,, ನಾರಾಯಣಸ್ವಾಮಿ ಶೆಟ್ಟರವರು, ಚಿಕ್ಕಬಳ್ಳಾಪುರ.
8. ,, ಪೊಲಿನಾಯಿಕನಹಳ್ಳಿ ವೆಂಕಟಪ್ಪನವರು, ಬಾಗೇಪಲ್ಲಿ.
9. ,, ರಾಮಣ್ಣನವರು, ಗೋರಿಬಿದನೂರು.
10. ,, ಲಕ್ಷ್ಮಣರಾಯರು, ಗುಡಿಬಂಡೆ.
11. ,, ಬಸವೆಗೌಡರವರು, ಬವರಿಂಗ್‌ಪೇಟೆ.
12. ,, ವೆಂಕಟಸ್ವಾಮಿ ರಡ್ಡಿಯವರು, ಶ್ರೀನಿವಾಸಪುರ.
13. ,, ಅಪ್ಪಾಜಿ ರಡ್ಡಿಯವರು, ಚಿಂತಾಮಣಿ.
14. ,, ವೆಂಕಟರಡ್ಡಿಯವರು, ಬಾಗೇಪಲ್ಲಿ.
15. ,, ಶ್ರೀನಿವಾಸಾಚಾರ್ಯರವರು, ಶಿಡ್ಲಘಟ್ಟ.

ಗೈರು ಹಾಜರು.

ಎಕ್ಸ್ ಅಫಿಷಿಯೋ ಮೆಂಬರು.

1. ಸ್ಕೂಲುಗಳ ಡೆ' ಇನ್‌ಸ್ಪೆಕ್ಟರವರು.

ನಾನ್ ಅಫಿಷಿಯಲ್ ಮೆಂಬರುಗಳು.

1. ಮ" ರಾ" ಕಾಷ್ಟ್ ಹೈದರ್‌ಸಾಬರು, ಮುಳಬಾಗಲ್.

(ಇವರಿಗೆ ಬದಲಾಗಿ ಪಾಷಾಮಿಯ್ಯಾ ಸಾಬರನ್ನು ನೇಮಿಸಬೇಕೆಂದು ರಿಕಾರ್ಡು ನಡದು ಗೌರ್ನಮೆಂಟಿನಿಂದ ಇನ್ನೂ ಫೈನಲ್ ಹುಕುಂ ಬಾರದ ಸಬಬು ಇವರಿಗೆ ನೋಟೀಸು ಕಳುಹಿಸಲಿಲ್ಲ)

2. ಮ|| ರಾ|| ಗೌಡಗರೆ ಕೃಷ್ಣಾಚಾರ್ಲು, ಗೋರಿಬಿದನೂರು.

1. 1903ನೆ ಅಕ್ಟೋಬರು ಮಾಹೆ 31ನೆ ತಾರೀಖಿನಲ್ಲಿ ನಡದ ಮೀಟಿಂಗಿನ ಕೀರ್ಮಾನಗಳನ್ನು ಓದಲಾಯಿತು.

ಕೀರ್ಮಾನ :—ಖಾಯಮು ಮಾಡಲ್ಪಟ್ಟಿತು.

2. 1903ನೆ ಜುಲೈ ಆಗಷ್ಟ್ ಮತ್ತು ಸೆಪ್ಟಂಬರು ಮಾಹೆಗಳ ಜವಾಬಿಚರ್ಜು ಲೆಖ್ಕಗಳು ಕಂಟ್ರೋಲರ್ ಸಾಹೇಬರವರಿಂದ ಬಂದದ್ದು ಓದಲಾಯಿತು.

ಕೀರ್ಮಾನ :— ರಿಕಾರ್ಡು ಮಾಡಲ್ಪಟ್ಟಿತು.

3. ಮೈಸೂರು ಲೋಕಲ್ ಬೋರ್ಡು ರೆಗ್ಯುಲೇಷ್ 22ನೆ ಸೆಕ್ಷನ್ ಪ್ರಕಾರ ಕೋಲಾರ ಡಿ| ಬೋರ್ಡಿಗೆ ಫೈನಾನ್ಷಿಯಲ್ ಕಮಿಟಿ ಎಂಬ ಸಂಘವನ್ನು ಏರ್ಪಾಟು ಮಾಡಲು ಚರ್ಚೆ ನಡಿಯಿತು.

ಕೀರ್ಮಾನ :—ಈ ಮುಂದೆ ನಡೆಯಾಗುವ ದೊಡ್ಡ ಮನುಷ್ಯರುಗಳನ್ನು ಸದರಿ ಸಂಘಕ್ಕೆ ಸದಸ್ಯರ ಚುನಾಯಿಸಲ್ಪಟ್ಟಿತು.

969

1. ಕೋಲಾರ ಡಿ|| ಬೋರ್ಡ್ ವೈಸ್ ಪ್ರೆಸಿಡೆಂಟರವರು.
2. ಎಗ್ಸಿಕ್ಯೂಟಿವ್ ಇಂಜಿನಿಯರವರು.
3. 4. 5. } ತಾಲ್ಲೂಕುಗಳ ಥಾರ್ಡ್‌ನಲ್ಲಿರತಕ್ಕ ಅಸಿಸ್ಟೆಂಟ್ ಕವಿಾಷನರುಗಳು.
6. ಮ|| ರಾ|| ನಾರಾಯಣಸ್ವಾಮಿ ಶೆಟ್ಟ್ಯರವರು.
7. ,, ಮುರಸನಪಲ್ಲಿ ಚಿನ್ನಪ್ಪನವರು.

ವೈಸ್ ಪ್ರೆಸಿಡೆಂಟರವರು ಈ ಸಂಘದ ವಿಾಟಿಂಗು ವಿಷಾಟು ಮಾಡಲು ಅಧಿಕಾರ ಹೊಂದಿದವರಾಗಿದ್ದಾರೆ.

4. ಮೂರನೆ ಕ್ಲಾಸು ಮುಸಾಫರ್ ಬಂಗ್ಲೆಗಳ ರಿಪೇರಿ ರೆವಿನ್ಯು ಇಲಾಖೆ ಮೂರೀಫತ್ತು ನಡಿಸುವ ವಿಷಯದಲ್ಲಿ ಬೋರ್ಡಿನವರ ಅಭಿಪ್ರಾಯವನ್ನು ತಿಳಿಸಬೇಕೆಂದು ಗೌರ್ನಮೆಂಟಿನಿಂದ ತಲಪಿದ 9-2-04ನೆ ಮ|| 2924-32—L. F. 42-92ನೆ ನಂ. ಪ್ರೊಸೀಡಿಂಗ್ಸು ಓದಲ್ಪಾಯಿತು.

ತೀರ್ಮಾನ :—ಮೂರನೆ ಕ್ಲಾಸು ಮುಸಾಫರ್ ಬಂಗ್ಲೆಗಳ ಸಾಧಾರಣವಾದ ರಿಪೇರಿಗಳನ್ನು ರೆವಿನ್ಯೂ ಇಲಾಖೆ ಮೂರೀಫತ್ತು ನಡಿಸಬಹುದೆಂದುನ್ನೂ ಕಸುಬಿನ ಚಾತುರ್ಯವನ್ನು ಉಪಯೋಗಿಸಬೇಕಾಗುವ ಕಾಂಗಾರಿಗಳನ್ನು ಇಂಜನೀಯರು ಇಲಾಖೆಯವರು ಮಾಡಿಸಬೇಕೆಂದುನ್ನೂ ಬೋರ್ಡಿನವರು ಅಭಿಪ್ರಾಯಪಟ್ಟಿರುತ್ತಾರೆ.

5. ಬಾಗೇಪಲ್ಲಿ ತಾಲ್ಲೂಕು ಪುಲಿಗಲ್ಲು ದಿಬ್ಬಣ್ಣನ ಕೆರೆ ಕಾಂಗಾರಿಯ ಅಂದಾಜಿನ ಪೈಕಿ ಕೆರೆ ಕಟ್ಟೆಯನ್ನು ಅಗಲಪಡಿಸುವದಕ್ಕೆ ತಗಲುವ 1,396 ರೂಪಾಯಿಗಳನ್ನು ಈ ಕೆರೆ ಕಟ್ಟೆಯಮೇಲೆ ಡಿ|| ಫಂಡ್ ರೋಡ್ ಹೋಗುವದ್ದರಿಂದ ಡಿ|| ಫಂಡಿನಿಂದ ಕೊಡಬೇಕೆಂದು ಎಗ್ಸಿಕ್ಯೂಟಿವ್ ಇಂಜನೀಯರವರ 4—12—03ನೆ ಮ|| 497ನೆ ನಂ. ಡಾಕೆಟ್ ಓದಲಾಯಿತು.

ತೀರ್ಮಾನ :—ಬೋರ್ಡಿನವರು ಈ ರಸ್ತೆಯಲ್ಲಿ ಆವುದ್ ರಫ್ತು ಸರಿಯಾಗಿ ನಡಿಯುವದಕ್ಕೋಸ್ಕರ ಈ ಕೆರೆ ಕಟ್ಟೆಯನ್ನು ಅಗಲಪಡಿಸಬೇಕೆಂದುನ್ನೂ ಇದಕ್ಕಾಗಿ ತಗಲುವ ಮೊಬಲಗು 1,396 ರೂಪಾಯಿಗಳನ್ನು ಡಿ|| ಫಂಡಿನಿಂದ ಕೊಡಲು ಟಿಪ್ಪಿ ಕೊಳ್ಳಲ್ಪಟ್ಟಿತು.

6. ಮಾಲೂರು ಡಿವಿಜ್ ಅಸಿಸ್ಟೆಂಟ್ ಕವಿಾಷನರವರು ಬವೇರಿಂಗುಪೇಟೆ ತಾಲ್ಲೂಕು ಚೇತಮಂಗಲದಲ್ಲಿರುವ ಈಗ ಮೂರನೇ ಕ್ಲಾಸು ಮುಸಾಫರ್ ಬಂಗ್ಲೆಯಾಗಿ ಕೆಲವರ್ಷ ಆಗಿರುವ ಇನ್‌ಸ್ಪೆಕ್ಷನ್ ಲಾಡ್ಜ್‌ನಲ್ಲಿ ಮಾಹೇಯಾನಾ 7 ರೂಪಾಯಿನ ತಲಬಿನ ಮೇಲೆ ಬಬ್ಬಿ ಕೊತ್ವಾಲಿ ಯಿಸಂ ವೊಕರೂರು ಆಗಬೇಕೆಂದು ಬರದಿರುವ 593ನೆ ನಂ. ಯಾದಿ ಓದಲಾಯಿತು.

ಈ ಬಂಗ್ಲೆಗೆ ಮಾಹೇಯಾನಾ 7 ರೂಪಾಯಿ ತಲಬುಳ್ಳ ಬಬ್ಬಿ ಕೊತ್ವಾಲನನ್ನು ನೇಮಿಸಬಹುದೆಂದು ತೀರ್ಮಾನ ಮಾಡಲ್ಪಟ್ಟಿತು.

7. 1904—05ನೆ ಸಾಲ್ ಬಡ್ಜೆಟ್ಟಿನಲ್ಲಿ ಕೇರಿಸಲು ಎಗ್ಸಿಕ್ಯೂಟಿವ್ ಇಂಜಿನಿಯರು ಮತ್ತು ಅಮಲ್ದಾರ್ರುಗಳಿಂದ ಬಂದ ಕಾಂಗಾರಿಗಳ ತಖ್ತೆಗಳನ್ನು ಓದಲಾಯಿತು.

ಈ ಕೆಳಗೆ ನಮೂದಿರುವ ಮೇರಿಗೆ ಬಡ್ಜೆಟ್ಟು ಅಂದಾಜುಗಳನ್ನು ಗೌರ್ನಮೆಂಟಿಗೆ ಮುಂಜೂರಿ ಬಗ್ಗೆ ಕಳುಹಿಸಬೇಕೆಂದು ತೀರ್ಮಾನವಾಯಿತು.

1904—05ನೆ ಸಾಲಿಗೆ ಅಂದಾಜಾದ ಜಮಾಖರ್ಚು ವಿವರ :—

			ರೂ.	ಆ.	ಪೈ.
ಕಂಟ್ರೋಲರ್ ಸಾಹೇಬರವರ ಲಿಖಿತದ ಪ್ರಕಾರ 1903ನೆ ಜುಲೈ ಗುರ್ರ ತಾರೀಖಿನ ಶಿಲ್ಕು			48,495	0	0
1903-04ನೆ ಸಾಲಿಗೆ ಮುಂಜೂರಾಗಿರುವ ಜಮಾ			77,950	0	0
		ಜುಮ್ಲಾ	1,21,445	0	0
1903-04ನೆ ಸಾಲಿಗೆ ಮುಂಜೂರಾಗಿರುವ ಖರ್ಚು			1,00,684	0	0
1904ನೆ ಜುಲೈ ಗುರ್ರ ತಾರೀಖಿನಲ್ಲಿ ಶಿಲ್ಕು			20,761	0	0
1904—05ನೆ ಸಾಲಿನಲ್ಲಿ ವಸೂಲಾಗಬಹುದಾದ ಅಂದಾಜು			78,000	0	0
ಬೋರ್ಡಿನವರ ಆಡಳಿತದಲ್ಲಿರಬಹುದಾದ ಜುಮ್ಲಾ ಮೊಬಲಗು			98,761	0	0
1904-05ನೆ ಸಾಲಿಗೆ ಖರ್ಚು ಅಂದಾಜು					
A. ಇಂಜನಿಯರ್ ಡಿಪಾರ್ಟ್‌ಮೆಂಟ್ ಮೂರೀಫತ್ತು ನಡಿಯುವ ಕಾಂಗಾರಿಗಳಿಗಾಗಿ	43,500	0	0	83,235	0	0
B. ರೆವಿನ್ಯು ಇಲಾಖೆ ಮೂರೀಫತ್ತು ಡಿಟೋ	15,300	0	0			
C. ಸಿವಿಲ್ ಥಾರ್ಜ್	24,435	0	0			
ಸಾಲಾಖೈರ್‌ನಲ್ಲಿ ಶಿಲ್ಕು ಅಂದಾಜು			15,526	0	0

ಕೆ. ಪಿ. ಪುಟ್ಟಣ್ಣಯ್ಯ ಚೆಟ್ಟಿ,
ಪ್ರೆಸಿಡೆಂಟ್.

ಕಡೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಜೋಡಿ ಲಕ್ಷ್ಮೀಸಾಗರ ಗ್ರಾಮದ ದೊಡ್ಡ ದೇವರಪ್ಪನಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ತರಿಕರ ತಾಲ್ಲೂಕು ಲಕ್ಷ್ಮೀಸಾಗರ ಗ್ರಾಮದಲ್ಲಿ ಕಡೂರು ಡಿಸ್ಟ್ರಿಕ್ಟು 1ನೆ ಅಸಿಸ್ಟೆಂಟ್ ಕಮೀಷನರ್ ಸಾಹೇಬರವರ ರೂಬರೂಬ್ ಈ ಜುಲೈ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಬಾಕಿದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಪ್ಪೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 83—3—10 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊಬಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೆ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರಿ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
					ರೂ.			ಎ. ಗು.	ರೂ. ಆ. ಪೈ.	ರೂ. ಆ. ಪೈ.
ತರಿಕೆರೆ	ಜೋಡಿ ಲಕ್ಷ್ಮೀಸಾಗರ ಶಿವನೆ	ಜೋಡಿ ಲಕ್ಷ್ಮೀಸಾಗರ ಅಜಂಪುರದ ದೊಡ್ಡ ದೇವರಪ್ಪ	...	...	ಪೂರಾಗ್ರಾಮ	ಖುಷ್ಕಿ ..	271 4	171 13 8	71 0 0 ಜೋಡಿ 10 11 10 ಲೋಕಲ್ ಸೆಸ್ 1 8 0 ನೋಟಿಸ್ ಫೀ ವಗೈರೆ ಜುಮ್ಲಾ .. 83 3 10 ಇದಲ್ಲದೆ ಹರಾಜು ತಾರೀಖು ವರಿಗು ಆಗುವ ಬಡ್ಡಿ ಸಹ.

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ಕಂದಾಯದ ಬಾಕೀದಾರರಾದ ಕೃಷ್ಣಾಚಾರ್ ಮತ್ತು ಸುಬ್ಬಂಣಾಚಾರ್ರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಜುಲೈ ತಾರೀಖು 18ನೆ ಸೋಮವಾರ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 235—3—11 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಚಿಕ್ಕ ಮಗಳೂರು.	ಮರಲೆ.	ಹೆಜ್ಜೆಗೇನಹಳ್ಳಿ.	ಕೃಷ್ಣಾಚಾರ್ ಮತ್ತು ಸುಬ್ಬಣ್ಣಾಚಾರ್.		ರೂ. ಆ. ಪೈ.	ಪೂರಾಗ್ರಾಮ.	ಖುಷ್ಕಿ	105	37	107	5	7	234	3	11	ಜೋಡಿ
							ಬಾಗಾಯತು	6	30	46	0	0	1	0	0	ನೋಟಿಸ್ ಫೀ
							ತರಿ	70	4	427	15	11	—	—	—	ವಗೈರೆ
							ಪರಂಪೋಕು	46	36	2	12	0	235	3	11	
							ಜುಮ್ಲಾ ...	229	27	584	1	6				ಮತ್ತು ಹರಾಜು ತಾರೀಖು ವರಿಗಿನಬಡ್ಡಿಸಹ ಬರಬೇಕು.

* ಯಾ ಬಾಕಿ ಇರುವ ಮೆಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಎಂ. ಸಾರಾಯಣರಾವ್,
ಡೆಪ್ಯುಟಿ ಕಮೀಷನರ್.

2 c

ನೋಟಸ್, ತಾರೀಖು 31ನೆ ಮೇ 1904ನೆ ಇಸವಿ.

ಇದರಿಂದ ಸಮಸ್ತ ಜನಗ್ಕುಗೂ ತಿಳಿಯಪಡಿಸುವದೇನಂದರೆ—ಕಡೂರು ಡಿಸ್ಟ್ರಿಕ್ಟು ತರೀಕೆರೆ ತಾಲ್ಲೂಕು ತರೀಕೆರೆ ಕಸಬೆ ಸಂತೆಯಲ್ಲಿ ಸ೯ 1904ನೆ ಇಸವಿ ಜುಲೈ 1ರ ಲಾಗಾಯಿತು ಸ೯ 1905ನೆ ಜೂ೯ ಆಖೈರು ವರಿಗೆ ತೆರಿಗೆ ವಸೂಲ್ಮಾಡುವ ಹಕ್ಕುದಾರಿಯನ್ನು ತರೀಕೆರೆ ತಾಲ್ಲೂಕು ಕಚೇರಿಯಲ್ಲಿ ಆ ತಾಲ್ಲೂಕು ಅಮಲ್ದಾರ್ರವರಿಂದ ಸ೯ 1904ನೆ ಇಸವಿ ಜೂ೯ 25ನೆ ಶನಿವಾರ ದಿವಿ 11 ಘೆಂಟೆಗೆ ಸರಿಯಾಗಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

2. ಹರಾಜಿನಲ್ಲಿ ಪಡಿಯತಕ್ಕವರು ಸಂತೆಯ ದಿವಸ ಮಾರ್ಕಟ್ಟಿನ ಸರಹದ್ದಿನ ಒಳಗೆ ತರಲ್ಪಡುವ ಇದರ ಕೆಳಗೆ ನಮೂದು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ದರದಂತೆಯೆ ಗಾಡಿ ಮತ್ತು ಜಾನ್ವಾರು ವಗ್ಯೆರೇಗಳ ಮೇಲೆ ಫೀ ವಸೂಲು ಮಾಡತಕ್ಕದ್ದು. ಸದರಿ ದರಕ್ಕಿಂತ ಜಾಸ್ತಿ ದರ ವಸೂಲ್ಮಾಡಕೂಡದು.

3. ಈ ಹರಾಜು ಕಡೂರು ಡಿಸ್ಟ್ರಿಕ್ಟು ಮ್ಯೂನಿಸಿಪಲ್ ಬೋರ್ಡು ಪ್ರೆಸಿಡೆಂಟರವರ ಮಂಜೂರಾತಿಗೆ ಬಳಪಟ್ಟಿರುತ್ತೆ. ಸದರೀ ಯವರು ಎಲ್ಲಾ ದರಖಾಸ್ತುಗಳಿಗಿಂತ ಜಾಸ್ತಿಯಾದ ಅಥವಾ ಇನ್ಯಾವ ದರಖಾಸ್ತುಗಳನ್ನ ಅಂಗೀಕರಿಸುವದಕ್ಕೆ ಆಗಲಿ ಅಥವಾ ಯಾವ ಸಬಬನ್ನು ತೋರಿಸದೆ ತಿರಸ್ಕರಿಸುವದಕ್ಕೆ ಆಗಲಿ ಅಧಿಕಾರ ಉಳ್ಳವರಾಗಿರುತ್ತಾರೆ.

4. ಕಂಟ್ರಾಕ್ಟುದಾರನು ಗುತ್ತಾ ಮೊಬಲಗನ್ನು ಹನ್ನೆರಡು ತಿಂಗಳ ಸಮ ಕಂತು ಪ್ರಕಾರ ವಸೂಲು ಕೊಡತಕ್ಕದ್ದು. ಪ್ರತಿ ಮಾಹೆಯ ಕಂತನ್ನು ಆ ಮಾಹೆ ಮುಕ್ತಾಯವಾದ ತಾರೀಖು 10ರ ಒಳಗೆ ವಸೂಲು ಕೊಟ್ಟು ರೀದಿ ಪಡಿಯತಕ್ಕದ್ದು.

5. ಹರಾಜು ಖೈದಾದ ಕೂಡ್ಲೆ ಅಂಗೀಕರಿಸಲ್ಪಟ್ಟ ದರದಾಸ್ತುದಾರನು ಎರಡು ತಿಂಗಳು ಬಾಬತು ಕಂಟ್ರಾಕ್ಟು ಯಾ ಕಂತು ಮೊಬಲಗನ್ನು ಡಿಪಾಜಿಟ್ಟಿನಲ್ಲಿಡಬೇಕು. ಕಂಟ್ರಾಕ್ಟು ಷರತ್ತುಗಳ ಮೇರೆ ಸರಿಯಾಗಿ ನಡದುಕೊಂಡರೆ ಡಿಪಾಜಿಟ್ಟಿನಲ್ಲಿರುವ ಮೊಬಲಗನ್ನು ಆಖೈರು ಎರಡು ಮಾಹೆಗಳ ಕಂತು ಬಗ್ಯೆ ವಸೂಲು ಕೊಡುತ್ತೆ.

6. ಹರಾಜು ಖೈದಾದಕೂಡ್ಲೆ ಡಿಪಾಜಿಟ್ಟು ಮೊಬಲಗನ್ನು ಹಾಜರ್ಮಾಡದೆ ಇದ್ದರೆ ಹರಾಜು ಹಕ್ಕುದಾರಿಯನ್ನು ಪುನಹ ಹರಾಜು ಮಾಡುತ್ತೆ. ಎರಡನೇ ಹರಾಜಿನಿಂದ ಸರ್ಕಾರಕ್ಕೆ ಉಂಟಾಗಬಹುದಾದ ಲುಕ್ಸಾನಿಗೆ ಪೂರು ಕಂಟ್ರಾಕ್ಟುದಾರ ಯಾ ಹರಾಜು ದಾರನನ್ನು ಗುರಿಪಡಿಸುತ್ತೆ. ಪ್ರತಿ ಮಾಹೆಯಲ್ಲೂ ಕೊಡತಕ್ಕ ಖಿಸ್ತು ಮೊಬಲಗನ್ನು ಗೊತ್ತು ಮಾಡಲ್ಪಟ್ಟ ತಾರೀಖಿನ ಒಳಗಾಗಿ ವಸೂಲು ಕೊಡಲು ತಪ್ಪಿದರೆ ಪಾವತೀ ಮಾಡಬೇಕಾಗಿರುವ ಮೊಬಲಗಿನ ಮೇಲೆ ಪಾವತೀ ಮಾಡುವ ತಾರೀಖಿನ ವರಿಗೆ ಮಾಹೆಯೂ ನಾ ರೂಪಾಯಿ ಒಂದಕ್ಕೆ ಒಂದು ಪೈಸಂತೆ ಬಡ್ಡಿ ಕೇರಿಸಿ ಖಿಸ್ತು ಮೊಬಲಗನ್ನು ವಸೂಲು ಮಾಡುತ್ತೆ. ಅಲ್ಲದೆ ಉಳಿದ ಕಂಟ್ರಾಕ್ಟನ್ನು ಮ್ಯೂನಿಸಿಪಲ್ ಪ್ರೆಸಿಡೆಂಟರವರು ಇಷ್ಟಪಟ್ಟಲ್ಲಿ ಲುಕ್ಸಾನಿಗೆ ಪೂರು ಕಂಟ್ರಾಕ್ಟುದಾರನನ್ನು ಗುರಿಪಡಿಸಿ ಹರಾಜು ಮಾಡಲ್ಪಡುತ್ತೆ. ಎರಡನೇ ಹರಾಜಿನಲ್ಲಿ ನಷ್ಟ ಬಂದಲ್ಲಿ ಮೊದಲು ಕಂಟ್ರಾಕ್ಟುದಾರನು ಸದರೀ ನಷ್ಟಕ್ಕೆ ಹಕ್ಕುದಾರನಾಗಿರುವದಿಲ್ಲಾ.

7. ಕಂಟ್ರಾಕ್ಟುದಾರನು ಯಾವ ಕಾರಣದಿಂದಲೂ ಗುತ್ತಿಗೆ ಮೊಬಲಗನ್ನು ಯಾವ ರಿಬೇಟು ಮಾಡೋಣವನ್ನಾಗಲೀ ಅಥವಾ ಕಮ್ಮಿ ಮಾಡೋಣವನ್ನಾಗಲೀ ಯಾ ಪರಿಹಾರದ್ರವ್ಯವನ್ನಾಗಲೀ ಕೇಳಲ್ಪಡಕೂಡದು.

8. ಕಂಟ್ರಾಕ್ಟುದಾರನು ಪ್ರತಿ ಸಂತೆಯಲ್ಲಿಯೂ ವಸೂಲಾಗುವ ಫೀಯನ್ನು ತಪಶೀಲಾಗಿ ತಿಳಿಯುವಂತೆ ಕರಾರುವಾಕಾ ಲೆಕ್ಕವನ್ನು ಇಡಬೇಕು. ಸದರೀ ಲೆಕ್ಕವನ್ನು ತಾಲ್ಲೂಕು ಮತ್ತು ಡಿಸ್ಟ್ರಿಕ್ಟು ಅಧಿಕಾರಿಗಳು ಅಪೇಕ್ಷಿಸಿದಾಗ ತನಿಖೆಗೆ ಹಾಜರ್ಪಡಿಸಬೇಕು.

9. ಮೇಲ್ಕಂಡ ಷರತ್ತುಗಳ ಪೈಕಿ ಯಾವದಕ್ಕಾದರೂ ಕಂಟ್ರಾಕ್ಟುದಾರನೇ ಆಗಲಿ ಯಾ ಅವನ ಕಡೆ ನವುಕರನೆ ಆಗಲಿ ವಿರೋಧವಾಗಿ ನಡದುಕೊಂಡರೆ ಕಂಟ್ರಾಕ್ಟನ್ನು ವಜಾ ಮಾಡುತ್ತೆ.

ಷೆಡ್ಯೂಲ್.

		ರೂ.	ಆ.	ಪೈ.
1.	ಭರ್ತಿ ಗಾಡಿ ಪ್ರತಿಯೊಂದಕ್ಕೆ	0	1	0
2.	ಖಾಲಿ ಗಾಡಿ ಡಿಟೋ	0	0	3
3.	ಎತ್ತು, ಹಸ, ಎಮ್ಮೆ, ಕೋಣ ಮತ್ತು ಕುದುರೆ ಹೊರೆ ಡಿಟೋ ...	0	0	6
4.	ಕತ್ತೆ ಹೊರೆ ಪ್ರತಿಯೊಂದಕ್ಕೆ	0	0	3
5.	ತಲೆ ಹೊರೆ ಡಿಟೋ	0	0	1
6.	ಖಾಲಿ ಎತ್ತು, ಹಸ, ಎಮ್ಮೆ, ಕೋಣ, ಕುದುರೆ ಡಿಟೋ	0	0	3
7.	ಆಡು ಅಥವಾ ಮೇಕೆ ಪ್ರತಿಯೊಂದಕ್ಕೆ	0	0	1

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಚಿತ್ರದುರ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

1. ಕಂದಾಯದ ಬಾಕೀದಾರರಾದ ಸುಬ್ಬರಾಯಶಾಸ್ತ್ರಿ ವಗ್ಯೆರೇರಿಂದ ಖರಬೇಕಾದ ಜವಿರ್ಣ ಕಂದಾಯದ ಬಾಕೀಗಾಗಿ ಇವರಡಿ ನಮೂದಾಗುವ ಸ್ಥಿರಸ್ವತ್ತು ಚಿತ್ರದುರ್ಗದ ಡಿಸ್ಟ್ರಿಕ್ಟು ಚಿತ್ರದುರ್ಗದ ತಾಲ್ಲೂಕು ಕಚೇರಿಯಲ್ಲಿ 1904ನೆ ಜೂ೯ 28, 29, 30ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902—1903ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ 24—2—5, 27—4—0 ಮತ್ತು 502—4—0 ರೂಪಾಯಿಗಳು ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಥಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ನೂನಿಂದ ವಿಧಿಸಲ್ಪಟ್ಟವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರು ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.	ರೂ. ಆ. ಪೈ.
ಚಿತ್ರದುರ್ಗ.	ಭರ್ಮಸಾಗರ.	ಕಸವನಹಳ್ಳಿ, ಮಾಲೇನಹಳ್ಳಿ ಜೋಡಿ ಗ್ರಾಮಗಳು ಮತ್ತು ಕಾಯಂಗುತ್ತಾ ವಡ್ಡಿನಹಳ್ಳಿ ಗ್ರಾಮ.	ಸುಬ್ರಾಯಶಾಸ್ತ್ರಿ ವಗೈರೇರು.	...	ರೂ. ಆ. ಪೈ.	ಕಸವನಹಳ್ಳಿ ಪೂರಾ ಜೋಡಿ ಗ್ರಾಮ ...				ಜೋಡಿ	19—10—9
										ಲೋಕಲ್ ಫಂಡ್	3—7—8
										ನೋಟಿಸ್ ಫಿ ವಗೈರೆ	1—0—0
											24—2—5
						ಮಾಲೇನಹಳ್ಳಿ ಪೂರಾ ಜೋಡಿ ಗ್ರಾಮ ...				ಜೋಡಿ	17—8—0
										ಲೋಕಲ್ ಫಂಡ್	8—12—0
										ನೋಟಿಸ್ ಫಿ ವಗೈರೆ	1—0—0
											27—4—0
						ಕಾಯಂಗುತ್ತಾ ವಡ್ಡಿನಹಳ್ಳಿ ಪೂರಾ ಗ್ರಾಮ ...				ಜೋಡಿ	60—0—0
										ಲೋಕಲ್ ಫಂಡ್	3—12—0
										ನೀರ್ ಸರದಿ	300—0—0
										ಲೋಕಲ್ ಫಂಡ್	18—12—0
										ಟ್ಯಾಂಕ್ ಫಂಡ್	18—12—0
										ಎಕ್ರೇಜ್ ಕಂಟ್ರಿ ಬ್ಯೂಷನ್	100—0—0
											502—4—0

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ೯ 1904ನೆ ಇಸವಿ ಮೇ 28ನೆ ತಾರೀಖು.

ಇದರಿಂದ ಸಮುಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸ೯ 1904ನೆ ಇಸವಿ ಜುಲ್ಯೆ ಗುರ್ಸಿ ಲಾಗಾಯತು 1905ನೆ ಜೂ೯ ಆಖ್ಯೆರು ವರಿಗೆ ಹರಿಹರ ಸೇತುವೆ ಮೇಲೆ ಟೋಲ್ ವಸೂಲ್ಮಾಡತಕ್ಕ ಹಕ್ಕನ್ನು ಚಾಲ್ತಿ ಸಾಲ್ ಜೂ೯ 20ನೆ ತಾರೀಖಿನಲ್ಲಿ ಹರಿಹರ ಡೆಪ್ಯೂಟಿ ಅಮಲ್ದಾರ್ರ ಕಟ್ಟೇರಿಯಲ್ಲಿ ಆದಿನ ಮಧ್ಯಾಹ್ನ ಮೂರು ಘಂಟೆಯಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯೂಟಿ ಕಮಿಷನರ್ ಯಾವರು ಅಥವಾ ಅವರಿಂದ ನೇಮಿಸಲ್ಪಟ್ಟ ಅಸಿಸ್ಟೆಂಟು ಕಮಿಷನರ್ ಯಾವರು ಹರಾಜು ಮಾಡಿಸುತ್ತಾರೆ.

2. ಚಡಸವಾಲನ್ನು ಗೌರ್ನಮೆಂಟ್ ಮಂಜೂರಿಗೆ ಒಳಪಟ್ಟ ಡೆಪ್ಯೂಟಿ ಕಮಿಷನರಿ ಯವರು ಅಂಗೀಕರಿಸುತ್ತಾರೆ. ಯಾವ ಸವಾಲನ್ನಾಗಲಿ ಮಂಜೂರ್ಮಾಡುವ ಅಥವಾ ತಿರಸ್ಕರಿಸುವ ಅಧಿಕಾರವು ಡೆಪ್ಯೂಟಿ ಕಮಿಷನರ್ ಯವರ ಯಖ್ತ್ಯಾರಿಯಲ್ಲಿ ಇರುತ್ತೆ.

3. ಡೆಪ್ಯೂಟಿ ಕಮಿಷನರ್ ಯವರು ಜೂರ ಸವಾಲುಗಳು ಅಂಗೀಕರಿಸುತ್ತಾರೋ ಅಂಥವರು ರೂಪಾಯಿಗೆ ಒಂದು ಆಣೆ ಯಂತೆ ಲೋಕಲ್ ಸೆಸ್ ಸಹಿತವಾಗಿ ಸವಾಲು ಮೊಬಲಗು ಪೈಕಿ ಕಾಲುಭಾಗದ ಮೊಬಲಗು ತಕ್ಷಣ ಡಿಪಾಜಿಟ್ ಇಡಬೇಕು. ಗೌರ್ನಮೆಂಟಿನಿಂದ ಮಂಜೂರಾದ ಕೂಡ್ಲೆ ಬಾಕಿ ಮೊಬಲಗನ್ನು ಲೋಕಲ್ ಸೆಸ್ ಸಹಿತವಾಗಿ 9 ಸಮಾನ ಪಿಸ್ತುಗಳಲ್ಲಿ ದಾವಣಗೆರೆ ತಾಲ್ಲೂಕು ಟ್ರೆಜರಿಗೆ ಪಾವತಿ ಮಾಡಬೇಕು. ಒಂದನೆ ಪಿಸ್ತು ಮೊಬಲಗು ಸಾವಿರದ ಒಂಭೈನೂರ ಸಾಲ್ಕನೆ ಆಗಸ್ಟು ತಾರೀಖು 10ಕ್ಕೆ ಮುರು ಆಗುತ್ತೆ. ಬಾಕಿ ಪಿಸ್ತುಗಳು ಆಯಾಯ ತಿಂಗಳ ಪತ್ತನೆ ತಾರೀಖಿನಲ್ಲಿ ಪಾವತಿಯಾಗತಕ್ಕದ್ದು. ಡಿಪಾಜಿಟ್ ಮೊಬಲಗು ಹತ್ತು, ಹನ್ನೊಂದು, ಹನ್ನೆರಡನೆ ಪಿಸ್ತುಗಳಿಗೆ ಉಪಯೋಗಿಸಿಕೊಳ್ಳಲ್ಪಡುವದು. ಹರಾಜುದಾರನು ಪಿಸ್ತು ಮೊಬಲಗು ಸಕಾಲಕ್ಕೆ ಪಾವತಿ ಮಾಡದಿರುವ ಬಗ್ಗೆ ಇಬ್ಬರು ಜಾಮೀನುದಾರರನ್ನು ಕೊಡಬೇಕು ಮತ್ತು ಹರಾಜು ಮಂಜೂರಾದ್ದು ತಿಳಿಸಿದ ಲಾಗಾಯತು ಮೂರು ದಿವಸದಲ್ಲಿ ಸರಿಯಾದ ಸ್ಟಾಂಪು ಕಾಗದದ ಮೇಲೆ ಒಂದು ಕರಾರು ಬರದು ಕೊಡಬೇಕು. ಈ ಪರತ್ತುಗಳಿಗೆ ತಪ್ಪಿದ ಪಕ್ಷದಲ್ಲಿ ಡಿಪಾಜಿಟ್ ಮೊಬಲಗಿನ ಮೇಲಿನ ಹಕ್ಕು ಕಂಟ್ರಾಕ್ಟುದಾರನಿಗೆ ತಪ್ಪಿಹೋಗುವದಲ್ಲದೆ ಕಂಟ್ರಾಕ್ಟು ದುಸರೆ ಹರಾಜು ಮಾಡಿಸಿ ಆದ ದಿಂದ ಗೌರ್ನಮೆಂಟಿಗೆ ಉಂಟಾಗುವಂಥಾದ ಲುಕ್ಸಾನು ಕಂಟ್ರಾಕ್ಟುದಾರನ ಅಥವಾ ಜಾಮೀನ್ದಾರರ ಸ್ವತ್ತು ಜಪ್ತಿ ಹರಾಜುಮೂಲಕ ವಸೂಲ್ಮಾಡಲ್ಪಡುತ್ತೆ.

4. ಮಾಯಿದೆ ತಾರೀಖಿನ ವಳಗೆ ಪಿಸ್ತು ಮೊಬಲಗು ಪಾವತಿ ಆಗದೆ ನಿಂತರೆ ವರುಷ ಒಂದಕ್ಕೆ ಶೇಕಡಾ ಆರು ರೂಪಾಯಿ ಪ್ರಕಾರ ಬಡ್ಡಿದೂ ವಸೂಲ್ಮಾಡಲ್ಪಡುತ್ತೆ.

5. ಹರಾಜುದಾರನು ತನ್ನ ಕಂಟ್ರಾಕ್ಟು ಹಣದಮೇಲೆ ರೂಪಾಯಿ ಒಂದಕ್ಕೆ ಒಂದು ಆಣೆ ಪ್ರಕಾರ ಲೋಕಲ್ ಸೆಸ್ ಕೊಡಬೇಕು.

6. ಕಂಟ್ರಾಕ್ಟುದಾರನಿಂದಲೇ ಆಗಲಿ ಅಥವಾ ಅವನ ಜಾಮೀನುದಾರರಿಂದಲೇ ಆಗಲಿ ಬರಬೇಕಾದ ಬಾಕಿಯನ್ನು ಜಮೀನು ಕಂದಾಯದ ಬಾ॥ ವಸೂಲ್ಮಾಡುವದಕ್ಕೆ ಇರತಕ್ಕ ರೂಲ್ಸು ಪ್ರಕಾರ ವಸೂಲ್ಮಾಡಲ್ಪಡುವದು.

7. ಕಂಟ್ರಾಕ್ಟುದಾರನು ಪ್ರತಿದಿವಸ ವಸೂಲ್ಮಾಡುವ ಮೊಬಲಗಿಗೆ ಒಂದು ಲೆಕ್ಕದ ಪುಸ್ತಕ ಇಟ್ಟುಕೊಳ್ಳಬೇಕು. ಇದು ಡೆಪ್ಯೂಟಿ ಕಮಿಷನರ್ ಯವರು ಅಥವಾ ಅವರಿಂದ ನೇಮಿಸಲ್ಪಟ್ಟ ಇತರ ಅಧಿಕಾರಿಗಳು ತನಿಖೆ ಮಾಡಲ್ಪಡುವದಕ್ಕೆ ಖುಲ್ಲಾ ಇರಬೇಕು.

8. ಕಂಟ್ರಾಕ್ಟುದಾರನು ಇದಕ್ಕೆ ಲಗತ್ತು ಮಾಡಿರುವ ಷೆಡ್ಯೂಲಿನಲ್ಲಿ ಕಂಡ ಟೋಲ್ ಶಿವಾಯಿ ಮತ್ತ್ಯಾವದನ್ನೂ ವಸೂಲ್ಮಾಡಕೂಡದು. ಅದೆರಲ್ಲಿ ನಮೂದಿಸುವ ದರದಂತೆಯೇ ವಸೂಲ್ಮಾಡಬೇಕು. ಇದಕ್ಕೆ ವಿರೋಧವಾಗಿ ನಡದರೆ ಕ್ರಿಮಿನಲ್ ಪ್ರಾಸಿಕ್ಯೂಷನ್‌ಗೆ ಗುರಿಯಾಗುವದಲ್ಲದೆ ಕಂಟ್ರಾಕ್ಟು ಸಹಾ ರದ್ದು ಮಾಡಲ್ಪಡುವದು.

9. ಸೈನ್ಯ, ಮಿಲಿಟರಿ ಸಾಮಾನು, ಡ್ಯೂಟಿಮೇಲಿರುವ ಪೋಲೀಸ್ ಅಥವಾ ಇತರ ಸರ್ಕಾರದ ಆಳುಸರು ಮತ್ತು ಸರ್ಕಾರಿ ಸಾಮಾನೆಂದು ಆ ಇಲಾಖೆಯ ಮುಖ್ಯಾಧಿಕಾರಿಯಿಂದ ಪಡೆದ ಸರ್ಟಿಫಿಕೇಟಿನೊಡನೆ ಇರುವ ಸರ್ಕಾರಿ ಸಾಮಾನು ಈ ಸೇತು ಮೇಲೆ ಹೋದರೆ ಕಂಟ್ರಾಕ್ಟುದಾರನು ಟೋಲ್ ವಸೂಲ್ಮಾಡಕೂಡದು.

10. ವಸೂಲ್ಮಾಡಲು ಅಧಿಕಾರ ಕೊಟ್ಟಿರುವ ಟೋಲಿನ ಒಂದು ಪಟ್ಟಿಯನ್ನು ಇಂಗ್ಲೀಷ್ ಮತ್ತು ಕನ್ನಡಭಾಷೆಯ ಸ್ಪುಟವಾದ ಅಕ್ಷರಗಳಲ್ಲಿ ಬರದು ಟೋಲ್‌ಗೇಟಿ ಹತ್ತರ ಎಲ್ಲರಿಗೂ ಕಾಣುವಂಥಾ ಸ್ಥಳದಲ್ಲಿ ಹಚ್ಚಬೇಕು.

11. ಕಂಟ್ರಾಕ್ಟುದಾರನು ಟೋಲ್‌ಗೇಟಿ ಹತ್ತರ ಟೋಲ್ ವಸೂಲ್ಮಾಡಬೇಕೇ ಹೊರತು ಇತರ ಸ್ಥಳದಲ್ಲಿ ವಸೂಲ್ಮಾಡ ಕೂಡದು.

12. ಇನ್ನೇನಾದರೂ ತಪಸೀಲು ಬೇಕಾದರೆ ಡೆಪ್ಯೂಟಿ ಕಮಿಷರ್ಯರವರಿಗೆ ಬರದುಕೊಂಡು ತಿಳಿದುಕೊಳ್ಳಬಹುದು.

ಹರಿಹರ ಸೇತುವೆ ಮೇಲೆ ವಸೂಲಾಗತಕ್ಕ ಟೋಲಿನ ಷೆಡ್ಯೂಲ್—

		ರೂ. ಆ. ಪೈ.
(1)	ಸಾಲ್ಕು ಚಕ್ರದ ಗಾಡಿ ಒಂದಕ್ಕೆ ಭರ್ತಿ ಅಥವಾ ಖಾಲಿ ...	0—8—0
(2)	ಆನೆ ಒಂದಕ್ಕೆ ಸಾಮಾನು ಹೇರ್ದು ಅಥವಾ ಹೇರದೆ ಇರತಕ್ಕದ್ದು ...	1—0—0
(3)	ಎರಡು ಚಕ್ರದ ಗಾಡಿ ಒಂದಕ್ಕೆ ಅಥವಾ ಎತ್ತಿನಗಾಡಿ ಸಾಮಾನು ಹಾಕಿದ್ದು ಅಥವಾ ಖಾಲಿ	0—4—0
(4)	ಒಂಟೆ ಒಂದಕ್ಕೆ ಸಾಮಾನು ಹೇರಿದ್ದು, ಸವಾರಿ, ಸಾಮಾನು ಹೇರದೆ ಇದ್ದದ್ದು, ನಡಿಸಿಕೊಂಡು ಬಂದದ್ದು	0—8—0
(5)	ಕುದುರೆ ಒಂದಕ್ಕೆ ಸಾಮಾನು ಹೇರಿದ್ದು ಹೇರದೆ ಇದ್ದದ್ದು, ನಡಸಿಕೊಂಡು ಬಂದದ್ದು ...	0—1—0
(6)	ಎತ್ತು ಅಥವಾ ಕೋಣ ಒಂದಕ್ಕೆ ಸಾಮಾನು ಹೇರ್ದು ಅಥವಾ ಸವಾರಿ ಮಾಡಿದ್ದು ...	0—0—6
(7)	ಎತ್ತು ಅಥವಾ ಕೋಣ ಒಂದಕ್ಕೆ ಸಾಮಾನು ಹೇರದೆ ಇದ್ದದ್ದು ಅಥವಾ ನಡಿಸಿದ್ದು ...	0—0—3
(8)	ಕತ್ತೆ ಒಂದಕ್ಕೆ ಸಾಮಾನು ಹೇರ್ದು ಅಥವಾ ಸವಾರಿ ಮಾಡಿದ್ದು	0—0—6
(9)	ಹಸು ಮತ್ತು ಎಮ್ಮೆ ಒಂದಕ್ಕೆ	0—0—3
(10)	ಕುರಿ ಮತ್ತು ಮೇಕೆ ಒಂದಕ್ಕೆ	0—0—1

ಹೆಚ್. ರಾಮಾನುಜಯ್ಯಂಗಾರ್,
ಡೆಪ್ಯೂಟಿ ಕಮಿಷನರ್.

975

ತಾರೀಖು 25ನೆ ಮೇ 1904.

ಇದರಿಂದ ತಿಳಿಯಪಡಿಸುವದೇನಂದರೆ—ಈ ಕೆಳಗೆ ವಿವರಿಸಿ ಇರುವ ರಿಜಿಷ್ಟ್ರಾದ ದಸ್ತ್ಯೆವಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ಕಂಡ ಸಬ್ ರಿಜಷ್ಟ್ರಾ ಆಫೀಸುಗಳಲ್ಲಿ ವಾರಸದಾರು, ಹಾಜರಾಗಿ ವಾಪಸು ಪಡಿಯುವೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳು ವಳಗಾಗಿ ಸದರಿ ದಸ್ತ್ಯೆವಜು ಹಾಜರ್ಮಾಡಿದವರಾಗಲಿ ಅಥವಾ ಅವರ ಪ್ರತಿನಿಧಿಗಳ್ಯಾಗಲಿ ಮತ್ತು ದಸ್ತ್ಯೆವಜುಗಳಿಗೆ ಬಾಧ್ಯವುಳ್ಳವರಾಗಲಿ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಹಾಜರಾಗಿ ತಮ್ಮ ದಸ್ತ್ಯೆವಜು ವಾಪಸು ಪಡಿಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ಆಕ್ಟ್ 85ನೆ ಸೆಕ್ಷನ್ ಮೇರಿಗೆ ನಾಶಪಡಿಸಲ್ಪಡುತ್ತೆ. ತಾರೀಖು 25ನೆ ಮೇ 1904ನೆ ಇಸವಿ ಚಿತ್ರದುರ್ಗ.

ಸಬ್ ರಿಜಿಸ್ಟ್ರಾಫೀಸ್.	ಬುಕ್ಕು ಮತ್ತು ರಿಜಿಷ್ಟರ್ ನಂಬರು.	ದಸ್ತ್ಯೆವಜು ಬರದು ಕೊಟ್ಟವನ ಹೆಸರು.	ಬರಿಸಿಕೊಂಡವನ ಹೆಸರು.	ದಸ್ತ್ಯೆವಜು ತಾರೀಖು.	ರಿಜಸ್ಟ್ರಾದ ತಾರೀಖು.	ದಸ್ತ್ಯೆವಜು ಸ್ವಭಾವ.
1	2	3	4	5	6	7
ಚಿತ್ರದುರ್ಗ.	ಬುಕ್ಕು 1. ನಂ. 429	ಚಿತ್ತಯ್ಯನ ಹೆಂಡ ತಿಪ್ಪಾಪವ್ವ.	ಉಪ್ಪರಿಗೆ ಮಲ್ಲಪ್ಪ .	25 4 1901	25 4 1901	25 ರೂ. ಕ್ರಯ
	ಡಿಟೋ 520	ಮೂಡೆಪ್ಪ ...	ಸಿದ್ದಲಿಂಗಪ್ಪ ..	25 5 1901	31 5 1901	100 ಡಿಟೋ
	ಡಿಟೋ 248	ಸಂಣಪ್ಪೋಜ	ಬಸಪ್ಪ .	30 10 1901	30 10 1901	148 ಡಿಟೋ
	ಡಿಟೋ 286	ಕೃಷ್ಣರಾಯ ...	ಶ್ರೀನಿವಾಸರಾಯ .	30 10 1901	28 11 1901	50 ಡಿಟೋ
	ಡಿಟೋ 323	ಕಾವೈಯ್ಯ .	ಮಲ್ಲಪ್ಪ	16 12 1901	16 12 1901	50 ಡಿಟೋ
ಹಿರಿಯೂರು.	ಬುಕ್ಕು 1. ನಂ. 635	ಕಲ್ಲಪ್ಪ, ಆವರಗೆರೆ .	ಹನುಮಪ್ಪ, ಆವರಗೆರೆ	10 5 1901	23 5 1901	32 ಡಿಟೋ
	ಡಿಟೋ 700	ದುಗ್ಗಂಣ ...	ಗುಡ್ಡಪ್ಪ ..	5 6 1901	5 6 1901	50 ಡಿಟೋ
	ಡಿಟೋ 141	ಫಕೀರಸಾಬಿ ...	ಜಂಬಂಣ .	22 8 1901	23 8 1901	200 ರೂ. ಆಧಾರ
	1901—02					
	ಡಿಟೋ IV. ನಂ. 24	ದ್ಯಾಮವ್ವ ಯಾನೆ ವೆಂಕವ್ವ.	ಶಿವ್ಪಲಿಂಗಪ್ಪ, ದಾವಣಗೆರೆ.	5 6 1901	6 6 1901	ಖುಬಾನೆಪತ್ರ
ಹರಿಹರ.	ಬುಕ್ಕು 1. ನಂ. 45	ಸಂಣ ಕಿವ್ಪಪ್ಪ ..	ಹೊನ್ನಕೇರಪ್ಪ ..	3 8 1901	5 8 1901	40 ರೂ. ಕ್ರಯ
	1901—02					

ಹೆಚ್. ರಾಮಾನುಜೈಯ್ಯಂಗಾರ್,
ಡಿಸ್ಟ್ರಿಕ್ಟ್ ರಜಿಸ್ಟ್ರಾರ್.

ಬೆಂಗಳೂರು ಡಿವೀಜ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ೯ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 365.

ವ್ಯತಪಟ್ಟ ಜೆ. ಸುಬ್ರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ತಾಲ್ಲೂಕು ಯಲಹಂಕದಲ್ಲಿ ಇರುವ ಜೆ. ಗೋಪಾಲರಾಯರು, ವ್ಯತಪಟ್ಟ ಸದರೀ ಜೆ. ಸುಬ್ರಾಯರಿಗೆ ಮುಖ್ಯ ವಾರಸದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ವಾಸಸ್ಥರಾಗಿ ವ್ಯತಪಟ್ಟ ಜೆ. ಸುಬ್ರಾಯರ ಜಿಂದಗಿ ಬಗ್ಯಾಗಿ ಒರತಕ್ಕ ಸೂಲವನ್ನು ವಸೂಲ್ ಮಾಡುವದಕ್ಕೆ ಸ೯ 1901ನೆ ಇಸವಿ VIIನೆ ರೆಗ್ಯುಲೇಷನ ಪ್ರಕಾರ ಸರ್ಟಿಫಿಕೇಟ್ಟು ಬ್ಯೂಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜೆ. ಗೋಪಾಲರಾಯರ ಅರ್ಜಿಯನ್ನು ಸ೯ 1904ನೆ ಇಸವಿ ಜುಲೈ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶಿಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ಜೆ. ಸುಬ್ರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1904ನೆ ಇಸವಿ ಜೂ೯ ತಿಂಗಳು 4ನೆ ತಾರೀಖಿನಲ್ಲಿ ಕೋರ್ಟ್ ವೊಹರನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 383.

ಮೃತಪಟ್ಟ ಎಂ. ಶೇಷಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬಾಗೇಪಲ್ಲಿ ಗವರ್ನಮೆಂಟ್ ಗರ್ಲಸ್ಕೂಲು ಸಂಗೀತ ಉಪಾಧ್ಯಾಯರು, ಹೆಚ್. ಕ್ರಿಷ್ಣಯ್ಯಂಗಾರ್ರ ಮನೇಲಿರುವ ಲಕ್ಷ್ಮಮ್ಮ ಮೃತಪಟ್ಟ ಸದರೀ ಎಂ. ಶೇಷಯ್ಯಂಗಾರ್ರಿಗೆ ಮುಖ್ಯ ವಾರಸುದಾರರು ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಸಕೋಟೆ ತಾಲ್ಲೂಕು ವಾಗಟದ ವಾಸಸ್ಥರಾಗಿ ಹಿರಿಯೂರಲ್ಲಿ ಮೃತಪಟ್ಟ ಎಂ. ಶೇಷಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲು ಹಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಲಕ್ಷ್ಮಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ಜುಲೈ ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಎಂ. ಶೇಷಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜೂನ್ ತಿಂಗಳು 4ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—04ನೆ ಇಸವಿ ಅರ್ಜೀ ನಂ. 529.

ಅರ್ಜೀದಾರ್ರು ಬೆಂಗಳೂರುನಲ್ಲಿದ್ದು ಹಾಲಿ ಮೈಸೂರುನಲ್ಲಿ ಫವತಿ ಆದ ಎಕ್ಸೈಜ್ ಹೆಡ್ ಕ್ಲಾರ್ಕು ಬಾಲಕೃಷ್ಣರಾಯರ ಹೆಂಡತಿ ಇಜೀಂಬಾಯಿ, ಬೆಂಗಳೂರು ಸ್ಥಳದ ಬಾಲಕೃಷ್ಣರಾಯರ ಮಗ ಮೈನರಾದ ದತ್ತಾತ್ರೇಯರಾವ್ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ದತ್ತಾತ್ರೇಯ ರಾಯರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಹಾಲಿ ಮೈಸೂರು ಸ್ಥಳದ ಕಾವೇರಿಬಾಯಿ ಎಂಬವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್ 1904ನೆ ಇಸವಿ ಜುಲೈ ತಾರೀಖು 1ರಲ್ಲು ಮೊಕರರು ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸನ್ 1904ನೆ ಇಸವಿ ಜೂನ್ ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 285.

ಅರ್ಜೀದಾರ್ರು ಅರ್ಚಿಕ ಕೃಷ್ಣೈಯ್ಯಂಗಾರ್ ಬಿನ್ ವೆಂಕಟರಮಣೈಯ್ಯಂಗಾರ್, ಶಿವಮೊಗ್ಗಾ ವಾಸಿ, ಮೈನರಾದ ಶಿವಮೊಗ್ಗಾ ಸ್ಥಳದ ನಾರಣೈಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜಿದಾರ್ ಕೃಷ್ಣೈಯ್ಯಂಗಾರ್ರು ಸದರೀ ಮೈನರಾದ ನಾರಣೈಯ್ಯಂಗಾರ್ರಿಗೆ (ತಾಯಿ ತಮ್ಮ) ಸೋದರಮಾವ ಆಗಬೇಕೆಂಬ ಹಕ್ಕಿನಮೇಲೆ ಶಿವಮೊಗ್ಗಾ ಸ್ಥಳದ ಅರ್ಚಿಕ ಕೃಷ್ಣೈಯ್ಯಂಗಾರ್ರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ (485—0—10) ರೂಪಾಯಿಗೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್ 1904ನೆ ಇಸವಿ ಜೂನ್ ತಾರೀಖು 17ರಲ್ಲು ಮೊಕರರು ಮಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸನ್ 1904ನೆ ಇಸವಿ ಜೂನ್ ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 316.

ತರೀಕೆರೆಯಲ್ಲಿ ವಾಸವಾಗಿದ್ದು ಮೃತಪಟ್ಟ ಎಕ್ಸೈಜ್ ಇನ್‌ಸ್ಪೆಕ್ಟರ್ ಪೇಯದಾರ್ ಮಾರ್ಶಲ್ ಪೆರೈರಾಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಜಾಕೆಮಿಕೆಲ್ ಪೆರೈರಾ, ಮಂಗಳೂರ್ ವಾಶಿ, ಮೃತಪಟ್ಟ ಸದರೀ ಪೇಯದಾರ ಮಾರ್ಶಲ್ ಪೆರೈರಾಯವರಿಗೆ ಮುಖ್ಯ ವಾರಸ್ದಾರ್ರು ಆಗಬೇಕೆಂಬ ಹಕ್ಕುದಾರಿ ಮೇಲೆ ಮಂಗಳೂರ್ ಸ್ಥಳದ ಜಾಕೆಮಿಕೆಲ್ ಪೆರೈರಾ ಯವರು ತರೀಕೆರೆ ವಾಸಸ್ಥರಾಗಿ ಮೃತಪಟ್ಟ ಮಾರ್ಶಲ್ ಪೆರೈರಾ ಯವರ ಜಿಂದಗಿ ಬಗ್ಯಾಗಿ ಬರತಕ್ಕ 362—0—0 ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು 1904ನೆ ಇಸವಿ ಜೂನ್ ತಿಂಗಳು ತಾರೀಖು 10ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಾರ್ಶಲ್ ಪೆರೈರಾ ಯವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಏಪ್ರೆಲ್ ತಿಂಗಳು 8ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 327.

ಶಿವಮೊಗ್ಗಾದಲ್ಲಿ ವಾಸವಾಗಿದ್ದು ಮೃತಪಟ್ಟ ಬಾಳಗಾರ ಭೀಮರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ರುಕ್ಮಾಬಾಯಿ ಕೋಂ ಬಾಳಗಾರ ಭೀಮರಾವ್, ತೀರ್ಥಹಳ್ಳಿ ತಾಲ್ಲೂಕು ಮೈಹಿಷಿ ವಾಸಿ, ಮೃತಪಟ್ಟ ಸದರೀ ಬಾಳಗಾರ ಭೀಮರಾಯರಿಗೆ ಖಾಸಾ ಹೆಂಡತಿಯು ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಹಿಷಿ ಸ್ಥಳದ ರುಕ್ಮಾಬಾಯಿ ಯವರು ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಭೀಮರಾಯರ ಜಿಂದಗಿ ಬಗ್ಯಾಗಿ ಬರತಕ್ಕ 352—0—0 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರುಕ್ಮಾಬಾಯಿಯವರ ಅರ್ಜಿಯನ್ನು ಸನ್ 1904ನೆ ಇಸವಿ ಜೂನ್ ತಿಂಗಳು ತಾರೀಖು 17ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭೀಮರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಏಪ್ರೆಲ್ ತಿಂಗಳು 10ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 338.

ಹೊಳೇಹೊನ್ನೂರಲ್ಲಿ ವಾಸವಾಗಿ ಇದ್ದು ಮೃತಪಟ್ಟ ಕುಂಬಾರಕೇರಿ ಸೌದಾಘರ ಇಮಾಂಖಾನ್‌ರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಫಾತ್ಮಾಬಿ ಕೋಂ ಕುಂಬಾರಕೇರಿ ಸವುದಾಘರ ಇಮಾಮುಖಾನ್, ಶಿವಮೊಗ್ಗಾ ತಾಲ್ಲೂಕು ಹೊಳೇಹೊನ್ನೂರು ವಾಸಿ, ಮೃತಪಟ್ಟ ಸದರೀ ಇಮಾಂಖಾನ್ ಯವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಹೊಳೇಹೊನ್ನೂರು ಸ್ಥಳದ ಫಾತ್ಮಾಬಿ ಯವರು ಹೊಳೇಹೊನ್ನೂರು ವಾಸಸ್ಥರಾಗಿ ಮೃತಪಟ್ಟ ಇಮಾಂಖಾನ್‌ರ ಜಿಂದಗಿ ಬಗ್ಯಾಗಿ ಬರತಕ್ಕ 776—13—4 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಫಾತ್ಮಾಬಿಯವರ ಅರ್ಜಿಯನ್ನು ಸನ್ 1904ನೆ ಇಸವಿ ಜುಲೈ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಇಮಾಂಖಾನ್‌ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಮೇ ತಿಂಗಳು 25ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 339.

ತೀರ್ಥಹಳ್ಳಿಯಲ್ಲಿದ್ದು ಮೃತಪಟ್ಟ ಕಂಟ್ರಾಕ್ಟದಾರ್ ಅಂತೋಣಿಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ತೀರ್ಥಹಳ್ಳಿಯಲ್ಲಿ ಇರುವ ಮ್ಯಾರಿಮ್ಯಾಸ್ಟಲೀನಾ ಬಿನ್ ಕಂಟ್ರಾಕ್ಟರ್ ಅಂತೋಣಿ, ಮೃತಪಟ್ಟ ಸದರೀ ಅಂತೋಣಿಯವರಿಗೆ ಖಾಸಾ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ತೀರ್ಥಹಳ್ಳಿ ಸ್ಥಳದ ಮ್ಯಾರಿಮ್ಯಾಸ್ಟಲೀನಾ ಯವರು ತೀರ್ಥಹಳ್ಳಿ ವಾಸಸ್ಥರಾಗಿ ಮೃತಪಟ್ಟ ಅಂತೋಣಿಯವರ ಜಿಂದಗಿ ಬಗ್ಯಾಗಿ ಬರತಕ್ಕ 269—2—6 ರೂಪಾಯಿಗಳ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮ್ಯಾರಿಮ್ಯಾಸ್ಟಲೀನಾ ಯವರ ಅರ್ಜಿಯನ್ನು ಸನ್ 1904ನೆ ಇಸವಿ ಜುಲೈ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಅಂತೋಣಿ ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಮೇ ತಿಂಗಳು 25ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 340.

ಶಿವಮೊಗ್ಗಾ ವಾಸಿಯಾಗಿದ್ದು ಮೃತಪಟ್ಟ V. ಕೃಷ್ಣರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಶಾರದಾಬಾಯಿ ಕೋಂ V. ಕೃಷ್ಣರಾವು, ಮೈನರ್, ಗಾರ್ಡಿಯನ್ ತಂದೆ ದೇವಾಜಿರಾವು, ಪ್ಲೀಡರ್, ವೇಲೂರು ವಾಸಿ, ಮೃತಪಟ್ಟ ಸದರೀ V. ಕೃಷ್ಣರಾಯರಿಗೆ ಖಾಸಾ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ವೇಲೂರು ಸ್ಥಳದ ಶಾರದಾಬಾಯಿ ಯವರು, ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ V. ಕೃಷ್ಣರಾಯರ ಜಿಂದಗಿ ಬಗ್ಯಾಗಿ ಬರತಕ್ಕ 900 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಾರದಾಬಾಯಿ ಯವರ ಅರ್ಜಿಯನ್ನು ಸನ್ 1904ನೆ ಇಸವಿ ಜುಲೈ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ V. ಕೃಷ್ಣರಾವು ಯವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಏಪ್ರೆಲ್ ತಿಂಗಳು 14ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ೯ 1903—1904ನೆ ಇಸವಿ ಮಿ॥ ಅರ್ಜೀ ನಂಬರ 341.

ಶಿವಮೊಗ್ಗ ತಾಲ್ಲೂಕು ಬಸವನನಂದಿಹಳ್ಳಿ ಗ್ರಾಮದಲ್ಲಿದ್ದು ಮೃತಪಟ್ಟ ಈಚಬಸಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಖಂಡಿ ರುದ್ರಪ್ಪ ಬಿ೯ ಈರಬಸಪ್ಪ, ಶಿಕಾರಿಪುರ ತಾಲ್ಲೂಕು ವುಡಗಣಿ ವೂಗಣಿ ಬಸವನನಂದಿ ವಾ॥, ಮೃತಪಟ್ಟ ಸದರೀ ಈರಬಸಪ್ಪನವರಿಗೆ ಖಾಸ ಮಗನು ಆಗಬೇಕೆಂಬ ಹಕ್ಕುದಾರಿ ಮೇಲೆ ಬಸವನನಂದಿಹಳ್ಳಿ ಸ್ಥಳದ ಖಂಡಿ ರುದ್ರಪ್ಪನವರು, ಬಸವನನಂದಿಹಳ್ಳಿ ವಾಸಸ್ಥರಾಗಿ ಮೃತಪಟ್ಟ ಈರಬಸಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ರೂ. (238—1—0) ಸಾಲವನ್ನು ವಸೂಲ್ ಮಾಡುವದಕ್ಕೆ ಸ೯ 1901ನೆ ಇಸವಿ VIIನೆ ನಂಬರ ರೆಗ್ಯುಲೇಷ೯ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಖಂಡಿ ರುದ್ರಪ್ಪನವರ ಅರ್ಜಿಯನ್ನು ಸ೯ 1904ನೆ ಇಸವಿ ಜುಲೈ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಈರಬಸಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1904ನೆ ಇಸವಿ ಏಪ್ರೆಲ್ ತಿಂಗಳು 12ನೆ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ೯ 1903—1904ನೆ ಇಸವಿ ಮಿ॥ ಅರ್ಜೀ ನಂಬರ 342.

ಅರ್ಜೀದಾರು ಲಕ್ಷ್ಮೀನಾರಾಯಣರಾವ್ ಬಿ೯ ಭಾಸ್ಕರರಾವ್, ಶಿವಮೊಗ್ಗ ಡಿ॥ ರಿಜಿಸ್ಟ್ರೀರ್ ಡೆ॥ ಕ್ಲಾರ್ಕ್, ಶಿವಮೊಗ್ಗ ವಾ॥, ವೈನರಾದ ಗುಂಡಮ್ಮ, ಭಾಗೀರಥಮ್ಮ, ಸಾವಿತ್ರಮ್ಮ, ನಾಗಮ್ಮ, ಶಿವಮೊಗ್ಗ ಸ್ಥಳದ ವಾಣಿಗಳಾದ ಇವರ ಆಸ್ತೀ ವಿಷಯದಲ್ಲಿ—

ಸದರೀ ವೈನರಾದ ಗುಂಡಮ್ಮ, ಭಾಗೀರಥಮ್ಮ, ಸಾವಿತ್ರಮ್ಮ, ನಾಗಮ್ಮ, ಶಿವಮೊಗ್ಗ ವಾಣಿಗಳು, ಇವರಿಗೆ ಖಾಸಾ ಅಂಣನು ಆಗಬೇಕೆಂಬ ಹಕ್ಕಿನಮೇಲೆ ಶಿವಮೊಗ್ಗ ಸ್ಥಳದ ಗುಂಡಮ್ಮ, ಭಾಗೀರಥಮ್ಮ, ಸಾವಿತ್ರಮ್ಮ, ನಾಗಮ್ಮ, ಇವರ ಖಾಸಾ ಅಂಣ ಅರ್ಜೀದಾರ ಲಕ್ಷ್ಮೀನಾರಾಯಣರಾಯರು, ಸದರೀ ವೈನರ್ ಆಸ್ತಿ ರೂ. (926—4—7) ಕಾವಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ೯ 1904ನೆ ಇಸವಿ ಜುಲೈ ತಾರೀಖು 15ರಲ್ಲು ಪೊಕ್ಷರರು ವಾದಿಯಿರುವೆದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸ೯ 1904ನೆ ಇಸವಿ ಏಪ್ರೆಲ್ ತಿಂಗಳು 13ನೆ ತಾರೀಖಿನಲ್ಲಿ ಕೋರ್ಟು ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ವೆಂಕಟವರದ೯ ಐಯ್ಯಂಗಾರ್,
ಸಬ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜ್ರವರ ಕೋರ್ಟಿನಲ್ಲಿ.

ಸ೯ 1903—1904ನೆ ಇಸವಿ ಮಿ॥ ಅರ್ಜೀ ನಂಬರ 461.

ಮೃತಪಟ್ಟ ಶಿರೂರು ತಿಮ್ಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟ್ ಕೊಪ್ಪ ತಾಲ್ಲೂಕು ಹರಿಹರಪುರದಲ್ಲಿರುವ ಶಿರೂರು ಭೀಮರಾವ್, ಮೃತಪಟ್ಟ ಶಿರೂರು ತಿಮ್ಮಪ್ಪನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಕೊಪ್ಪ ತಾಲ್ಲೂಕು ಹರಿಹರಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ಶಿರೂರು ತಿಮ್ಮಪ್ಪನವರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ೯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಿರೂರು ಭೀಮರಾವ್ ಯವರ ಅರ್ಜಿಯನ್ನು ಸ೯ 1904ನೆ ಇಸವಿ ಜೂ೯ ತಿಂಗಳು ತಾರೀಖು 28ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಶಿರೂರು ತಿಮ್ಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ೯ 1904ನೆ ಇಸವಿ ಏಪ್ರೆಲ್ 12ನೆ ತಾರೀಖಿನಲ್ಲಿ ಕೋರ್ಟು ವೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

979

ಬೆಂಗಳೂರು ಸಿಟಿ ಮ್ಯುನಿಸಿಪಲ್ ಬೋರ್ಡು ಆಫೀಸಿನಿಂದ.

ನೋಟಿಸು.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯುವಡಿಸುವದೇನಂದರೆ,.... ಬೆಂಗಳೂರು ಸಿಟಿ ಮ್ಯುನಿಸಿಪಲ್ ಸರಹದ್ದಿನಲ್ಲಿ ಇರುವ ತರಕಾರಿ, ಮಾಸು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ 1904ನೆ ಇಸವಿ ಜುಲೈ 1ನೆ ತಾರೀಖು ಲಾಗಾಯಿತು 1905ನೆ ಇಸವಿ ಜೂ೯ 30ನೆ ತಾರೀಖಿನ ವರಿವಿಗೆ, ಮುಂಜೂರಾಗಿರುವ ದರಗಳ ಮೇರಿಗೆ ತೆರಿಗೆ ಮತ್ತು ಬಾಡಿಗೆಯನ್ನು ವಸೂಲ್ ಮಾಡುವದಕ್ಕೆ ಮೊಹರ್ನಿಶಿ ದರಖಾಸ್ತುಗಳು ಇಷ್ಟವಿದ್ದವರು ಈ ಕೆಳಗೆ ಸೈ೯ ಮಾಡಿರುವವರಿಗೆ 1904ನೆ ಇಸವಿ ಜೂ೯ 14ನೆ ತಾರೀಖು ಮಧ್ಯಾನ್ನ 3 ಘಂಟೆ ಒಳಗಾಗಿ ಕೊಡಬಹುದು.

I. ಸಿಟಿ ಮಾರ್ಕೆಟ್ಟು ಸರಹದ್ದಿನೊಳಗೆ ಒಟ್ಟಾಗಿ ಆಗಲಿ ಅಥವಾ ಚಿಲ್ರೆಯಾಗಿ ಆಗಲಿ ಮಾರುವದಕ್ಕೋಸ್ಕರ ತರುವ ತರಕಾರಿ ಮತ್ತು ಹಣ್ಣುಗಳು, ಪುರುಳ್ಳಿಗಡ್ಡೆ, ಈರುಳ್ಳಿ, ಕಡ್ಲಿಕಾಯಿ, ತೆಂಗಿನಕಾಯಿ ಮತ್ತು ಇತರ ಜಿನಸಿಗಳ ಗೂಡೆಗಳಿಗೂ ಗಾಡಿಗಳಿಗೂ ಮತ್ತು ಮಾಸು ಮತ್ತು ಕೋಳಿ ಮಾರ್ಕೆಟ್ಟುಗಳಿಗೆ ತರುವ ಮಾಸು, ಕೋಳಿ, ಕೋಳಿಮೊಟ್ಟೆಗಳ ಗೂಡೆಗಳಿಗೂ ಇದರಡಿ ನಮೂದಿಸಿರುವ ರೇಟುಗಳು ಅನುಸರಿಸಿ ತೆರಿಗೆ ವಸೂಲ್ ಮಾಡುವದಕ್ಕೆ.

II. ಸೆಂಟ್ರಲ್ ಮಾರ್ಕೆಟ್ಟು ಅಲ್ಲದೆ ಈ ಕೆಳಗೆ ನಮೂದಿಸಿರುವ ಮಾರ್ಕೆಟ್ಟುಗಳಲ್ಲಿ ತರಕಾರಿ ಮಾರುವವರಿಂದ (ರುಸುಂ) ವಸೂಲ್ಮಾಡುವದಕ್ಕೆ.

ರಂಗಸ್ವಾಮಿ ದೇವಸ್ಥಾನದ ಬಳಿ ಇರುವ ಬೈಲ್ ಮಾರ್ಕೆಟ್ಟು.
ಉಪ್ಪಾರಪೇಟೆ ... ಡಿಟೋ
ತಿಗಳರಪೇಟೆ ಧರ್ಮರಾಯನ ಗುಡಿಬಳಿ ಬೈಲ್ ಡಿಟೋ
ಕಲಾಸಿಪಾಳ್ಯ ... .. ಡಿಟೋ
ಅಕ್ಕಿಪೇಟೆಯಲ್ಲಿರುವ ... ಡಿಟೋ

III. ಗುಜರಿಯಲ್ಲಿ ಗೊತ್ತು ಮಾಡಲ್ಪಟ್ಟ ಸ್ಥಳಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ವ್ಯಾಪಾರ ಮಾಡುವ ಜವಿನಿಗೆ ಬಾಡಿಗೆ ವಸೂಲ್ಮಾಡುವದಕ್ಕೆ.

IV. ರಸ್ತೆಯ ಸ್ಟಾಲ್‌ಗಳಲ್ಲಿ ಹಂಗಾಮಿಯಾಗಿ ವಿಕ್ರಿ ಮಾಡುವ ಅಂಗಡಿಯವರಿಂದ ವ್ಯಾಪಾರ ಮಾಡುವ ಸ್ಥಳಕ್ಕೆ ಬಾಡಿಗೆ ವಸೂಲ್ ಮಾಡುವದಕ್ಕೆ.

V. ಮಾಸು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ಹಂಗಾಮಿಯಾಗಿ ವ್ಯಾಪಾರ ಮಾಡುವವರಿಂದ ಜವಿರ್ಾ ಬಾಡಿಗೆ ವಸೂಲ್ ಮಾಡುವದಕ್ಕೆ ಮೇಲ್ಕಂಡ ಮಾರ್ಕೆಟ್ಟುಗಳಲ್ಲಿ ಮುನಿಸಿಪಾಲಿಟಿಗೆ ತಿಂಗಳುಗುತ್ತಿಗೆ ಬಾಡಿಗೆ ಕೊಡುವವರಿಂದ ಜವಿನು ಬಾಡಿಗೆಯನ್ನು ಕಂಟ್ರಾಕ್ಟುದಾರನು ವಸೂಲ್ ಮಾಡಕೂಡದು ಮತ್ತು ಹಗಲುರಾತ್ರೆ ಸಹ ಸಾಮಾನುಗಳು ತೆಗಿಯದೆ ಅಂಗಡಿಗಳನ್ನು ಖಾಯಂ ಇಟ್ಟುಕೊಂಡಿರುವವರಿಂದ ಸಹ ಜವಿರ್ಾ ಬಾಡಿಗೆಯನ್ನು ವಸೂಲ್ ಮಾಡಕೂಡದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮುನಿಸಿಪಲ್ ತರಕಾರಿ, ಮಾಸು ಮತ್ತು ಕೋಳಿ ಮಾರ್ಕೆಟ್ಟುಗಳಲ್ಲಿ ತೆರಿಗೆ ಮತ್ತು ಜವಿರ್ಾ ಬಾಡಿಗೆ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬುದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಕೂಡ ನಗದಾಗಲಿ ಅಥವಾ ಕರ್ಣಿಸಿ ನೋಟುಗಳಾಗಲಿ 50 ರೂಪಾಯಿ ಠೇವಣಿ ಹಣವನ್ನು ಹಾಜರ್ಮಾಡಿದಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೆ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೆ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈ೯ ಮಾಡಿರುವವರು ಬದ್ಧರಾಗಿರುವದಿಲ್ಲವು. ಮತ್ತು ಯಾವ ಸಬಬನ್ನೂ ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಠೇವಣಿ ಹಣವು ಅವನ ದರಖಾಸ್ತಿನ 1 ತಿಂಗಳ ಕಂಟ್ರಾಕ್ಟು ಮೊಬಲಗಿಗೆ ಕಮ್ಮಿಯಾಗಿದ್ದರೆ ಆ ಕಮ್ಮಿ ಮೊಬಲಗನ್ನು ಅವನು ವಡನೆ ಹಾಜರ್ಮಾಡಬೇಕು. ಮತ್ತು ಅಂಥಾ ದರಖಾಸ್ತುದಾರನು ಅವನ ದರಖಾಸ್ತನ್ನು ಅಂಗೀಕರಿಸಿದ್ದನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಐದು ವಾರದೊಳಗೆ ಅವಶ್ಯಕವಾದ ಇಜಾರೆ ಮುಚ್ಚಳಿಕೆಯನ್ನು ಬರದುಕೊಡಬೇಕು. ಹಾಗೆ ತಪ್ಪಿದರೆ ಆ ಠೇವಣಿ ಮೊಬಲಗು ಬೋರ್ಡಿಗೆ ದಂಡವಾಗಿ ಜೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಕಂಟ್ರಾಕ್ಟ್ದಾರನು ಇದರ ಕೆಳಗೆ ಕಾಣಿಸಿದ ಪ್ರಕಾರ ತೆರಿಗೆ ಅಥವಾ ಬಾಡಿಗೆ ವಸೂಲ್ಮಾಡಿಕೊಳ್ಳತಕ್ಕದ್ದಾಗಿದೆ.

A. ಶಿವ್ಪಿಕಾಸ್ಟ್ಲಿನಲ್ಲಿರುವ ಎಗ್ಹೊಲ್ಡರ್ ವೆಜಿಟೆ ಬಲ್ ಮಾರ್ಕ್ಟಟ್ಟಿನಲ್ಲಿ. } ಇದರ ತಪ್ಪ್ಸೀಲ್ ನವೂದಿನಿಂದ ಕಂಟ್ರಾಕ್ಟ್ದಾರನು ಕಂಟ್ರಾಕ್ಟ್ಗೆ ಸಮ್ಮಂಧಪಟ್ಟ ಪ್ರತಿಬಂದು ಸ್ಥಳವಲ್ಲಿಯೂ ಸ್ವಂತ ಲಾಭವಿನಿಂದ ಒಂದು ಬೋಡ್೯ ಹಾಕಿರಬೇಕು.

		ರೂ.	ಅ.	ಪೈ.
1.	ದೊಡ್ಡ ಮಂಕ್ರಿ 1ಕ್ಕೆ ತರಕಾರಿ	0	0	2
2.	ಹರಿವೆಸೊಪ್ಪುಗಳ ಮಂಕ್ರಿ 1ಕ್ಕೆ	0	0	1
3.	ಭಂಡಿತುಂಬಾ ತರಕಾರಿ, ಹಣ್ಣುಗಳು ಒಟ್ಟು ಬಿಕರಿಗೆ ಬಂದರೆ	0	2	0
4.	ಮಾರ್ಕ್ಟಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ಬರುವ ತರಕಾರಿ ಭಂಡಿ 1ಕ್ಕೆ ..	0	1	0
5.	ಸೇಬು, ಅಂಜೂರ, ದಾಳಿಂಬ, ಚಕ್ಕೊತ್ತ ಮತ್ತು ಮೂವು ವಗ್ಗೈರೆ ಹಣ್ಣುಗಳ ಮಂಕ್ರಿ 1ಕ್ಕೆ	0	0	3
6.	ಮಾರ್ಕ್ಟಟ್ಟಿನಲ್ಲಿ ಅಂಗಡಿ ಇಟ್ಟುಕೊಳ್ಳುವ ಉದ್ದಿಶ್ಯ ತರಗಿನಪೇಟೆ ವಗ್ಗೈರೆ ಸ್ಥಳದಿಂದ ಬರುವ ಉರಳೆ ಗಡ್ಡೆ, ಈರುಳ್ಳಿ, ಕಡ್ಲೆಕಾಯಿ ವಗ್ಗೈರೆ ಮೂಟೆ 1ಕ್ಕೆ.	0	0	3
7.	ಲೈಲಿನಿಂದ ಬರುವ ಮೂಟೆಭಂಡಿ ಭರ್ತಿ ಕಡ್ಲೆಕಾಯಿ, ಉರಳಗಡ್ಡೆ, ಈರುಳ್ಳಿ, ಮೂವಿನಹಣ್ಣು, ಬಾಳೆಹಣ್ಣು ವಗ್ಗೈರೆ ಬಂದೇವಿಧವಾದ ಬಾಬಿಗೆ.	0	1	0
8.	ಕೋಳಿ, ಕೋಳಿಮೊಟ್ಟೆ ಅಥವಾ ಆಹಾರಕ್ಕೆ ಉಪಯುಕ್ತವಾದ ಇತರ ಪಕ್ಷಿಗಳ ಗೂಡೆ 1ಕ್ಕೆ	0	0	3
9.	5 × 5 ಅಡಿಯುಳ್ಳ ಪ್ರತಿ ಜವಿಾನಿನಲ್ಲಿ ಸಾಯಂಕಾಲದ ಅಂಗಡಿಗೆ	0	0	3
10.	ಸದರಿ ಅಳತೆಯುಳ್ಳ ಜವಿಾನನ್ನು ಉಪಯೋಗಿಸಿಕೊಂಡು ಹರಾಜು ಮಾಡಿಸುವ ಜಾಗಾಕ್ಕೆ	0	1	0
11.	ವೆಜಿಟೆಬಲ್ ಮಾರ್ಕ್ಟಟ್ಟ ವಳಗಾಗಿ ಟೆಂಪರರಿಯಾಗಿ ಇಟ್ಟುಕೊಳ್ಳುವ ಸದರಿ ಅಳತೆಯುಳ್ಳ ಜಾಗಾಕ್ಕೆ ತರಕಾರಿ ಮೂರಾಟಕ್ಕೆ.	0	0	2
12.	ಮಿಾಸಿನ ಸ್ಟಾಲ್ 1ಕ್ಕೆ	0	0	2

VII. ವೆಜಿಟೆಬಲ್ ಮಾರ್ಕ್ಟಟ್ಟು ಹಿಂಭಾಗದಲ್ಲಿರುವ ಮೈದಾನದ ಯಾವ ಭಾಗದಲ್ಲಾದರೂ ಕಬ್ಬಿಣ ವಗ್ಗೈರೆ ಸಾಮಾನುಗಳು ರಾತ್ರಿ ಹಗಲು ಸಹ ತೆಗಿಯದೆ ಇಟ್ಟುಕೊಂಡು ವ್ಯಾಪಾರ ಮಾಡುವವರಿಂದ ಅಮಾನಿಯಾಗಿ ಮಾಹೆಯಾನಾ ಬಾಡಿಗೆ ವಸೂಲ್ಮಾಡಲ್ಪಡುತ್ತೆ. ಟೆಂಪರರಿಯಾಗಿ ಇಡುವವರಿಂದ ಕಂಟ್ರಾಕ್ಟ್ದಾರನು ವಸೂಲ್ಮಾಡಿಕೊಳ್ಳಬಹುದು.

VIII. ಕಂಟ್ರಾಕ್ಟ್ದಾರನು ಪ್ರತಿ ತಿಂಗಳ 5ನೆ ತಾರೀಖು ವಳಗಾಗಿ ಕಂಟ್ರಾಕ್ಟ್ ಬಾಬತು ಆಯಾಯ ತಿಂಗಳ ಪೊಬಲಗನ್ನು ಮುಂದಾಗಿ ಯೂ ಹಾಜಾಮ್ಮಾಡಿ ರಶೀತಿ ಪಡದುಕೊಳ್ಳಬೇಕು.

IX. ಕೋಟೆ ಆಂಜನೇಯ ದೇವಸ್ಥಾನಕ್ಕೆ ಬಿಟ್ಟಿರುವ ಮೆಯ್ರ್ಡಿಮ್ಕ್ಯ ಪಕ್ಕದ ಖಾಲಿ ಜವಿಾನಿನಲ್ಲಿ ವಸೂಲಾಗತಕ್ಕದ್ದು ವೆಜಿಟೆಬಲ್ ಮಾರ್ಕ್ಟಟ್ಟು ಕಂಟ್ರಾಕ್ಟ್ದಾರೆ ವಸೂಲ್ಮಾಡಿಕೊಂಡು ಮಾಪೆ 1ಕ್ಕೆ 2 ರೂಪಾಯಿಗಳಂತೆ ಡಿಪೋ ದೇವಸ್ಥಾನದ ವಿಜಂಟರಿಗಾಗಿ ಅವರಿಗೆ ಪಾವತಿ ಬಗ್ಗೆ ಕಂಟ್ರಾಕ್ಟ್ ಪೊಬಲಗಿನ ಸಂಗಡ ಇರಸಾಲ್ ಮಾಡಬೇಕು.

X. ರೇವಣಿ ಪೊಬಲಗು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟ್ ಅಖ್ಯೆರಾಗುವ ವರಿವಿಗೂ ಕಂಟ್ರಾಕ್ಟ್ನನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅವಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟ್ ಕಾಲದಲ್ಲಿ ಪ್ರೆಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನು ಇವನು ಅಲಾಯಿದ ಪಾವತಿ ಮಾಡದೆ. ಸಿಲ್ಲಿಸಿಕೊಂಡಲ್ಲಿ ಸದರಿ ರೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ರೇವಣಿ ಭರ್ತಿ ಬಗ್ಗೆ ಕಂಟ್ರಾಕ್ಟ್ದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟ್ ಸರಿಯಾಗಿ ನೆರವೇರಿಸಿದನಂತರ ಕಂಟ್ರಾಕ್ಟ್ದಾರನಿಗೆ ರೇವಣಿ ಹಣ ವಾಪಸು ಮಾಡಲ್ಪಡುವದು.

XI. ಈ ಷರತ್ತುಗಳಿಗೆ ವಿರೋಧವಾಗಿ ನಡದುಕೊಳ್ಳುವ ಪಕ್ಷಕ್ಕೆ ಕೂಡ್ಲೆ ಕಂಟ್ರಾಕ್ಟ್ ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವಲ್ಲದೆ ರೇವಣಿ ಪೊಬಲಗನ್ನು ದಂಡವಾಗಿ ಅಥವಾ ಅವನ ಬಾಕಿಗೆ ತೆಗದುಕೊಂಡು ಲುಕ್ಸಾನ್ ಪೊಬಲಿಗೆ ಕಂಟ್ರಾಕ್ಟ್ದಾರನನ್ನು ಜವಾಬ್ದಾರಿ ಮಾಡಿ ಅವನ ಜಿಂದಗಿ ಜಫ್ತಿ ಹರಾಜುಮೂಲಕ ವಸೂಲ್ ಮಾಡಲ್ಪಡುತ್ತೆ.

XII. ವಿಕ್ಕ ವಿಷಯಗಳನ್ನು ಈ ಕೆಳಗೆ ಸೈ೯ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬೇಕು.

XIII. ಪ್ರೆಸಿಡೆಂಟರವರ ಮಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕ್ಕಿ ಕಂಟ್ರಾಕ್ಟ್ ವಗ್ಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರವರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಗೈರೆಗಳನ್ನು ಬಿ೯ ತಕರಾರು ತೆಗದುಕೊಳ್ಳಲು ಸಲೀಸ್ ವಿಚಾರಿಡು ಇಡತಕ್ಕದ್ದು.

981

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ,—ಮೈಸೂರು ರೋಡು ಹಳೆ ಟಂಬರುಯಾರ್ಡು ಬಳಿ ಇರುವ ಮ್ಯೂನಿಸಿಪಲ್ ಖಾಲಿ ಜಮೀನಿನಲ್ಲಿ ಛಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ ಜಮೀನು ಬಾಡಿಗೆಯನ್ನು 1904ನೆ ಇಸವಿ ಜುಲೈ ಗುರ್ಸಿಲಾಗಾಯುತು 1905ನೆ ಇಸವಿ ಜೂನ್ ಆಖೈರು ವರಿವಿಗೆ ರೋಜೀನಾ ಇದರಡೀ ನಮೂದಿಸಿರುವ ದರಗಳಂತೆ ವಸೂಲ್ಮಾಡಿ ಕೊಳ್ಳತಕ್ಕದ್ದಿಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾನ್ಹ 2 ಘಂಟೆ ವಳಗಾಗಿ ಕೊಡಬಹುದು.

2. ಮೇಲ್ಕಂಡ ಜಾಗದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್ :—

		ರೂ.	ಅ.	ಪೈ.
1.	ಕಟ್ಟಿಗೆ ಮತ್ತು ಹುಲ್ಲು ಛಂಡಿ 1ಕ್ಕೆ	0	2	0
2.	ಕಟ್ಟಿಗೆ ಹೊರೆ 1ಕ್ಕೆ	0	0	1
3.	ಹುಲ್ಲು ಹೊರೆ 1ಕ್ಕೆ	0	0	2

3. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮುಜಕೂರು ಮೈಸೂರು ರೋಡು ಹಳೆ ಟಂಬರುಯಾರ್ಡು ಬಳಿ ಇರುವ ಮ್ಯೂನಿಸಿಪಲ್ ಖಾಲಿ ಜಮೀನಿನಲ್ಲಿ ಛಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ ಜಮೀನು ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ಜೆಸಿ ನೋಟುಗಳಾಗಲಿ 50 ರೂಪಾಯಿನ ಕೇವಣಿ ಹಣವನ್ನು ಹಾಜರ್ಮಾಡಿದಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅವಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಸೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಆತನ ಕಂಟ್ರಾಕ್ಟು ಮುಂಜೂರಾದ 7 ದಿವಸದ ಬಳಿಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಕೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅವಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟ್ ಕಾಲದಲ್ಲಿ ಪ್ರೆಸಿಡೆಂಟ್ ನೊ ಹೇಬರು ಇವನಿಗೆ ವಿಧಿಸಿದ ಜಲ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಕೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಕೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಕೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡವೆ ವಿಷಯಗಳನ್ನು ಈ ಕೆಳಗೆ ಸೈ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತ್ತಿಯಾಗಿ ಆಗ ಯಾವ ಕಂಪೆನ್ಸೇಷ್ಯ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗೈರೆ ಛಂಡಿಗಳೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆ ಹೊರೆಗಳೆ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಛಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಜರ ಸ್ಥಿರ ಜಿಂದಗಿಯನ್ನು ಜಪ್ತಿ ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮುಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಕಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬೇ ತಕರಾರು ತೆಗದುಕೊಳ್ಳಲು ಸಲೀಸು ವಿಶ್ವಾಸ ಇಸ ತಕ್ಕದ್ದು.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ನಾಲ್ಕನೇ ಡಿವೀಜನ್ ತಾರಾಮಂಡಲ್‌ಪೇಟೆ ನಾಲ್ಕುಭಾವಿ ಬಳಿಯಣ ಖಾಲಿ ಜಮೀನ್‌ನಲ್ಲಿ ಭಂಡಿಗಳು ವಗೈರೆ ನಿಲ್ಲುವವರ ಕಡೆಯಿಂದ, ಜಮೀನ್ ಬಾಡಿಗೆಯನ್ನು 1904ನೆ ಇಸವಿ ಜುಲೈ ಗುರ್ರೀ ಲಾಗಾಯತು 1905ನೆ ಇಸವಿ ಜೂನ್ ಆಖೈರ ವರಿಗೆ ರೋಜೀನಾ ಇದರಡಿ ನಮೂದಿಸಿರುವ ದರಗಳಂತೆ ವಸೂಲ್ ಮಾಡಿಕೊಳ್ಳತಕ್ಕದ್ದಕ್ಕೆ ಮೊಹರಿ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು :—

2. ಮೇಲ್ಕಂಡ ಜಾಗಾದಲ್ಲಿ ಬಾಡಿಗೆ ರುಸುಂ ವಸೂಲ್ ಮಾಡತಕ್ಕ ದರಗಳ ತಪಶೀಲ್ :—

			ರೂ. ಆ. ಪೈ.
1.	ಕಟ್ಟಿಗೆ ಮತ್ತು ಹುಲ್ಲುಭಂಡಿ 1ಕ್ಕೆ	...	0—2—0
2.	ಕಟ್ಟಿಗೆ ಹೊರೆ 1ಕ್ಕೆ	...	0—0—1
3.	ಹುಲ್ಲು ಹೊರೆ 1ಕ್ಕೆ	...	0—0—2
4.	ತರಕಾರಿ ಅಂಗಡಿ ಜಾಗಾಕ್ಕೆ	...	0—0—2
5.	ಕಂಬಾರ್ರ ಸಾಮಾನು ಮಂಕ್ರಿ 1ಕ್ಕೆ	...	0—0—2
6.	ಮೀನ್ ವಗೈರೆ ಅಂಗಡಿ 1ಕ್ಕೆ	...	0—0—2

3. ದರಖಾಸ್ತುಗಳ ಮೇಲ್‌ಭಾಗದಲ್ಲಿ "ತಾರಾಮಂಡ್ಲಪೇಟೆ ನಾಲ್ಕುಭಾವಿ ಬಳಿಯಣ ಖಾಲಿ ಜಮೀನಿನಲ್ಲಿ ಕಟ್ಟಿಗೆ ಮತ್ತು ಹುಲ್ಲುಭಂಡಿ ವಗೈರೆ ಇಟ್ಟುಕೊಂಡು ಮಾರುವವರಿಂದ ಜಮೀನ್ ಬಾಡಿಗೆ ವಸೂಲ್ ಮಾಡಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

4. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲವು.

5. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

6. ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅಮಾನತ್ತು ಇಡಬೇಕು.

7. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೆ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಆತನ ಕಂಟ್ರಾಕ್ಟು ಮಂಜೂರಾದ 7 ದಿವಸದ ಬಳಗಾಗಿ ಛಾಪಾಕಾಗದದಲ್ಲಿ ಮುಚ್ಚಳಿಕೆ ಬರದುಕೊಡಬೇಕು.

8. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟ್ ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸಿದ ಜುಲ್ಮಾನೆಗಳನ್ನ ಇವನು ಅಲಾಹಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿರುವವರ ಆಫೀಸಿನಲ್ಲಿ ತಿಳದುಕೊಳ್ಳಬಹುದು.

10. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್‌ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

11. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಹುಲ್ಲು, ಕಟ್ಟಿಗೆ ವಗೈರೆ ಭಂಡಿಗಳೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆ ಹೊರೆಗಳೆ ಆಗಲಿ ಬಾರದೆ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನಿಗೂ ಪರಿಹಾರ ದೊರಿಯಲಾರದು.

12. ಮೇಲ್ಕಂಡ ಜಾಗಾ ವಿನಹಾ ಇತರ ಸ್ಥಳಗಳಲ್ಲಿ ಭಂಡಿಗಳಿಗೆ ಆಗಲಿ ಅಥವಾ ಹುಲ್ಲು, ಕಟ್ಟಿಗೆ ವಗೈರೆಗಳಿಗೆ ಆಗಲಿ ರುಸುಂ ವಸೂಲ್ ಮಾಡಿಕೊಳ್ಳಕೂಡದು.

13. ಮೇಲ್ಕಂಡ ಷರತ್ತುಗಳಿಗೆ ವಿರೋಧವಾಗಿ ನಡದುಕೊಂಡಲ್ಲಿ ಅಂಥಾವರ ಕಂಟ್ರಾಕ್ಟನ್ನು ರದ್ದುಮಾಡಿ ಬೇರೆ ಜನಕ್ಕೆ ಕೊಡಲ್ಪಡುತ್ತೆ. ಹಾಗೆ ಬೇರೆ ಕಂಟ್ರಾಕ್ಟು ಕೊಡುವದರಲ್ಲಿ ಉಂಟಾಗುವ ಲುಕ್ಸಾನ್ ಮೊಬಲಗನ್ನು ಬೋರ್ಡಿನವರು ಮೊದಲಿನ ಕಂಟ್ರಾಕ್ಟುದಾರನ ಚರ ಸ್ಥಿರ ಜಿಂದಗಿಯನ್ನು ಜಫ್ತಿ ಹರಾಜ್ ಮೂಲಕ ವಸೂಲ್ ಮಾಡಿಕೊಳ್ಳಲು ಸ್ವತಂತ್ರರಾಗಿ ಇರುತ್ತಾರೆ.

14. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಪಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬೀನ್ ತಕರಾರು ತೆಗೆದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 11ನೆ ಮೇ 1904.

ಇವರಿಂದ ಸವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಸಿಟಿ ಮಜಕೂರು ಕಸಾಯಿ ಮಾರ್ಕಟ್ಟಿನಲ್ಲಿ ರೋಜೀನಾ ಸಾಯಂಕಾಲದ ವ್ಯಾಳೆ ಕಟಾವು ಆಗುವ ಕುರಿ ಅಥವಾ ಮೇಕೆ ರಾಸ್ 1ಕ್ಕೆ 0—2—0 ಎರಡು ಆಣೆ ವ್ಯಾರಿಗೆ 1904ನೆ ಇಸವಿ ಜುಲೈ ಗುರ್ರೆ ಲಾಗಾಯಿತು 1905ನೆ ಇಸವಿ ಜೂ೯ ಆಖೈರ್ ಮಿನಹು ವಸೂಲ್ಮಾಡಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಯವಿದ್ದವರು ಈ ಕೆಳಗೆ ಸೈ೯ ಮಾಡಿರುವವರಿಗೆ ಸ೯1904ನೆ ಇಸವಿ ಜೂ೯ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಮ್ಯುನಿಸಿಪಲ್ ಸ್ಲಾಟರ್ ಹೌಸಿನ ರುಸುಂ ವಸೂಲ್ಮಾಡುವದಕ್ಕೆ ದರಖಾಸ್ತು" ಎಂಬದಾಗಿ ಬರೆದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ಣಿಸಿ ನೋಟುಗಳು ಆಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈ೯ ಮಾಡಿರುವವರು ಬದ್ಧರಾಗಿರುವದಿಲ್ಲವು. ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನಾಗಲಿ ನಿರಾಕರಿಸಬಹುದು.

5. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಬಂದು ತಿಂಗಳ ಕಂಟ್ರಾಕ್ಟು ವೊಬಲಗು ಅವಾನತ್ತು ಇಡಬೇಕು. ಮತ್ತು ಮುಂಜೂರಾದ ಸಂಗತಿಯನ್ನು ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಬಂದು ವಾರದೊಳಗೆ ಇಜಾರೆ ಮುಚ್ಚಳಿಕೆಯನ್ನು ಬರದು ಕೊಡಬೇಕು. ಹಾಗೆ ತಪ್ಪಿದರೆ ಠೇವಣಿ ವೊಬಲಗು ಬೋರ್ಡಿಗೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ವುಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

6. ಸ್ಲಾಟರ್ ಹೌಸನ್ನ ಪಾಕ್ ಮಾಡಿಸಲು ನೇಮಿಸಲ್ಪಡುವ ಎಸ್ಟಾಬ್ಲಿಷ್‌ಮೆಂಟ್ ಖರ್ಚಿಗಾಗಿ ಮಾಹೇಯಾನ 25 ರೂಪಾಯಿ ಮೇರಿಗೆ ಹರಯೇಕ ತಿಂಗಳು 5ನೆ ತಾರೀಖು ವಳಗಾಗಿ ಕಂಟ್ರಾಕ್ಟು ವೊಬಲಗಿನ ಸಂಗಡ ಹಾಜರ್ಮಾಡಬೇಕು. ಸ್ಲಾಟರ್ ಹೌಸಿನಲ್ಲಿ ಬೀಳುವ ಕಚರಾ, ಕಂಟ್ರಾಕ್ಟುದಾರ್ರಿಗೆ ಶೇರತಕ್ಕದ್ದಿಲ್ಲಾ.

7. ಕಂಟ್ರಾಕ್ಟುದಾರನು ಪ್ರತಿ ತಿಂಗಳ 5ನೆ ತಾರೀಖು ಬಳಗಾಗಿ ಆ ಕಂಟ್ರಾಕ್ಟು ಬಾಬತು ಆಯಾಯ ತಿಂಗಳ ವೊಬಲಗನ್ನು ವತ್ತು ಎಸ್ಟಾಬ್ಲಿಷ್‌ಮೆಂಟ್ ಖರ್ಚನ್ನ ವುಂದಾಗಿಯೇ ಹಾಜರ್ಮಾಡಿ ರಕೀತಿ ಪಡಿಯಬೇಕಾಗಿಧೆ.

8. ಅವಾನತ್‌ನಲ್ಲಿ ಇಡಲ್ಪಟ್ಟ ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟ್ ಆಖೈರ್ ಆಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅವಾನತ್ ಉಳಿಸಿಕೊಳ್ಳಲ್ಪಡುವದು ಇವನ ಕಂಟ್ರಾಕ್ಟ್ ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರವರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸು ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸ್ ಮಾಡಲ್ಪಡುವದು.

9. ಈಡವೆ ವಿಷಯಗಳನ್ನು ಈ ಕೆಳಗೆ ಸೈ೯ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

10. ಸದರೀ ಸ್ಲಾಟರ್ ಹೌಸನ್ನ ಕಂಟ್ರಾಕ್ಟು ಕಾಲದಲ್ಲಿ ಬ್ಯಾರೆ ಸ್ಥಳಕ್ಕೆ ವರ್ಗ ಮಾಡಿದ್ದೇ ಆದರೆ ಬಿ೯ ತಕರಾರ್ ಅಲ್ಲಿಗೆ ಹೋಗಬೇಕು.

11. ಪ್ರೆಸಿಡೆಂಟರವರ ಮುಂಜೂರಿ ಇಲ್ಲದೆ ಬಾಬು ಇತರರಿಗೆ ಪಿಕ್ಕಿ ಕಂಟ್ರಾಕ್ಟು ವಗ್ಯೆರೆ ಕೊಡಕೂಡದು. ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಯೆರೆಗಳನ್ನ ಬಿ೯ ತಕರಾರು ತೆಗದುಕೊಳ್ಳಲು ಸಲೀಸು ವಿವರ್ಮಾಡು ಇಡತಕ್ಕದ್ದು.

12. ಮಾರ್ಕಟ್‌ಷೋ ಎಂಬ ವಿನೋದವು ಯಾವ ದಿವಸ ನಡಿಸಲ್ಪಡುತ್ತೋ ಅದಕ್ಕೆ ಹಿಂದಿನ ದಿನ ಸ್ಲಾಟರ್ ಹೌಸಿನಲ್ಲಿ ಮಾರ್ಕಟ್‌ಷೋಗೋಸ್ಕರ ಕಟಾವಾಗುವ ಕುರಿಗಳು ಅಥವಾ ಮೇಕೆಗಳ ಮೇಲೆ ರುಸುಂ ವಸೂಲ್ಮಾಡಕೂಡದು. ಈ ನಷ್ಟಕ್ಕಾಗಿ ಬೋರ್ಡಿನವರು ರಿವಾರ್ಷ ಕೊಡತಕ್ಕದ್ದಿಲ್ಲ.

13. ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಕ್ಕಾದರೂ ವಿರೋಧವಾಗಿ ನಡದುಕೊಂಡರೂ ಮೇಲಿನ ರೇಟಿಗಿಂತ ಜಾಸ್ತಿಯಾಗಿಯೂ ವತ್ತು ಸ್ಲಾಟರ್‌ಹೌಸ್ ವಿನಹ ಇತರ ಯಾವ ಸ್ಥಳಗಳಲ್ಲಿ ಆಗಲಿ ರುಸುಂ ವಸೂಲ್ಮಾಡಿಕೊಂಡರೂ ಕೊಡ್ಲಿ ಕಂಟ್ರಾಕ್ಟನ್ನ ರದ್ದುಮಾಡಿ ಬೇರೆ ಜನರಿಗೆ ಕೊಡಲ್ಪಡುವದಲ್ಲದೆ ಠೇವಣಿ ವೊಬಲಗನ್ನ ದಂಡವಾಗಿ ಅಥವಾ ಅವನ ಬಾಕಿ ಭರ್ತಿಗಾಗಿ ತೆಗದುಕೊಂಡು ಲುಕ್ಸಾನ್ ವೊಬಲಗಿಗೆ ಕಂಟ್ರಾಕ್ಟುದಾರ್ರನ್ನ ಜವಾಬ್ದಾರನನ್ನಾಗಿಮಾಡಿ ಅವನ ಸ್ಥಿರ ಚರ ಜಿಂದಗಿ ಜಪ್ತು ಮೂಲಕ ವಸೂಲ್ಮಾಡಲ್ಪಡುತ್ತೆ.

ತಾರೀಖು 11ನೆ ಮೇ 1904.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, — ಸಿಟಿ ಮಜಕೂರು ಕೋಟೆ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಮೈದಾನದ ದಕ್ಷಿಣ ಭಾಗದಲ್ಲಿ ಭಂಡಿಗಳು ನಿಲ್ಲುವದಕ್ಕೆ ಹದ್ದುಮಾಡಿರುವ ಸ್ಥಳದಲ್ಲಿ ಬಂದು ನಿಲ್ಲುವ ಕಲ್ಲು ಭರ್ತಿ ಪ್ರತಿ ಭಂಡಿಗೂ 1904ನೆ ಇಸವಿ ಜುಲೈ ಗುರ್ಸಿ ಲಾಗಾಯತು 1905ನೆ ಇಸವಿ ಜೂನ್ ಅಖೈರು ವರಿವಿಗೆ ರೋಜೀನಾ ದರ ಭಂಡಿ 1ಕ್ಕೆ 0—0—6 ಆರು ಪೈ ಮೇರಿಗೆ ರಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಅದರಲ್ಲಿ ಬೀಳುವ ಕಚರಾವನ್ನು ರೂಢಿಸಿಕೊಳ್ಳುವದಕ್ಕೂ ಸಹ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈ ಮಾಡಿರುವವರಿಗೆ 1904ನೆ ಜೂನ್ 14ನೆ ತಾರೀಖು ಮಧ್ಯಾನ್ಹ 2 ಘಂಟೆ ವಳಗಾಗಿ ಕೊಡಬಹುದು. ಸದರೀ ಸ್ಥಳದ ಪ್ಲಾನ್ ಮ್ಯುನಿಸಿಪಲ್ ಆಫೀಸಿನಲ್ಲಿ ನೋಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಸಿಟಿ ಮಜಕೂರು ಕೋಟೆ ಮುಂಭಾಗದಲ್ಲಿ ಕಲ್ಯಾಣಿ ಇದ್ದ ಬೈಲು ಜಮೀನಿನ ದಕ್ಷಿಣ ಭಾಗದಲ್ಲಿ ಕಲ್ಲು ಭಂಡಿ ರುಸುಂ ವಸೂಲ್ಮಾಡಿಕೊಳ್ಳುವದಕ್ಕೂ ಮತ್ತು ಕಚರಾ ರೂಢಿಸಿಕೊಳ್ಳುವದಕ್ಕೂ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ನೆಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತಗದುಕೊಳ್ಳುವದಿಲ್ಲವು.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈ ಮಾಡಿ ಇರುವವರು ಬದ್ಧರಾಗಿ ಇರುವದಿಲ್ಲವು; ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5 ಕಂಟ್ರಾಕ್ಟು ಮೊಬಲಗಿನ ಪೈಕಿ 1 ತಿಂಗಳ ಮೊಬಲಗನ್ನ ಅವಾನತ್ತು ಇಡಬೇಕು.

6. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಮೊಬಲಗನ್ನ ಪ್ರತಿ ತಿಂಗಳು 5ನೆ ತಾರೀಖು ವಳಗಾಗಿ ಮುಂದಾಗಿಯೇ ಪಾವತಿ ಮಾಡಿ ರಶೀತಿ ಪಡಿಯುತ್ತಾ ಬರಬೇಕು. ಕಂಟ್ರಾಕ್ಟುದಾರನು ಅವನ ಕಂಟ್ರಾಕ್ಟು ಕೆಲಸವನ್ನು ಸರಿಯಾಗಿ ನೆರವೇರಿಸುವ ಬಗ್ಯೆ ಅತನ ಕಂಟ್ರಾಕ್ಟು ಮುಂಜೂರಾದ 7 ದಿವಸದ ವಳಗಾಗಿ ಛಾಪಾ ಕಾಗದದಲ್ಲಿ ಮುಚ್ಚ್ಯಳಿಕೆ ಬರದುಕೊಡಬೇಕು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಅಖೈರಾಗುವ ವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅವಾನತ್ತು ವುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟೀಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣ ವಾಪಸು ಮಾಡಲ್ಪಡುವದು.

8. ಕಡಮೆ ವಿಷಯಗಳನ್ನು ಈ ಕೆಳಗೆ ಸೈ ಮಾಡಿರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

9. ಸರ್ಕಾರಿ ಉಪಯೋಗಕ್ಕೋಸ್ಕರವಾಗಿ ಈ ಸ್ಥಳ ಬೇಕಾದಲ್ಲಿ ಬೇರೆ ಸ್ಥಳ ನೇಮಿಸಲ್ಪಡುತ್ತೆಯಾಗಿ ಆಗ ಯಾವ ಕಂಪೆನ್ಸೇಷನ್ ಅಪೇಕ್ಷಿಸದೆ ಕಂಟ್ರಾಕ್ಟು ಷರತ್ತಿನಂತೆ ನಡದುಕೊಳ್ಳಬೇಕಾಗಿರುತ್ತೆ.

10. ಕಂಟ್ರಾಕ್ಟು ಹದ್ದಿನ ಸ್ಥಳಕ್ಕೆ ಭಂಡಿ ಬಾರದೇ ಇದ್ದಲ್ಲಿ ಇದಕ್ಕಾಗಿ ಯಾವ ಲುಕ್ಸಾನು ದೊರಿಯಲಾರದು.

11. ಪ್ರೆಸಿಡೆಂಟ್ ಸಾಹೇಬರವರ ಮುಂಜೂರಿ ಇಲ್ಲದೆ ಬಾಬು ಇತರರಿಗೆ ಷಿಕಮಿ ಕಂಟ್ರಾಕ್ಟು ವಗ್ಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗ್ಗೈರೆಗಳನ್ನ ಬೇ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

12. ಇವುಗಳ ಪೈಕಿ ಯಾವ ಷರತ್ತಿಗಾಗಲಿ ತಪ್ಪುಗಿಕೊಂಡರೆ ತಕ್ಷಣ ಕಂಟ್ರಾಕ್ಟನ್ನ ಬೇರೆ ಜನರಿಗೆ ಕೊಟ್ಟು ಲುಕ್ಸಾನು ಮೊಬಲಗಿಗೆ ಕಂಟ್ರಾಕ್ಟುದಾರನನ್ನ ಗುರಿಮಾಡುವದಲ್ಲದೆ ಠೇವಣಿ ಮೊಬಲಗು ದಂಡವಾಗಿ ತೆಗದುಕೊಳ್ಳಲ್ಪಡುತ್ತೆ.

ತಾರೀಖು 11ನೆ ಮೇ 1904.

ಇದರಿಂದ ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಟೌನ್ ಮಜಕೂರಿನಲ್ಲಿರತಕ್ಕ ಅಂದರೆ, ಮಾಮೂಲ್ ಅನುಸರಿಸಿ ಮಾಫಿ ನಡಿಯತಕ್ಕ ತೆಂಗಿನ ಮರಗಳು ಶಿವಾಯಿ ಬೋರ್ಡಿಗೆ ಕೇರಿದ ತೆಂಗಿನ ಮರಗಳ ಫಸಲ್ ಪೈಕಿ ಆಯಾಯ ಮನೆ ಅಥವಾ ಅಂಗಡಿ ವಾಲೀಕರಿಗೆ ಸಲ್ಲತಕ್ಕ ಅರ್ಧ ಹಿಸ್ಸೆ ಜಾತಾ ಉಳಿದ ಅರ್ಧ ಹಿಸ್ಸೆ ಫಸಲನ್ನು 1904ನೆ ಇಸವಿ ಜುಲೈ ಗುರ್ಸೀ ಲಾಗಾಯತು 1905ನೆ ಇಸವಿ ಜೂನ್ ಅಖೈರುವರಿವಿಗೂ ಬಂದು ಸಾಲ್ ಪೂರ್ತಿ ರೂಢಿಸಿಕೊಳ್ಳುವದಕ್ಕೆ ಮೊಹರ್ ಮಾಡಿದ ದರಖಾಸ್ತುಗಳನ್ನು ಇಷ್ಟವಿದ್ದವರು ಈ ಕೆಳಗೆ ಸೈ ಮಾಡಿರುವವರಿಗೆ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ಒಳಗಾಗಿ ಕೊಡಬಹುದು.

2. ದರಖಾಸ್ತುಗಳ ಮೇಲ್ಭಾಗದಲ್ಲಿ "ಷಹರ್ ಮಜಕೂರಿಗೆ ಕೇರಿದ ತೆಂಗಿನ ಫಸಲು ರೂಢಿಸಿಕೊಳ್ಳುವದಕ್ಕೆ ದರಖಾಸ್ತು" ಎಂಬದಾಗಿ ಬರದು ಇರತಕ್ಕದ್ದು.

3. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರ್ರೆಸಿ ನೋಟುಗಳಾಗಲಿ 50 ರೂಪಾಯಿನ ಠೇವಣಿ ಹಣವನ್ನ ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

4. ಎಲ್ಲಾ ದರಕ್ಕಿಂತ ಜಾಸ್ತಿಯಾದ ದರಖಾಸ್ತನ್ನೇ ಆಗಲಿ ಅಥವಾ ಇನ್ಯಾವ ದರಖಾಸ್ತನ್ನೇ ಆಗಲೀ ಅಂಗೀಕರಿಸಬೇಕೆಂಬುವದಕ್ಕೆ ಈ ಕೆಳಗೆ ಸೈನ್ ಮಾಡಿರುವವರು ಬದ್ಧರಾಗಿರುವದಿಲ್ಲವು ಮತ್ತು ಯಾವ ಸಬಬನ್ನು ತೋರಿಸದೆ ಯಾವ ದರಖಾಸ್ತನ್ನೇ ಆಗಲಿ ನಿರಾಕರಿಸಬಹುದು.

5. ಮುಂಜೂರಾದ ದರಖಾಸ್ತುದಾರನು ಆತನ ದರಖಾಸ್ತು ಮುಂಜೂರಾದ ಸಂಗತಿಯನ್ನ ಆತನಿಗೆ ತಿಳಿಸಿದ ತಾರೀಖು ಲಾಗಾಯಿತು ಬಂದು ವಾರದೊಳಗೆ ಕಂಟ್ರಾಕ್ಟಿನ ವಿಶಿಷ್ಟ ಹಣವನ್ನು ಹಾಜರ್ಮಾಡಿ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತೇನೆಂಬುವದಕ್ಕೆ ಛಾಪಾ ಕಾಗದ್ದಲ್ಲಿ ಇಜಾರೆ ಮುಚ್ಚಳಿಕೆಯನ್ನ ಬರದುಕೊಡಬೇಕು. ಅದಕ್ಕೆ ತಪ್ಪಿದರೆ ಆ ಠೇವಣಿ ಹಣವು ಬೋರ್ಡಿಗೆ ಸೇರಿಸಿಕೊಳ್ಳಲ್ಪಡುವದು. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡುವದರಲ್ಲಿ ಆಗುವ ಲುಕ್ಸಾನಿಗೆ ಅವನು ಗುರಿಯಾಗುತ್ತಾನೆ. ಈಗ ಇರತಕ್ಕ ಮರಗಳ ಪೈಕಿ ಪಬ್ಲಿಕ್ ಅನುಕೂಲತೆ ಬಗ್ಯೆ ಆಗಲಿ ಅಥವಾ ಇನ್ಯಾವ ಕಾರಣದಿಂದಾಗಲಿ ಮರಗಳನ್ನ ಕಡಿಸಿದಲ್ಲಿ ಆ ಬಗ್ಯೆ ಯಾವ ಲುಕ್ಸಾನು ಕೇಳತಕ್ಕದ್ದಲ್ಲ.

6. ಕಡಮೆ ವಿಷಯಗಳನ್ನು ಈ ಕೆಳಗೆ ಸೈನ್ ಮಾಡಿ ಇರುವವರ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

7. ಠೇವಣಿ ಹಣವು ಕಂಟ್ರಾಕ್ಟುದಾರನು ತನ್ನ ಕಂಟ್ರಾಕ್ಟು ಆಖೈರಾಗುವವರಿವಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರೆಯಾಗಿ ಅಮಾನತ್ತು ಉಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟು ಸಾಹೇಬರು ಇವನಿಗೆ ವಿಧಿಸುವ ಜುಲ್ಮಾನೆಗಳನ್ನ ಇವನು ಅಲಾಯಿದಾ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರೀ ಠೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಠೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಠೇವಣಿ ಹಣವು ವಾಪಸು ಮಾಡಲ್ಪಡುವದು.

8. ಪ್ರೆಸಿಡೆಂಟರವರ ಮಂಜೂರು ಇಲ್ಲದೆ ಬಾಬು ಇತರರಿಗೆ ಷಿಕ್ಮಿ ಕಂಟ್ರಾಕ್ಟು ವಗೈರೆ ಕೊಡಕೂಡದು ಮತ್ತು ಪ್ರೆಸಿಡೆಂಟರ ಆಫೀಸಿನಿಂದ ಕೊಡಲ್ಪಡುವ ಹುಕುಂ ವಗೈರೆಗಳನ್ನ ಬಿನ್ ತಕರಾರು ತೆಗದುಕೊಳ್ಳಲು ಸಲೀಸು ಏರ್ಪಾಡು ಇಡತಕ್ಕದ್ದು.

ತಾರೀಖು 11ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಇದರಡಿ ನಮೂದಿಸಿ ಇರುವ ಹುಲ್ಲುಗಾವಲುಗಳನ್ನು 1904—05ನೆ ಸಾಲಿಗೆ ಅಂದರೆ 1904ನೆ ಇಸವಿ ಜುಲೈ ಗುರ್ರೆ ಲಾಗಾಯಿತು. 1905ನೆ ಇಸವಿ ಜೂನ್ ಆಖೈರ್ ಮಿನಹು ರೂಢಿಸಿಕೊಳ್ಳಲು ಮೊಹರ್ಮಾಡಿದ ದರಖಾಸ್ತುಗಳನ್ನು ಇಷ್ಟವುಳ್ಳವರು ಈ ಕೆಳಗೆ ಸೈನ್ ಮಾಡಿರುವವರಿಗೆ 1904ನೆ ಇಸವಿ ಜೂನ್ 14ನೆ ತಾರೀಖು ಮಧ್ಯಾಹ್ನ 2 ಘಂಟೆ ವಳಗಾಗಿ ಕೊಡಬಹುದು.

2. ಯಾವ ದರಖಾಸ್ತನ್ನಾಗಲಿ ಮಂಜೂರ್ಮಾಡುವ ಅಥವಾ ಕಾರಣವಿಲ್ಲದೆ ತಿರಸ್ಕರಿಸುವ ಸ್ವಾತಂತ್ರ್ಯವನ್ನು ಈ ಕೆಳಗೆ ಸೈನ್ ಮಾಡಿರುವವರು ಉಳಿಸಿಕೊಂಡಿರುತ್ತಾರೆ. ಎಲ್ಲಾದಕ್ಕಿಂತ ಹೆಚ್ಚಾದ ದರಖಾಸ್ತನ್ನೇ ಅಂಗೀಕರಿಸಬೇಕೆಂಬುವದಕ್ಕೆ ಪ್ರೆಸಿಡೆಂಟರು ಬದ್ಧರಾಗಿರುವದಿಲ್ಲ.

3. ಆಯಾಯ ಹುಲ್ಲುಗಾವಲುಗಳಲ್ಲಿ ಇರುವ ಮರಗಳಿಗೆ ಅಪಾಯವಿಲ್ಲದಂತೆ ಜಾಗ್ರತೆಯಿಂದ ನೋಡಿಕೊಳ್ಳಬೇಕು.

4. ಕೋಟೆಯ ಹುಲ್ಲುಗಾವಲನ್ನು ಪಡದವರು, ಮ್ಯುನಿಸಿಪಾಲಿಟಿಯವರು ಅಲ್ಲಿರತಕ್ಕ ಜಮೀನ್ ಯಾರಿಗಾದರೂ ಮನೆ ಕಟ್ಟುವದಕ್ಕೆ ಕೊಟ್ಟಲ್ಲಿ ಹರಕತ್ ಮಾಡಕೂಡದು ಮತ್ತು ಯಾವ ಲುಕ್ಸಾನು ಕೇಳಕೂಡದು. ಕೋಟೆ ರ್‍ಯಾಂಪಾರ್ಟ್ ಕಂದಕದ ಸುತ್ತು ರಸ್ತೆ ವರಿಗಿನ ಹುಲ್ಲುಗಾವಲ್ ಶಿವಾಯಿ ಕೋಟೆಯೊಳಗೆ ಯಾವ ಪ್ರದೇಶದಲ್ಲೂ ದನಗಳನ್ನ ಮೇಯಿಸಕೂಡದು. ಮತ್ತು ಕತ್ತೆಗಳನ್ನು ಬಿಡಕೂಡದು.

5. ದನಗಳನ್ನು ಮೇಯಿಸುವದರಲ್ಲಿ ಸಾಲ್ ಮರಗಳನ್ನು ಮೇದದ್ದೇ ಆದರೆ ಅದಕ್ಕಾಗಿ ಮರ 1ಕ್ಕೆ 5—0—0 ರೂಪಾಯಿ ಮೇರಿಗೆ ಲುಕ್ಸಾನ್ ಕೊಡಬೇಕು. ಮತ್ತು ರಸ್ತೆಗಳ ಬಾಜೂದಲ್ಲಿಯೂ ಮೊಹರಿಗಳ ಬಾಜೂದಲ್ಲಿಯೂ ಸಹಾ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯಿದುಕೊಳ್ಳಬೇಕೇ ವಿನಹಾ ಕೆತ್ತಕೂಡದು. ಹಾಗೆ ಕೆತ್ತಿದ್ದೇ ಆದರೆ 5 ರೂಪಾಯಿ ಜೂರ್ಮಾನೆ ವಿಧಿಸಲಾದೀತು.

6. ಡಿಟೋ ಹುಲ್ಲುಗಾವಲ್‌ಗಳ ಪೈಕಿ ಯಾವಾಗಲಾದರೂ ಮ್ಯುನಿಸಿಪಾಲಿಟಿಯವರು ಬಿಟ್ಟುಕೊಡಬೇಕೆಂದು ವಾಯಿದೆ ಅಂದರ್‌ವಾರ್ ಹೇಳಿದ ಕೂಡ್ಲೆ ಬಿನ್ ತಕರಾರ್ ಬಿಟ್ಟುಕೊಡಬೇಕು. ಅದಕ್ಕಾಗಿ ದರಖಾಸ್ತು ಮೊಬಲಗಿನಲ್ಲಿ ನಿಂತ ದಿನಗಳಿಗೆ ದಾಮಾಷಾಯಿ ಮೇರಿಗೆ ವಾಪಸು ಕೊಡಲ್ಪಡುತ್ತೆ.

7. ದರಖಾಸ್ತುಗಳ ಮೇಲ್‌ಭಾಗದಲ್ಲಿ "ಹುಲ್ಲುಗಾವಲುಗಳನ್ನು ರೂಢಿಸಿಕೊಳ್ಳುವದಕ್ಕೆ" ಎಂಬದಾಗಿ ಬರದು ಇರತಕ್ಕದ್ದು.

8. ದರಖಾಸ್ತು ಸಂಗಡ ನಗದಾಗಲಿ ಅಥವಾ ಕರೆನ್ಸಿ ನೋಟುಗಳು ಅಗಲಿ 50 ರೂಪಾಯಿನ ಶೇವಣಿ ಹಣವನ್ನು ಹಾಜರ್ಮಾಡಿದ ಹೊರ್ತು ಯಾವ ದರಖಾಸ್ತನ್ನೂ ತೆಗದುಕೊಳ್ಳುವದಿಲ್ಲ.

9. ಅಂಗೀಕರಿಸಲ್ಪಟ್ಟ ದರಖಾಸ್ತುದಾರನು ಅವನದರಖಾಸ್ತನ್ನ ಅಂಗೀಕರಿಸಿದ್ದನ್ನ ತಾನು ತಿಳಿದ ತಾರೀಖು ಲಾಗಾಯಿತು ಒಂದು ವಾರದೊಳಗ ಅವನ ದರಖಾಸ್ತಿನ ಪೂರಾ ಮೊಬಲಗನ್ನು ಪಾವತಿ ಮಾಡಬೇಕು. ಹಾಗೆ ಮಾಡದೆ ತಪ್ಪಿದರೆ ಶೇವಣಿ ಮೊಬಲಗು ದಂಡವಾಗಿ ಮ್ಯುನಿಸಿಪಾಲಿಟಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಡುತ್ತೆ. ಮತ್ತು ಬಾಬು ಇತರರಿಗೆ ವಿಲೇವಾರಿ ಮಾಡಲ್ಪಡುವದರಲ್ಲಿ ಉಂಟಾಗುವ ನಷ್ಟಕ್ಕೆ ಅವನು ಗುರಿಯಾಗುತ್ತಾನೆ.

10. ಅಂಗೀಕರಿಸಲ್ಪಟ್ಟ ದರಖಾಸ್ತುದಾರನ ಶೇವಣಿ ಮೊಬಲಗು ಕಂಟ್ರಾಕ್ಟು ಆಖ್ಯೈರಾಗುವವರಿಗೂ ಕಂಟ್ರಾಕ್ಟನ್ನು ಸರಿಯಾಗಿ ನೆರವೇರಿಸುತ್ತಾನೆಂಬುವದಕ್ಕೆ ಖಾತರಿಯಾಗಿ ಅವಾನತ್ತು ಮುಳಿಸಿಕೊಳ್ಳಲ್ಪಡುವದು. ಇವನ ಕಂಟ್ರಾಕ್ಟು ಕಾಲದಲ್ಲಿ ಪ್ರೆಸಿಡೆಂಟ್ ಸಾಹೇಬರು ಇವನಿಗೆ ವಿಧಿಸುವ ಜುರ್ಮಾನೆಗಳನ್ನ ಇವನು ಅಲಾಯಿದ ಪಾವತಿ ಮಾಡದೆ ನಿಲ್ಲಿಸಿಕೊಂಡಲ್ಲಿ ಸದರಿ ಶೇವಣಿ ಹಣದಲ್ಲಿ ವಜಾ ಮಾಡಿಕೊಳ್ಳಲ್ಪಟ್ಟು ಶೇವಣಿ ಭರ್ತಿ ಬಗ್ಯೆ ಕಂಟ್ರಾಕ್ಟುದಾರನಿಗೆ ನೋಟಿಸ್ ಕೊಡಲ್ಪಡುವದು. ಕಂಟ್ರಾಕ್ಟು ಸರಿಯಾಗಿ ನೆರವೇರಿಸಿದ ನಂತರ ಕಂಟ್ರಾಕ್ಟುದಾರನಿಗೆ ಶೇವಣಿ ಹಣ ವಾಪಸ್ ಮಾಡಲ್ಪಡುವದು.

ತಪಶೀಲ್.

ನಂಬರು.	ಹುಲ್ಲುಗಾವಲುಗಳ ಹೆಸರು.	ತಪಶೀಲ್.
1	ಧರ್ಮಾಂಬುಧಿಕೆರೆ ಬಳಗೆರೆ ಮತ್ತು ಕೆರೆಕಟ್ಟೆ ಹುಲ್ಲು ...	ಹುಲ್ಲು ಕೊಯಿದುಕೊಳ್ಳುವ ಮಾತ್ರವೆ ದನಗಳನ್ನು ಬಿಟ್ಟು ಮೇಯಿಸಕೂಡದು.
2	ಧರ್ಮಾಂಬುಧಿ ಕಟ್ ಕಾಲ್ವೆ 2ಕ್ಕೆ ...	ಡಿಟೋ
3	ಮ್ಯುನಿಸಿಪಲ್ ತೋಟ	ಡಿಟೋ
4	ಜಕ್ಕರಾಯನ ಕೆರೆಕಟ್ಟೆ ಕೆಳಗೆ ...	ದನಗಳನ್ನ ಮೇಯಿಸಿಕೊಳ್ಳುವದಕ್ಕೆ.
5	ಈ ಪೈಕಿ ಸ್ಮಶಾನದ ಬೈಲ್ ಹುಲ್ಲು	ಡಿಟೋ
6	ಕೋಟೆ ರ್ಯಾಂಪಾರ್ಟಿನ ಹುಲ್ಲು ಕಂದಕದ ಸುತ್ತು ರಸ್ತೆವರಿಗೆ ಈ ಸ್ಥಳಗಳಲ್ಲಿನ ಅವಿನ್ಯೂ ಗಿಡಗಳು ಇರತಕ್ಕ ಪ್ರದೇಶ ವಿನಹ (ಆಸ್ಪತ್ರೆ) ಕಡೆಗೆ ಹೋಗಕೂಡದು.)	ಕೋಟೆಯೊಳಗೆ ದನಗಳನ್ನು ಬಿಟ್ಟು ಮೇಯಿಸಕೂಡದು. ಹುಲ್ಲು ಕೊಯದುಕೊಳ್ಳಬೇಕು. ಕಂದಕದ ಸುತ್ತು ಮೇಯಿಸಬಹುದು.
7	ಲಾಲ್‌ಬಾಗ್ ಮುಂಬಳ್ಳಿ ಕೆರೆ	ದನಗಳನ್ನು ಬಿಟ್ಟು ಮೇಯಿಸಿಕೊಳ್ಳಲು, ಕೆರೆಗೆ ಅಪಾಯವಿಲ್ಲದಂತೆ.
8	ದೊಡ್ಡ ಬೈಲ್‌ಖಾನೆ	ಡಿಟೋ
9	ಕುಂಬಾರಗುಂಡಿ ಹುಲ್ಲುಗಾವಲ್ (ಸ್ಲಾಟರ್ ಹೌಸಿಗೆ ತೆಗದುಕೊಂಡಿರುವ ಜಾಗ ವಿನಹ ಮುಳಿದದ್ದು.)	ಡಿಟೋ
10	ಅರ್ಸಿಕುಂಟೆ ಪಕ್ಕದ ಮತ್ತು ಬಳಗಿನ ಹುಲ್ಲು ..	ಗಿಡಗಳಿಗೆ ಅಪಾಯವಿಲ್ಲದಂತೆ ದನಗಳನ್ನು ಬಿಟ್ಟು ಮೇಯಿಸಿಕೊಳ್ಳುವದಕ್ಕೆ, ಬಳಹುಲ್ಲು ಕೊಯಿದುಕೊಳ್ಳುವದಕ್ಕೆ ಸಹ.
11	ದಂಡಿಗೆ ಹೋಗುವ ತಿಪ್ಪಿ ರೋಡ್ ರಸ್ತೆಗೆ ಪಶ್ಚಿಮ ಭಾಗ ಇರತಕ್ಕ ಹುಲ್ಲು.	ಡಿಟೋ
12	ಲಂಡ್ಯಮಿಷ್ ಸ್ಕೂಲ್ ಪಕ್ಕದ ಹುಲ್ಲುಗಾವಲ್	ಡಿಟೋ
13	ಎಲಹಂಕಪಬಾಗಲಿನಿಂದ ಬಳೇ ಬಾಗಲಿಗೆ ಹೋಗುವ ರಸ್ತೆ ಎಲ ಭಾಗದ ಕಾಲವೆ ದಡದ ಹುಲ್ಲು.	ಡಿಟೋ
14	ಸಂಪಂಗಿಕೆರೆ ಬಳಗೆರೆ ಹುಲ್ಲುಗಾವಲ್, ಬ್ಯಾರ್ಕ್ ಸಾಹೇಬರಿಗೆ ಸೇರಿದ್ದು ವಿನಹ, ಮ್ಯುನಿಸಿಪಾಲಿಟಿಗೆ ಸೇರಿದ್ದು.	ದನಗಳನ್ನ ಬಿಟ್ಟು ಮೇಯಿಸುವದಕ್ಕೆ.
15	ಕೆಂಗೇರಿಬಾಗಿಲ ಬಾರ್‌ಕೋಸ್‌ಬಳಿ ಇರುವ ಕಾವಲ್ ಜಮೀನಿನಲ್ಲಿ, ಗಾಟುಗಳು ಹಾಕತಕ್ಕ ಬಗ್ಯೆ ಉಪಯೋಗಿಸಿಕೊಂಡಿರುವ ಜಮೀನ ಶಿವಾಯಿ, ಮರ್ಕಾ ಪದ್ದುಬನ್ನು ಮಾರ್ಕ ಮಾಡಿರುವ ಸ್ಥಳ ವಿನಹ, ನಿಂತ ಜಮೀನಲ್ಲಿ ಬೀಳತಕ್ಕ ಹುಲ್ಲು.	ದನಗಳನ್ನ ಬಿಟ್ಟು ಮೇಯಿಸುವದಕ್ಕೆ.
16	ಮ್ಯುನಿಸಿಪಲ್ ಲಿಮಿಟಿಗೆ ಕೀರಿದ ವೆಸ್ಟ್ರ್ಕ್ ಎಕ್ಸ್‌ಟೆಂಷನಲ್ಲಿ ಮನೆಗಳಿಗೆ ಕೊಟ್ಟು ಇರುವ ತಾಕುಗಳು ಜಾತಾ ಮುಳಿದ ಜೋಡಿಗೆ ಸೇರಿದ ಜಮೀನಲ್ಲಿಯೂ, ಭೋಗೇನಹಳ್ಳಿ ದಿನ್ನೆಬಳಿಯಲ್ಲಿಯೂ ಇರತಕ್ಕ ಜಮೀನಲ್ಲಿಯೂ ಸಹಾ.	ಮನೆ ನಾಗುವಳಿಗೆ ಮತ್ತು ಮೊಹರಿ ರೋಡ್ ವಗೈರೆ ತಯಾರ್ಮಾಡಿಸುವದಕ್ಕೆ ಉಪಯೋಗಿಸಿಕೊಳ್ಳುವಾಗ ಹರಕತ್ತಿಲ್ಲದಂತೆ ಕೊಯಿದುಕೊಳ್ಳುವದಕ್ಕೆ ಮತ್ತು ಇತರ ಕಡೆ ಮೇಯಿಸಿಕೊಳ್ಳುವದಕ್ಕೆ.
17	ಕೆಂಪಾಂಬುಧಿ ಕೆರೆಕಟ್ಟೆ ಹುಲ್ಲು ...	ಮೇಯಿಸಿಕೊಳ್ಳುವದಕ್ಕೆ.
18	ದಂಡು ಉಪ್ಪಾರಹಳ್ಳಿ ಊರುಮುಂದಿನ ಹುಲ್ಲುಗಾವಲು ..	ರೈಲ್ವೆ ಕಾಂಪೌಂಡಿನ ಜೀಲಿ ಮತ್ತು ಜಮೀನ್ ಶಿವಾಯಿ, ಮೇಯಿಸಿಕೊಳ್ಳುವದಕ್ಕೆ.
19	ವಿಲ್ಸರ್ ಬಳಗೆರೆ ಹುಲ್ಲು	ಕೊಯಿದುಕೊಳ್ಳುವದಕ್ಕೆ.

ಎ. ಎಸ್. ನಾಗಾಕರ,
ಪ್ರೆಸಿಡೆಂಟ್.

Mysore Govt. Central Press, Bangalore.—1904.



ಮೈಸೂರ ಗೆಜೆಟ್ಟು.

ನಂ. 39. ಸರ್ಕಾರದಿಂದ ಪ್ರಸಿದ್ಧ ಆದ್ದು. ನಂ: 24.

ಬೆಂಗಳೂರು, ಗುರುವಾರ, ಜೂನ್ ತಾ|| 16, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೆ ಭಾಗ—ರಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ಅನಾಂ ಸೂಪರ್ಡಿಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟ್ಟು, ರೆಜಿಸ್ಟ್ರೇರ್ ವ ಯಜ್ಯುಕೇಷನ್ ಇನ್‌ಸ್ಪೆಕ್ಟರಿ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ ಪ್ರಸಿಡೆಂಟರು ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜ್‌ರು, ಡಿಸ್ಟ್ರಿಕ್ಟ್ ಸುಪ್ರಿಂಟೆಂಡೆಂಟ್ ಆಫ್ ಪೊಲೀಸ್, ಅಸಿಸ್ಟೆಂಟ್ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜ್‌ರು, ಪೊಲೀಸ್ ಸೂಪರ್ಡಿಟೆಂಡೆಂಟರು, ಫಾರೆಸ್ಟ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸುಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇಷ್ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೇ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮರ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 28ನೆ ಮೇ 1904.

ನಂ. ಲೋ. ಜೋ. ಪಿ. 1485, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ಗ ಅನುಸಂಸಿ 1893ನೆ ಫೆಬ್ರವರಿ 10ನೆ ಮಾರ್ಚಿಂ 9383—ವಿ. ಫೈ. 21–96ನೆ ಮತ್ತು 9384—ವಿ. ಫೈ. 21–96ನೆ ನಂಬರ್ ಇಸ್ತಿಹಾರ್‌ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಹೀ ಕಂಡ ಸ್ಥಳವು ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು.

ಸ್ಥಳ.	ತಾಲ್ಲೂಕು.
ನೇರಲಕಟ್ಟೆ	ಹೊಳಲಕೆರೆ.

ತಾರೀಖು 4ನೆ ಜೂ೯ 1904.

ನಂ. ಲೋ. ಜೋ. ಪಿ. 1495, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ಇದರಿಂದ ಈಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ತುಮಕೂರು ಡಿಸ್ಟ್ರಿಕ್ಟ್.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಚೆನ್ನೇನಹಳ್ಳಿ ..	ತುಮಕೂರು	ನೀಲಹಳ್ಳಿ ..	ತುಮಕೂರು.
ಹೆರಗುಂಡಕಲ್ ..	ಡಿಟೋ	ತಿಮ್ಮಲಾಪುರ (ತುಮಕೂರು ಹೋಬಳಿ).	ಡಿಟೋ
ಸೋಪಸಹಳ್ಳಿ ..	ಡಿಟೋ	ಬಳ್ಳಾಪುರ ..	ಡಿಟೋ
ತಾರೂರು ...	ಡಿಟೋ	ದಿಬ್ಬೂರು ..	ಡಿಟೋ
ಅರಳಕಟ್ಟೆ ..	ಡಿಟೋ	ಕೂಚಂಗಿ ..	ಡಿಟೋ
ಸಿದ್ದಪ್ಪನ ಪಾಳ್ಯ ..	ಡಿಟೋ	ಪೇರವಾಪಹಳ್ಳಿ ..	ಡಿಟೋ
ಕಲ್ಲಹಳ್ಳಿ ...	ಡಿಟೋ	ಲಿಂಗದಹಳ್ಳಿ ..	ತಿಪಟೂರು.
ವೇವರಾಯುಪಟ್ಟಣ ...	ಡಿಟೋ	ಮಾಡೆಸೂರು	ಡಿಟೋ
ಸತ್ಯಮಂಗಲ ..	ಡಿಟೋ	ಕಣತೂರು .	ಡಿಟೋ
ನಾಗಜ್ಜನಹಳ್ಳಿ ...	ಡಿಟೋ	ಗೋಪಾಲಪುರ ..	ಡಿಟೋ
ಕರತೊಟ್ಲಕೆರೆ ...	ಡಿಟೋ	ಮತ್ತಿಘಟ್ಟ ...	ಡಿಟೋ
ಹಗ್ಗರ ...	ಡಿಟೋ	ಮಾಕನಹಳ್ಳಿ ...	ಡಿಟೋ
ಕಟ್ಟಿಗೇನಹಳ್ಳಿ ..	ಡಿಟೋ	ಗೋಪಿಗೌಡನಪಾಳ್ಯ .	ಡಿಟೋ
ರಂಗಾಪುರ ..	ಡಿಟೋ	ಅಳುವೂರು .	ಡಿಟೋ
ಮಲ್ಲೇನಹಳ್ಳಿ ..	ಡಿಟೋ	ಹಡಲೂರು ..	ಗುಬ್ಬಿ.
ಅಂತರಸನಹಳ್ಳಿ ...	ಡಿಟೋ	ರಾಯಪುರ ...	ಡಿಟೋ
ಕಾಪ್ಪಾರು ...	ಡಿಟೋ	ಮೂಕನಹಳ್ಳಿಪಟ್ಟಣ ...	ಡಿಟೋ
ಸಿಂಗಾಪುರ ...	ಡಿಟೋ	ಸಿಂಗೋನಹಳ್ಳಿ ..	ಡಿಟೋ
ಮಾಚನಪುರ	ಡಿಟೋ	ಹರವೇಸಂದ್ರ ...	ಡಿಟೋ
ರುಚ್ಚಿಗೆಕೊಪ್ಪಲಹಳ್ಳಿ ...	ಡಿಟೋ	ಚೆಂಬಗೆರೆ ..	ಡಿಟೋ
ನೇರಳಾಪುರ ...	ಡಿಟೋ	ಹಿಂಡಿಸಗೆರೆ ..	ಡಿಟೋ
ಕವುಲಾಪುರ ..	ಡಿಟೋ	ಮಲ್ಲೇಕಾವು ..	ಡಿಟೋ
ತಿಮ್ಮಲಾಪುರ (ಬಳ್ಳಾವಿ ಹೋಬಳಿ)	ಡಿಟೋ		

ತಾರೀಖು 13ನೆ ಜೂ೯ 1904.

ನಂ. ಲೋ. ಜೋ. ಪಿ. 1528, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯೆ ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಯೆ ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧ ಪಡಿಸಲ್ಪಟ್ಟು ಇದರಂಡೀ ಈಂಡ ಸ್ಥಳಗಳು ಎರಡು ತಿಂಗಳುಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ಹಾಸನದ ಡಿಸ್ಟ್ರಿಕ್ಟ್.

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಕಾಶಿಕ	.. ಹಾಸನ	7.	ಬಾಣಾವರ	.. ಅರಸೀಕೆರೆ
2.	ಅಮ್ಮನಹಳ್ಳಿ ಕೊಪ್ಪಲ್	.. ಡಿಟೋ	8.	ಹಾರ್ನಹಳ್ಳಿ	.. ಡಿಟೋ
3.	ಸಂತೆ ಕೊಪ್ಪಲ್	.. ಡಿಟೋ	9.	ಅಗ್ಗುಂದ	.. ಡಿಟೋ
4.	ಸಕ್ಲೇಶಪುರ	... ಮಂಜರಾಬಾದು	10.	ಮಡಬ	... ಚನ್ನರಾಯಪಟ್ಟಣ
5.	ಹಳೇಬೀಡು	... ಬೇಲೂರು	11.	ಬಸವಾಪಟ್ಟಣ	... ಅರಕಲಗೂಡು
6.	ಜೋಡಿ ಮಾಲೇನಹಳ್ಳಿ	.... ಡಿಟೋ			

ತಾರೀಖು 13ನೆ ಜೂ೯ 1904.

ನಂ ಲೋ. ಜೋ. ಪಿ. 1530, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ಯ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕಂ 9383—ಮಿ. ಫೈ. 21–96ನೆ ಮತ್ತು 9384—ಮಿ. ಫೈ. 21–96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ಯಗಳ ಉದ್ದೇಶಗಳ್ಗೋಸ್ಕರ ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿರುವ ಇದರಡೀ ಈಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಹಾಸನದ ಡಿಸ್ಟ್ರಿಕ್ಟ್.

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಬೇಲೂರು	... ಬೇಲೂರು.	5.	ಹುಣಸವಳ್ಳಿ	... ಆಲೂರು ಸಬ್ ತಾ॥
2.	ಕೇರ್ಸಾಪುರ	... ಅರಕಲಗೂಡು.	6.	ಇಬ್ಬಣಿ	... ಹಾಸನ
3.	ರುದ್ರಾಪಟ್ಟಣ	... ಡಿಟೋ	7.	ಅಂಬುಗ	... ಡಿಟೋ
4.	ಯಡೂರು	... ಆಲೂರು ಸಬ್ ತಾ॥			

ಮೈಸೂರು ಡಿಸ್ಟ್ರಿಕ್ಟ್.

1.	ಹೊಸಹಳ್ಳಿ	... ಟಿ. ನರಸೀಪುರ	4.	ಹೊಳಿಪುರ	.. ನಂಜಿನಗೂಡು
2.	ಇಂದವಾಳು	... ಡಿಟೋ	5.	ಅಂಬಲರೆ	.. ಹುಣಸೂರು
3.	ಹನಿಸೂಂಬಳ್ಳಿ	.. ನಂಜಿನಗೂಡು			

989

ತಾರೀಖು 28ನೆ ಮೇ 1904.

ನಂ. 2558--ಜು., ಸನ್ 1890ನೆ ಇಸವಿಯ VIನೆ ನಂಬರ್ ಮೈಸೂರ ಆರಂಸ್ ರೆಗ್ಯುಲೇಷನಿನ 22ನೆ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮತ್ತು ಸದರೀ ರೆಗ್ಯುಲೇಷನ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ Iನೆ ರೂಲಿನ (8)ನೆ ಕ್ಲಾಜ್ ಕುರಿತು, ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ದರೋಬಸ್ತು ಮೆಂಬರುಗಳಿಗೆ, ಅವರು ಅಂಥಾ ಮೆಂಬರುಗಳಾಗಿರುವ ವರಿವಿಗೂ, ಮೇಲ್ಕಂಡ ರೆಗ್ಯುಲೇಷನಿನ 8, 9, 10 ವ 11ನೆ ಸೆಕ್ಷನ್‌ಗಳಲ್ಲಿರುವ ಫಿರಂಗಿ, ಟಾರ್ಪಿಡೊ ಸರ್ವಿಸ್‌ಗೋಸ್ಕರ ಉದ್ದೇಶಿಸಲ್ಪಟ್ಟ ಸಾಮಾನುಗಳು, ಯುದ್ಧದ ಬಾಣಗಳು ಮತ್ತು ಆಯುಧಗಳು ವ ಮದ್ದು ತಯಾರು ಮಾಡುವ ಬಗ್ಯೆ ಬೇಕಾದ ಯಂತ್ರ ಸಾಹಿತ್ಯ ಇವುಗಳಿಗೆ ಸಂಬಂಧಪಟ್ಟದ್ದು ವಿನಾ ಮಿಕ್ಕ ವಿಷಯ ಆಟಂಕಗಳು ವ ಅಪ್ಪಣೆಗಳು ಚಲಾಯಿಸೋಣದರಿಂದ ಮೈಸೂರು ಸೀಮೆಯಲ್ಲಿ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಮನ್ನಾ ಮಾಡಿರುತ್ತಾರೆ :—

2. ಸನ್ 1895ನೆ ಮೇ ಗುರ್ರೆ ಮುರ್ಕುಂ 1ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮುಂಜಾರಾದ ರೂಲುಗಳ Iನೆ ಭಾಗದ (8)ನೆ ಕ್ಲಾಜಿನಲ್ಲಿ ಪ್ರಜಾ ಪ್ರತಿನಿಧಿ ಸಭೆಯ ಮೆಂಬರುಗಳಿಗೆ ಸಂಬಂಧಪಟ್ಟಿದ್ದನ್ನು ವಜಾ ಮಾಡತಕ್ಕದ್ದು ಮತ್ತು ಇದರಡೀ ಕಂಡದ್ದನ್ನು (20)ನೆ ಕ್ಲಾಜಾಗಿ ಸೇರಿಸತಕ್ಕದ್ದು :—

"ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ದರೋಬಸ್ತು ಮೆಂಬರುಗಳು ಅಂಥಾ ಮೆಂಬರುಗಳಾಗಿರುವ ವರಿವಿಗೂ."

ತಾರೀಖು 7ನೆ ಜೂನ್ 1904.

ನಂ. 2642—ಜು., ಇದರಿಂದ ಸರ್ವಸ್ತ ಜನಗಳ ತಿಳುವಳಿಕೆ ಒಗ್ಯೆ ಪ್ರಸಿದ್ಧಪಡಿಸುವದೇನಂದರೆ—ಷಿಕಾರಿಪುರ, ಆಲೂರು, ಸೊರಬ ಮತ್ತು ನಗರ ಈ ಸ್ಥಳಗಳಲ್ಲಿ 1904ನೆ ಜುಲ್ಯೈ ಗುರ್ರೆ ತಾರೀಖಿನಾರಭ್ಯ ಅಜವಾಯಿಷಿ ತರೀಕು ಸ್ಪೆಷಿಯಲ್ ಸಬ್ ರಿಜಿಸ್ಟ್ರಿ ಆಫೀಸುಗಳು ಸ್ಥಾಪಿಸಲ್ಪಡುವವು.

ತಾರೀಖು 8ನೆ ಜೂನ್ 1904.

ನಂ. 2656—ಜು., ಪ್ರಾಣಹಿಂಸಾನಿವಾರಣದ ರೆಗ್ಯುಲೇಷನ್ನಾದ 1895ನೆ ಇಸವಿಯ 1ನೆ ನಂಬರ್ ರೆಗ್ಯುಲೇಷನ್ 1ನೆ ಸೆಕ್ಷನ್ (2)ನೆ ಕ್ಲಾಜಿನ ನಿಯಮಗಳನುಸರಿಸಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಸದರೀ ವಿಸಿಪನ್ನ ರೆಗ್ಯುಲೇಷನ್ನು ಮೈಸೂರು ಡಿಸ್ಟ್ರಿಕ್ಟಿನ ಮಳವಳ್ಳಿ ವ ಮುಂಡ್ಯ ತಾಲ್ಲೂಕುಗಳಲ್ಲಿರುವ ಇದರಡೀ ಕಂಡ ಗ್ರಾಮಗಳಲ್ಲಿ ಮುಂದು ಪರ್ವಗಳಲ್ಲಿ 1904ನೆ ಜುಲ್ಯೈ ಗುರ್ರೆ ತಾರೀಖಿನಲ್ಲಿ ವ ಆ ತಾರೀಖಿನಾರಭ್ಯ ಜಾರಿಯಲ್ಲಿ ತರಿಬರುತ್ತಾರೆ :—

ತಾಲ್ಲೂಕು.	ನಂ.	ಗ್ರಾಮದ ಹೆಸರು.
ಮಳವಳ್ಳಿ ತಾಲ್ಲೂಕು.	1	ಛತ್ರದ ಹೊಸಹಳ್ಳಿ.
	2	ಚಿಕ್ಕ ಅರಸಿನಕೆರೆ.
	3	ದೊಡ್ಡ ಅರಸಿನಕೆರೆ.
	4	ಮೆಲ್ಲಹಳ್ಳಿ.
	5	ಗುಡಿಕೆರೆ.
	6	ಮಗರೆ ಕಾಳಮುದ್ದಂಣ ದೊಡ್ಡಿ.
	7	ಮಣಿಗೆರೆ.
	8	ನೆಲಮಾಕನಹಳ್ಳಿ.
	9	ಮಗರೆ ಬೂಗತಹಳ್ಳಿ.
	10	ಮಳವಳ್ಳಿ.
	11	ಮಾರ್ಬಳ್ಳಿ.
	12	ಸರ್ವಮಾನ್ಯ ದೇವಲಿಂಗನಪುರ.
	13	ಬಾಚನಹಳ್ಳಿ.
	14	ಪಂಡಿತಹಳ್ಳಿ.
	15	ದಾಸನದೊಡ್ಡಿ.
	16	ಹೊಸಹಳ್ಳಿ.
	17	ಸರ್ವಮಾನ್ಯ ಬೆಳಕವಾಡಿ.
		ಮಗರೆ ರೊಟ್ಟಿಕಟ್ಟೆ.
ಮುಂಡ್ಯ ತಾಲ್ಲೂಕು.	18	ಮುಂಡ್ಯ.
	19	ಶಿವಾಪುರ.
	20	ಮುದ್ದೂರು ಪರ್ವ.
	21	ಗೊರವನಹಳ್ಳಿ.
	22	ಕುದೆರಗುಂಡಿ.
	23	ಬೋರಾಪುರ.

ತಾರೀಖು 8ನೆ ಜೂ೯ 1904.

ನಂ. 4827—ಲೋ. ಫಂ. 118-03, ಲೋಕಲ್ ಬೋರ್ಡುಗಳ ರೆಗ್ಯುಲೇಷನ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮೆರ್ಕುಂ 30—ಲೆಜಿಸ್. 4-03ನೆ ನಂಬರ್ ಇಸ್ತಿಹಾರ್ನ್ನು ಮೆಯೊಡನೆ ಥಾಯಿಪಾದ ರೂಲುಗಳ 6ನೆ ಪ್ಯಾರಾ ಅನುಸರಿಸಿ ಘನವನ್ನೈದಿದ ಶ್ರೀವರ್ಮ ಮಹಾರಾಜಾ ಸರ್ಕಾರದವರು, 1904ನೆ ಜುಲೈ ಗುರ್ಯೇ ತಾರೀಖಿನಾರಭ್ಯ ಹಾಸನದ ಡಿಸ್ಟ್ರಿಕ್ಟ್‌ನಲ್ಲಿರುವ ನಾನಾ ಗ್ರಾಮ ಸಂಘಗಳ ಪಂಚಾಯಿತಿಗಳಾಗಿ ಇದರಡೀ ಕಂಡ ಮೆಂಬರುಗಳನ್ನು ಮೊಕರರ್ರಾಡುವದಲ್ಲದೆ ಮು ತ್ತೊಂದು ಮುಕುಂ ಕೊಡುವ ಪರಿಯಂತ ಸದರೀ ಸಂಘಗಳ ಅಧ್ಯಕ್ಷರ ಕೆಲಸಗಳಿನ್ನು ಆಯಾ ತಾಲ್ಲೂಕುಗಳ ಅಮಲೆದಾರ್‌ಗಳು ನೋಡತಕ್ಕದ್ದೆಂದು ಆಪ್ಪಣೆ ಕೊಡುತ್ತಾರೆ:—

1. ಗ್ರಾಮ ಸಂಘ.

1.	ಹಾಸನದ ತಾಲ್ಲೂಕಿನ ಅಮಲೆದಾರು	..	...	ಅಧ್ಯಕ್ಷರು.
2.	ವರ್ನಾಕ್ಯುಲರ್ ಸ್ಕೂಲಿನ ಹೆಡ್ ಮ್ಯಾಸ್ಟರು	..	...	ಮೆಂಬರು.
3.	ಷೇಕ್‌ದಾರು	.	..	ಡಿಟೋ
4.	ವೆ|| ಶಾಂತಗೌಡರು, ಜಮೀರ್ದಾರು	...	..	ಡಿಟೋ
5.	,, ಮಂಜನಾಯಿಕರು, ಡಿಟೋ	...	...	ಡಿಟೋ
6.	,, ಶ್ರೀನಿವಾಸಯ್ಯಂಗಾರು, ಡಿಟೋ	..	..	ಡಿಟೋ
7.	,, ಚಲುವಯ್ಯಂಗಾರು, ಡಿಟೋ	...	..	ಡಿಟೋ
8.	,, ಜನ್ನಯ್ಯನವರು, ಜೋಡಿದಾರು		..	ಡಿಟೋ
9.	,, ವರದಯ್ಯಂಗಾರು, ಜಮೀರ್ದಾರು ಮತ್ತು ಶಾನಭೋಗರು		...	ಡಿಟೋ
10.	,, ನಾಗರಾಜಯ್ಯನವರು, ಡಿಟೋ	ಡಿಟೋ	...	ಡಿಟೋ
11.	,, ಮಗ್ಗದ ಪೊಡ್ಡಿ ಕಿಟ್ಟಿಯವರು, ನೆಯಿಗೆದುವರು		..	ಡಿಟೋ

2. ಹಾರ್ನಹಳ್ಳಿ ಸಂಘ.

1.	ಅರಸೀಕೆರೆ ತಾಲ್ಲೂಕಿನ ಅಮಲೆದಾರು	..	...	ಅಧ್ಯಕ್ಷರು.
2.	ಷೇಕದಾರು	..	..	ಮೆಂಬರು.
3.	ವರ್ನಾಕ್ಯುಲರ್ ಸ್ಕೂಲಿನ ಹೆಡ್ ಮ್ಯಾಸ್ಟರು		..	ಡಿಟೋ
4.	ವೆ|| ಕೃಷ್ಣಪ್ಪನವರು, ಕೆಲಸದಿಂದ ನಿವೃತ್ತರಾದ ತಾಲ್ಲೂಕು ಹೆಡ್ ಮುನಷೀತು			ಡಿಟೋ
5.	,, ಶಾನಭೋಗ ಗಿರಿಯಣ್ಣನವರು, ಜಮೀರ್ದಾರು		..	ಡಿಟೋ
6.	,, ನಂಜುಂಡಸೆಟ್ಟರು, ಜಮೀರ್ದಾರು ಮತ್ತು ವರ್ತಕರು		..	ಡಿಟೋ
7.	,, ನರಸಿಹ್ಮಸೆಟ್ಟರು, ಡಿಟೋ	ಡಿಟೋ	..	ಡಿಟೋ
8.	,, ಬೀದಿಮನೆ ನಂಜುಂಡನವರು, ಜಮೀರ್ದಾರು	..	...	ಡಿಟೋ
9.	,, ಯಲ್ಲಪ್ಪಸೆಟ್ಟರು, ವರ್ತಕರು	..	..	ಡಿಟೋ
10.	,, ಇನ್ಸ್‌ಪೆಕ್ಟರ್ ಸಾಹೇಬರು, ಜಮೀರ್ದಾರು ಮತ್ತು ವರ್ತಕರು		..	ಡಿಟೋ
11.	,, ವೆಂಕಟನರಸಯ್ಯನವರು, ಜಮೀರ್ದಾರು	..	..	ಡಿಟೋ

3. ಬಾಣಾವರ ಸಂಘ.

1.	ಅರಸೀಕೆರೆ ತಾಲ್ಲೂಕಿನ ಅಮಲೆದಾರು	..	...	ಅಧ್ಯಕ್ಷರು.
2.	ಲೋಕಲ್‌ಫಂಡ್ ಡಿಸ್ಪೆನ್ಸರಿ ಚಾರ್ಜಿನಲ್ಲಿರುವ ಆಸ್ಪಿಟಲ್ ಅಸಿಸ್ಟೆಂಟರು			ಮೆಂಬರು.
3.	ಹಿಂದೂಸ್ತಾನಿ ಸ್ಕೂಲ್ ಹೆಡ್ ಮ್ಯಾಸ್ಟರು	...	..	ಡಿಟೋ
4.	ಷೇಕದಾರು	...	..	.. ಡಿಟೋ
5.	ವೆ|| ಮಲ್ಲಯ್ಯನವರು, ಜಮೀರ್ದಾರು, ಮತ್ತು ಶಾನಭೋಗರು		..	ಡಿಟೋ
6.	,, ನಾಡಿಗ ರಾಮಣ್ಣನವರು, ಜಮೀರ್ದಾರು	...	..	ಡಿಟೋ
7.	,, ಅಸದಲ್ಲಿಖಾರ್ದರವರು, ಡಿಟೋ	..	...	ಡಿಟೋ
8.	,, ಕೆಟ್ಟಿ ರುದ್ರಪ್ಪನವರು, ಡಿಟೋ		...	ಡಿಟೋ
9.	,, ಪರವಾಳ ದಾಸಪ್ಪನವರು, ಜಮೀರ್ದಾರು, ವರ್ತಕರು ಮತ್ತು ಕಂಟ್ರಾಕ್ಟ್‌ದಾರು			ಡಿಟೋ
10.	,, ಸೈಯ್ಯದ್ ಬುರ್ಹಾನ್‌ಸಾಹೇಬರು, ಜಮೀರ್ದಾರು ಮತ್ತು ವರ್ತಕರು			ಡಿಟೋ

4. ಕೊಣನೂರು ಸಂಘ.

1.	ಅರಕಲಗೂಡು ತಾಲ್ಲೂಕಿನ ಅಮಲೆದಾರು	..	..	ಅಧ್ಯಕ್ಷರು.
2.	ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿನಲ್ಲಿರುವ ಆಸ್ಪಟಲ್ ಅಸಿಸ್ಟೆಂಟರು			ಮೆಂಬರು.
3.	ವರ್ನಾಕ್ಯುಲರ್ ಸ್ಕೂಲ್ ಹೆಡ್ ಮ್ಯಾಸ್ಟರು	...	...	ಡಿಟೋ.

4. ಷೇಕದಾರ್ರು ... ... ಮೆಂಬರು.
5. ಮೆ|| ಪುಟ್ಟಶಾಮಯ್ಯನವರು, ಶಾನಭೋಗರು .. .. ಡಿಟೋ
6. ,, ವೆಂಕಟರಾಮಯ್ಯನವರು, ಸಾಹುಕಾರ್ರು .. .. ಡಿಟೋ
7. ,, ಇಬ್ರಾಹಿಂ ಸಾಹೇಬರು, ಡಿಟೋ .. .. ಡಿಟೋ
8. ,, ಅಬ್ದುಲ್ಲಾ ಸಾಹೇಬರು, ಡಿಟೋ .. .. ಡಿಟೋ
9. ,, ಗುಂಡಪ್ಪನವರು, ಶಾನಭೋಗರು .. .. ಡಿಟೋ
10. ,, ನಂಜಪ್ಪಯ್ಯನವರು, ಡಿಟೋ .. .... ಡಿಟೋ
11. ,, ಸುಬ್ಬರಾಯರು, ಡಿಟೋ ... ... ಡಿಟೋ
12. ,, ಮೃತ್ಯುಂಜಯ ಛತ್ರ ಗುಂಡಪ್ಪನವರು .. .. ಡಿಟೋ

5. ಬಸವಾಪಟ್ಣ ಸಂಘ.

1. ಅರಕಲಗೂಡು ತಾಲ್ಲೂಕಿನ ಅಮಲ್‌ದಾರ್ರು .. ... ಅಧ್ಯಕ್ಷರು.
2. ಷೇಕದಾರ್ರು .. .. .. ಮೆಂಬರು.
3. ಮೆ|| ಕಪ್ಪಂಣನವರು, ಶಾನಭೋಗರು ... .. ಡಿಟೋ
4. ,, ಮಲ್ಲಸೆಟ್ಟರು, ವರ್ತಕರು ... . ಡಿಟೋ
5. ,, ಪುಟ್ಟಸಾಮಿ ಸೆಟ್ಟರು, ಡಿಟೋ ... .. ಡಿಟೋ
6. ,, ಚನ್ನಮಲ್ಲ ಸೆಟ್ಟರು, ಡಿಟೋ ... .. ಡಿಟೋ
7. ,, ಹಳ್ಳಿಮೈಸೂರಿನ ಮಲ್ಲಸೆಟ್ಟರು, ವರ್ತಕರು .. .. ಡಿಟೋ
8. ,, ದಾಳಸೆಟ್ಟರು, ಡಿಟೋ ... ... ಡಿಟೋ
9. ,, ಸುಬ್ರಾಯಶಾಸ್ತ್ರೀರು, ಜಮೀನ್‌ದಾರ್ರು ... .. ಡಿಟೋ
10. ,, ತಮ್ಮಯ್ಯನವರು, ಜಮೀನ್‌ದಾರ್ರು ವ ಪಟೇಲರು .. ಡಿಟೋ

6. ಶ್ರವಣಬೆಳಗುಳ ಸಂಘ.

1. ಚೆನ್ನರಾಯಪಟ್ಣ ತಾಲ್ಲೂಕಿನ ಅಮಲ್‌ದಾರ್ರು .. .. ಅಧ್ಯಕ್ಷರು.
2. ಷೇಕದಾರ್ರು .. .. .. ಮೆಂಬರು.
3. ಮೆ|| ಪೊನ್ನಯ್ಯನವರು, ಸಾಹುಕಾರ್ರು .. ... ಡಿಟೋ
4. ,, ಗೌಡ ಪದ್ಮಸೆಟ್ಟರ ಮಕ್ಕಳು ಧರಣಯ್ಯನವರು, ಸಾಹುಕಾರ್ರು .. ಡಿಟೋ
5. ,, ನಾರಣಪ್ಪನವರು, ಮಠ ಪಾರಪತ್ತೆಗಾರ್ರು .. .. ಡಿಟೋ
6. ,, ಶಾಂತರಾಜಶಾಸ್ತ್ರೀರು, ಪಾರಪತ್ತೆಗಾರ್ರು .. .. ಡಿಟೋ
7. ,, ಪದ್ಮರಾಜಯ್ಯನವರು, ವರ್ತಕರು ... .. ಡಿಟೋ
8. ,, ನಬಿಸಾಹೇಬರು, ಜಮೀನ್‌ದಾರ್ರು ... ಡಿಟೋ
9. ,, ವೆಂಕಟೇಗೌಡರು, ಜಮೀನ್‌ದಾರ್ರು ಮತ್ತು ಶಾನಭೋಗರು .. ಡಿಟೋ
10. ,, ಮಂಜಯ್ಯನವರು, ಡಿಟೋ ಡಿಟೋ .. ಡಿಟೋ

ತಾರೀಖು 15ನೆ ಜೂನ್ 1904.

ನಂ. 4885—ಲೋ. ಫಂ. 160-02, ರಾಜೀನಾಮೆ ಕೊಟ್ಟ ಮೆ|| ಕಾಶೀ ಸೀನಪ್ಪನವರಿಗೆ ಬದಲಾಗಿ ಕೆಲಸದಿಂದ ನಿವೃತ್ತರಾದ ಅಮಲ್‌ದಾರ್ ಮೆ|| ಪಿ. ಭೀಮಸೇನರಾಯರು ಚಿತ್ರದುರ್ಗದ ಟವನ್ ಮ್ಯೂನಿಸಿಪಾಲಿಟಿಯ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 8ನೆ ಜೂನ್ 1904.

ನಂ. ಜ. 6185—ಎಡ್ಯು, ಸನ್ 1898ನೆ ಮೇ 26ನೆ ಮರ್ಕುಂ 15448—ಎಡ್ಯು. 410ನೆ ನಂಬರ್ ಇಸ್ತಿಹಾರ್ನಾಮೆಯಿಂದ ಬದಲಾಯಿಸಲ್ಪಟ್ಟಮೇರೆ 1897ನೆ ಅಕ್ಟೋಬರ್ 12ನೆ ಮರ್ಕುಂ 4315—ಎಡ್ಯು. 113ನೆ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯನ್ನನುಸರಿಸಿ ಪಾಯಿಷ್ಮಾಡಲ್ಪಟ್ಟ ಸ್ಕೂಲಿನ ಪರಸ್ಪರ ಸಂಬಂಧವನ್ನು ಕುರಿತ ನಿಬಂಧನೆಗಳ 5ನೆ ನಿಬಂಧನೆಯ ಮೊದಲನೇ ಕ್ಲಾಜಿಗೆ ಇದರಡೀ ಕಂಡ ಹೆಚ್ಚಿಗೆ ಅಂಶವನ್ನು ಸೇರಿಸತಕ್ಕದ್ದು :—

"ಅಥವಾ, ಸ್ವತಂತ್ರ ಸ್ಕೂಲುಗಳ ವಿಷಯದಲ್ಲಿ, ಸಂವತ್ಸರದ ಯಾವದಾದರೂ ಒಂದು ಭಾಗದ ಪ್ರಾರಂಭದ ಮೊದಲನೇ ತಿಂಗಳು ಆಖೈರಾಗುವದಕ್ಕೆ ಮುಂಚೆಯಾಗಲಿ"

ಹೀಗೆ ಸೇರಿಸಲ್ಪಟ್ಟ ನಿಬಂಧನೆಯು ಇದರಡೀ ಕಂಡಂತೆ ಓದಲ್ಪಡುವದು :—

"ಒಬ್ಬ ವಿದ್ಯಾರ್ಥಿಯು ತನ್ನ ತಂದೆ ತಾಯಿಗಳ ಅಥವಾ ಪೋಷಕರ ಸಮ್ಮತಿಯನ್ನು ಪಡೆದು ತಕ್ಕ ಕಾರಣಗಳನ್ನು ಕೊಟ್ಟು ಅಪ್ಪಣೆ ಚೀಟಿ ಬೇಕೆಂದು ಯಾವಾಗ ಅಪೇಕ್ಷಿಸಿದರೂ ಅದನ್ನು ಹೆಡ್ಮಾಸ್ಟರು ಕೊಡತಕ್ಕದ್ದು; ಪರಂತು ಒಬ್ಬ ವಿದ್ಯಾರ್ಥಿಯು ತನ್ನ ತಂದೆ ತಾಯಿಗಳ ಅಥವಾ ಪೋಷಕರ ಸಮ್ಮತಿಯನ್ನು ಪಡೆದು ಮೇಲೆ ವಿವರಿಸಿರುವಂತೆ ಸಂವತ್ಸರದ ಯಾವದಾದರೂ ಒಂದು

ಭಾಗದ ಕಡೆಯಲ್ಲಾಗಲಿ, ಆ ಭಾಗದ ಪ್ರಾರಂಭದಲ್ಲಿ ಆದಪಕ್ಷಕ್ಕೆ, ಮೊದಲು ಸಾರಿಯ ಸ್ಕೂಲ್ ಫೀ ಕೊಡುವದಕ್ಕೆ ಗೊತ್ತು ಮಾಡಿರುವ ಕಡೆಯ ತಾರೀಖಿಗೆ ಮುಂಚೆಯಾಗಲಿ, ಅಥವಾ, ಸ್ವತಂತ್ರ ಸ್ಕೂಲುಗಳ ವಿಷಯದಲ್ಲಿ, ಸಂವತ್ಸರದ ಯಾವದಾದರೂ ಒಂದು ಭಾಗದ ಪ್ರಾರಂಭದ ಮೊದಲನೇ ತಿಂಗಳು ಆಖೈರಾಗುವದಕ್ಕೆ ಮುಂಚೆಯಾಗಲಿ ಅಪ್ಪಣೆಚೀಟಿ ಬೇಕೆಂದು ಕೇಳಿದರೆ, ಆ ಬಗ್ಯೆ ಕಾರಣಗಳನ್ನು ವಿಚಾರಿಸದೇನೇ ಹೆಡ್ಮಾಸ್ಟರು ಅಪ್ಪಣೆ ಚೀಟಿಯನ್ನು ಕೊಡತಕ್ಕದ್ದು.

"ಹೆಡ್ಮಾಸ್ಟರು ತನ್ನಿಂದ ಸಹಿಮಾಡಿ ಕೊಡಲ್ಪಟ್ಟ ಸಕಲ ಬಿಡುಗಡೆ ಸರ್ಟಿಫಿಕೇಟುಗಳು ಅಸಲ್ ಭಾಗಗಳನ್ನು ತನ್ನ ರಿಕಾರ್ಡುಗಳಲ್ಲಿ ದಾಖಲ್ಮಾಡತಕ್ಕದ್ದು."

ತಾರೀಖು 15ನೆ ಜೂನ್ 1904.

ನಂ. ಜ. 6303, ಅಸಿಸ್ಟೆಂಟ್ ಸರ್ಜನ್‌ರಾದ ಮೆ|| ಟಿ. ವಿ. ಕುಪ್ಪುಸಾಮಿ ಮೊದಲಿಯೊರ್‌ಗೆ 1904ನೆ ಏಪ್ರೆಲ್ 16ನೆ ಮರ್ಕುಂ ಜ. 5287ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಅವರು 1904ನೆ ಏಪ್ರೆಲ್ 22ನೆ ತಾರೀಖಿನ ಮಧ್ಯಾಹ್ನಾತ್ಪರ ಉಪಯೋಗಿಸಿಕೊಂಡು 1904ನೆ ಮೇ 20ನೆ ತಾರೀಖಿನ ಪ್ರಾತಃಕಾಲದಲ್ಲಿ ಮೈಸೂರಲ್ಲಿರುವ ಜನರಲ್ ಆಸ್ಪತ್ರೆಯಲ್ಲಿನ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 25ನೆ ಮೇ 1904.

ನಂ. ರೆ. 3620, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ನಂಜನಗೂಡು ತಾಲ್ಲೂಕು ಜಾಮಲಾಪುರ ಗ್ರಾಮದಲ್ಲಿ ಫಾರೆಸ್ಟು ಡಿಪೋವಿಗೋಸ್ಕರ ಬೇಕಾಗಿರುತ್ತೆ. ಮತ್ತು ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ VIIನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು	ಬೇಕಾಗಿರುವ ಜಮೀನಿನ ವಿವರ.		ಚಕ್ಕು ಬಂದಿ.			
					ಸರ್ವೆ ನಂ.	ವಿಸ್ತೀರ್ಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಮೈಸೂರು	ನಂಜನಗೂಡು	ನಂಜನಗೂಡು	ಜಾಮಲಾಪುರ	ಪಟ್ಟೇದಾರ್ ಅಣ್ಣೆದೇವೆ ಗೌಡ ಮತ್ತು ಕಾಯಂಗಡಿ ಅಂಕೆಗೌಡ. 1. ಅಂಣೆ ದೇವ ಗೌಡ, 2. ಚಿಕ್ಕಪುಟ್ಟೆಗೌಡ, 3. ಅಂಕಪ್ಪ ಉರಫ್ ಮುನಿಗ ಇವರ ಸ್ವಾಧೀನ ಮತ್ತು ಅನುಭವದಲ್ಲಿರುತ್ತೆ.	78	ಎ. ಗು. ಖುಷ್ಕಿ 4—11 ಖರಾಬಿಗೋಸ್ಕರ 30 ಗುಂಟೆಗಳು ವಜಾ	ನೀಲಿಗಿರಿ ರಸ್ತೆ ಮತ್ತು ಸರ್ವೆ ನಂ. 73 ಮ 77	ಸರ್ವೆ ನಂ. 80	ಹುಲ್ಲಳ್ಳಿ ಕಾಲವೆ ಮತ್ತು ಸರ್ವೆ ನಂ. 40 (ತೋಪು)	ಹುರಾ ರಸ್ತೆ ಮತ್ತು ಸರ್ವೆ ನಂ. 323

ತಾರೀಖು 9ನೆ ಜೂನ್ 1904.

ನಂ. ರೆ. 3870, ಅಸಿಸ್ಟೆಂಟ್ ಕಮೀಷನರಾದ ಮೆ|| ಟಿ. ಚೊಕ್ಕಂಣ, ಬಿ. ಎ., ಯವರು ಶಿವಮೊಗ್ಗದಿಂದ ಕಡೂರು ಡಿಸ್ಟ್ರಿಕ್ಟಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ಷಿಕಾರಿಪುರ ತಾಲ್ಲೂಕಿನ ಅಮಲ್‌ದಾರ್ರಾದ ಮೆ|| ಪಿ. ಸುಬ್ರಾಯಲು ನಾಯಿಡುಯವರು ರಜಾದಿಂದ ಕೆಲಸಕ್ಕೆ ವಾಪಸು ಕರೆಯಿಸಲ್ಪಟ್ಟು ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿರುವ ಮೆ|| ಟಿ. ಚೊಕ್ಕಂಣನವರಿಗೆ ಬದಲಾಗಿ ಹಂಗಾಮಿ ಏರ್ಪಾಡಿನಂತೆ ಎಕ್‌ಸ್ಟ್ರಾ ಅಸಿಸ್ಟೆಂಟ್ ಕಮೀಷನರಾಗಿ ಆಕ್ಟಿಂಗ್ ತರೀಕು ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 11ನೆ ಜೂನ್ 1904.

ನಂ. ರೆ. 3892—ರೆ. ಫೈ. 154–1895, ಚಿತ್ರದುರ್ಗ ತಾಲ್ಲೂಕಿನ ಅಮಲ್‌ದಾರ್ರಾದ ಮೆ|| ವಿ. ಪಾರ್ಥಸಾರದಯ್ಯಂಗಾರ್ರಿಗೆ 1904ನೆ ಜನವರಿ 31ನೆ ಮರ್ಕುಂ ರೆ. 2193ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 15 ದಿನಗಳ ಪ್ರಿವಿಲೇಜ್ ರಜಾವನ್ನು ಅವರು ಕಳೆದ ಫೆಬ್ರವರಿ 4ನೆ ತಾರೀಖಿನಾರಭ್ಯ ಉಪಯೋಗಿಸಿಕೊಂಡು ಅದೇ ತಿಂಗಳು 17ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 25ನೆ ಮೇ 1904.

ನಂ. ರೆ. 3616, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೆಂಗಳೂರು ಡಿಸ್ಟ್ರಿಕ್ಟು ನೆಲಮಂಗಲ ತಾಲ್ಲೂಕಿನಲ್ಲಿರುವ ಹೆಸರಘಟ್ಟದ ಕೆರೆಗೆ ಹೊಸ ಕೋಡಿಯನ್ನು ಕಟ್ಟುವ ಬಗ್ಯೆ ಬೇಕಾಗಿರುತ್ತವೆ. ಮತ್ತು ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳಿದಾರ್ರ ಹೆಸರು.	ಜಮೀನಿನ ವಿವರ.						ಚಕ್ಕುಬಂದಿ.			
				ಸರ್ವೆ ನಂ.	ವಿಸ್ತೀರ್ಣ.		ಆಕಾರ.			ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
					ಎ.	ಗು.	ರೂ.	ಆ.	ಪೈ.				
ನೆಲಮಂಗಲ.	ಮೈಲನಹಳ್ಳಿ.	ಹೆಸರಘಟ್ಟ.	ನರಸಿಹ್ಮಾಚಾರ್ರು ...	88—2	1	15	1	8	0	ಸರ್ವೆ ನಂ. 95—3	ಸರ್ವೆ ನಂ. 88—2	ಕೆರೆ ನೀರಿನ ಕಾಲವೆ	ಸರ್ವೆ ನಂ. 88—4
			ಬೈರಪ್ಪ ...	88—4	1	0	1	4	0	ಡಿಟೋ	ಸರ್ವೆ ನಂ. 88—4	ಸರ್ವೆ ನಂ. 88—2	ಸರ್ವೆ ನಂ. 90—3
			ಮಾರಹನುಮಯ್ಯ ...	90—3	1	13	2	4	0	ಕೋಡಿ ಕಾಲವೆ	ಸರ್ವೆ ನಂ. 90—3 ಮಿಕ್ಕಭಾಗ	ಸರ್ವೆ ನಂ. 90—4	ಸರ್ವೆ ನಂ. 91—3
			ಡಿಟೋ ...	90—4	1	39	2	8	0	ಡಿಟೋ	ಡಿಟೋ	ಸರ್ವೆ ನಂ. 88—4	ಸರ್ವೆ ನಂ. 90—3
			ಮೂಡ್ಲಪ್ಪ ...	91—2	2	0	2	8	0	ಡಿಟೋ	ಸರ್ವೆ ನಂ. 91—2	ಸರ್ವೆ ನಂ. 91—3	ಸರ್ವೆ ನಂ. 91—1
			ರಾಮನ ಹೆಂಡತಿ ಕೆಂಪಿ ...	91—3	1	19	1	12	0	ಡಿಟೋ	ಮಿಕ್ಕಭಾಗ ಡಿಟೋ	ಸರ್ವೆ ನಂ. 90—4	ಸರ್ವೆ ನಂ. 91—2
			ವೆಂಕಟನಾರಾಯಣಶಾಸ್ತ್ರಿ (ಅನುಭವದಾರ್) ವಿಶ್ವನಾಥಶಾಸ್ತ್ರಿ).	95—2	4	14	5	4	0	ಕೆರೆಯ ಬಡಲು	ಸರ್ವೆ ನಂ. 88—1	ದಾಸರಹಳ್ಳಿ ಎಲ್ಲೆ	ಕೆರೆ
			ಬೆಂಗಳೂರು ಸುಬ್ಬಯ್ಯ ಮತ್ತು ವೀರರಾಘವಭಟ್ಟ ಬೈರಪ್ಪ (ಅನುಭವದಾರ್).	95—3	1	19	1	12	0	ಕೋಡಿ ಕಾಲವೆ	ಸರ್ವೆ ನಂ. 88—4	ಕೆರೆ	ಸರ್ವೆ ನಂ. 90—3

993

ತಾರೀಖು 25ನೆ ಮೇ 1904.

ನಂ. ರೆ. 361ಸ, ಸ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮಂಡ್ಯದ ತಾಲ್ಲೂಕು ಹಿಂದುಬಾಳ್ ಗ್ರಾಮದಲ್ಲಿ 271—10ನೆ ಪ್ಲೀಲಿಯಲ್ಲಿರುವ ಪರಿಯನ್ನು ಪುನಃ ವಂಶಿವಿನ ಬಗ್ಗೆ ದಕ್ಷಿಣ ಮಹರಾಟಾ ರೈಲ್ವೆ ಕಂಪನಿಯವರಿಂದ ಬೇಕಾಗಿರುತ್ತವೆ. ಮತ್ತು ಮೈಸೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಕೊಂದುವ ಒಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ತಾಲ್ಲೂಕು. ಹೋಬಳಿ. ಗ್ರಾಮ.	ಖಾತೇದಾರರ ಹೆಸರು.	ಸರ್ವೇ ನಂ. ಹಿಸ್ಸೆ ನಂ.	ಜಮೀನಿನ ವಿವರ. ವಿಸ್ತೀರ್ಣ.	ಚಕ್ಕುಬಂದಿ.	ಹೊಂದಬೇಕಾಗಿರುವ ಜಮೀನಿನ ವಿವರ. ವಿಸ್ತೀರ್ಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು. ರೂ. ಆ.		ಎ. ಗು.				
ಮೈಸೂರು ಗುಂಡ್ಲುಪೇಟೆ ಹೊಂಬಳ್ಳಿ. ಹೊಂಬಳ್ಳಿ.	ತಿಮ್ಮೇಗೌಡನ ಮಗ ಹೊನ್ನೇಗೌಡ.	5	5—18 5— 8		1—52	ಬಸವಾಚಾರಿಯಹೊಲ	ದೇವರ ಹೊನ್ನನಹೊಲ	ರೈಲ್ ರಸ್ತೆ	ಹೊನಗೇರಿ ಗೌಡನ ಜಮೀನು
	ಬೋರ, ಕಾಳಿ.	ಡಿಟೋ 36 2	1— 8	0—12 ...	1—21	ಗೆರಗಿ ಹೊನ್ನನ ಹೊಲ	ಗೆರಗಿ ಹೊನ್ನನ ಹೊಲ	ಬೋರ ಮತ್ತು ಕಾಳಿನ ಜಮೀನು	ರೈಲ್ ರಸ್ತೆ
	ಗೆರಗಿದೇವನ ಮಗ ಚಾವ.	ಡಿಟೋ 36 3	2—16	2— 0	3—07	ಡಿಟೋ	ಗಿರಿಯ, ದಾಸ, ಮತ್ತು ಮಾಯಿಯಹೊಲ	ಚಾವುನ ಹೊಲ	ಡಿಟೋ
	ಬೋರ, ಪೂ ಲಿಹಳ್ಳಿ ಜವುಡನ ಮಗ ಕಾಳ.	ಡಿಟೋ 43 1	1—22	1—12 ..	2—15	ಬಸರ ಜಟ್ಟಿಯಹೊಲ	ಹೊನ್ನಗೇರಿ ಗೌಡನ ಹೊಲ	ರೈಲ್ ರಸ್ತೆ	ಬೋರಮತ್ತು ಕಾಳಿನಿಗೆ ಸೇರಿದ ಜಮೀನು

ತಾರೀಖು 30ನೆ ಮೇ 1904.

ನಂ. ರೆ 366ಸ, ಸ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡಿ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ತುಮಕೂರು ಡಿಸ್ಟ್ರಿಕ್ಟು ತುಮಕೂರು ತಾಲ್ಲೂಕು ಗೂಳೂರು ಹೋಬಳಿಯಲ್ಲಿರುವ ಅರಿಮೂರು ಗ್ರಾಮದಲ್ಲಿ ಮನೆಗಳನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಎರಡನೇ ಜನರಲ್ ಅಸಿಸ್ಟೆಂಟ್ ಕಮಿಷನರಾದ ವೆ|| ಪಿ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ಮ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಕೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ತಾಲ್ಲೂಕು. ಹೋಬಳಿ. ಗ್ರಾಮ. ಅರಿಮೂರು	ಹಿಡುವಳೀದಾರರ ಹೆಸರು.	ಸರ್ವೇ ನಂ.	ಜಮೀನಿನ ವಿಸ್ತೀರ್ಣ ಮತ್ತು ವಿವರ.		ಬೇಕಾಗಿರುವ ಜಮೀನಿನ ವಿವರ.		ಚಕ್ಕುಬಂದಿ. ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
			ಎ.	ಗು.	ಎ.	ಗು.				
	ಭದ್ರಮ್ಮ	3	19	ಖುಷ್ಕಿ	9	8	8	ಸರ್ವೇ ನಂ. 3ರ ಭಾಗ ಸುಂಕು ಹೊಸ್ಕೋಟೆಯ ಪೇಟೆಯ ಮೇರೆ		
	ನರಸ ಬಿ ನರಸಿಂಹ	6—1	3	ಡಿಟೋ	23	1	25	ಹಾಲಿಗಲ್ಲು ನಿವೇಶನ ಸುಂಕು ಸಿದ್ಧಲಿಂಗ ಬ ಬಾಲಿಗಾನ ಮನೆ		
	ಹೊನ್ನ	6—2	4	ಡಿಟೋ	0	1	3	ಹಾಲಿಗಲ್ಲು ನಿವೇಶನ ಸುಂಕು ಸಿದ್ಧಲಿಂಗ ಬ ಬಾಲಿಗಾನ ಮನೆ		
	ಈರಣ್ಣ ಬಿ ಹೊನ್ನಯ್ಯ	6—3	3	ಡಿಟೋ	5	.	..	ಸರ್ವೇ ನಂ. 6ರ ಭಾಗ ಸುಂಕು ಹೊಸ್ಕೋಟೆಯ ಪೇಟೆಯ ಮೇರೆ		
	ಸಿದ್ದಲಿಂಗೆಗೌಡ	7	5	ಡಿಟೋ	21	1	7	ಸರ್ವೇ ನಂ. 6ರ ಭಾಗ ಸುಂಕು ಹೊಸ್ಕೋಟೆಯ ಪೇಟೆಯ ಮೇರೆ		
	ತಿಮ್ಮಯ್ಯ ಬಿ ಚಿಕ್ಕಣ್ಣ	ಡಿಟೋ	5	ಡಿಟೋ	24	1	2	ಸರ್ವೇ ನಂ. 6ರ ಭಾಗ ಸುಂಕು ಹೊಸ್ಕೋಟೆಯ ಪೇಟೆಯ ಮೇರೆ		
	ವೆಂಕಟಕೋಂ ವೆಂಕಟರಮಣ (ಹಿಡುವಳೀದಾರ ಗುರುಮಲ್ಲಪ್ಪ)	8	6	ಡಿಟೋ	9	1	8	ಸರ್ವೇ ನಂ. 6ರ ಭಾಗ ಸುಂಕು ಹೊಸ್ಕೋಟೆಯ ಪೇಟೆಯ ಮೇರೆ		
	ನರಸಯ್ಯ ...	ಡಿಟೋ	5	ಡಿಟೋ	14	...	..	ಸರ್ವೇ ನಂ. 6ರ ಭಾಗ ಸುಂಕು ಹೊಸ್ಕೋಟೆಯ ಪೇಟೆಯ ಮೇರೆ		
						14	13			

ಸರ್ವೇ ನಂ. 6ರ ಭಾಗ ಸುಂಕು ಹೊಸ್ಕೋಟೆಯ ಪೇಟೆಯ ಮೇರೆ

ಹಾಲಿಗಲ್ಲು ನಿವೇಶನ ಸುಂಕು ಸಿದ್ಧಲಿಂಗ ಬ ಬಾಲಿಗಾನ ಮನೆ

ಒಟ್ಟು ಜಮೀನುಗಳು

ಸರ್ವೇ ನಂ. 6ರ ಭಾಗ ಸುಂಕು ಹೊಸ್ಕೋಟೆಯ ಪೇಟೆಯ ಮೇರೆ

ನಂ. 3ರ ಭಾಗ

ಗ್ರಾಮದಲ್ಲಿ ಈಗ ಪುನಾರಚಿಸಲ್ಪಟ್ಟ ಸರ್ವೇ ನಂ. 6, 7 ಮತ್ತು 8ರ ಭಾಗ

ತಾರೀಖು 4ನೆ ಜೂನ್ 1904.

ನಂ. ರೆ. 3795, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಸೀರಾ ತಾಲ್ಲೂಕಿನಲ್ಲಿರುವ ಚಿಕ್ಕ ಸಂದ್ರದ ಬಳಕೆರೆಗೆ ಸೇರಿಸಿಕೊಳ್ಳುವ ಬಗ್ಯೆ ಬೇಕಾಗಿರುತ್ತವೆ. ತುಮಕೂರ ಡಿಸ್ಟ್ರಿಕ್ಟಿನ ಮೊದಲನೆ ಅಸಿಸ್ಟೆಂಟ್ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 3 (ಸಿ) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರ್ರ ಹೆಸರು.	ಜಮೀನಿನ ತಪಶೀಲು.			ಚಕ್ಕುಬಂದಿ.			
					ಸರ್ವೆ ನಂ.	ಬೇಕಾಗಿರುವ ಜಮೀನಿನ ವಿವರ.	ಬೇಕಾಗಿರುವ ಜಮೀನು.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ತುಮಕೂರು	ಸೀರಾ	ಸೀರಾ	ಅಂತಾಪುರ ಜೋಡಿ	ಬಿಂಧು ಮಧ್ವಾಚಾರ್ರು.	16ರ ಭಾಗ	ಖುಷ್ಕಿ	ಎ.—ಗು 2—36	ಸರ್ವೆ ನಂ. 16ರ ಭಾಗ	ಸರ್ವೆ ನಂ. 17ರ ಭಾಗ	ಸರ್ವೆ ನಂ. 16ರ ಭಾಗ	ಹಳ್ಳ
				ಜನುಮಂತಾಚಾರ್ರು.	17ರ ಭಾಗ	ಡಿಟೋ	1—10	ಡಿಟೋ	ಸರ್ವೆ ನಂ. 18ರ ಭಾಗ	ಡಿಟೋ 17ರ ಭಾಗ	ಡಿಟೋ
				ಕೃಷ್ಣಾಚಾರ್ರು...	...	ಬಾಗಾಯತು	6—26				
							7—36				
					18ರ ಭಾಗ	ಖುಷ್ಕಿ	7—38	ಎಸ್ ನಂ. 17	ಎಸ್ ನಂ. 21	ಡಿಟೋ ನಂ. 18	ಡಿಟೋ
						ಬಾಗಾಯತು	7—28				
							15—26				
					20ರ ಭಾಗ	ಖುಷ್ಕಿ	9—0	ಡಿಟೋ 19	ಡಿಟೋ	ಡಿಟೋ 22	ಸರ್ವೆ ನಂ. 18ರ ಭಾಗ.
					21	ಡಿಟೋ	48—30	ಡಿಟೋ 18 ವ 20	ಹೊನ್ನೇನ ಹಳ್ಳಿ ಎಲ್ಲೆ	ಡಿಟೋ	ಹೊನ್ನೇನ ಹಳ್ಳಿ ಎಲ್ಲೆ
					22ರ ಭಾಗ	ಡಿಟೋ	9—39	ಸರ್ವೆ ನಂ. 23	ಸರ್ವೆ ನಂ. 21	ಚಿಕ್ಕ ಸಂದ್ರ ಕೆರೆ	ಸರ್ವೆ ನಂ. 20 ವ 21
						ಜುಮ್ಲಾ ...	94—7				
						ಖುಷ್ಕಿ	79—33				
						ಬಾಗಾಯತು	14—14				

ತಾರೀಖು 14ನೆ ಜೂನ್ 1904.

ನಂ. ರೆ. 3933—ರೆ. ಫೈ. 49—1902, ಈಚಿಗೆ ರೆವಿನ್ಯೂ ಕಮೀಷನರವರ ಆಫೀಸಿನಲ್ಲಿ ಕೆಲಸ ಮಾಡುತ್ತಲಿರುವ ಹಾಸನದ ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮೀಷನರಾದ ಮೆ॥ ಕೆ. ಚ್ಯಾಂಡಿ, ಬಿ. ಎ., ಯವರಿಗೆ 1904ನೆ ಜನವರಿ 31ನೆ ಮರ್ಕುಂ ರೆ. 2187ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಆರು ದಿನಗಳ ಪ್ರಿವಿಲೇಜ್ ರಜಾ ಇನ್ನೂ ಎರಡು ದಿನಗಳು ಜಾಸ್ತಿ ಮಾಡಲ್ಪಟ್ಟಿತ್ತು.

ತಾರೀಖು 14ನೆ ಜೂನ್ 1904.

ನಂ. ರೆ. 3937, ಸನ್ 1904ನೆ ಏಪ್ರೆಲ್ 9ನೆ ಮರ್ಕುಂ ರೆ. 3100ನೆ ನಂಬರಿ ಇಸ್ತಿಹ್ನಾಮೆಗೆ ಬದಲಾಗಿ, ಮಾಲೂರು ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಸಿ. ಮಾಚಯ್ಯ, ಬಿ. ಎ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 221ನೆ ಆರ್ಟಿಕಲ್ ಅನುಸರಿಸಿ 1904ನೆ ಏಪ್ರೆಲ್ 13ನೆ ತಾರೀಖಿನಾರಭ್ಯ ತಲಬಿಲ್ಲದ 3 ತಿಂಗಳುಗಳ ಎಕ್‌ಸ್ಟ್ರಾ ಆರ್ಡಿನೆರಿ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 14ನೆ ಜೂನ್ 1904.

ನಂ. ರೆ. 3940—ರೆ. ಫೈ. 32—1903-4, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಚಿತ್ರದುರ್ಗ ಡಿಸ್ಟ್ರಿಕ್ಟು ಹಿರಿಯೂರು ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಗುಲಾಂ ಮಹಮದ್ ಮೆಕ್ಕೈ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾಲ್ಲೂಕಿನ ಆಕ್ಟಿಂಗ್ ಷಿರಿಸ್ತೆದಾರ್ರಾದ ನಂಜುಂಡಯ್ಯನವರು ಸದರೀ ಅಮಲ್‌ದಾರ್ರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಹಿರಿಯೂರು ತಾಲ್ಲೂಕಿನ ಅಮಲ್‌ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಆಕ್ಟಿಂಗ್ ತರೀಕು ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 11ನೆ ಜೂನ್ 1904.

ನಂ. ರೆ. 3888, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಶನ್ ರಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಡೀ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಬೌರಿಂಗಪೇಟೆ ತಾಲ್ಲೂಕಿನ ಬೀತ ಮಂಗಲದ ಸಮೀಪದಲ್ಲಿರುವ ಪಾಲಾರ ನದೀ ಸೇತುವೆಗೆ ಹೋಗತಕ್ಕ ರಸ್ತೆಗಳ ಕಟ್ಟೆಗಳನ್ನು ದುರಸ್ತು ಮಾಡುವ ಬಗ್ಗೆ ಮಂಣಾನ್ನು ಆಗಿಯಲಿಕ್ಕೆ ಬೇಕಾಗಿರುತ್ತವೆ. ಮತ್ತು ಬೌರಿಂಗಪೇಟೆ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರು ಮೇಲ್ಕಂಡ ರಗ್ಯುಲೇಷನಿನ 3 (c) ಮ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಆಪ್ಪಣೆ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬ್ಳಿ.	ಗ್ರಾಮ.	ಖಾತೆದಾರ್ರ ಹೆಸರು.	ಸರ್ವೆ ನಂ.	ವಿವರ.	ವಿಸ್ತೀರ್ಣ ಎಕರೆಗಳು	ಆಕಾರ.	ಬೇಕಾಗಿರುವ ವಿಸ್ತೀರ್ಣ.	ಚಕ್ಕುಬಂದಿ.			
										ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ. ಪೈ.	ಎ. ಗು.				
ಕೋಲಾರ.	ಬೌರಿಂಗಪೇಟೆ.	ಬೀತಮಂಗಲ.	ಬೀತಮಂಗಲ.	ವೀರಭದ್ರಯ್ಯ, ಕುಸುಮಾ ರಂಗಯ್ಯ ಮತ್ತು ವೆಂಕಟಪ್ಪ.	217	ತರಿ	1 19	9 0 0	0 5	ಎಸ್. ನಂ. 219	ಎಸ್. ನಂ. 216	ರಸ್ತೆ	ಎಸ್. ನಂ. 218
				ಅಚ್ಚಮ್ಮ ಕೋಂ ಅಚ್ಚಪ್ಪ ...	276	ಡಿಟೋ	2 29	17 0 0	0 2	277	274	ಎಸ್. ನಂ. 286 ಮ 287	ಪಾಲಾರ ನದಿ ಮತ್ತು ಎಸ್. ನಂ. 275
				ಮಹಜೀದ್‌ಸಾಬ್ ...	275	ಬಾಗಾಯತು	0 17	3 0 0	0 3	277	269	274 ಮ 276	ಪಾಲಾರ ನದಿ
				ವೆಂಕಟಸಾಮಿ ಮತ್ತು ಕದಿರಪ್ಪ.	274	ತರಿ	1 3	7 0 0	0 2	276	273	287	275
				ಗಂಗಾಬಾಯಿ ಕೋಂ ಭೀಮರಾವ್ ಮತ್ತು ಹನುಮಪ್ಪ.	242	ಡಿಟೋ	1 38	12 0 0	0 3	244	241	243	239 ಮ 240
				ಕುಸುಮಾ ರಂಗಯ್ಯ ...	173	ಡಿಟೋ	2 1	13 0 0	0 6	171	ಪಾಲಾರ ನದಿ	172	ರಸ್ತೆ
				ತೇಲಿ ಪೆರಂಣ ಮತ್ತು ತಿಮ್ಮಯ್ಯ ಬಿನ್ ಮುನಿನಾಯಿಕ್.	171	ಡಿಟೋ	1 23	10 0 0	0 8	170	173	172	ಡಿಟೋ
				ತಿರುಪತ್ತೂರು ವೆಂಕಟರಾಮಯ್ಯ ಮತ್ತು ಕುಸುಮಾ ರಂಗಯ್ಯ.	244	ಡಿಟೋ	0 27	4 8 0	0 2	246	242	ರಸ್ತೆ	239

947

ತಾರೀಖು 8ನೆ ಜೂ೯ 1904.

ನಂ. ಕ. 3864, ಸ೯ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಚೆನ್ನಗಿರಿ ತಾಲ್ಲೂಕಿ ನಲ್ಲಿರುವ ಬಾಸೇನಹಳ್ಳಿ ಕರೆಯ ಏರಿಯನ್ನು ಹಾಕುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಹೊನ್ನಾಳಿ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರು ಮೇಲ್ಕಂಡ ರೆಗ್ಯುಲೇಷನಿನ 7 ವ 3 (c)ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಪ್ಪಣೆ ಕೊಡಲ್ಪಟ್ಟಿರುತ್ತಾರೆ :—

ತಾಲ್ಲೂಕು.	ಹೋಬಳಿ.	ಗ್ರಾಮ.	ಹಿಡುವಳೀದಾರ್ರ ಹೆಸರು.	ಸರ್ವೆ ನಂ.	ಹಿಸ್ಸ ನಂ.	ಜಿಲ್ಲೆ.	ಜಮೀನಿನ ತಪಸೀಲು.		ತೆಗದುಕೊಳ್ಳಬೇಕಾಗಿರುವ ವಿಸ್ತೀರ್ಣ.		ಚಕ್ಕುಬಂದಿ			
							ವಿಸ್ತೀರ್ಣ.	ಆಕಾರ.	ವಿಸ್ತೀರ್ಣ.	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
							ಎ. ಗು.	ರೂ. ಆ.	ಎ. ಗು.	ರೂ ಆ.				
ಚೆನ್ನಗಿರಿ	ಚೆನ್ನಗಿರಿ	ಬಾಸೇನಹಳ್ಳಿ	ರಂಗಯ್ಯ ಬಿ ರಂಗಪ್ಪಯ್ಯ ಮುಂಗಜ್ಜಿ.	75	...	ತರಿ ಖುಷ್ಕಿ	2 8 5 8 7 16	14 0	2 20	...	ಕೆರೆ ಏರಿ	ಸರ್ವೆ ನಂ. 75ರ ಮಿಕ್ಕ ಭಾಗ	ಸರ್ವೆ ನಂ. 74 ವ 72	ಒಳಗೆರೆ ಮತ್ತು ಚಿಕ್ಕ ಹುಲಿಕೆರೆ ಗ್ರಾಮ ಎಲ್ಲೆ
			ಮಲ್ಲಿಗೆರೆ ಸಿದ್ದಲಿಂಗನ ಮಗಳು ಈರವ್ವ.	85	1	ಖುಷ್ಕಿ	1 9	1 4	1 9	1 4	ಸರ್ವೆ ನಂ. 88ಮತ್ತು ಚೆನ್ನಗಿರಿಗೆರೆ ಹೋಗುವ ಕಾಲಹಾದಿ	ದೊಡ್ಡಕೆರೆಯ ಒಳಗೆ	ಸರ್ವೆ ನಂ. 84	ಮುಂಗಜ್ಜೆ ರಂಗಯ್ಯನಿಗೆ ಸೇರಿದ ಸರ್ವೆ ನಂ. 85ರ ಭಾಗ
			ರಂಗಬಿ ತಿಮ್ಮಪ್ಪ ಮುಂಗಜ್ಜೆ.	85	2	ಡಿಟೋ	1 14	1 8	...	11 ...	...	ಡಿಟೋ	ಡಿಟೋ	ಈರವ್ವನಿಗೆ ಸೇರಿದ ಸರ್ವೆ ನಂ. 85ರ ಭಾಗ	ಸುಂಕಾಗೆರೆ ಮುದ್ದಪ್ಪನಿಗೆ ಸೇರಿದ ಸರ್ವೆ ನಂ. 85—3

ತಾರೀಖು 15ನೆ ಜೂ೯ 1904.

ನಂ. ಕ. 3955, ಸ೯ 1902ನೆ ಏಪ್ರಿಲ್ 8ನೆ ಮೆರ್ಕುಂ ರೆ. 4457ನೆ ನಂಬರ್ ಇಸ್ತಿಹಾರ್ನಾಮೆಯಿಂದ ಎಳಂದೂರು ಜಹಗೀರಿನ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಸಕ್ಕೊತ್ತಿಸ್ಕರ 2 ವರುಷಗಳ ಕಾಲದವರಿವಿಗೆ ಎಳಂದೂರ ಜಹಗೀರ್ದಾರ್ರಿಗೆ ಕುಮಕಿ ಕೊಡಲ್ಪಟ್ಟಿದ್ದ ಅಮಲ್ದಾರ್ರಾದ ವೆ|| ಪಿ. ರಂಗರಾಯರು ತಮ್ಮ ಕುಮಕಿ ಕಾಲವು ಪೂರೈಸಿದ್ದರಿಂದ ಸಂಸ್ಥಾನದ ನೌಕರೀಗೆ ವಾಪಸು ಬರತಕ್ಕದ್ದು.

2. ತುಮಕೂರಿನ ಅಮಲ್ದಾರ್ರಾದ ವೆ|| ಎ. ಹೇಜ್‌ಯವರ ನೌಕರಿಯು, ಎಳಂದೂರು ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸ್ ಮ್ಯಾಜಿಸ್ಟ್ರೇಟರಾಗಿ ಕೆಲಕ್ಕೊತ್ತಿಸ್ಕರ 2 ವರುಷದ ಕಾಲದ ವರಿವಿಗೆ, ಎಳಂದೂರು ಜಹಗೀರ್ದಾರ್ರವರಿಗೆ ಕುಮಕಿ ಕೊಡಲ್ಪಟ್ಟಿರುತ್ತೆ. ಕೂಡ್ಲ ಕೆಲಸಕ್ಕೆ ದಾಖಲಾಗತಕ್ಕದ್ದು.

ಹುಕುಂ ಬವೋಜೇಬ್,
ಎಲ್. ಅನಂತಸ್ವಾಮಿರಾವ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಅಫಿಷಿಯೇಟಿಂಗ್ ಸೆಕ್ರಿಟರಿ.

ಮುಜರೈ.

ಇಸ್ತಿಹಾರ್ನಾಮೆ.

ತಾರೀಖು 11—13ನೆ ಜೂ೯ 1904.

ನಂ. 3853, ಮೈಸೂರ ಚೀಫ್ ಕೋರ್ಟಿನ ಜಡ್ಜ್‌ರಾಗಿ ಕೆಲಸದಿಂದ ನಿವೃತ್ತರಾದ ಮೂಜಿ ವೆ|| ಟಿ. ನರಹರಿರಾಯರಿಂದ ಬಹಳ ಮೊಬಲಗಿನಿಂದ ಅಭಿವೃದ್ಧಿಗೆ ತರಲ್ಪಟ್ಟ ಬೆಂಗಳೂರ ಪಹರ್ ಬಸವನಗುಡಿ ಬಡಾವಣೆಯ ನೈರುತ್ಯ ದಿಕ್ಕಿನಲ್ಲಿರುವ ಮುಜರಾಯಿಗೆ ಸಂಬಂಧಪಟ್ಟ ಸುಂಕೇನಹಳ್ಳಿ ಶ್ರೀ ಕುಮಾರಸ್ವಾಮಿಯ ದೇವಸ್ಥಾನದ ವಿಸಿಷ್ಟ ಧರ್ಮಾದರ್ಕಿಗೆಳಾಗಿ ವೆ|| ರಾ|| ರಾ|| ಟಿ. ಎಸ್. ಲಕ್ಷ್ಮಿನರಸಿಂಹರಾಯರು ಮೊಕರರ್ರಾಡಲ್ಪಟ್ಟಿರುತ್ತಾರೆ.

ಹುಕುಂ ಬನೋಜೇಬ್,
ಎಂ. ಶಾಮರಾವ್,
ಅಫೀಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 14ನೆ ಜೂ 1904.

ನಂ. 608—3412, ಮೈಸೂರು ಪಬ್ಲಿಕ್ ವರ್ಕ್ಸ್ ಇಲಾಖೆಯ ಲೋಕಲ್, ಅಪ್ಪರ್ ಸಬ್‌ಆರ್ಡಿನೇಟ್ ಸಿಬ್ಬಂದಿಯಲ್ಲಿ ಇದರಜೀ ಕಂಡ ಬಡ್ತಿಗಳು ನಮೂದಿಸಲ್ಪಟ್ಟ ತಾರೀಖುಗಳಿಂದ್ಯ ಮಾಡಲ್ಪಟ್ಟಿರುತ್ತವೆ :—

ಡಿವೀರ್ಜ್.	ಹೆಸರು.	ಹಾಲಿ ಗ್ರೇಡು.	ಬಡ್ತಿ ಮಾಡಲ್ಪಟ್ಟ ಗ್ರೇಡು.	ಬಡ್ತಿಯ ಸ್ವಭಾವ.	ಯಾವಲಾಗಾಯ್ತು.	ಷರಾ.
ಕೋಲಾರ ...	ಸಿ. ಸೂರ್ಯನಾರಾಯಣರಾಯರು	ಎರಡನೇ ಕ್ಲಾಸಿನ ಸೂಪರ್‌ವೈಜರ್	ಮೊದಲನೇ ಕ್ಲಾಸಿನ ಸೂಪರ್‌ವೈಜರ್	ಹಂಗಾಮಿ	6—1—03	ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ರಜಾದಲ್ಲಿರುವ ಮೊದಲನೇ ಕ್ಲಾಸಿನ ಸೂಪರ್‌ವೈಜರಾದ ಎ. ಮುನಿಸ್ವಾಮಿ ಮೊದಲಿಯಾರ್‌ಗೆ ಇದಲಾಗಿ
ತುಮಕೂರು ..	ಬಿ. ವಸಂತಪ್ಪನವರು	ಮೂರನೇ ಕ್ಲಾಸಿನ ಸೂಪರ್‌ವೈಜರ್	ಎರಡನೇ ಕ್ಲಾಸಿನ ಸೂಪರ್‌ವೈಜರ್	ಡಿಟೋ	ಡಿಟೋ	
ಡಿಟೋ ..	ಬಿ. ಎಸ್. ಶ್ರೀಕಂಠಯ್ಯನವರು	ಮೊದಲನೇ ಕ್ಲಾಸಿನ ಓವರ್‌ಸೀರು	ಮೂರನೇ ಕ್ಲಾಸಿನ ಸೂಪರ್‌ವೈಜರ್	ಡಿಟೋ	ಡಿಟೋ	
ಕಡೂರು ..	ಮೆ॥ ಜಿ. ಟಿ. ಕಿಂಗ್ ಯವರು	ಎರಡನೇ ಕ್ಲಾಸಿನ ಓವರ್‌ಸೀರು	ಮೊದಲನೇ ಕ್ಲಾಸಿನ ಓವರ್‌ಸೀರು	ಡಿಟೋ	ಡಿಟೋ	
ಹಾಸನ ..	ಎಚ್. ಎಸ್. ವೆಂಕಟಾಚಾರ್ಯ	ಮೂರನೇ ಕ್ಲಾಸಿನ ಓವರ್‌ಸೀರು	ಎರಡನೇ ಕ್ಲಾಸಿನ ಓವರ್‌ಸೀರು	ಡಿಟೋ	ಡಿಟೋ	
ಬೆಂಗಳೂರು ..	ಡಿ. ಸಂಜೀವಯ್ಯನವರು	ಮೊದಲನೇ ಕ್ಲಾಸಿನ ಸಬ್ ಓವರ್‌ಸೀರು	ಮೂರನೇ ಕ್ಲಾಸಿನ ಓವರ್‌ಸೀರು	ಡಿಟೋ	ಡಿಟೋ	ಹಾಲಿ ಇರುವ ಸಂಬಳವಂದರೆ 70 ರೂಪಾಯಿಗಳ ತಲಬಿನ ಮೇಲೆ

ಹುಕುಂ ಬವೋಜೀಬ್,
ಡಬ್ಲ್ಯೂ. ಪೆಕ್‌ಹಚೇರ್,
ಪಬ್ಲಿಕ್ ವರ್ಕ್ಸ್ ಇಲಾಖಾ, ಮೈಸೂರು ಗವರ್ನ್‌ಮೆಂಟ್ ಸೆಕ್ರಟರಿ.

ಜಿಯೊಲಾಜಿಕಲ್.

ಇಸ್ತಿಹಾರ್ನಾಮೆ.

ತಾರೀಖು 10ನೆ ಜೂ 1904.

ನಂ. 777—S, ಸ 1897ನೆ ಇಸವಿ ಮೈಸೂರು ಕ್ಷೇಮ ಗಣಿ ಸಂಬಂಧದ 3ನೆ ನಂಬರು ರೆಗ್ಯುಲೇಷನಿನ 2 (4)ನೆ ಸೆಕ್ಷನ್ನನ್ನು ಅನುಸರಿಸಿ, ಮೈಸೂರು ಕ್ಷೇಮವು ಘನವನ್ನು ಹೊಂದಿದ ಶ್ರೀವರ್ಮ ಮಹಾರಾಜರವರ ಸರ್ಕಾರದವರು ಜಾರಿಯಲ್ಲಿ ತರಬೇಕೆಂದು ಉದ್ದೇಶಿಸಿರುವ ಇದರಜೀ ಕಂಡ ಮಸೂದೆ ಇಸ್ತಿಹಾರ್ನಾಮೆಯು ಜನಗಳ ತಿಳುವಳಿಕೆ ಬಗ್ಗೆ ಪ್ರಕಟಿಸಲ್ಪಟ್ಟಿರುತ್ತೆ.

2. ಸದರಿ ಇಸ್ತಿಹಾರ್ನಾಮೆಗೆ ಸಂಬಂಧಪಟ್ಟ ವಿಷಯದಲ್ಲಿ ಅಭ್ಯಂತರಗಳು ಅಥವಾ ಸಲಹೆಗಳು ಏನಾದರೂ ಇದ್ದರ ಅವುಗಳನ್ನು ಸ 1904ನೆ ಇಸವಿ ಸೆಪ್ಟಂಬರು 1ನೆ ತಾರೀಖಿನ ವಳಗಾಗಿ ಘನವನ್ನು ಹೊಂದಿದ ಶ್ರೀವರ್ಮ ಮಹಾರಾಜರವರ ಸರ್ಕಾರದ ಜಿಯೊಲಾಜಿಕಲ್ ಇಲಾಖಾ ಸೆಕ್ರಟರಿ ಸಾಹೇಬರವರಿಗೆ ತಿಳಿಸಿದಲ್ಲಿ ಅವುಗಳು ಆಲೋಚಿಸಲ್ಪಡುತ್ತವೆ.

ಮಸೂದೆ.

ಇಸ್ತಿಹಾರ್.

ತಾರೀಖು 13 ಜೂ 1904.

ಸ 1897ನೆ ಇಸವಿ ಮೈಸೂರು ಕ್ಷೇಮ ಗಣಿ ಸಂಬಂಧದ 111ನೆ ನಂಬರು ರೆಗ್ಯುಲೇಷ್ 2 (4)ನೆ ಸೆಕ್ಷನ್ನನ್ನು ಅನುಸರಿಸಿ, ಘನವನ್ನು ಹೊಂದಿದ ಶ್ರೀವರ್ಮ ಮಹಾರಾಜರವರ ಸರ್ಕಾರದವರು "ಕಲ್ಲು ಇದ್ದಲು" ಸ 1897ನೆ ಇಸವಿ ಡಿಸೆಂಬರು 11ನೆ ತಾರೀಖು ನಂ. 6751—ಮಿಸ್. 1405ನೆ ಇಸ್ತಿಹಾರ್ನಾಮೆಯಲ್ಲಿ ನಮೂದಿಸಲ್ಪಟ್ಟಿರುವ ಮತ್ತು ಮೇಲ್ಕಂಡ ರೆಗ್ಯುಲೇಷನಿನ 4, 7 ಮತ್ತು 8ನೆ ಸೆಕ್ಷನ್‌ಗಳ ನಿಬಂಧನೆಗಳಿಗೆ ಕೇರಿಸಲ್ಪಟ್ಟ ಪ್ರದೇಶಗಳಲ್ಲಿ "ಗಣಿ ಪದಾರ್ಥ" (Mining Material) ಕ್ಕೆ ಕೆಲಸ ಮಾಡಲ್ಪಟ್ಟಿರುತ್ತೆಂದು ಹುಕುಂ ಮಾಡಿರುತ್ತಾರೆ.

ಹುಕುಂ ಬವೋಜೀಬ್,
ಡಬ್ಲ್ಯೂ ಎಫ್. ಸ್ಮೀತ್,
ಮೈಸೂರು ಗವರ್ನ್‌ಮೆಂಟ್ ಜಿಯೊಲಾಜಿಕಲ್ ಇಲಾಖಾ ಸೆಕ್ರಟೇರಿ.

999

ಮೈಸೂರ ಗೆಜೆಟ್ಟಿ.

ಸಂ. 39.] ಸರಕಾರದಿಂದ ಪ್ರಸಿದ್ಧ. [ನಂ. 24.

ಬೆಂಗಳೂರು, ಗುರುವಾರ, ಜೂನ್ ತಾ|| 16, ಸನ 1904.

IIನೆ ಭಾಗ.

ಇಂಡ್ಯುಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ಗಳು ಮೆಗೈ ಕೇರಿಂದ ಕೊಡೋಕಾದ ಇನ್ಸ್ತ್ರುಮಾರ್ನಾಮೆಗಳು.

ಫಾರೆಸ್ಟ್ ಇಲಾಖಾ.

ನೋಟಿಫಿಕೇರ್ಷ, ತಾರೀಖು ನೆ ಮೇ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನೆಂದರೆ:—1904–1905ನೆ ಇಸನಿಗೆ ಬೆಂಗಳೂರು ಡಿಸ್ಟ್ರಿಕ್ಟಿನ ಎಲ್ಲಾ ಸ್ಟೇಟ್ ಫಾರೆಸ್ಟ್ಟುಗಳ ಪಸಾರೆ ಜಿನಸಿಯ ಹಕ್ಕುದಾರಿಯನ್ನು ರೇಂಜ್ ಫಾರೆಸ್ಟ್ಟು ಆಫಿಸರುಗಳು ಈ ಕೆಳಗೆ ಕಾಣಿಸಿ ಇರುವ ಸ್ಥಳಗಳಲ್ಲಿಯು ಆಯಾಯ ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡುತ್ತಾರೆ:—

ಈ ಹರಾಜು ಡಿಸ್ಟ್ರಿಕ್ಟ್ ಫಾರೆಸ್ಟ್ಟು ಆಫಿಸರವರ ಮಂಜೂರಾತಿಗೆ ಬಳಿಪಟ್ಟು ಇರುತ್ತೆ. ಹರಾಜು ಆಯಾಯ ತಾರೀಖಿನ ಮು ಭ್ಯಾನ್ಹ 12 ಘಂಟೆಗೆ ಪ್ರಾರಂಭ ಮಾಡಲ್ಪಡುವದು.

ನಂಬರ್.	ರೇಂಜ್.	ಸ್ಟೇಟ್ ಫಾರೆಸ್ಟ್ಟುಗಳ ಹೆಸರು.	ಹರಾಜು ಮಾಡತಕ್ಕ ಸ್ಥಳ.	ಹರಾಜು ತಾರೀಖು.
1	ಬೆಂಗಳೂರು ...	ಉಜನಿ, ಹುಲ್ಲಡಿ, ಮಾಕಳಿ, ದೇವರಬೆಟ್ಟ, ನಾಯಕನಹಳ್ಳಿ.	ದೊಡ್ಡಬಳ್ಳಾಪುರ	1ನೆ ಜುಲೈ 1904.
		ರಾಗಿಹಳ್ಳಿ ಫಾರೆಸ್ಟ್ ...	ಬನ್ನೇರಘಟ್ಟ	4ನೆ ಡಿಟ್ಟೋ
		ಬಳನಕುಪ್ಪೆ ...		
		ತಮ್ಮನಾಯಕನಹಳ್ಳಿ ...		
2	ಕ್ಲೋಸ್‌ಪೇಟೆ ...	ಕುಂಬಳಗೋಡು ರಿಜರ್ವ್ ...	ಕ್ಲೋಸ್‌ಪೇಟೆ ರೇಂಜ್ ಫಾರೆಸ್ಟ್ ಆಫೀಸ್	8ನೆ ಡಿಟ್ಟೋ
		ಹುಲತಾರು ...		
		ಮಾಕಳಿ ...		
		ತೆಂಗಿನಕಲ್ಲು ...		
		ಚಿಕ್ಕ ಮಂಣುಗುಡ್ಡೆ ...		
		ದೊಡ್ಡ ಮಂಣುಗುಡ್ಡೆ ...		
		ಅಚ್ಚಲೆ ...		
		ಸಾವನದುರ್ಗ ...	ನಾಯಕನಪಾಳ್ಯ ಫಾರೆಸ್ಟ್ ಲಾಡ್ಜ್, ಮಾಗಡಿ ತಾಲ್ಲೂಕು	9ನೆ ಡಿಟ್ಟೋ
		ಶಿದ್ದೇದೇವರಬೆಟ್ಟ ...		
		ಅತ್ತಿಂಗೆರೆ ...		
3	ಕಾನಕಾನಹಳ್ಳಿ ...	ಬಿಳಕಲ್ ಫಾರೆಸ್ಟ್ ...	ಕಾನಕಾನಹಳ್ಳಿ ರೇಂಜ್ ಫಾರೆಸ್ಟ್ ಆಫೀಸ್	11ನೆ ಡಿಟ್ಟೋ
		ಬಾಣಂತಿಮಾರಿ ...		
		ಮುಗ್ಗೂರು ಫಾರೆಸ್ಟ್ ...	ಕೋಡಿಹಳ್ಳಿ ಮುಸಾಫರ ಬಂಗ್ಲೆ	12ನೆ ಡಿಟ್ಟೋ
		ಚಿಲಂದಾಡಿ ...	ಸಾತನೂರು ಮುಸಾಫರ ಬಂಗ್ಲೆ	13ನೆ ಡಿಟ್ಟೋ
		ಬಸವನಬೆಟ್ಟ ...		
		ಕಬ್ಬಾಳು ...		

ಜಿನಸಿಯ ತಪಶೀಲ್.

1. ಹುಣಸೇಹಣ್ಣು, 2. ಹೊಂಗೇಬೀಜ, 3. ಕಿಗ್ಗೇಕಾಯಿ, 4. ಗೋಂದು, 5. ಜೇನುತುಪ್ಪ, 6. ಜೇನುಮೇಣ, 7. ಕುಲಾರಂಗು, 8. ಗೇರುಬೀಜ, 9. ಬ್ಯಾಲದಹಣ್ಣು, 10. ಕಲ್ಲುಹುವ್ವು, 11. ಚಾರಪೊಪ್ಪು, 12. ತಾರೇಕಾಯಿ, 13. ಚಗಚೆಬೀಜ, 14. ಆಂಟುವಾಳದಕಾಯಿ, 15. ಕಾಡಹರಳು, 16. ಬೂರಗದ ಹತ್ತಿ, 17. ಕಿರಿ ಈಚಲು, 18. ವೂಗಳಿಬೇರು, 19. ಸೊಗದೇಬೇರು, 20. ಹಿಪ್ಪೆಬೀಜ, 21. ಕೊಂಬುಗಳು, 22. ಅಳಲೆಕಾಯಿ.

2. ಚಡ ದರಖಾಸ್ತುದಾರನು ಹರಾಜು ಖ್ಯೆದಾದ ಕೂಡ್ಲೆ ಒಟ್ಟು ವೊಬಲಗಿನ ಪೈಕಿ ಕಾಲು ಹಿಸ್ಸೆ ವೊಬಲಗನ್ನು ಪಾವತಿ ವೂಡತಕ್ಕದ್ದು. ಈ ರೀತಿ ಪಾವತಿ ವೂಡದೆ ತಪ್ಪಿದಲ್ಲಿ ದುಸರಾ ಹರಾಜು ವೂಡಲ್ಪಡುವದೆಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಪುರು ದರಖಾಸ್ತುದಾರನನ್ನು ಗುರಿವೂಡಲ್ಪಡುತ್ತೆ. ಆದರೆ ಛಾಯಿಜೆ ಉಂಟಾದಲ್ಲಿ ಈತನು ಭಾಗಿಯಾಗುವದಿಲ್ಲ.

3. ದರಖಾಸ್ತುದಾರನಿಗೆ ದರಖಾಸ್ತು ವುಂಜೂರಾದ ಸಂಗತಿಯನ್ನು ತಿಳಿಸಿದ ಒಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ವೊಬಲಗನ್ನು ಪಾವತಿ ವೂಡಬೇಕು. ಹಾಗೆ ಸದರಿ ಹಣವನ್ನು ಪಾವತಿ ವೂಡದೇ ತಪ್ಪಿದಲ್ಲಿ ವೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ವುಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ್ ವೂಡಲಾಗುತ್ತೆ.

4. ರೇಂಜ್ ಫಾರೆಸ್ಟ್ಸ ಆಫಿಸರು ಯಾವದೊಂದು ಕಾರಣವನ್ನು ತಿಳಿಸದೇ ದರಖಾಸ್ತು ವುಂಜೂರ್ಮಾಡುವದಕ್ಕೆ ಆಗಲೀ ತಿರಸ್ಕರಿಸುವದಕ್ಕಾಗಲೀ ಸ್ವತಂತ್ರರಾಗಿ ಇರುತ್ತಾರೆ.

5. ದರಖಾಸ್ತುದಾರನು ಇನ್ನಾಂದಾರಿಗೆ ಗೊತ್ತಾದ ಹಕ್ಕುಗಳಲ್ಲಿ ಪ್ರವೇಶಿಸಕೂಡದು.

6. ದರಖಾಸ್ತುದಾರನಾಗಲಿ ಅಥವಾ ಅವನ ಆಳುಗಳೇ ಆಗಲಿ ಪಸಾರೆ ಜಿನಸಿ ಜವಾವಣಿ ನೆಪದವೇಲೆ ಯಾವ ಗಿಡಗಳನ್ನಾಗಲೀ ನಾಶಪಡಿಸಕೂಡದು.

7. ದರಖಾಸ್ತುದಾರನು ತಾನು ಖರೀದಿಗೆ ಪಡದಿರುವ ಜಿನಸಿ ವಿನಃ ಇತರ ಯಾವ ಜಿನಸಿಯನ್ನೂ ಜವಾಯಿಸಕೂಡದು.

8. ದರಖಾಸ್ತುದಾರನ ಏಜಂಟರುಗಳಾಗಲೀ ಅಥವಾ ಆಳುಗಳಾಗಲೀ ಪಸಾರೆ ಜಿನಸಿ ಜವಾವಣೇ ಕಾಲದಲ್ಲಿ ವೂಡಿದ ಕೃತ್ಯಕ್ಕೆ ದರಖಾಸ್ತುದಾರನನ್ನೇ ಗುರಿಪಡಿಸಲಾಗುತ್ತೆ.

9. ದರಖಾಸ್ತುದಾರನು 1905ನೆ ಇಸವಿ ಏಪ್ರಿಲ್ ಆಖ್ಯೆರು ವಳಗಾಗಿ ಎಲ್ಲಾ ಪಸಾರೆ ಜಿನಸಿಯನ್ನು ಸ್ಟೇಟ್ ಫಾರೆಸ್ಟ್ಸ ಸರಹದ್ದಿನಿಂದ ಸಾಗಿಸಿಕೊಳ್ಳತಕ್ಕದ್ದು.

10. ಸ್ಟೇಟ್ ಫಾರೆಸ್ಟ್ಸಿಗೆ ದರಖಾಸ್ತುದಾರನ ಅಶ್ರದ್ಧೆಯಿಂದಲಾಗಲೀ ಅಥವಾ ಈತನ ಆಳುಗಳಿಂದಲಾಗಲೀ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟ್ ಇಲಾಖೆಯವರಿಗೆ ತಿಳಿಯುಬಂದಲ್ಲಿ ಈ ಅಕೃತ್ಯಕ್ಕೆ ದರಖಾಸ್ತುದಾರನನ್ನು ಗುರಿಪಡಿಸಲಾಗುತ್ತೆ.

11. ದರಖಾಸ್ತುದಾರನೇ ಆಗಲೀ ಅಥವಾ ಈತನ ನೌಕರರೇ ಆಗಲಿ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತಮಯಾನಂತರ ಸ್ಟೇಟ್ ಫಾರೆಸ್ಟಿನಲ್ಲಿ ಪ್ರವೇಶ ವೂಡಕೂಡದು.

12. ಹರಾಜು ದರಖಾಸ್ತುದಾರನು ತನ್ನ ಕಂಟ್ರಾಕ್ಟು ಷರತ್ತುಗಳಿಗೆ ಬದ್ಧನಾಗಿರಲು ಖಾತರೀ ಬಗ್ಗೆ 50 ರೂಪಾಯಿಗಳನ್ನು ನಗದಾಗಿ ಠೇವಣಿ ಇಡಬೇಕು. ಷರತ್ತುಗಳ ಪೈಕಿ ಯಾವ ಭಾಗದಲ್ಲಿಯಾದರೂ ವಿರೋಧವಾಗಿ ನಡದದ್ದೇ ಆದರೆ ಖಾತರೀ ಒಗ್ಗೆ ಠೇವಣಿ ಇಟ್ಟ ವೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ರೂಢಿಸಿಕೊಳ್ಳುವ ಹಕ್ಕು ಸಹ ರದ್ದು ಪಡಿಸಲಾಗುತ್ತೆ.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಚಂಗಳೂರು ಡಿಸ್ಟ್ರಿಕ್ಟ್.

ನೋಟಿಸು.

ತಾರೀಖು 25—5ನೆ ವೇ 1904ನೆ ಇಸವಿ.

1904ನೆ ಇಸವಿ ಜೂ೯ 2ನೆ ತಾರೀಖು 22ನೆ ನಂಬರ್ ವೈಸೂರ ಗಜೆಟ್ಟಿನ 2ನೆ ಭಾಗದ 325ನೆ ಪೇಜಿನಲ್ಲಿ ಛಾಯಿಷು ವೂಡಿರುವ ವೈಸೂರು ಡಿಸ್ಟ್ರಿಕ್ಟು ಡಿಪೋಗಳಲ್ಲಿ ವೂಡಲ್ಪಡುವ ಚವುಬಿನಾ ಹರಾಜು ವಿಷಯದ ನೋಟಿಸನ್ನು ಸವುಸ್ತ ಜನಗಳೂ ನೋಡತಕ್ಕದ್ದು.

ತಾರೀಖು 31ನೆ ವೇ 1904ನೆ ಇಸವಿ.

ವೈಸೂರು ಡಿಸ್ಟ್ರಿಕ್ಟಿನ ಹುಣಸೂರು ಕೋಠಿಯಲ್ಲಿರುವ ಪಸಾರೆ ಜಿನಸಿ ಕೊಂಡುಕೊಳ್ಳಲು ಟೆಂಡರುಗಳನ್ನು ಅಪೇಕ್ಷಿಸಿರುವ ವಿಷಯದಲ್ಲಿ 26—5—04ನೆ ವುರ್ತುಂ 21ನೆ ನಂಬರು ವೈಸೂರು ಗೆಜೆಟ್ಟಿನ 2ನೆ ಭಾಗದ 308ನೆ ಪುಟದಲ್ಲಿ ಛಾಯಿಷು ವೂಡಿರುವ $\frac{19}{21}$—5—1904ನೆ ವುರ್ತುಂ ನೋಟಿಫಿಕೇಷನನ್ನು ನೋಡಿ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ವೈಸೂರು ಡಿಸ್ಟ್ರಿಕ್ಟ್.

ಹಾಸನ ಡಿಸ್ಟ್ರಿಕ್ಟ್ ಅರಸೀಕೆರೆ ಡೆಪೋದಲ್ಲಿ ಕೆಲವು ಘಸಾರೇ ಜಿನಸು ಹರಾಜಾಗತಕ್ಕ ವಿಚಾರ 22ನೆ ನಂಬರ್ ಮೈಸೂರು ಗೆಜೆಟ್ 2-6-04ನೆ ಮುಕ್ತಂ 325ನೆ ಪೇಜ್‌ನಲ್ಲಿ ಫಾಯಿಷ್ ಮಾಡಿರುವ ವಿಷಯ ಎಲ್ಲಾ ಜನಗಳಿ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸಿದೆ.

ವೈ. ಸೀತಾರಾಮಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಹಾಸನ ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟ್.

ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮಾಗಡಿ ತಾಲ್ಲೂಕು ಗುಡೇಮಾರ್ನಹಳ್ಳಿ ಹೋಬಳಿ ಜೋಡಿ ಮುಮ್ಮನಹಳ್ಳಿ ಗ್ರಾಮವು ಸ೯ 1904ನೆ ಇಸವಿ ಜುಲೈ 11ನೆ ತಾರೀಖುನಲ್ಲಿ ಮಾಗಡಿ ತಾಲ್ಲೂಕು ಕಚೇರಿ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂ೯ ತಿಂಗಳು 2ನೆ ತಾರೀಖು 22ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 326ನೆ ಪುಟದಲ್ಲಿ ಫಾಯಿಷ್ ಆಗಿ ಇದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಮಾಗಡಿ ತಾಲ್ಲೂಕು ಗುಡೇಮಾರ್ನಹಳ್ಳಿ ಹೋಬಳಿ ಜೋಡಿ ಬೊಮ್ಮನಹಳ್ಳಿ ಗ್ರಾಮವು ಸ೯ 1904ನೆ ಇಸವಿ ಜುಲೈ 9ನೆ ತಾರೀಖುನಲ್ಲಿ ಮಾಗಡಿ ತಾಲ್ಲೂಕು ಕಚ್ಚೇರಿಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂ೯ ತಿಂಗಳು 2ನೆ ತಾರೀಖು 22ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 327ನೆ ಪುಟದಲ್ಲಿ ಫಾಯಿಷ್ ಆಗಿ ಇದೆ.

ಸ೯ 1904ನೆ ಇಸವಿ ತಾರೀಖು.

ರಾವುಸ್ವಾಮುದ್ಯಾನಿಂದ ಸ೯ 1903--04ನೆ ಸಾಲಿನ ಕಂದಾಯ ಬಾಕಿ ಬಗ್ಗೆ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಮಾಳಿಗೊಂಡಹಳ್ಳಿ ಎಂಬ ಕಾಯಂಗುತ್ತಾ ಪುರಾಗ್ರಾಮವನ್ನು ಬೆಂಗಳೂರು ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರ ವರ ರೂಬರೂಬ್ 1904ನೆ ಇಸವಿ ಜುಲೈ ತಾರೀಖು 11ನೆ ಸೋಮವಾರದ ದಿವಸ ದಿವಿ 11 ಘೆಂಟೆಗೆ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವುದು.

ತಪಶೀಲ್ 1904ನೆ ಜೂ೯ 2ನೆ ಮುಕ್ತಂ 22ನೆ ನಂಬರ್ ಮೈಸೂರು ಗೆಜೆಟ್ II ನೆ ಭಾಗದ 329ನೆ ಪುಟದಲ್ಲಿ ಫಾಯಿಷ್ ಆಗಿರುತ್ತೆ.

ಸ೯ 1904ನೆ ಇಸವಿ ತಾರೀಖು.

ರಾಮಚಂದ್ರರಾಯರಿಂದ ಸ೯ 1903—04ನೆ ಸಾಲಿನ ಕಂದಾಯ ಬಾಕಿ ಬಗ್ಗೆ ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ವಸಂತಪುರವೆಂಬ ಜೋಡಿ ಪೂರಾ ಗ್ರಾಮವನ್ನು ಬೆಂಗಳೂರು ತಾಲ್ಲೂಕು ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರ ರೂಬರೂಬ್ 1904ನೆ ಇಸವಿ ಜುಲೈ ತಾರೀಖು 9ನೆ ಶನಿವಾರದ ದಿವಸ ದಿವಿ 11 ಘೆಂಟೆಗೆ ಬೆಂಗಳೂರು ತಾಲ್ಲೂಕು ಕಛೇರಿಯಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವದು.

ತಪಶೀಲ್ 1904ನೆ ಜೂ೯ 2ನೆ ಮುಕ್ತಮಿನ 22ನೆ ನಂಬರ್ ಮೈಸೂರು ಗೆಜೆಟ್ II ನೆ ಭಾಗದ 328ನೆ ಪುಟದಲ್ಲಿ ಫಾಯಿಷ್ ಆಗಿರುತ್ತೆ.

ಡಿ. ದೇವರಾಜೆ ಅರಸ್,
ಡೆಪ್ಯುಟಿ ಕಮಿಷನರ್.

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೆ.

ತಾರೀಖು 19ನೆ ಮೇ 1904ನೆ ಇಸವಿ.

ಬವರಿಂಗ್‌ಪೇಟೆ ತಾಲ್ಲೂಕು ಬೇತಮಂಗಲದ ಹೋಬಳಿಗೆ ಸೇರಿದ ಜೋಡಿ ತಿಪ್ಪಾಬೋಯಿನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕೀಗೋಸ್ಕರವಾಗಿ, ತಾಲ್ಲೂಕು ಅಮಲ್‌ದಾರ್ರ ಕಛೇರಿಯಲ್ಲಿ, 1904ನೆ ಇಸವಿ ಜುಲೈ ಮಾಹೆ 20ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

(ಹೆಚ್ಚು ತಪಶೀಲ್ ಬಗ್ಗೆ 1904ನೆ ಜೂ೯ 2ನೆ ಮುಕ್ತಂ 22ನೆ ನಂಬರ್ ಮೈಸೂರ ಗೆಜೆಟ್ಟಿನ 2ನೆ ಭಾಗದ 333ನೆ ನಂಬರ್ ಪೇಜು ನೋಡತಕ್ಕದ್ದು.

ಕೆ. ಪಿ. ಪುಟ್ಟಣ್ಣ ಚೆಟ್ಟಿ,
ಡೆಪ್ಯುಟಿ ಕಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 11ನೆ ಜೂ 1904.

ಚಾಮರಾಜನಗರ ತಾಲ್ಲೂಕಿಗೆ ಕೇರಿದ ಇನಾಂ ಸೋಮಸಮುದ್ರದ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ ಚಾಮರಾಜನಗರ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1904ನೆ ಜುಲೈ 16ನೆ ತಾರೀಖಿನಲ್ಲಿ ಬಹಿರಂಗವಾಗಿ ಹರಾಜ್ ಮಾಡ ಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ ಬಗ್ಯೆ 2—6—1904ನೆ ಮುಕ್ತಂ 22ನೆ ನಂಬರು ಗೆಜೆಟ್ಟಿನ 2ನೆ ಭಾಗದ 334ನೆ ನಂಬರು ಪೇಜು ನೋಡತಕ್ಕದ್ದು.

ತಾರೀಖು 11ನೆ ಜೂ 1904.

ಹುಣಸೂರು ತಾಲ್ಲೂಕಿಗೆ ಕೇರಿದ ಖಾಯಂಗುತ್ತಾ ವಡೇರ ಜೊನಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರ ವಾಗಿ ಹುಣಸೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1904ನೆ ಜುಲೈ 13ನೆ ತಾರೀಖಿನಲ್ಲು ಬಹಿರಂಗವಾಗಿ ಹರಾಜ್ ಮಾ ಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ ಬಗ್ಯೆ 2—6—1904ನೆ ಮುಕ್ತಂ 22ನೆ ನಂಬರ್ ಗೆಜೆಟ್ಟಿನ 2ನೆ ಭಾಗದ 335ನೆ ನಂಬರು ಪೇಜು ನೋಡತಕ್ಕದ್ದು.

ತಾರೀಖು 11ನೆ ಜೂ 1904.

ನಾಗಮಂಗಲ ತಾಲ್ಲೂಕಿಗೆ ಕೇರಿದ ಜೋಡಿ ದೊಡ್ಡಗಟ್ಟ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಜೋಡಿ ಬಾಕಿಗೋಸ್ಕರವಾಗಿ ನಾಗಮಂಗಲ ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1904ನೆ ಜುಲೈ ಮಾಹೆ 11ನೆ ತಾರೀಖಿನಲ್ಲು ಬಹಿರಂಗವಾಗಿ ಹರಾಜ್ ಮಾಡಲ್ಪಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ ಬಗ್ಯೆ 2—6—1904ನೆ ಮುಕ್ತಂ 22ನೆ ನಂಬರ್ ಗೆಜೆಟ್ಟಿನ 2ನೆ ಭಾಗದ 336ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 11ನೆ ಜೂ 1904.

ಹುಣಸೂರು ತಾಲ್ಲೂಕಿಗೆ ಕೇರಿದ ಜೋಡಿ ಅಲನಹಳ್ಳಿ ಗ್ರಾಮವು ಸರಕಾರಕ್ಕೆ ಬರಬೇಕಾದ ಜೋಡಿ ಬಾಕಿ ಗೋಸ್ಕರ ಹುಣಸೂರು ತಾಲ್ಲೂಕು ಅಮಲ್ದಾರ್ರವರ ಕಛೇರಿಯಲ್ಲಿ 1904ನೆ ಜುಲೈ 13ನೆ ತಾರೀಖಿನಲ್ಲು ಬಹಿರಂಗವಾಗಿ ಹರಾಜು ಮಾಡಲ್ಪ ಡುತ್ತದೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹೆಚ್ಚು ತಪಸೀಲ ಬಗ್ಯೆ 2—6—1904ನೆ ಮುಕ್ತಂ 22ನೆ ನಂಬರ್ ಗೆಜೆಟ್ಟಿನ 2ನೆ ಭಾಗದ 337ನೆ ನಂಬರ್ ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಡೆಪ್ಯುಟಿ ಕಮ್ಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 7ನೆ ಜೂ 1904.

1. ಕಂದಾಯದ ಬಾಕೀದಾರರಾದ ಹೆಗಲತ್ತಿ ಗ್ರಾಮದ ಸಾ|| ರಂಗಪ್ಪ ಬಾ|| ಗೋಪಾಲರಾವ್ ಇವರಿಂದ ಏರಬೇಕಾದ ಜಮ್ಮಾ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಶಿವಮೊಗ್ಗಾ ಡಿಸ್ಟ್ರಿಕ್ಟು ಆಫೀಸಿನಲ್ಲಿ ಡೆಪ್ಯುಟಿ ಕಮಿಷನರವರಿಂದ 1904ನೆ ಆಗಸ್ಟು 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧ ಪಡಿಸಲ್ಪಟ್ಟಿದೆ.

ಹರಾಜು ಆ ದಿವಸ ಹಗಲು 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ವಿಕ್ರಯ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸ ಲ್ಪಡುತ್ತೆ.

ಇದರಿಂದ ಎಲ್ಲರಿಗೂ ತಿಳಿಯಪಡಿಸುವದೇನಂದರೆ :— ತುಮಕೂರು ಡಿಸ್ಟ್ರಿಕ್ಟಿನ ಈ ಇರೇಬಿನಲ್ಲಿ ಕಂಡ ತಾಲ್ಲೂಕುಗಳ

1. ತುಮಕೂರು.
2. ತಿಪಟೂರು. ತುರ್ವೆಕೆರೆ ಸಬ್ ತಾಲ್ಲೂಕು ಶೇರಿ.
3. ಕುಣಿಗಲ್.
4. ಪಾವಗಡ.
5. ಸಿರಾ.
6. ಚಿಕ್ಕನಾಯಿಕನಹಳ್ಳಿ.
7. ಗುಬ್ಬಿ

ಸ್ಪೇಟ್ ಫಾರೆಸ್ಟ್ಟುಗಳು ಮತ್ತು ಪ್ಲಾಂಟೇಷನ್‌ಗಳಲ್ಲಿಯೂ ಮತ್ತು ಡಿಸ್ಟ್ರಿಕ್ಟ್ ಫಾರೆಸ್ಟ್ಟುಗಳಲ್ಲಿಯೂ, ಸರ್ಕಾರಿ ಅವ್ಯಾತಪಮಹಲ್ ಕಾವಲುಗಳೂ ಸೇರಿ ಸರ್ಕಾರಿ ವ್ಯವಸ್ಥೆಗೆ ವಳಪಟ್ಟ ಜವಿುನುಗಳಲ್ಲಿಯೂ, ಇರುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1904ನೆ ಇಸವಿ ಜುಲೈ ಗುರ್ರೆ ಲಾಗಾಯತು 1906ನೆ ಜೂನ್ 30)ನೆ ತಾರೀಖಿನ ವರಿಗೆ ಕಡದು ಸಾಗಿಸಿಕೊಳ್ಳುವ ಹಕ್ಕುದಾರಿಯು 1904ನೆ ಜುಲೈ 15ನೆ ತಾರೀಖಿನಲ್ಲಿ ತುಮಕೂರು ವೊಕ್ಕಾಂನಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಸಾಹೇಬರವರಿಂದಲಾಗಲಿ ಅಥವಾ ಡೆಪ್ಯುಟಿ ಕವಿುಷನರ್ ಸಾಹೇಬರವರಿಂದ ನೇವಿುಸಲ್ಪಟ್ಟ ಇತರ ಆಫಿಸರಿಂದ ಲಾಗಲಿ ಒಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಷರಾ :—ಸ್ಪೇಟ್ ಫಾರೆಸ್ಟ್ಟುಗಳು ಪ್ಲಾಂಟೇಷನ್‌ಗಳ ವೇಖೆಲ್ ಪ್ರತ್ಯೇಕವಾಗಿ ಹರಾಜು ಮಾಡಲ್ಪಡುತ್ತವೆ. ತಾಲ್ಲೂಕುಗಳ ಇತರ ಪ್ರದೇಶಗಳನ್ನು ಅವಶ್ಯವಿದ್ದರೆ ಸಮ್ಮತ್ತುವಾರು ಹರಾಜು ಮಾಡಲ್ಪಡುವದು.

(2) ಮೇಲ್ಕಂಡ ತಾರೀಖು ಮಧ್ಯಾಹ್ನದಲ್ಲಿ ಹರಾಜು ಪ್ರಾರಂಭಿಸುತ್ತೆ. ಆ ದಿವಸ ಹರಾಜು ಆಖೈರು ಆಗದಿದ್ದರೆ ಎರಡನೆ ದಿವಸವೂ ಹರಾಜು ನಡಿಸುತ್ತೆ. ಹರಾಜು ಡೆಪ್ಯುಟಿ ಕವಿುಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟಿರತ್ತೆ.

(3) ಸವಾಲ್ ಮಾಡುವದಕ್ಕೆ ಉದ್ದೇಶ್ಯವುಳ್ಳವರು ಖುದ್ದಾಗಿ ಆಗಲೀ ಅಥವಾ ಕ್ರಮ ಪ್ರಕಾರ ಅಧಿಕಾರ ಪಡದ ಏಜಂಟರ ಮೂಲಕವಾಗಿಯೇ ಆಗಲೀ ಹರಾಜಿಗೆ ಬರತಕ್ಕದ್ದು. ಬಂದು ನೂರು ರೂಪಾಯಿಗಳು ಡಿಪಾಜಿಟ್ಟು ಇಟ್ಟುಹೊರ್ತು ಯಾವ ಮನುಷ್ಯನಿಗೂ ತನಗಾಗಿಯೇ ಆಗಲಿ ಅಥವಾ ಇತರರಿಗೋಸ್ಕರವಾಗಿಯೇ ಆಗಲಿ ಹರಾಜು ಕಾಲದಲ್ಲಿ ಸವಾಲು ಮಾಡಲು ಅಪ್ಪಣೆ ಕೊಡಲ್ಪಡುವದಿಲ್ಲ. ಪಡದರಖಾಸ್ತುದಾರನಲ್ಲದೆ ಬಾಕಿ ದರಖಾಸ್ತುದಾರ್ರುಗಳಿಂದ ಡಿಪಾಜಿಟ್ಟು ಮಾಡಲ್ಪಟ್ಟ ವೊಬಲಗು ಹರಾಜು ಪೂರೈಸಿದ ನಂತರ ಅವರುಗಳಿಗೆ ವಾಪಸು ಮಾಡಲ್ಪಡುತ್ತೆ.

(4) ಪಡದ ಸವಾಲ್‌ದಾರನು ತನ್ನ ಹೆಸರಿಗೆ ಹರಾಜು ಖೈದಾಗಿ ಡೆಪ್ಯುಟಿ ಕವಿುಷನರ ಸಾಹೇಬರವರಿಂದ ಮಂಜೂರಾದ ಕ್ಷಣವೇ ಹರಾಜು ಅರ್ಥ ವೊಬಲಗು ಇದಕ್ಕೆ ರೂಪಾಯಿ ಬಂದಕ್ಕೆ ಬಂದಾಣಿ ಲೋಕಲ್ ಸೆಸ್ ಸೇರಿಸಿ ಆಗುವ ಹಣವನ್ನು ಹಾಜರ್ಮಾಡಬೇಕು. ಮಿಕ್ಕರ್ಥವನ್ನು ಲೋಕಲ್ ಸೆಸ್ ಸಂಗಡ 1905ನೆ ಜುಲೈ ವೊದಲನೆ ವಾರದಲ್ಲಿಯೇ ಪಾವತಿ ಮಾಡಬೇಕು. ಆ ವೇರೆ ಮಿಕ್ಕ ಅರ್ಥ ವೊಬಲಗು ಪಾವತಿ ಮಾಡದೆ ತಪ್ಪಿದರೆ ಬಾಬು ರೂಢಿಸುವ ಹಕ್ಕುದಾರಿಯನ್ನು ರದ್ದುಮಾಡಿ ಬಾಬನ್ನು ಪುನಃ ಹರಾಜು ಮಾಡಿಸುತ್ತೆ.

(5) ಮೇಲ್ಕಂಡಂತೆ ನಡಿಸುವ ದುಸರೆ ಹರಾಜಿನ ನಷ್ಟಕ್ಕೆ ಅವಲ್ ಹರಾಜುದಾರನನ್ನು ಗುರಿಪಡಿಸುತ್ತೆ. ಲಾಭ ಏನಾದರೂ ಬಂದರೆ ಆತನಿಗೆ ಏನೂ ಅದಕ್ಕೆ ಹಕ್ಕು ಇರುವದಿಲ್ಲ. ಅವಲ್ ಹರಾಜು ವೊಬಲಗೂ ದುಸರೆ ಹರಾಜಿನ ವೊಬಲಗೂ ಮಧ್ಯೆ ಕವ್ಮಿ ಎಷ್ಟಾಗುತ್ತೋ ಅಷ್ಟು ವೊಬಲಗನ್ನು ಅವಲ್ ಹರಾಜುದಾರನಿಂದ ರವಿನ್ಯೂ ಕಂದಾಯದಂತೆ ವಸೂಲ್ ಮಾಡಲ್ಪಡಲಾದೀತು.

(6) ಪಡದ ಸವಾಲ್‌ದಾರನು ತನಿಗೆ ಬಾಬು ಸುಫರ್ದು ಆಗುವದಕ್ಕೆ ಮುಂಚೆ ಸರಿಯಾದ ಸ್ಟ್ಯಾಂಪು ಕಾಗದದಲ್ಲಿ ಈ ಕೆಳಗೆ ಕಾಣಿಸುವ ಷರತ್ತುಗಳ ವ್ಯಾರೆ ಅಗ್ರಿವೆಂಟು ಬರವುಕೊಡಬೇಕು.

ಷರತ್ತುಗಳು.

(1) ಬಂದು ವರುಷದ ಒಳಗಿನ ಗಿಡಗಳನ್ನು ಕಡಿಯುಕೂಡದು.

(2) ಆಗ್ಯೆ ಸಾಗಿಸಿಕೊಳ್ಳುವ ಚಕ್ಕೆ ಮೊತ್ತ ತಪಶೀಲು ತಿಳಿಸುವ ಲಿಖ್ಕಗಳನ್ನು ಇಡಬೇಕು. ಅಮಲ್ದಾರ್ರು ಯಾ ಇತರ ಆಫಿಸರು ಲಿಖ್ಕಗಳನ್ನು ತನಿಖೆ ಮಾಡುವದಕ್ಕೆ ಅವಕಾಶ ಕೊಡಬೇಕು.

(3) ಚಕ್ಕೆ ಸಾಗಿಸುವದಕ್ಕೆ ಫಾರೆಸ್ಟು ಇಲಾಖಾ ಮುಖೇಫತ್ತು ಡೆಪ್ಯುಟಿ ಕವಿಾಷನರ ಸಾಹೇಬರವರು ಯಾವ ರೀತಿ ವಿಧಿಸುತ್ತಾರೋ ಆ ರೀತಿ ಪ್ಯಾಸ್ ಪಡದು ಸಾಗಿಸಿಕೊಳ್ಳಬೇಕು.

(4) 1906ನೆ ಜೂ೯ ಆಖೈರ ಒಳಗಾಗಿ ಕಡದು, ಜವಾಬಿಸಿ, ದಾಸ್ತಾನಾಗಿ ಇಟ್ಟುಕ್ಕೊಂಡಿರುವ ಎಲ್ಲಾ ಚಕ್ಕೆಯನ್ನು ತಾಲ್ಲೂಕು ಯಾ ತಾಲ್ಲೂಕುಗಳ ಸರಹದ್ದು ಹೊರಕ್ಕೆ ಸಾಗಿಸಿಕೊಳ್ಳಬೇಕು.

(5) ಚಕ್ಕೆ ತೆಗದುಕೊಳ್ಳುವದಕ್ಕೆ ಹೊತ್ತು, ಗೊಬ್ಬರಕ್ಕೆ ಸೊಪ್ಪುಗೊಸ್ಕರವೇ ಆಗಲಿ, ಸೌದೆಗೆ ಆಗಲೀ ಅಥವಾ ಇತರ ಕೆಲಸಗಳಿಗಾಗಲೀ ಹಂಗಡಿ ಗಿಡಗಳನ್ನು ಕಡಿಯಕೂಡದು.

(6) ಬಾಬು ಷಿಕ್ಕಿ ಕಂಟ್ರಾಕ್ಟು ಕೊಡ್ಸುವ ವಿಷಯದಲ್ಲಿ ಡೆಪ್ಯುಟಿ ಕವಿಾಷನರ ಸಾಹೇಬರವರ ಅಪ್ಪಣೆ ಮುಂಚೆ ಪಡಿಯಬೇಕು.

(7) ಈ ಷರತ್ತುಗಳಲ್ಲಿ ಯಾವದಕ್ಕೆ ತಪ್ಪಿ ನಡದರೂ ಕಂಟ್ರಾಕ್ಟನ್ನು ರದ್ದು ಮಾಡುವದಲ್ಲದೆ ಅದುವರಿಗೆ ಹೊರಗೆ ರಫ್ತು ಮಾಡಿಕೊಳ್ಳದೆ ನಿಲ್ಲಿಸಿರುವ ವಿಸಪ್ಟ ಚಕ್ಕೆಯು ಸರ್ಕಾರಕ್ಕೆ ಸೇರಿಸಿಕೊಳ್ಳಲಾದೀತು.

N. B.—ಚಕ್ಕೆ ತೆಗದುಕ್ಕೊಂಡ ಮೇಲೆ ನಿಲ್ಲುವ ಖುಡ್ಡಿಗಳು ಹರಾಜುದಾರನದೇ ಆಗಿರುತ್ತವೆ.

ತಾರೀಖು 22ನೆ ಜೂ೯ ಮಾಹೆ 1904ನೆ ಇಸವಿ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಸ೯ 1904ನೆ ಇಸವಿ ಜುಲ್ಯೆ ಗುರ್ಯೆ ಲಾಗಾಯತು ಸ೯ 1905ನೆ ಇಸವಿ ಜೂ೯ ಮಾಹೆ 30ನೆ ತಾರೀಖು ವರಿಗೆ ಈರೇಬಿನಲ್ಲಿ ನಮೂದಿಸಿರುವ ಸ್ಟೇಟು ಫಾರೆಸ್ಟುಗಳ ವಿಸಹ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಹಿಡುವಳಿಯಲ್ಲಿ ಇಲ್ಲದ ಆಕಾರ ಕಂಡ ಸರಕಾರಿ ಬಂಜರಿ ಜಮೀನ್ಗಳಲ್ಲಿಯೂ ಸೌದೆಗೋಸ್ಕರ ರಿಜರ್ವ ಮಾಡಿರುವ ಸ್ಥಳಗಳಲ್ಲಿಯೂ ಮತ್ತು ಅವ್ಯತಮಹಲ್ ಕಾವಲ್ಗಳಲ್ಲಿಯೂ ದೊರೆಯುವ ಈ ಕೆಳಗೆ ನಮೂದು ಮಾಡಲ್ಪಟ್ಟ ಪಸಾರೆ ಜಿನಸಿಗಳನ್ನ ತುಮಕೂರು ಡಿಸ್ಟ್ರಿಕ್ಟು ಯಲ್ಲಾ ತಾಲ್ಲೂಕು ಮತ್ತು ಸಬ್ ತಾಲ್ಲೂಕುಗಳಲ್ಲಿ ಜವಾಬಿಸಿಕೊಳ್ಳುವ ಹಕ್ಕುದಾರಿಯನ್ನ ಆಯಾಯ ತಾಲ್ಲೂಕು ಅಮಲ್ದಾರ್ ರೂಬರೂ ಸಾಧ್ಯವಾದ ಸ್ಥಳಗಳಲ್ಲಿ ರೆವೆನ್ಯು ಆಫಿಸರುಗಳ ಸಹಾಯದೊಂದಿಗೆ ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ತಾರೀಖುಗಳಲ್ಲಿಯೂ ಮತ್ತು ಸ್ಥಳಗಳಲ್ಲಿಯೂ ಹರಾಜು ಮಾಡಲ್ಪಡುತ್ತೆ. ಹರಾಜು ಮಧ್ಯಾನ್ಹ 12 ಘಂಟೆಗೆ ಪುರು ಆಗುತ್ತೆ. ಈ ಹರಾಜು ತುಮಕೂರು ಡಿಸ್ಟ್ರಿಕ್ಟು ಡೆಪ್ಯುಟಿ ಕವಿಾಷನರ ಸಾಹೇಬರವರ ಮುಂಜೂರಾತಿಗೆ ಒಳಪಟ್ಟಿರುತ್ತೆ.

1. ದೇವರಾಯದುರ್ಗ.
2. ಮದ್ದಗಿರಿ.
3. ಕೋಳಿಕಲ್ಲು ಮತ್ತು ಚಿಕ್ಕಮದ್ದಗಿರಿ.
4. ಹುಲಿಯೂರುದುರ್ಗ.
5. ಕಂಪ್ಲಾಪುರ.
6. ಬುಕ್ಕಾಪಟ್ಣ.
7. ತೀರ್ಥರಾಂಪುರ
8. ಮಂಚಲದೊರೆ.

ನಂಬರು.	ತಾಲ್ಲೂಕು ಹೆಸರುಗಳು	ಹರಾಜು ತಾರೀಖು.	ಹರಾಜು ಆಗುವ ಸ್ಥಳ.	ಷರಾ.
1	ಪಾವಗಡ	20—7—1904	ಪಾವಗಡ	ಹರಾಜು ತಾಲ್ಲೂಕಾಗಲಿ ಅಥವಾ ಹೋಬಳಿಗಾಗಲಿ ಮಾಡಿದ್ದಲ್ಲಿ ಆಯಾ ಹರಾಜು ಆಗುವ ಸ್ಥಳಗಳಲ್ಲಿ ಹೊರಡಿಸಿರುವ ಪಸಾರೆ ಜಿನಸಿಗಳಿಗೆ ಮಾತ್ರ ಈ ಹರಾಜು ಅನ್ವಯಿಸುತ್ತೆ.
2	ಮದ್ದಗಿರಿ ಮತ್ತು ಕೊರಟಗೆರೆ ಸಬ್ ತಾಲ್ಲೂಕು	25—7—1904	ಮದ್ದಗಿರಿ	
3	ಶಿರಾ ತಾಲ್ಲೂಕು	28—7—1904	ಶಿರಾ	
4	ಚಿಕ್ಕನಾಯಿಕನಹಳ್ಳಿ ಮತ್ತು ಹುಳಿಯಾರ್	2—8—1904	ಚಿಕ್ಕನಾಯ್ಕನಹಳ್ಳಿ	
5	ತಿಪಟೂರು ಮತ್ತು ತುರ್ವೇಕೆರೆ ಸಬ್ ತಾಲ್ಲೂಕು	4—8—1904	ತಿಪಟೂರು	
6	ಗುಬ್ಬಿ ತಾಲ್ಲೂಕು	8—8—1904	ಗುಬ್ಬಿ	
7	ತುಮಕೂರು	10—8—1904	ತುಮಕೂರು	
8	ಕುಣಿಗಲು	15—8—1904	ಕುಣಿಗಲು	

ಪಸಾರೆ ಜಿನಸಿಗಳ ಹೆಸರುಗಳ ತಪಶೀಲು.—

2. (1) ಅಳಲಿಕಾಯಿ, (2) ತಾರಕಾಯಿ, (3) ಹೊಂಗೇಕಾಯಿ, (4) ಕಿಗ್ಗೆಕಾಯಿ, (5) ಹುಣಸೇಹಣ್ಣು, (6) ಬ್ಯಾಲದಹಣ್ಣು, (7) ಕೀತಾಫಲದಹಣ್ಣು, (8) ಗೇರುಬೀಜ, (9) ಪಚ್ಚಿಚಕ್ಕೆ, (10) ಸಾವಿಚಕ್ಕೆ, (11) ಮಡ್ಡಿಚಕ್ಕೆ, (12) ದೊಡ್ಡಲಗೆ, (13) ರಿಂಡಾದ ಗೋಂದು, (14) ಕಾಡು ಅರಸಿನ, (15) ಮರಡಿಪಟ್ಟು, (16) ಕಪಿಲಾರಂಗ, (17) ಕಲ್ಲುಬಾಳ್ಯ, (18) ಜೇನುತುಪ್ಪ, (19) ಮ್ಯಾಣ, (20) ತಗರಸಿಬೀಜ.

3. ಫಡ ದರಖಾಸ್ತುದಾರನು ಹರಾಜು ಖೈದಾದ ಕೂಡ್ಲೆ ಹರಾಜು ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನ ತೇವಣಿ ಕಟ್ಟತಕ್ಕದ್ದು. ಬಾಕಿ ಮೊಬಲಗು ಹರಾಜು ಮಂಜೂರ್ಮಾಡಲ್ಪಟ್ಟ ಸಂಗತಿ ಅಮಲ್ದಾರ್ರಿಂದ ಫಡ ಸವಾಲ್ದಾರರಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 15 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ಪೂರಾ ಹರಾಜು ಮೊಬಲಗಿಗೆ ರೂಪಾಯಿ ಬಂದಕ್ಕೆ 1 ಬಂದು ಆಣೆಯಂತೆ ಲೋಕಲ್ಸೆಸ್ ವಸೂಲು ಮಾಡಲ್ಪಡುವದು. ಮೇಲೆ ನಮೂದು ಮಾಡಿರುವಂತೆ ಫಡ ದರಖಾಸ್ತುದಾರನು ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡದಿದ್ದರೆ ಹಕ್ಕನ್ನು ಆ ಕೂಡ್ಲೆ ದುಸರಾ ಹರಾಜು ಮಾಡಿಸಿ ಲುಕ್ಸಾನಿಗೆ ಅವ್ವಲ್ ದರಖಾಸ್ತುದಾರನನ್ನು ಗುರಿಮಾಡಲ್ಪಡುವದು.

4. ಕ್ಲಿಪ್ತಕಾಲದವಳಗೆ ಹಣ ಪಾವತಿ ಮಾಡದೆ ತಪ್ಪಿದರೆ ದರಖಾಸ್ತುದಾರನು ತೇವಣಿ ಇಟ್ಟ ಮೊಬಲಗು ಸರಕಾರಕ್ಕೆ ಜೇರಿಸಿಕೊಳ್ಳಲ್ಪಡುವದಲ್ಲದೆ ಹರಾಜಿನಲ್ಲಿ ಪಡದ ಹಕ್ಕನ್ನು ಅವ್ವಲ್ ಸವಾಲ್ದಾರನ ಲುಕ್ಸಾನಿಗೆ ವಳಪಡಿಸಿ ದುಸರಾ ಹರಾಜು ಮಾಡಲ್ಪಡುವದು. ಆದರೆ ದುಸರೆ ಹರಾಜಿನಲ್ಲಿ ವುಂಟಾಗುವ ಫಾಯಿದೆಗೆ ಅವ್ವಲ್ ಫಡ ದರಖಾಸ್ತುದಾರನು ಅರ್ಹನಾಗುವದಿಲ್ಲಾ.

5. ಇಜಾರೆದಾರನು ಹಿಡುವಳಿ ಜಮೀನ್ಗಳಲ್ಲಿಯೂ ಮತ್ತು ತೋಪುಗಳಲ್ಲಿಯೂ ಇರುವ ಮರಗಳ ಅವುರಾಯಿ ಫಸಲನ್ನ ರೂಢಿಸಕೂಡದು.

6. ಗ್ಯಾವು ಅವುರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಪಸಾರೆ ಜಿನಸಿಗಳಲ್ಲಿ ಜೇರಿ ಇರುವದಿಲ್ಲ.

ಬಿ. ಹೀರಾಸಿಂಗ್,
ಫಾರ್ ಡೆಪ್ಯುಟಿ ಕವಿಾಷನರ್, ತುಮಕೂರು ಡಿಸ್ಟ್ರಿಕ್ಟು.

79

1049

ಇಸ್ತಿಹಾರ್‌ನಾಮೆ.

ತಾರೀಖು 19ನೆ ಜೂ 1904.

1900ನೆ ಇಸವಿಯ XIನೆ ನಂ. ಮೈಸೂರು ಕೇಮಾಯ್ಕೆ ಪ್ರಕಾರಸ್ಯ ರೆಗ್ಯುಲೇಷ 18ನೆ ಸೆಕ್ಷನ್ನಿನ ವಿಧಿಗಳನುಸರಿಸಿ ಈ ಇಸ್ತಿಹಾರ್‌ನಾಮೆಗೆ ಜಂಟಿಸಿರುವ ಪೆಡ್ಯೂಲಿನಲ್ಲಿ ನವಮೂಡಿಸಿರುವ ಭಕ್ಕ್ತು ಬಂದಿಯುಳ್ಳ ಪ್ರದೇಶವು 1904ನೆ ಇಪೆಲ್ಲು ಗುರ್ರ್ ಲಾಗಾಯಿತು ಸದರಿ ಇಸ್ತಿಹಾರಿನ ಅಡೀಲಿ ವಿಧಿಸಿರುವ ಹಕ್ಕುಗಳ ಚಲಾವಣೆಗೆ ಬಿಟ್ಟಪಟ್ಟು ಸ್ಪೇಟ್ ಫಾರೆಸ್ಟ್ಸಾಗಿರತಕ್ಕದ್ದೆಂದು ಘೋಷಿಸಲಾಗಿದೆ.

ಪೆಡ್ಯೂಲ್.

ತಿಪ್ಪುಗಾರು.	ಕಾಮಗಾರಿ ಹೊರಿಸಿಗಾರನು.	ಸುಪಾರು ವಿಸ್ತೀರ್ಣ.	ಜಾಗೀರ್ ಹೆಸರು.	ಭಕ್ಕ್ತು ಬಂದಿ.
ಚಿತ್ರದುರ್ಗ.	ಜಗಳೂರು.	21 ಚದರ ಮೈಲಿಗಳು.	ರಂಗಯ್ಯನದುರ್ಗ ಪೈಸಿ (೨).	ಉತ್ತರಕ್ಕೆ.—ಬಸವನಕೋಟೆಯ ಸರ್ವೆ ನಂ. 197ರ ನೈರುತ್ಯ ಮೂಲೆಯಿಂದ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೊರಟು, ಲೈನು ಅದೇ ನಂಬರಿನ ದಕ್ಷಿಣ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೋಗುತ್ತ ಆಗಸನಹಳ್ಳಿ ಸರ್ವೆ ನಂ. 3ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 3 ವ 2ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಮತ್ತು ಅದೇ ಗ್ರಾಮದ ಸರ್ವೆ ನಂ. 1ರ ಆಗ್ನೇಯ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 37ರ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ, ಸರ್ವೆ ನಂ. 37 ವ 35ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಮಾಗಡಿ ಸರ್ವೆ ನಂ. 8ರ ವಾಯವ್ಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ಮಾಗಡಿಯ ಸರ್ವೆ ನಂ. 8, 64, 63, 62 ವ 72ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖ್ಯೈರ ಸರ್ವೆ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ಬಳಿಕ, ಆ ಗ್ರಾಮದ ಸರ್ವೆ ನಂ. 72, 61, 54, ವ 52ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಗುರುಸಿದ್ದಾಪುರದ ಸರ್ವೆ ನಂ. 123ರ ವಾಯವ್ಯ ಮೂಲೆಗೆ ಹೋಗುತ್ತದೆ. ಅನಂತರ, ಆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ, ಜಾಡನಕಟ್ಟೆಯ ಸರ್ವೆ ನಂ. 23ರ ಈಶಾನ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಜಾಡನಕಟ್ಟೆಯ ಸರ್ವೆ ನಂ. 23 ವ 22ರ ಉತ್ತರ ಪಾರ್ಶ್ವಗಳ ಉದ್ದಕ್ಕೂ, ಮತ್ತು ಎರಡನೆ ನಂಬರಿನ ಪುತ್ತು ಅದೇ ಗ್ರಾಮದ ಸರ್ವೆ ನಂ. 21, 27, 1, 3 ವ 4ರ ವಾಯವ್ಯ ಪಾರ್ಶ್ವಗಳ ಉದ್ದಕ್ಕೂ, ಸರ್ವೆ ನಂ. 5ರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ ಅದೇ ಸರ್ವೆ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಬಸವನಕೋಟೆಯ ಸರ್ವೆ ನಂ. 114ರ ಈಶಾನ್ಯ ಮೂಲೆಗೆ ಹೋಗುತ್ತದೆ. ಬಳಿಕ ಸರ್ವೆ ನಂ. 115ರ ಉತ್ತರ ಪಾರ್ಶ್ವದ ಉದ್ದಕ್ಕೂ, ಅದೇ ಗ್ರಾಮದ ಸರ್ವೆ ನಂ. 120ರ ಆಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಬಸವನಕೋಟೆಯ ಸರ್ವೆ ನಂ. 120 ಮತ್ತು 148, ಇವುಗಳ ಉತ್ತರ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ, ಸರ್ವೆ ನಂ. 149ರ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ, ಸರ್ವೆ ನಂ. 149, ವ 153ನ ಉತ್ತರ ಪಾರ್ಶ್ವಗಳ ಉದ್ದಕ್ಕೂ, ಮತ್ತು ಸರ್ವೆ ನಂ. 154ರ ಪೂರ್ವಪಾರ್ಶ್ವದ ಉದ್ದಕ್ಕೂ, ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 154, 158, 157 ವ 156 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಮತ್ತು ಸರ್ವೆ ನಂ. 156ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 194ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಬಸವನಕೋಟೆಯ ಸರ್ವೆ ನಂ. 194ರ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

ಷರಾ.—(A). ಹಾದಿಯ ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ.

(1). ಯಾವಾಗಲೂ, ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ, ಬಸವನಕೋಟೆಯಿಂದ ಅಗಸನಹಳ್ಳಿಗೆ ಹೋಗುವ, 12 ಅಡಿ ಅಗಲವೂ, 3 ಫರ್ಲಾಂಗ್ ದೂರವೂ ವುಳ್ಳ ಭಂಡಿ ಜಾಡು. ಇದು ಫಾರೆಸ್ಟನ್ನು ಬಸವನಕೋಟೆಯ ಸರ್ವೆ ನಂ. 194ರ ಉತ್ತರ ಅಂಚಿನ ಮಧ್ಯಸ್ಥಳದಲ್ಲಿ ಪ್ರವೇಶಿಸಿ, ಈಶಾನ್ಯಾಭಿಮುಖವಾಗಿ, ಅದೇ ಗ್ರಾಮದ ಸರ್ವೆ ನಂ. 195ರ ಮಧ್ಯೆ ಹೋಗಿ, ಆ ಗ್ರಾಮದ ಸರ್ವೆ ನಂ. 197ರ ಆಗ್ನೇಯ ಮೂಲೆಯಿಂದ, ಒಂದು ಫರ್ಲಾಂಗ್ ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(2) ವರ್ಷವೆಲ್ಲಾ, ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ, ಅಗಸನಹಳ್ಳಿಯಿಂದ ಗುರುಶಿದ್ದಾಪುರಕ್ಕೆ ಹೋಗುವ 12 ಅಡಿ ಅಗಲವೂ, 4 ಫರ್ಲಾಂಗ್ ದೂರವೂ ವುಳ್ಳ ಭಂಡಿ ಜಾಡು. ಇದು ಫಾರೆಸ್ಟನ್ನು ಅಗಸನಹಳ್ಳಿಯ ಸರ್ವೆ ನಂ. 37ರ ವಾಯವ್ಯ ಮೂಲೆಯಿಂದ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಪ್ರವೇಶಿಸಿ, ಆಗ್ನೇಯಾಭಿಮುಖವಾಗಿ, ಆ ಗ್ರಾಮದ ಸರ್ವೆ ನಂ. 36ರ ಉದ್ದಕ್ಕೂ ಹೋಗಿ, ಮಾಗಡಿಯ ಸರ್ವೆ ನಂ. 8ರ ಪಶ್ಚಿಮ ಅಂಚಿನ ಮಧ್ಯಸ್ಥಳದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(3) ವರ್ಷವೆಲ್ಲಾ, ಜನಗಳ, ಜಾನುವಾರುಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ, ಬಸವನಕೋಟೆಯಿಂದ ಮಾಗಡಿಗೆ ಹೋಗುವ 12 ಅಡಿ ಅಗಲವೂ, 6 ಫರ್ಲಾಂಗ್ ದೂರವೂ ವುಳ್ಳ ಭಂಡಿ ಜಾಡು. ಇದು ಫಾರೆಸ್ಟನ್ನು ಬಸವನಕೋಟೆಯ ಸರ್ವೆ ನಂ. 120ರ ಉತ್ತರ ಮೂಲೆಯಲ್ಲಿ ಪ್ರವೇಶಿಸಿ, ನೆಟ್ಟಗೆ ಪೂರ್ವಾಭಿಮುಖವಾಗಿ, ಅದೇ ಗ್ರಾಮದ ಸರ್ವೆ ನಂ. 196 ವ 118 ಇವುಗಳ ಮಧ್ಯೆ ಹೋಗಿ, ಮಾಗಡಿಯ ಸರ್ವೆ ನಂ. 62ರ ವಾಯವ್ಯ ಮೂಲೆಯಿಂದ ಸುಮಾರು ಅರ್ಧ ಫರ್ಲಾಂಗ್ ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(B) ಈ ಕೆಳಗೆ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿವೆ. ಈ ಕೆಳಗೆ ನಮೂದಿಸಿರುವ ಜಮೀನಿನ ಪಟ್ಟ ಹಕ್ಕು ಕೊಡಲ್ಪಟ್ಟಿದೆ. ಇದು ಫಾರೆಸ್ಟ್ ಸರಹದ್ದಿನಿಂದ ಪ್ರತ್ಯೇಕಿಸಲ್ಪಟ್ಟು ಒಂದು ಆವರ್ಣವಾಗೆಣಿಸಲ್ಪಟ್ಟಿದೆ.

ಗ್ರಾಮ.	ಸರ್ವೆ ನಂ.	ವಿಸ್ತೀರ್ಣ.		ಷರಾ.
		ಎ.	ಗುಂಟೆ.	
ಬಸವನಕೋಟೆ ...	119	4	34	ಬಸವನಕೋಟೆ ಸರ್ವೆ ನಂ. 118ರ ಉತ್ತರಭಾಗದ ಮಧ್ಯಸ್ಥಳದಲ್ಲಿ, ಬಸವನಕೋಟೆಯಿಂದ ಮಾಗಡಿಗೆ ಹೋಗುವ ಭಂಡಿ ಜಾಡಿನಿಂದ ದಕ್ಷಿಣ ದಿಕ್ಕಿಗೆ ವಡಿಯುವ 6 ಅಡಿ ಅಗಲವೂ, 2 ಫರ್ಲಾಂಗು ಉದ್ದವೂ ವುಳ್ಳ ಕಾಲು ಹಾದಿಯಲ್ಲಿ, ಜನಗಳು ಮತ್ತು ವ್ಯವಸಾಯದಲ್ಲಿ ಉಪಯೋಗಿಸುವ ದನಗಳು ತಿರುಗಾಡಬಹುದು.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ಪ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಜಗಳೂರು.	6 ಚದರ ಮೈಲಿಗಳು.	ರಂಗಯ್ಯನ ದುರ್ಗ ಬ್ಲಾಕ್ ಬಿ	ಉತ್ತರಕ್ಕೆ.—ಮಾಗಡಿಯ ಸರ್ವೆ ನಂ. 45ರ ಆಗ್ನೇಯ ಮೂಲೆಯಿಂದ ಹೊರಟು, ಲೈನು ಬಳ್ಳಾರಿ ಜಿಲ್ಲೆಗೆ ಶೇರಿದ ಕೂಡ್ಳಿಗಿ ತಾಲ್ಲೂಕಿನಲ್ಲಿರುವ ಹನುಮನಹಳ್ಳಿ ಮತ್ತು ತೂಳಹಳ್ಳಿ, ಇವುಗಳ ದಕ್ಷಿಣ ಸರಹದ್ದುಗಳ ಉದ್ದಕ್ಕೂ ಸೊಕ್ಕೆ ಸರ್ವೆ ನಂ. 149ರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸೊಕ್ಕೆಯ ಸರ್ವೆ ನಂ. 149, 154, 155 ವ 145 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಕಾಟೇನಹಳ್ಳಿಯ ಸರ್ವೆ ನಂ. 3ರ ವಾಯವ್ಯ ಮೂಲೆಗೆ ಹೋಗುತ್ತದೆ. ಅನಂತರ, ಸರ್ವೆ ನಂ. 3ರ ಪಶ್ಚಿಮ ಪಾರ್ಶ್ವದ ಮತ್ತು ಸರ್ವೆ ನಂ. 3 ವ 7ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೆ ನಂಬರಿನ ಮಧ್ಯಸ್ಥಳಕ್ಕೆ ಹೋಗುತ್ತದೆ. ಪೂರ್ವಕ್ಕೆ.—ಆಮೇಲೆ ದಕ್ಷಿಣಾಭಿಮುಖವಾಗಿ, ಸರ್ವೆ ನಂ. 4ರ ಮಧ್ಯೆ $1\frac{1}{2}$ ಫರ್ಲಾಂಗ್ ದೂರ, ತಳವಾರ ಕರಿಯಪ್ಪನಹಳ್ಳಿಯ ಸರ್ವೆ ನಂ. 4ರ ವಾಯವ್ಯ ಮೂಲೆಗೆ ಹೋಗುತ್ತದೆ. ಅನಂತರ ಅದೇ ಸರ್ವೆ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 2ರ ಈಶಾನ್ಯ ಮೂಲೆಗೆ ಹೋಗುತ್ತದೆ.

1051

ಪೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕು ಬಂದಿ.
ಚಿತ್ರದುರ್ಗ.	ಜಗಳೂರು.	6 ಚದರ ಮೈಲಿಗಳು.	ರಂಗಯ್ಯನದುರ್ಗ ಬ್ಲಾಕ್ ಬಿ.	ದಕ್ಷಿಣಕ್ಕೆ.—ಬಳಿಕ, ತಳವಾರ ಕರಿಯಪ್ಪನ ಹಳ್ಳಿಯ ಸರ್ವೆ ನಂ. 2ರ ಉತ್ತರ ಮತ್ತು ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಮಲಮಾಚೀಕೆರೆ ಸರ್ವೆ ನಂ. 31ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ಗ್ರಾಮದ ಸರ್ವೆ ನಂ. 31, 30 ವ 25 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ, ಸರ್ವೆ ನಂ. 28ರ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ ಅದೇ ಸರ್ವೆ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ, ಮಲಮಾಚೀಕೆರೆಯ ಸರ್ವೆ ನಂ. 28 ವ 40 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ, ಎರಡನೆ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ. ಇಲ್ಲಿ ಗೌಡಿಕಟ್ಟೆಯ ಸರ್ವೆ ನಂ. 27ನ್ನು ಅದರ ಪೂರ್ವಭಾಗದಲ್ಲಿ ಮಧ್ಯ ಸ್ಥಳದಲ್ಲಿ ಶೇರುತ್ತದೆ. ಪಶ್ಚಿಮಕ್ಕೆ.— ಆಮೇಲೆ ಗೌಡಿಕಟ್ಟೆಯ ಸರ್ವೆ ನಂ. 27, 24, 23, 13, 12ವ 11 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಅನಂತರ, ಗೌಡಿಕಟ್ಟೆಯ ಸರ್ವೆ ನಂ. 11, ಮತ್ತು ಗುರುಶಿದ್ದಾಪುರದ ಸರ್ವೆ ನಂ. 65, 64, 66, 67, 68, 69, 70, 72, 73, 74, 49, 48 ವ 47 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ. ಬಳಿಕ ಉತ್ತರಾಭಿಮುಖವಾಗಿ, ಅದೇ ಗ್ರಾಮದ ಸರ್ವೆ ನಂ. 77ರ ಮಧ್ಯೆ 5 ಫರ್ಲಾಂಗುಗಳ ದೂರ ಸರ್ವೆ ನಂ. 78ರ ಪೂರ್ವ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 78ರ ಈಶಾನ್ಯ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 81ರ ಆಗ್ನೇಯ ಮೂಲೆಗೆ ಹೋಗುತ್ತದೆ. ಅನಂತರ, ಸರ್ವೆ ನಂ. 81ರ ಪೂರ್ವ ಪಾರ್ಶ್ವದ ಉದ್ದಕ್ಕೂ ಈಶಾನ್ಯ ಮೂಲೆಗೆ ಹೋಗುತ್ತದೆ. ಬಳಿಕ ಸರ್ವೆ ನಂ. 81, 82, 84 ವ 85 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 87ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ, ಗುರುಶಿದ್ದಾಪುರದ ಸರ್ವೆ ನಂ. 87, 94, 93, 92 ವ 91 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

ಷರಾ.—(A) ಹಾದಿಯ ಇದರಡೀ ಕಂಡ ಹಕ್ಕು ಬ್ಲಾಕಿನಲ್ಲಿ ಕೊಡಲ್ಪಟ್ಟಿದೆ.

ವರ್ಷವೆಲ್ಲಾ, ಜನಗಳ, ದನಗಳ ಮತ್ತು ಭಂಡಿಗಳ ಉಪಯೋಗಕ್ಕೋಸ್ಕರ ಮಲಮಾಚೀಕೆರೆಯಿಂದ ಸೊಕ್ಕೆಗೆ ಹೋಗುವ 12 ಅಡಿ ಅಗಲವೂ, 1½ ಮೈಲಿ ದೂರವೂ ವುಳ್ಳ ಭಂಡಿ ಜಾಡು. ಇದು ಫಾರೆಸ್ಟನ್ನು ಮಲಮಾಚಿಕೆರೆಯ ಸರ್ವೆ ನಂ. 28ರ ಈಶಾನ್ಯ ಮೂಲೆಯಿಂದ ಸುಮಾರು ಒಂದು ಫರ್ಲಾಂಗ್ ದೂರದಲ್ಲಿ ಪ್ರವೇಶಿಸಿ, ಉತ್ತರಾಭಿಮುಖವಾಗಿ, ಮಲಮಾಚಿಕೆರೆಯ, ಸರ್ವೆ ನಂ. 36, 34, 35 ವ 37 ಮತ್ತು ಸೊಕ್ಕೆಯ ಸರ್ವೆ ನಂ. 146 ಇವುಗಳ ಮಧ್ಯೆ ಹೋಗಿ, ಸೊಕ್ಕೆಯ ಸರ್ವೆ ನಂ. 145ರ ವಾಯವ್ಯ ಮೂಲೆಯಿಂದ ಸುಮಾರು 2 ಫರ್ಲಾಂಗ್ ದೂರ ಪೂರ್ವದಲ್ಲಿ ಫಾರೆಸ್ಟನ್ನು ಬಿಡುತ್ತದೆ.

ಪಿಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಯಾಕಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಜಗಳೂರು.	21½ ಚದರ ಮೈಲುಗಳು.	ರಂಗಯ್ಯನದುರ್ಗ ಬ್ಯಾಕ ಸಿ.	ಉತ್ತರಕ್ಕೆ.—ಗುರುಸಿದ್ದಾಪುರದ ಸರ್ವೆ ನಂ. 127ರ ನೈರುತ್ಯ ಮೂಲೆಯಿಂದ ಹೊರಟು ಲೈನು ಸರ್ವೆ ನಂ. 127, 128, 129, 130, 131, 132, 133, 134, 135, 136, 3 ವ 4 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂ. 27ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ, ಸರ್ವೆ ನಂ. 27, 24, 23, 22, 21, 19 ವ 18 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಹೋಗಿ ಕಡೇ ನಂಬರಿನ ಆಗ್ನೇಯ ಮೂಲೆಯನ್ನು ಕೂಡುತ್ತದೆ; ಅನಂತರ ಸರ್ವೆ ನಂ. 34, 31, ವ 50 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರು ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಬಳಿಕ ಇದೇ ನಂಬರಿನ ದಕ್ಷಿಣ ಪಾರ್ಶ್ವವನ್ನು ಅನುಸರಿಸಿಕ್ಕೊಂಡು ಇದರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ರಂಗಯ್ಯನ ದುರ್ಗದ ಸರ್ವೆ ನಂ. 1 ವ 3ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಇದೇ ನಂಬರಿನ ಆಗ್ನೇಯ ವ ಉತ್ತರ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 2ರ ಆಗ್ನೇಯ ಮೂಲೆಗೆ ಹೋಗುತ್ತದೆ; ರಂಗಯ್ಯನ ದುರ್ಗದ ಸರ್ವೆ ನಂ. 2 ವ ಗುರುಸಿದ್ದಾಪುರದ ಸರ್ವೆ ನಂ. 32 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 33, 37, 40, 41, 43, 44, 45, 46, 47 ವ 42 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಅನಂತರ ಸರ್ವೆ ನಂ. 53ರ ಪಶ್ಚಿಮ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 51ರ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 49ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂ. 49, 73, 72, 70, 69 ವ 68ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಅನಂತರ ಸರ್ವೆ ನಂ. 59ರ ಪಶ್ಚಿಮ ಮತ್ತು ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಹೋಗಿ ಇದರ ಆಗ್ನೇಯ ಮೂಲೆಯನ್ನು ಕೂಡುತ್ತದೆ; ತರುವಾಯ ಸರ್ವೆ ನಂ. 58, 62 ವ 57ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಬಳಿಕ ಗುರುಸಿದ್ದಾಪುರದ ಸರ್ವೆ ನಂ. 57, ಗೌಡಿಕಟ್ಟೆ ಸರ್ವೆ ನಂ. 8, 18 ವ 19 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 6ರ ವಾಯವ್ಯ ಮೂಲೆಗೆ ಹೋಗುತ್ತದೆ; ಅನಂತರ ಸರ್ವೆ ನಂ. 6 ವ 4ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಇದೇ ನಂಬರಿನ ದಕ್ಷಿಣ ಪಾರ್ಶ್ವವನ್ನೇ ಅನುಸರಿಸಿಕ್ಕೊಂಡು ಆಗ್ನೇಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 4, 5, ವ 33ರ ಪೂರ್ವಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 2ರ ನೈರುತ್ಯ ಮೂಲೆಗೆ ಹೋಗುತ್ತದೆ; ಅನಂತರ ಇದೇ ನಂಬರಿನ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಹೋಗಿ ಮಲಮಾಚಿಕೆರೆ ಸರ್ವೆ ನಂ. 3ರ ವಾಯವ್ಯ ಮೂಲೆಯನ್ನು ಕೂಡುತ್ತದೆ; ಬಳಿಕ ಸರ್ವೆ ನಂ. 3, 4, 5, 6, 7, 8 ವ 9ರ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ; ಬಳಿಕ ಇದೇ ನಂಬರಿನ ದಕ್ಷಿಣ ಪಾರ್ಶ್ವವನ್ನು ಅನುಸರಿಸಿಕ್ಕೊಂಡು ಆಗ್ನೇಯ ಮೂಲೆಗೆ ಹೋಗುತ್ತದೆ; ಅನಂತರ ಸರ್ವೆ ನಂ. 9, 8, 7 ವ 6ರ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 18ರ ನೈರುತ್ಯ ಮೂಲೆಗೆ ಹೋ

1653

ಪೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಯಾಕಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಜಗಳೂರು.	21½ ಚದರ ಮೈಲಿಗಳು.	ರಂಗಯ್ಯನ ದುರ್ಗ ಬ್ಯಾಕ್ ಸಿ.	ಗುತ್ತದೆ; ತರುವಾಯ ಸರ್ವೆ ನಂ. 18 ವ 17ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಬಳಿಕ ಇದೇ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 19ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 21ರ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 30ರ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂ. 30 ವ 31ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ಬಳಿಕ ಹಿರೇಬನ್ನಿಹಟ್ಟಿಯ ಸರ್ವೆ ನಂ. 21 ವ 19, ಚಿಕ್ಕಬನ್ನಿ ಹಟ್ಟಿಯ ಸರ್ವೆ ನಂ. 27, 26, ವ 25 ಮತ್ತು ಶೀತರಸನ ಹೆಳ್ಳಿಯ ಸರ್ವೆ ನಂ. 1 ವ 2 ಮತ್ತು ಕೆಳಗೋಟೆಯ ಸರ್ವೆ ನಂ. 16, 15ವ 3 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಹೋಗಿ ಕೊನೇ ನಂಬರಿನ ನೈರುತ್ಯ ಮೂಲೆಯನ್ನು ಕೂಡುತ್ತದೆ. ದಕ್ಷಿಣಕ್ಕೆ.—ಬಳಿಕ ನೈರುತ್ಯ ದಿಕ್ಕಿಗೆ ಕಣಕುಪ್ಪೆಯ ಸರ್ವೆ ನಂ. 89ರಲ್ಲಿ ಸುಮಾರು 1 ಮೈಲು, 3 ಫರ್ಲಾಂಗು ದೂರದ ವರಿಗೂ ಹೋಗಿ ಹುಚ್ಚಪಾಲನಹಳ್ಳಿಯ ಸರ್ವೆ ನಂ. 4ರ ಈಶಾನ್ಯ ಮೂಲೆಗೆ ಕೂಡುತ್ತದೆ; ತರುವಾಯ ಸರ್ವೆ ನಂ. 4, 3 ವ 16 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ; ಅನಂತರ ಐನಹಳ್ಳಿಯ ಸರ್ವೆ ನಂ. 23ರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 23 ವ 24ರ ಉತ್ತರ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ; ತರುವಾಯ ಅದೇ ನಂಬರಿನ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ನೈರುತ್ಯ ಮೂಲೆಯನ್ನು ಶೇರುತ್ತದೆ; ಬಳಿಕ ಐನಹಳ್ಳಿಯ ಸರ್ವೆ ನಂ. 19 ಮತ್ತು ಮುಷ್ಟಗಿವೇನ ಹಳ್ಳಿಯ ಸರ್ವೆ ನಂ. 99 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ; ಅನಂತರ ಪಶ್ಚಿಮಾಭಿಮುಖವಾಗಿ ಸರ್ವೆ ನಂ. 98ರಲ್ಲಿ 2 ಫರ್ಲಾಂಗು ದೂರ ಹೋಗಿ; ಸರ್ವೆ ನಂ. 97ರಲ್ಲಿ 1½ ಫರ್ಲಾಂಗು ಪರ್ಯಂತ ಹೋಗಿ ಸರ್ವೆ ನಂ. 96ರ ಈಶಾನ್ಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 96 ವ 95 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಲಿಂಗೇನಹಳ್ಳಿಯ ಸರ್ವೆ ನಂ. 7ರ ಆಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಸದರೀ ನಂಬರಿನ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ ವಾಯವ್ಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 10ರ ಈಶಾನ್ಯ ಪಾರ್ಶ್ವದ ಉದ್ದಕ್ಕೂ ವಾಯವ್ಯಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂ. 1 ವ 2 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ಅನಂತರ ಇದೇ ನಂಬರಿನ ಉತ್ತರ ಮತ್ತು ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ನೈರುತ್ಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 29, 25, ವ 24 ಇವುಗಳ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 27ರ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಈ ನಂಬರನ್ನು ಬಳಸಿಕ್ಕೊಂಡು ಸರ್ವೆ ನಂ. 23ರ ಈಶಾನ್ಯ ಮೂಲೆಗೆ ಹೋಗುತ್ತದೆ; ಬಳಿಕ ಇದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಗೋಡೆಯ ಸರ್ವೆ ನಂ. 60ರ ಆಗ್ನೇಯ ಮೂಲೆಗೆ ಹೋಗುತ್ತದೆ; ಅನಂತರ ಸರ್ವೆ ನಂ. 60, 58, 57, 53, 52, 40, 39, 37, 36, 35 ವ 67 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂ. 66ರ ಪೂರ್ವ ಮತ್ತು ದಕ್ಷಿಣ

ಪೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು, ಹೋಬಳಿ ವ ಗ್ರಾಮ.	ಸುಮಾರು ವಿಸ್ತೀರ್ಣ.	ಬ್ಲಾಕಿನ ಹೆಸರು.	ಚಕ್ಕುಬಂದಿ.
ಚಿತ್ರದುರ್ಗ.	ಜಗಳೂರು.	21½ ಚದರ ಮೈಲಿಗಳು.	ರಂಗಯ್ಯನದುರ್ಗ ಬ್ಲಾಕ ಸಿ.	ಪಾರ್ಶ್ವಗಳ ಉದ್ದಕ್ಕೂ ಆಗ್ನೇಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 68ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ನೈರುತ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂ. 68 ವ 65ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಎರಡನೇ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ; ಬಳಿಕ ಅದೇ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಈಶಾನ್ಯ ಮೂಲೆಗೆ ಹೋಗುತ್ತದೆ; ತರುವಾಯ ತಾರೇಹಳ್ಳಿಯ ಸರ್ವೆ ನಂ. 60ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಆಗ್ನೇಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 60, 61, 62, ವ 57 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ನಂತರ ಅದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ತಾರೇಹಳ್ಳಿಯ ಸರ್ವೆ ನಂ. 39ರ ಉತ್ತರ ಮೂಲೆಗೆ ಹೋಗುತ್ತದೆ; ತರುವಾಯ ಪಶ್ಚಿಮಕ್ಕೆ ಉರ್ಲಕಟ್ಟೆಯ ಸರ್ವೆ ನಂ. 17ರಲ್ಲಿ 3½ ಫರ್ಲಾಂಗು ದೂರ ಹೋಗಿ ಸರ್ವೆ ನಂ. 37ರ ಈಶಾನ್ಯ ಮೂಲೆಗೆ ಶೇರುತ್ತದೆ; ಬಳಿಕ ಅದೇ ನಂಬರಿನ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 36ರ ಆಗ್ನೇಯ ಮೂಲೆಗೆ ಹೋಗುತ್ತದೆ; ಈ ನಂಬರಿನ ಪೂರ್ವ ವ ಉತ್ತರ ಪಾರ್ಶ್ವಗಳ ಉದ್ದಕ್ಕೂ ವಾಯವ್ಯ ಮೂಲೆಗೆ ಹೋಗುತ್ತದೆ; ಬಳಿಕ, ವಾಯವ್ಯ ದಿಕ್ಕಿಗೆ ಸರ್ವೆ ನಂ. 17ರಲ್ಲಿ 2 ಫರ್ಲಾಂಗು ದೂರ ಹೋಗಿ ಸರ್ವೆ ನಂ. 25ರ ಪೂರ್ವ ಮೂಲೆಯನ್ನು ಕೂಡುತ್ತದೆ; ತರುವಾಯ ಆ ನಂಬರಿನ ಈಶಾನ್ಯ ಪಾರ್ಶ್ವದ ಉದ್ದಕ್ಕೂ ಉತ್ತರ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 19ರ ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 14ರ ಆಗ್ನೇಯ ಮೂಲೆಗೆ ಹೋಗುತ್ತದೆ; ತರುವಾಯ ಈ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಈಶಾನ್ಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 13ರ ಆಗ್ನೇಯ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಉತ್ತರ ಮೂಲೆಗೆ ಹೋಗುತ್ತದೆ; ತರುವಾಯ ವಾಯವ್ಯ ದಿಕ್ಕಿಗೆ ಚಲ್ಲಕಟ್ಟೆಯ ಸರ್ವೆ ನಂ. 21ರಲ್ಲಿ 3 ಫರ್ಲಾಂಗು ದೂರ ಹೋಗಿ ಸರ್ವೆ ನಂ. 22ರ ಈಶಾನ್ಯ ಮೂಲೆಗೆ ಹೋಗುತ್ತದೆ; ಬಳಿಕ ಈ ನಂಬರಿನ ಉತ್ತರ ಮತ್ತು ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಪಶ್ಚಿಮ ಮೂಲೆಗೆ ಹೋಗುತ್ತದೆ; ಅನಂತರ, ಚಲ್ಲಕಟ್ಟೆಯ ಸರ್ವೆ ನಂ. 23 ವರವಿನಹಳ್ಳಿಯ ಸರ್ವೆ ನಂ. 10, 9 6 ವ 4 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಕೊನೇ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ; ಬಳಿಕ ಶಿದ್ದಯ್ಯನ ಕೋಟೆಯ ಸರ್ವೆ ನಂ. 59ರ ಆಗ್ನೇಯ ಮತ್ತು ಪೂರ್ವ ಪಾರ್ಶ್ವಗಳ ಉದ್ದಕ್ಕೂ ಜಾಡನ ಕಟ್ಟೆ ಸರ್ವೆ ನಂ. 9ರ ನೈರುತ್ಯ ಮೂಲೆಗೆ ಹೋಗುತ್ತದೆ; ಬಳಿಕ ಸರ್ವೆ ನಂ. 9 ವ 10ರ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 13ರ ದಕ್ಷಿಣ, ಪೂರ್ವ ಮತ್ತು ಉತ್ತರ ಪಾರ್ಶ್ವಗಳ ಉದ್ದಕ್ಕೂ ವಾಯವ್ಯ ಮೂಲೆಗೆ ಹೋಗುತ್ತದೆ; ತರುವಾಯ ಸರ್ವೆ ನಂ. 14ರ ಉತ್ತರ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 15. 16 ವ 19ರ ಈಶಾನ್ಯ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 20ರ ಆಗ್ನೇಯ ಮೂಲೆಗೆ ಹೋಗುತ್ತದೆ; ಅನಂತರ ಇದೇ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 21ರ ಆಗ್ನೇಯ ಪಾರ್ಶ್ವದ ಉದ್ದಕ್ಕೂ ಎರಡನೇ ನಂಬರಿನ ಈಶಾನ್ಯ ಮೂಲೆಗೆ ಹೋಗಿ ಹೊರಟ ಸ್ಥಳವನ್ನು ಶೇರುತ್ತದೆ.

ಷರಾ—A. ಹಾದಿಯ ಇದರಡೀ ಕಂಡ ಹಕ್ಕುಗಳು ಬ್ಲಾಕಿನಲ್ಲಿ ಕೊಡಲ್ಪಟ್ಟಿರುತ್ತವೆ:—

(a) ವರ್ಷವಲ್ಲಾ, ಜನಗಳ ಮತ್ತು ದನಗಳ ಉಪಯೋಗಕ್ಕೋಸ್ಕರ ಉರ್ಲಕಟ್ಟೆಯಿಂದ ಗುರುಶಿದ್ದಾಪುರಕ್ಕೆ ಹೋಗುವ 6 ಅಡಿ ಅಗಲವುಳ್ಳ 2½ ಮೈಲು ದೂರವುಳ್ಳ ಕಾಲುಹಾದಿ. ಈ ಹಾದಿಯು ಘಾರಸ್ಟನ್ನು ಉರ್ಲಕಟ್ಟೆಯ ಸರ್ವೆ ನಂ. 19ರ ವಾಯವ್ಯ ಮೂಲೆಯಲ್ಲಿ ಪ್ರವೇಶಿಸಿ, ಉತ್ತರಾಭಿಮುಖವಾಗಿ ಉರ್ಲಕಟ್ಟೆಯ ಸರ್ವೆ ನಂ. 15 ಚಲ್ಲಕಟ್ಟೆಯ ಸರ್ವೆ ನಂ. 21 ಮತ್ತು

1055

ರಂಗಯ್ಯನ ದುರ್ಗದ ಸರ್ವೆ ನಂ. 5 ವ 4 ಇವುಗಳ ಮಧ್ಯೆ ಹೋಗಿ, ರಂಗಪ್ಪನ ದುರ್ಗದ ಸರ್ವೆ ನಂ 3ರ ನೈರುತ್ಯ ಮೂಲೆಗೆ ಸುಮಾರು 1 ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(b) ವರ್ಷವೆಲ್ಲಾ, ಜನಗಳ, ಪಸೆಗಳ ಮತ್ತು ಗಾಡಿಗಳ ಉಪಯೋಗಕ್ಕಾಗಿ ತಾರೆಹಳ್ಳಿಯಿಂದ ಗುರುಶಿದ್ದಾಪುರಕ್ಕೆ ಹೋಗುವ 12 ಅಡಿ ಅಗಲವುಳ್ಳ 4 ಮೈಲು ದೂರವುಳ್ಳ ಗಾಡಿಹಾದಿ. ಈ ಹಾದಿಯು ಫಾರೆಸ್ಟನ್ನು ತಾರೇಹಳ್ಳಿಯ ಸರ್ವೆ ನಂ. 61ರ ಆಗ್ನೇಯ ಮೂಲೆಗೆ ಸುಮಾರು $1\frac{1}{4}$ ಫರ್ಲಾಂಗು ದೂರದಲ್ಲಿ ಪ್ರವೇಶಿಸಿ ಉತ್ತರಾಭಿಮುಖವಾಗಿ ತಾರೇಹಳ್ಳಿಯ ಸರ್ವೆ ನಂ. 59 ವ 58, ಉರ್ಲಕಟ್ಟೆಯ ಸರ್ವೆ ನಂ. 16 ಮತ್ತು ಗುರುಶಿದ್ದಾಪುರದ ಸರ್ವೆ ನಂ. 56 ವ 55 ಇವುಗಳಲ್ಲಿ ಹಾದು, ಕೊನೇ ಗ್ರಾಮದ ಸರ್ವೆ ನಂ. 73ರ ಆಗ್ನೇಯ ಮೂಲೆಯಲ್ಲಿ ಫಾರೆಸ್ಟನ್ನು ಬಿಡುತ್ತದೆ.

(c) ವರ್ಷವೆಲ್ಲಾ, ಜನಗಳ, ಪಸೆಗಳ ಮತ್ತು ಗಾಡಿಗಳ ಉಪಯೋಗಕ್ಕಾಗಿ 12 ಅಡಿ ಅಗಲವುಳ್ಳ $2\frac{1}{2}$ ಮೈಲಿ ದೂರವುಳ್ಳ ಉರ್ಲಕಟ್ಟೆಯಿಂದ ಚಿಕ್ಕ ಬನ್ನಿಹಟ್ಟಿಗೆ ಹೋಗುವ ಗಾಡಿ ಹಾದಿ. ಈ ಹಾದಿಯು ಫಾರೆಸ್ಟನ್ನು ಉರ್ಲಕಟ್ಟೆಯ ಸರ್ವೆ ನಂ. 37ರ ಈಶಾನ್ಯ ಮೂಲೆಗೆ ಸುಮಾರು $1\frac{1}{2}$ ಫರ್ಲಾಂಗು ದೂರದಲ್ಲಿ ಪ್ರವೇಶಿಸಿ ಈಶಾನ್ಯಾಭಿಮುಖವಾಗಿ ಉರ್ಲಕಟ್ಟೆಯ ಸರ್ವೆ ನಂ. 17 ವ 16 ಗೌಡಿಕಟ್ಟೆಯ ಸರ್ವೆ ನಂ. 7ರಲ್ಲಿ ಹಾದು ಗೌಡಿಕಟ್ಟೆಯ ಸರ್ವೆ ನಂ. 4ರ ಪಶ್ಚಿಮ ಮೂಲೆಗೆ ಸುಮಾರು 1 ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ; ಪುನಹಾ ಫಾರೆಸ್ಟನ್ನು ಮಲಮಾಚಿಕೆರೆ ಸರ್ವೆ ನಂ. 21ರ ಆಗ್ನೇಯ ಮೂಲೆಯಲ್ಲಿ ಪ್ರವೇಶಿಸಿ ಆಗ್ನೇಯಾಭಿಮುಖವಾಗಿ ಅದೇ ಗ್ರಾಮದ ಸರ್ವೆ ನಂ. 16 ಚಿಕ್ಕಬನ್ನಿಹಟ್ಟಿಯ ಸರ್ವೆ ನಂ. 43ರಲ್ಲಿ ಹಾದು ಚಿಕ್ಕಬನ್ನಿ ಹಟ್ಟಿಯ ಸರ್ವೆ ನಂ. 27ರ ವಾಯವ್ಯ ಮೂಲೆಗೆ ಸುಮಾರು $\frac{1}{2}$ ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

(d) ವರ್ಷವೆಲ್ಲಾ, ಜನಗಳ, ಪಸೆಗಳ ಮತ್ತು ಗಾಡಿಗಳ ಉಪಯೋಗಕ್ಕಾಗಿ ಮಲಮಾಚಿಕೆರೆಯಿಂದ ಕಣಕುಪ್ಪಕ್ಕೆ ಹೋಗುವ 12 ಅಡಿ ಅಗಲವುಳ್ಳ $3\frac{1}{2}$ ಮೈಲಿ ದೂರವುಳ್ಳ ಗಾಡಿಹಾದಿ. ಈ ಹಾದಿಯು ಫಾರೆಸ್ಟನ್ನು ಮಲಮಾಚಿಕೆರೆಯ ಸರ್ವೆ ನಂ. 18ರ ನೈರುತ್ಯ ಮೂಲೆಯಲ್ಲಿ ಪ್ರವೇಶಿಸಿ, ದಕ್ಷಿಣಾಭಿಮುಖವಾಗಿ ಇದೇ ಗ್ರಾಮದ ಸರ್ವೆ ನಂ. 16, 15 ವ 14 ಕಣಕುಪ್ಪೆಯ ಸರ್ವೆ ನಂ. 95, 94, 90 ವ 89 ಇವುಗಳಲ್ಲಿ ಹಾದು ಕಳಗೆಟ್ಟೆ ಗ್ರಾಮದ ಸರ್ವೆ ನಂ. 3ರ ನೈರುತ್ಯ ಮೂಲೆಗೆ ಸುಮಾರು $\frac{1}{2}$ ಫರ್ಲಾಂಗು ದೂರದಲ್ಲಿ ಫಾರೆಸ್ಟನ್ನು ಬಿಡುತ್ತದೆ.

ಕೆ. ಶಾಮಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್, ಚಿತ್ರದುರ್ಗ ಡಿಸ್ಟ್ರಿಕ್ಟ್.

ಬೆಂಗಳೂರ ಡಿಸ್ಟ್ರಿಕ್ಟ್.
ಪ್ರಸಿದ್ಧ ಪತ್ರಿಕೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಕರ್ಕಾರ್ಕಹಳ್ಳಿ ತಾಲ್ಲೂಕು ಕೋಡಿಪಹಳ್ಳಿ ಹೋಬಳಿ ಸರ್ವಮಾನ್ಯ ಯರಹಳ್ಳಿ ಗ್ರಾಮವು ಸ೯ 1904ನೆ ಜುಲ್ಯೈ ಮಾಹೆ 20ನೆ ತಾರೀಖಿನಲ್ಲಿ ಕರ್ಕಾರ್ಕಹಳ್ಳಿ ತಾಲ್ಲೂಕು ಕಛೇರಿ ಬಳಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂ೯ ತಿಂಗಳು 23ನೆ ತಾರೀಖು ನಂಬರ 25ನೆ ಮೈಸೂರು ಗೆಜೆಟ್ 2ನೆ ಭಾಗದ 387ನೆ ಪೇಜಿನಲ್ಲಿ ಫಾಯಿಷ್ ಆಗಿದೆ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಮಾಗಡಿ ತಾಲ್ಲೂಕು ತಾವರೆಕೆರೆ ಹೋಬಳಿ ಜೋಡಿ ಚಿಕ್ಕಲೂರು ಗ್ರಾಮವು ಸ೯ 1904ನೆ ಇಸವಿ ಜುಲ್ಯೈ 25ನೆ ತಾರೀಖಿನಲ್ಲಿ ಮಾಗಡಿ ತಾಲ್ಲೂಕು ಕಛೇರಿ ಬಳಿ ಒಹಿರಂಗವಾಗಿ ಹರಾಜು ಮಾಡಲ್ಪಡುತ್ತೆಂದು 1904ನೆ ಇಸವಿ ಜೂ೯ ತಿಂಗಳು 23ನ ತಾರೀಖು ನಂಬರ್ 25ನೆ ಮೈಸೂರ ಗೆಜೆಟ್ 2ನೆ ಭಾಗದ 386ನೆ ಪೇಜಿನಲ್ಲಿ ಫಾಯಿಷ್ ಆಗಿ ಇದೆ.

ಅಹವುದಲ್ಲಿ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.
ಇಸ್ತಿಹಾರ್ನಾಮೆ.
ತಾರೀಖು 7ನೆ ಜೂ೯ 1904.

1903—04ನೆ ಸಾಲ್ ಆಖೈರ ವರಗೆ ಸರಕಾರಕ್ಕೆ ಬರಬೇಕಾದ ಕಂದಾಯ ಬಾಕಿಗಾಗಿ ತೀರ್ಥಹಳ್ಳಿ ತಾಲ್ಲೂಕು ಮಂಡಗದ್ದೆ ಹೋಬಳಿ ಹಗಲತ್ತಿ ಜೋಡಿ ಗ್ರಾಮವು 1904ನೆ ಇಸವಿ ಆಗಸ್ಟ್ 5ನೆ ತಾರೀಖಿನ ದಿವಸ ಶಿವಮೊಗ್ಗ ಡಿಸ್ಟ್ರಿಕ್ಟ್ ಆಫೀಸಿನಲ್ಲಿ ಡೆಪ್ಯುಟಿ ಕಮಿಷನರ ಸಾಹೇಬರವರಿಂದ ಹರಾಜು ಮಾಡಿಸಲ್ಪಡುವದು.

ಈ ವಿಷಯದಲ್ಲಿ ಹೆಚ್ಚಿಗೆ ತಪಶೀಲುಗಳ ಬಗ್ಯೆ ತಾರೀಖು 16—6—1904ನೆ ಪುರ್ತಂ 24ನೆ ನಂಬರು ಮೈಸೂರು ಗೆಜೆಟ್ 2ನೆ ಭಾಗದ 378—379ನೆ ಪುಟದಲ್ಲಿ ಫಾಯಿಷ್ ಆಗಿರುವ ಇಸ್ತಿಹಾರನ್ನು ನೋಡಿಕೊಳ್ಳಬೇಕು.

ಎಂ. ಎಸ್. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

ಕಡೂರು ಡಿಸ್ಟ್ರಿಕ್ಟ್.
ಚಿಕ್ಕಮಗಳೂರು ತಾಲ್ಲೂಕು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕಾಫಿ ಸಾಗುವಳಿಗೆ ಉಸ್ತೂರು ಎಸ್ಟೇಟ್ ಮೆ॥ ಡಬ್ಲ್ಯೂ. ಕಾಫರ್ಡ್ ಸಾಹೇಬರವರು ದರಖಾಸ್ತು ಮಾಡಿರುವ ಚಿಕ್ಕಮಗಳೂರು ತಾಲ್ಲೂಕು ಬಿದರೆ ಗ್ರಾಮದಲ್ಲಿರುವ ಸರ್ವೆ ನಂಬರು 23, ಎಕರೆ 10, ಗುಂಟೆ 38, ಮತ್ತು 224, ಎಕರೆ 53, ಗುಂಟೆ 19, ಜುಮ್ಲಾ ಎಕರೆ 64, ಗುಂಟೆ 17 ಉಳ್ಳ ಜಮೀನನ್ನು ಚಿಕ್ಕಮಗಳೂರು ತಾಲ್ಲೂಕು ಅಮಲ್ದಾರ್ರವರಿಂದ ಸ೯ 1904ನೆ ಇಸವಿ ಜುಲ್ಯೈ ತಾರೀಖು 20ನೆ ಬುಧವಾರ ದಿವಿ 11 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ.

ಜಾಸ್ತಿ ತಪಶೀಲು 16—6—04ನೆ ಪುರ್ತಂ 24ನೆ ನಂಬರು ಮೈಸೂರ ಗೆಜೆಟಿನ 2ನೆ ಭಾಗದ 380ನೆ ಪುಟದಲ್ಲಿ ನವೂ ದಿರುವದು ನೋಡಲಾಗಿ ತಿಳಿಯಲಾಗುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಷನರ್.

84

ಸ೯ 1904ನೆ ಇಸವಿ ಮೇ 31ನೆ ಮಂಗಳವಾರ ಚಿಕ್ಕಮಗಳೂರಲ್ಲಿ ನಡದ ಡಿಸ್ಟ್ರಿಕ್ಟ್ ಬೋರ್ಡು ನಡವಳಿಕೆಗಳು—

ವೆ:॥ ಎಂ. ನಾರಾಯಣರಾಯರವರು, (ಪ್ರೆಸಿಡೆಂಟ್)

ಉದ್ಯೋಗಪ್ರಯುಕ್ತವಾದ ಮೆಂಬರುಗಳು.

ಹಾಜರು.

1. ಮೆ॥ ಪೀಟರ್ ಜಾರ್ಜ್ ಡಿಸೋಜಾಮುದರು, ವೈಸ್ ಪ್ರೆಸಿಡೆಂಟ್.
2. ,, ಎಚ್. ಜೆ. ಮೊಲ್ಲಾಯಿ ಸಾಹೇಬರವರು, ಎಗ್ಸಿಕ್ಯೂಟಿವ್ ಇಂಜನಿಯರ್.
3. ,, ಎ. ವೇದಾಂತದೇಶಿಕಗಪ್ಪಯ್ಯಂಗಾರ್ಯರವರು, ಟ್ರೈಜರಿ ಅಸಿಸ್ಟೆಂಟ್ ಕಮಿಷನರವರು.
4. ,, ಎಮ್. ಕೆ. ತಿರುವೆಂಗಲಾಚಾರ್ಯರು, ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು.

ಗೈರ್ ಹಾಜರು.

1. ವೆ॥ ಸಿ. ಎ. ನಂಜಪ್ಪನವರು, ಡಿಸ್ಟ್ರಿಕ್ಟ್ ಸರ್ಜ್. (ಕಾಹಿಲೆ)
2. ,, 2ನೆ ಅಸಿಸ್ಟೆಂಟ್ ಕಮ್ಮಿಷನರವರು, (ಸ್ಥಳ ಖಾಲಿ)

ಇತರ ಮೆಂಬರುಗಳು.

1. ಮೆ॥ ತಂಗ್ಲಿ ನರಸುಂಹೈಯ್ಯಂಗಾರ್ಯವರು.
2. ,, ಎಸ್. ಪರ್ವತಪ್ಪನವರು.
3. ,, ಮೂಗಳದ ರಾಮಚಂದ್ರರಾಯರವರು.
4. ,, ಬಿ. ಗುಂಡಪ್ಪನವರು.
5. ,, ಸಿ. ಶ್ರೀನಿವಾಸರಾವ್.ರವರು.
6. ಮೆ॥ ಕುಪ್ಪಸಾಮಿಪಿಳ್ಳೈಯವರು.
7. ,, ಶ್ರೀಕಂಠಶಾಸ್ತ್ರಿಯವರು.
8. ,, ಎಂ. ಗಣೇಶರಾಯರವರು.
9. ,, ನಂದಿ ಅಬ್ದುಲ್ಖಾದರ್ ಸಾಹೇಬರವರು.
10. ,, ಎಚ್. ಪಲ್ಕಿಂಗ್ಟರ್ ಸಾಹೇಬರವರು.

1. ಮೆ॥ ಸಿ. ಎಚ್. ಗಾಡ್ಫ್ರೇ ಸಾಹೇಬರವರು (1904ನೆ ಅಕ್ಟೋಬರು ತಿಂಗಳ ವರೆಗೆ ನಡಿಯುತಕ್ಕ ವಿಷಟುಗುಗಳಿಗೆ ಹಾಜರಾಗಲು ತಾವು ಇಂಗ್ಲೆಂಡಿಗೆ ಹೋಗುವ ಸಬಬು ಅವಕಾಶವಾಗುವದಿಲ್ಲವೆಂತ ಬಂದ ರಿಪೋರ್ಟು ತಲಪಿರುತ್ತೆ.)

2. ಮೆ॥ ಜುವಳಿ ಗಣೇಶರಾಯರು, (ಖಾಯಿಲೆಯಿಂತ ಬರದ ರಿಪೋರ್ಟು ತಲುಪಿರುತ್ತೆ).

3. ,, ಚನ್ನಕೇಶವರಾಯರವರು, (ಸ್ವಂತ ಕೆಲಸದ ದೆಸೆಯಿಂದ ಹಾಜರಾಗಲು ಆಗುವದಿಲ್ಲವೆಂತ ಬರದ ರಿಪೋರ್ಟು ತಲಪಿರುತ್ತೆ).

4. ಮೆ॥ ಡಾಕ್ಟರ್ಗವುಡರು, (ಮಂಗಳೂರಿಗೆ ಹೋಗಿರುತ್ತಾರೆ).

5. ,, ದಾವುದ್ ಸಾಹೇಬರವರು, (ಖಾಯಿಲೆಯಿಂತ ಬರದ ರಿಪೋರ್ಟು ತಲಪಿರುತ್ತೆ).

6. ,, ಪಟ್ಟಾಗಿರಿ ರಂಗಣ್ಣನವರು.

7. ,, ಶಾಂತಪ್ಪಶೆಟ್ಟರು.

8. ,, ತರೀಕೆರೆ ಶ್ರೀನಿವಾಸರಾಯರು.

1. ಡಿಸ್ಟ್ರಿಕ್ಟ ರೋಡ್ ಫಿನ ನಡವಳಿಕೆಗಳನ್ನು ಯಾವ ಭಾಷೆಯಲ್ಲಿ ಬರದಿಡತಕ್ಕದ್ದೆಂದು ಪ್ರಸ್ತಾಪು ಬಂದದ್ದರ ಮೇಲೆ ಸದರಿ ನಡವಳಿಕೆಗಳನ್ನು ಇಂಗ್ಲೀಷಿನಲ್ಲಿ ಬರದು ಅದರ ಕನ್ನಡ ತರ್ಜುಮೆ ನಕಲುಗಳನ್ನು ಇಂಗ್ಲೀಷು ತಿಳಿಯದೆ ಇರತಕ್ಕ ಮೆಂಬರುಗಳಿಗೆ ಮಾತ್ರ ಕಳುಹಿಸಬೇಕೆಂತ ತೀರ್ಮಾನಿಸಲಾಯಿತು.

II. ಮೂರನೇ ಕ್ಲಾಸ್ ಟ್ರಾವರ್ಸ್ ಬಂಗಲೆಗಳ ಸಾಮಾನ್ಯ ರಿಪೇರಿಗಳು ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ನಡಿಯುವದಕ್ಕೆ ಬದಲಾಗಿ ರೆವಿನ್ಯೂ ಇಲಾಖೆಯಿಂದ ನಡಿಯತಕ್ಕ ವಿಷಯದಲ್ಲಿ ಡಿಸ್ಟ್ರಿಕ್ಟ್ ಇಂಜಿನಿಯರವರ ತೀರ್ಮಾನ ಮತ್ತು ಪ್ರೆಸಿಡೆಂಟರವರ ಅಭಿ ಪ್ರಾಯ ಅವಶ್ಯಕವೆಂತಲೂ, ಕಸಬುದಾ ಕೌಶಲ್ಯವು ಅವಶ್ಯಕವಿರುವ ಕೆಲಸಗಳನ್ನು ಮಾತ್ರ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಮಾಡಲ್ಪಡಬೇಕಾಯೆಂತಲೂ, ಈ ಮಾಡೋಣವರಿಂದ ಈಗ ರೆವಿನ್ಯೂ ಇಲಾಖೆ ಮೂಲಕ ನಡಿಯುವ ಕೆಲಸಗಳ ನಿರ್ವಿಚಾರಣೆ ಗಾಗಿ ನೇಮಕ ಮಾಡಲ್ಪಟ್ಟವರಿಂದ ವರ್ಕ್ ಇನ್ಸ್ಪೆಕ್ಟರುಗಳಿಗೆ ಕೊಡತಕ್ಕ ತಲಬಿನ ಉದ್ದಿಶ್ಯ ಉಂಟಾಗತಕ್ಕ ಹೆಚ್ಚಿಗೆ ಖರ್ಚಿನ ಖರ್ಚು ಕಮ್ಮಿಯಾಗುವ್ದೆಂತ ತಲಪಿರುವ ತಾ॥ 9—2—1904ನೆ ನಂಬ್ರ 2024-32—L. F. 42-92ನೆ ನಂಬಿಕು ಗವರ್ನಮೆಂಟ್ ಆರ್ಡರನ್ನು ಓದಲಾಯಿತು.

ಮೂರನೇ ಕ್ಲಾಸ್ ಟ್ರಾವರ್ಸ್ ಬಂಗ್ಲೆಗಳ ರಿಪೇರಿಯು ಈಗಿನಂತೆಯೇ ಪಬ್ಲಿಕ್ ವರ್ಕ್ಸ್ ಇಲಾಖೆಯಿಂದ ಮಾಡತಕ್ಕ ಪದ್ಧತಿಯೇ ಮುಂದೂ ಜಾರೀಲಿ ಇರತಕ್ಕದ್ದು. ಚಿಕ್ಕಮಗಳೂರು, ಕೊಪ್ಪ, ಮೂಡಿಗೆರೆ ಮತ್ತು ಯಡೆಹಳ್ಳಿ ಸಬ್ ತಾಲ್ಲೂಕುಗಳಲ್ಲಿ ವರ್ಕ್ ಇನ್ಸ್ಪೆಕ್ಟರುಗಳು ಇರುವದಿಲ್ಲವಾ. ತರೀಕೆರೆ ಮತ್ತು ಕಡೂರು ತಾಲ್ಲೂಕುಗಳಲ್ಲಿರುವ ವರ್ಕ್ಸ್ ಇನ್ಸ್ಪೆಕ್ಟರುಗಳ ಸಂಬಳಿಕ್ಕೆ ಆ ತಾ ಲ್ಲೂಕುಗಳಲ್ಲಿ ನಡಿಯತಕ್ಕ ಎಸ್ಟಿಮೇಟುಗಳು ರೆವಿನ್ಯೂ ಇಲಾಖೆ ಮೂಲಕ ನಡಿಯತಕ್ಕ ಡಿಸ್ಟ್ರಿಕ್ಟ್ ಫಂಡ್ ಕೆಲಸಗಳೂ ಸಹ ತಕ್ಕಷ್ಟು ಶೇಕಡಾ ಖರ್ಚನ್ನು ಉಂಟುಮಾಡಲು ಸಾಕಾಗುತ್ತೆಂತ ತೀರ್ಮಾನಿಸಲಾಯಿತು.

III. ಬೀರೂರು–ದೇವನಕೆರೆ–ಕೋಡಿಹಳ್ಳದ ಕಾಲುವೆಗಳ ಮೇಲೆ ಸೇತುವೆಗಳನ್ನು ಕಟ್ಟುವತಕ್ಕ ವಿಚಾರದಲ್ಲಿ ಕಡೂರು ತಾಲ್ಲೂಕು ಅಮಲ್ದಾರ್ರವರಿಂದ ತಲಪಿದ 960 ರೂಪಾಯಿನ ಅಂದಾಜಾವನ್ನು ತನಿಖೆ ಬಗ್ಗೆ ಕಡೂರು ಡಿವಿಜನ್ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಗೆ ಈ ಆಫೀಸಿನಿಂದ 27—10—1903ನೆ ಮುಕ್ತಂ ನಂಬರು 105ನೆ ಡಾಕೆಟಿ ನಂಗಡ ಕಳಿಸಿ ಇದ್ದದ್ದಕ್ಕೆ ಜವಾಬಾಗಿ ಸದರಿ ಕಾವುಗಾರಿಗಳು ನಡಿಯುವೇಕಾದ ಸ್ಥಳ ಅಜನೂಯಿಷಿ ಮಾಸಿರುತ್ತೇವೆಂತಲೂ, ಈಗ ಇರತಕ್ಕ 3 ಕಂಣಿನ ಮೊಹರಿ ರಿಪೇರಿ ಆಗಬೇಕೆಂತಲೂ, ಸ್ಕೆಚ್ ಪ್ಲಾನ್ನಲ್ಲಿ ವಿವರಿಸಿರುವ ಮೇರೆ ಮೊಹರಿ ಪಕ್ಕದಲ್ಲಿ ಪುಣ್ಣೂ ಕಾವುಗಾರಿ ನಡಿಯುಪೇಕಾದ್ದು ಅವಶ್ಯಕವೆಂತಲೂ, ಸದರಿ ಕೆಲಸಕ್ಕೆ ಲಗತ್ತಿಸಿರುವ ಅಂಚಾಜಾದಂತೆ 204 ರೂಪಾಯಿಗಳು ಖರ್ಚಾಗಬಹುದೆಂತಲು ಸಹಾ ಅಭಿಪ್ರಾಯಪಟ್ಟು ಬರೆದಿರುವ 19—4—1904ನೆ ಮುಕ್ತಂ ನಂಬರು 83ನೆ ಡಾಕೆಟನ್ನ ಓದಲಾಯಿತು.

ಸದರಿ 204 ರೂಪಾಯಿಗಳ ಅಂದಾಜು ಮಂಜೂರು ಮಾಡಬೇಕೆಂತಲೂ, ಕೆಲಸವನ್ನು ಸಾಧ್ಯವಾದಷ್ಟು ಜಾಗ್ರತೆಯಲ್ಲಿ ಪೂರೈಸಬೇಕಾಗಿ ಎಗ್ಜಿಕ್ಯೂಟಿವ್ ಇಂಜನಿಯರ್ ಸಾಹೇಬರವರಿಗೆ ಬರಿಯಬೇಕೆಂತಲೂ ಸಭ ತೀರ್ಮಾನಿಸಲಾಯಿತು.

IV. ವಿಲೇಜ್ ಯೂನಿಯ್ಯನ್‌ಗಳಲ್ಲಿ ಮನೆ ಕಂದಾಯ ಹಾಕುವದಕ್ಕೋಸ್ಕರ ಮನೆಗಳನ್ನು ಕ್ಲಾಸ್‌ವಾರು ವಿಂಗಡಿಸಲು ಬಂದು ಸ್ಕೀಮನ್ನು ಮಾಡಿಸಿ ಅದರ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನವರ ಅಭಿಪ್ರಾಯ ತಿಳಿಸಬೇಕೆಂತ ಗವರ್ನ್‌ಮೆಂಟಿನಿಂದ ತಲ್ಪಿದ 8—4—1904ನೆ ಮುಕ್ತಂ 3878-85—L. F. 109—03ನೆ ನಂಬರು ಆರ್ಡರನ್ನು ಓದಲಾಯಿತು.

(a) ಗವರ್ನ್‌ಮೆಂಟಿನವರು ಆಲೋಚಿಸಿ ಕ್ಲಾಸುವಾರು ವಿಂಗಡಿಸಿರುವದು ಸರಿಯಾಗಿರುತ್ತೆಂತಲೂ, ಈ ಕೆಳಗೆ ಸವ್ಮೂದಿಸಿರುವಮೇರಗೆ ಇನ್ನು ಬಂದು ಕ್ಲಾಸು ವಿಷಯ ಶೇರಿಸಿಕೊಂಡು ಗವರ್ನ್‌ಮೆಂಟಿನವರು ಮಾಡಿರುವ ಸ್ಕೀಮು ಮೇರೆ ಅನುಸರಿಸಬಹುದೆಂತ ಸಭ ಬೋರ್ಡಿನಲ್ಲಿ ತೀರ್ಮಾನಿಸಲಾಯಿತು.

	ರೂ.	ಆ.	ಪೈ.
1ನೆ ಕ್ಲಾಸು 750 ರೂಪಾಯಿಗಳಿಗಿಂತ ಹೆಚ್ಚು ಕ್ರೀದಿ ಬೆಳತಕ್ಕ ಮನೆಗಳು ...	5	0	0
2ನೆ ಕ್ಲಾಸು 500 ರೂಪಾಯಿ ಆಗಾಯಿತು 750 ರೂಪಾಯಿಗಳ ವರಿಗಿನ ಖರೀದಿ ಬೆಳತಕ್ಕ ಮನೆಗಳು ...	4	0	0
3ನೆ ಕ್ಲಾಸು 250 ರೂಪಾಯಿಗಳ ಆಗಾಯಿತು 500 ರೂಪಾಯಿಗಳ ವರಿಗಿನ ಖರೀದಿ ಬೆಳತಕ್ಕ ಮನೆಗಳು ..	3	0	0
4ನೆ ಕ್ಲಾಸು 100 ರೂಪಾಯಿಗಳ ಆಗಾಯಿತು 250 ರೂಪಾಯಿಗಳ ವರಿಗಿನ ಖರೀದಿ ಬೆಳತಕ್ಕ ಮನೆಗಳು ..	2	0	0
5ನೆ ಕ್ಲಾಸು 50 ರೂಪಾಯಿಗಳ ಆಗಾಯಿತು 100 ರೂಪಾಯಿಗಳ ವರಿಗಿನ ಖರೀದಿ ಬೆಳತಕ್ಕ ಮನೆಗಳು ...	1	0	0
6ನೆ ಕ್ಲಾಸು 25 ರೂಪಾಯಿಗಳ ಆಗಾಯಿತು 50 ರೂಪಾಯಿಗಳ ವರಿಗಿನ ಖರೀದಿ ಬೆಳತಕ್ಕ ಮನೆಗಳು ..	0	8	0
7ನೆ ಕ್ಲಾಸು 25 ರೂಪಾಯಿಗಳಿಗಿಂತ ಕಮ್ಮಿ ಖರೀದಿ ಬೆಳತಕ್ಕ ಮನೆಗಳು ...	0	4	0

(b) 5 ರೂಪಾಯಿಗಳಿಗಿಂತ ಕಮ್ಮಿ ಖರೀದಿ ಬೆಳತಕ್ಕ ಮನೆಗಳನ್ನು ತೆರಿಗೆಯಿಂದ ವಿನಾಯಿಸಬೇಕೆಂತ ಮೈಸೂರಿನ ರಾಮಚಂದ್ರರಾವುರವರು ಪ್ರಸ್ತಾಪ ಮಾಡಿದ್ದಕ್ಕೆ ಬೋರ್ಡಿನವರ (Votes) ಸಮ್ಮತಿಗಳನ್ನ ತಗಿಯಲಾಗಿ ವಿರೋಧಪಕ್ಷವಾಗಿ 14, ಇವರ ಪಕ್ಷವಾಗಿ 1, ಈರೀತಿ ಸಮ್ಮತಿಗಳು ಬಂದದ್ದರಿಂದ ಈ ಪ್ರಸ್ತಾಪವನ್ನು ತಿರಸ್ಕರಿಸಲಾಯಿತು.

V. ಸನ್ 1904ನೆ ಇಸವಿ ಏಪ್ರೆಲ್ ತಾರೀಖು 12ರಲ್ಲು ನಡದ ಡಿಸ್ಟ್ರಿಕ್ಟ್ ಬೋರ್ಡಿನ VIIIನೆ ನಂಬರು ತೀರ್ಮಾನದ ವಿಷಯವಾದ ಚೀಕನಹಳ್ಳಿ-ಚಿಕ್ಕಮಗಳೂರು ರಸ್ತೆಯ ಟೆಸಿಂಗ್ ಪ್ಲಾನನ್ನು ಆ ರಸ್ತೆ ಆಗುವದರಲ್ಲಿ ಆಸಕ್ತರಾಗಿರುವ ಪ್ಲಾಂಟರುಗಳ ಆಲೋಚನೆ ಬಗ್ಗೆ ಇಡುತ್ತೇನೆಂತ ಬಸಕಲ್ ಎಸ್ಟೇಟ್ ಮೆ|| ಆರ್. ಡಬ್ಲ್ಯು. ಫೆವೆರ್ಲಿ ಸಾಹೇಬರವರಿಂದ ಬಂದ 4—5—1904ನೆ ಮುಕ್ತಂ ಕಾಗದವನ್ನು ಓದಿ ರಿಕಾರ್ಡು ಮಾಡಲಾಯಿತು.

VI. ಡಿಸ್ಟ್ರಿಕ್ಟ್ ಬೋರ್ಡಿನವರು ಅಸಿಸ್ಟೆಂಟ್ ಕಮಿಷನರ್ ಮೆ|| ಪಿ. ಜೆ. ಡಿಸೋಜಾಯವರನ್ನು ವೈಸ್ ಪ್ರಸಿಡೆಂಟರನ್ನಾಗಿ ಚುನಾಯಿಸಿರುವದನ್ನು ಮಂಜೂರು ಮಾಡಿರುವದಾಗಿ ತಲ್ಪಿದ 7—5—1904ನೆ ಮುಕ್ತಂ 4250—L. F. 82—03ನೆ ನಂಬರು ಗವರ್ನ್‌ಮೆಂಟ್ ನೋಟಿಫಿಕೇಷನನ್ನು ಓದಿ ರಿಕಾರ್ಡು ಮಾಡಲಾಯಿತು.

VII. ಹೊರನಾಡು ಕಾಫಿತೋಟದಲ್ಲಿ ಬಂದು ದೊಡ್ಡಿ ಸ್ಥಾಪಿಸುವದನ್ನು ಮಂಜೂರು ಮಾಡಬೇಕೆಂತಲೂ ಸದರಿ ತೋಟದ ಯಜಮಾನರಾದ ಮೆ|| ರೇಗೊ ಸಾಹೇಬರವರು ಗ್ರಾಮಸ್ಥರಿಗೆ ಅನುಕೂಲವಾಗಿರುವಂತೆ ತಮ್ಮ ತೋಟದ ಬಂದು ಕಿನಾರೆಯಲ್ಲಿ ಬಂದು ದೊಡ್ಡಿ ಕಟ್ಟಡವನ್ನು ಕಟ್ಟಿಸಿರುತ್ತಾರೆಂತಲೂ, ಮಳೆಗಾಲದಲ್ಲಿ ಭದ್ರಾನದಿಯಲ್ಲಿ ಪ್ರವಾಹ ಬರೋಣದರಿಂದ 6 ಮೈಲಿ ಫಾಸಲೆಯಲ್ಲಿ ಇರುವ ಕಳಸದ ದೊಡ್ಡಿಗ ಜಾನುವಾರುಗಳನ್ನು ಅಟ್ಟಿಕೊಂಡು ಹೋಗುವದು ಅಸಾಧ್ಯವೆಂತಲೂ, ಮೂಡಿಗೆರೆ ತಾಲ್ಲೂಕು ಅಮಲ್ದಾರ್ರವರಿಂದ ತಲ್ಪಿರುವ 27—4—1904ನೆ ಮುಕ್ತಂ 242ನೆ ರಿಪೋರ್ಟನ್ನ ಓದಲಾಗಿ ಹೊರನಾಡು ಎಸ್ಟೇಟಿನಲ್ಲಿ ಬಂದು ದೊಡ್ಡಿ ಸ್ಥಾಪಿಸುವದು ಅನಾವಶ್ಯಕವಂತ ಡಿಸ್ಟ್ರಿಕ್ಟ್ ಬೋರ್ಡಿನವರು ಎಣಿಸಿರುತ್ತಾರೆ.

VIII. ಚಾಲ್ತಿ ಸಾಲ ರಿಪೋರ್ಟನ್ನ ವಿಧಾಯುಕ್ತವಾಗಿ ನವಾಂಬರ್ ಸಾಲ್ಲಿ ವರಿಷ್ಟಗಳ ಸಮೇತವಾಗಿ ತಯಾರ್ಮಾಡಿ ಸಪ್ಟಂಬರು 30 ಯಾ ಅದರಪಳಗ ಗವರ್ನ್‌ಮೆಂಟ್ ಸೆಕ್ರಟೆರಿಯಟ್ ಆಫೀಸಿಗೆ ತಲಪುವಂತೆ ಕಳಿಸಿಕೊಡಬೇಕಾಗಿ ತಲ್ಪಿದ 5—3—1904ನೆ ಮುಕ್ತಂ 3366-75—L. F. 105—03ನೆ ನಂಬರು ಆರ್ಡರನ್ನ ಓದಿ ರಿಕಾರ್ಡು ಮಾಡಲಾಯಿತು.

IX. ಕೇಂದಿ ಅಂಗಡಿಗಳ ಗುತ್ತಾ ಮೊಬಲಗಿನ ಮೇಲೆ ಪ್ರತ್ಯೇಕ ಲೋಕಲ್ ಸೆಸ್ಸು ವಸೂಲ್ಮಾಡುವದನ್ನ ಮುಂಜೂರ್ಮಾಡಿರುತ್ತೆಂತ ವರ್ಸೈರೆ ಗವರ್ನ್‌ಮೆಂಟಿನಿಂದ ತಲ್ಪಿರುವ 7—4—1904ನೆ ಮುಕ್ತಂ 668-77—Ex. F. 6-02ನೆ ಆರ್ಡರನ್ನ ಓದಿ

ರಿಕಾರ್ಡು ಮಾಡಲಾಯಿತು. ಶೇಂದಿ ಅಂಗಡಿಗಳ ಗುತ್ತಾ ಮೊಬಲಗಿನ ಮೇಲೆ ಹುಟ್ಟುವಳಿಯಾಗುವ ಲೋಕಲ್ ಸೆಸ್ಸು ಪೈಕಿ ಶೇಕಡ 76 ಭಾಗದ ಮೊಬಲಗನ್ನು ಡಿಸ್ಟ್ರಿಕ್ಟ್ ಫಂಡಿಗೆ ಕೊಡುವ ಬಗ್ಯೆ ಗವರ್ನಮೆಂಟಿನವರನ್ನು ಕೇಳಿಕೊಳ್ಳಬೇಕಾಗಿ ಸಹ ತೀರ್ಮಾನಿಸಲಾಯಿತು.

X. ಚಿಕ್ಕಮಗಳೂರು ತಾಲ್ಲೂಕು ಕೋರ್ಡು 10-5-1904ನೆ ಮರ್ಕುಂ ಬಾಬತು ಈ ಕೆಳಗೆ ಕಂಡ ತೀರ್ಮಾನಗಳನ್ನ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಓದಲಾಯಿತು.

1. ವಸ್ತಾರೆಯಲ್ಲಿ ಪ್ರತಿ ಮಂಗಳವಾರವು ಸಂತೆ ನೆರಿಯುವ ಬಗ್ಯೆ ಆರ್ಡರು ಅಪೇಕ್ಷಿಸಿ ಕೇಳಿಕೊಂಡ ವಿಚಾರದಲ್ಲಿ ಸಂತೆ ನಡಿಯಲು ಅಭ್ಯಂತರವಿಲ್ಲವೆಂತಲೂ ಗವರ್ನಮೆಂಟ್ ಮಂಜೂರಾತಿ ಪಡಿಯಬೇಕೆಂತಲೂ.

2. ಹೊಸಹಳ್ಳಿ ಜೋಳದಹಾಳಿನ 2 ಮೈಲಿ 3 ಫರ್‌ಲಾಂಗ್ ರಸ್ತೆಯನ್ನು ಡಿಸ್ಟ್ರಿಕ್ಟ್ ಬೋರ್ಡಿನವರ ಆಡಳಿತಕ್ಕೆ ತೆಗದುಕೊಳ್ಳಬೇಕೆಂಬ ವಿಚಾರದಲ್ಲಿ ಸದರಿ ರಸ್ತೆಯನ್ನು ಸಾಲಾಬಾದು ರಿಪೇರಿ ಬಗ್ಯೆ ಡಿಸ್ಟ್ರಿಕ್ಟ್ ಬೋರ್ಡಿನವರು ಮೈಲಿ ಬಂದರ 30 ರೂಪಾಯಿ ಮೇರಿಗೆ ತೆಗದುಕೊಳ್ಳಬಹುದೆಂತಲೂ ರಸ್ತೆ ಅಭಿವೃದ್ಧಿ ಬಗ್ಯೆ ಸುತ್ತಮುತ್ತ ಇರತಕ್ಕ ರೈತರುಗಳು ಏನು ಚಂದಾ ಕೊಡುತ್ತಾರೆಂಬುವದನ್ನು ಅಮಲ್ದಾರ್ರವರು ತಿಳಿಯಬೇಕೆಂತಲೂ.

3. ಬದಸ್ತೂರ್ ಉಪ್ಪಳ್ಳಿ, ಹಿರೇಕೊಳಲೆ ಮತ್ತು ಬಾಬಾಬುಡನ್ ಹಿಲ್ ರಸ್ತೆ ಇವೆರಡನ್ನು ಕೂಡುವಹಾಗೆ ಮೆ|| ಮಾಗಳ ರಾಮಚಂದ್ರರಾಯರವರು ಮಾಡಿಸಿರುವ ಎರಡು ಮೈಲಿ ಹೊಸ ರಸ್ತೆಯನ್ನು ಡಿಸ್ಟ್ರಿಕ್ಟ್ ಫಂಡಿನಿಂದ ಸಾಲಾಬಾದ್ ರಿಪೇರಿ ಬಗ್ಯೆ ಮೈಲಿ ಬಂದರ 30 ರೂಪಾಯಿ ಮೇರಿಗೆ ತೆಗದುಕೊಳ್ಳಬಹುದೆಂತಲೂ, ಮತ್ತು.

4. ಸಧ್ಯಕ್ಕೆ ಮಲೆನಾಡು ಪ್ರಾಂತ್ಯಕ್ಕೆ ಮಧ್ಯದಲ್ಲಿರುವ ಆಲೂರಿನಲ್ಲಿಯು, ಮೈದಾನು ಮಧ್ಯ ಪ್ರಾಂತದಲ್ಲಿರುವ ಕಳಸಾಪುರದಲ್ಲಿಯೂ, ಎರಡು ಯೂನಿಯನ್ ಏರ್ಪಾಡಾಗಬಹುದೆಂತ ತಲ್ಪಿದ ತೀರ್ಮಾನವನ್ನು ರಿಕಾರ್ಡು ಮಾಡಿಕೊಂಡದ್ದಲ್ಲದೆ ಇತರ ತಾಲ್ಲೂಕು ಬೋರ್ಡುಗಳ ಈ ವಿಷಯದ ಪ್ರಸ್ತಾಪುಗಳನ್ನು ತರಿಸಿ ಪಟ್ಟುಮಾಡಿ ಮನೆ ಮತ್ತು ಕಂದಾಯದ ಲಿಸ್ಟುಗಳ ಸಹಿತ ಮುಂದಿನ ಡಿಸ್ಟ್ರಿಕ್ಟ್ ಬೋರ್ಡು ಮೀಟಿಂಗಿನಲ್ಲಿ ಇಡಬೇಕೆಂತ ಸಹ ತೀರ್ಮಾನಿಸಲಾಯಿತು.

XI. ಬುಕ್ಕಾಂಬುಧಿ-ಶಿವನೆ ರಸ್ತೆಗೆ ಸಾಲಾಬಾದ್ ರಿಪೇರಿಗಾಗಿ ಸಾಲೀಯಾನಾ ಮೈಲಿ ಬಂದರ 30 ರೂಪಾಯಿನಂತೆ ಕೊಡುತಲಿದ್ದದ್ದನ್ನು 1904-05ನೆ ಸಾಲಿನಿಂದ ಮೈಲಿ ಬಂದರ 60 ರೂಪಾಯಿಗಳಿಗೆ ಹೆಚ್ಚಿಸಿರುವದಾಗಿ ವಗೈರೆ ತಲ್ಪಿದ 6-5-1904ನೆ ಮರ್ಕುಂ 4223-4-L. F. 8-04ನೆ ನಂಬರು ಗವರ್ನಮೆಂಟು ಆರ್ಡರನ್ನು ಓದಿ ರಿಕಾರ್ಡು ಮಾಡಲಾಯಿತು.

XII. 12-4-04ನೆ ಮರ್ಕುಂ ಡಿಸ್ಟ್ರಿಕ್ಟ್ ಬೋರ್ಡಿನ 10ನೆ ನಂಬರು ತೀರ್ಮಾನವನ್ನು ಅನುಸರಿಸಿ ತರೀಕೆರೆಯಲ್ಲಿ ಹಿಂದೂ ವೈದ್ಯಶಾಲೆಯನ್ನು ಇಡುವದಕ್ಕೋಸ್ಕರ ಆ ಮ್ಯೂನಿಸಿಪಲ್ ಬೋರ್ಡಿನವರು ಮಾಹೆಯಾನಾ 25 ರೂಪಾಯಿಗಳ ಮೇರೆ ಕಂಟ್ರಿಬ್ಯೂಷನ್ ಕೊಡಲು ಒಪ್ಪಿರುತ್ತಾರೆಂತ 1ನೆ ಅಸಿಸ್ಟೆಂಟ್ ಕಮೀಷನರವರಿಂದ ಬಂದ 25-5-1904ನೆ ಮರ್ಕುಮಿನ 428ನೆ ಯಾದಿಯನ್ನು ಓದಲಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು ಈ ವೈದ್ಯಶಾಲೆಗೆ ತಿಂಗಳು 1ರ 10 ರೂಪಾಯಿ ಮೇರೆ ತಾವೂನು ವಂತಿಗೆ ಕೊಡುವದಾಗಿಯೂ ತರೀಕೆರೆಯಲ್ಲಿ ವೈದ್ಯಶಾಲೆ ಸ್ಥಾಪಿಸುವ ಬಗ್ಯೆ ಗವರ್ನಮೆಂಟು ಮಂಜೂರಾತಿ ಪಡಿಯಬೇಕಾಗಿ ಸಹ ತೀರ್ಮಾನಿಸಲಾಯಿತು.

XIII. ಸನ್ 1904-05ನೆ ಸಾಲಿನ ಬಡ್ಜಟ್ ಅಂದಾಜಾಗಳನ್ನು ಮಂಜೂರ್ಮಾಡಿರುತ್ತೆಂತ ವಗೈರೆ ಗವರ್ನಮೆಂಟಿನಿಂದ ತಲ್ಪಿದ 20-5-1904ನೆ ಮರ್ಕುಂ 4516-28-L. F. 8-04ನೆ ನಂಬರು ಆರ್ಡರನ್ನು ಓದಿ ರಿಕಾರ್ಡು ಮಾಡಲಾಯಿತು.

XIV. ಮುಂದಿನ ಮೀಟಿಂಗ್ 1904ನೆ ಇಸವಿ ಸೆಪ್ಟಂಬರು 5ನೆ ಸೋಮವಾರ ನಡಿಯಬೇಕೆಂತ ತೀರ್ಮಾನಿಸಲಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1903-1904ನೆ ಇಸವಿ ಮಿ|| ಅರ್ಜೀ ನಂಬರ್ 362.

ಶಿವಮೊಗ್ಗಾದಲ್ಲಿ ವಾಸವಾಗಿದ್ದು ಮೃತಪಟ್ಟ ಕುಸಕೂರು ಪಾಂಡುರಂಗಪ್ಪನವರ ಆಸ್ತೀ ವಿಷಯದಲ್ಲಿ -

ಅರ್ಜೀದಾರ್ರು ಫಂತಿ ಪಾಂಡುರಂಗಪ್ಪನ ಮಗ 1ನೆ ವಿಠಲಪ್ಪ, 2ನೆ ರಂಗಪ್ಪ, 3ನೆ ಮೈ|| ಗಾ|| ತಾಯಿ ಶೇಷಮ್ಮ, ಮೃತಪಟ್ಟ ಸದರೀ ಪಾಂಡುರಂಗಪ್ಪನವರಿಗೆ 1-2ನೆ ಅರ್ಜೀದಾರ್ ಮಕ್ಕಳು ಮತ್ತು 3ನೆ ಮೈ|| ಗಾ|| ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ 1ನೆ ವಿಠಲಪ್ಪ, 2ನೆ ರಂಗಪ್ಪ, 3ನೆ ಮೈ|| ಗಾ|| ಶೇಷಮ್ಮ, ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಪಾಂಡುರಂಗಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ 300 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರಿ ದರಖಾಸ್ತುದಾರರಾದ 1-2-3ನೆ ಅರ್ಜೀದಾರ್ರ ಅರ್ಜಿಯನ್ನು ಸನ್ 1904ನೆ ಇಸವಿ ಜುಲೈ ತಿಂಗಳು ತಾರೀಖು 15ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಪಾಂಡುರಂಗಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜೂನ್ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ಮೊಹರುನಿಶಿ ನಮ್ಮ ದಸ್ತಖತ್ತೊಡನೆ ಕೊಡೋಪಾಗಿಧೆ.

ಸ೯ 1903—1904ನೆ ಇಸವಿ ಅರ್ಜಿ ನಂಬರು 364.

ಹೊಳೆಹೊನ್ನೂರಲ್ಲಿ ವಾಸವಾಗಿದ್ದು ಮೃತಪಟ್ಟ ಇಮಾಂಬಾ ಯವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಹೊಳೆಹೊನ್ನೂರು ಕುಂಬೂರಕೇರಿ ಸವುದಾಗರ್ ಇಮಾಂಬಾ ಮಗಳು ಮಹಾಬೂಬಿ, ಮೈ॥ ಗಾ॥ ಮುರ್ಕಾ ದಾರ್ ಮದಾರ್‌ಸಾಬ್, ಮೃತಪಟ್ಟ ಸದರೀ ಇಮಾಂಬಾ ಯವರಿಗೆ ಖಾಸಾ ಮಗಳು ಆಗಬೇಕೆಂಬ ಹಕ್ಕುದಾರಿಯು ಮೇಲೆ ಹೊಳೆಹೊನ್ನೂರು ಮೆಹಾಬೂಬಿ, ಮೈ॥ ಗಾ॥ ಮುರ್ಕಾದಾರ್ ಮದಾರ್‌ಸಾಬ್, ಹೊಳೆಹೊನ್ನೂರು ವಾಸಸ್ಥರಾಗಿ ಮೃತಪಟ್ಟ ಇಮಾಂಬಾ ಯವರ ಜಿಂದಿಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ VIIನೆ ನಂಬರ್ ರೆಗ್ಯುಲೇಷ್ಣ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಹೊಳೆಹೊನ್ನೂರು ವಾಸಿ ಮಹಾಬೂಬಿ ಮೈ॥ ಗಾ॥ ಮದಾರ್‌ಸಾಬ್ ಅರ್ಜಿಯನ್ನು 1904ನೆ ಇಸವಿ ಜುಲೈ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಇಮಾಂಬಾ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇಧೆ.

ಸ೯ 1904ನೆ ಇಸವಿ ಜೂ೯ 16ನೆ ತಾರೀಖಿನಲ್ಲಿ ಕೋರ್ಟು ಮೊಹರು ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ೯ 1903—1904ನೆ ಇಸವಿ ವಿ॥ ಅರ್ಜೀ ನಂಬರ್ 368.

ಶಿವಮೊಗ್ಗದಲ್ಲಿ ವಾಸವಾಗಿದ್ದು ಮೃತಪಟ್ಟ ನಾಡಿಗ ರಾಮಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಫವತಿಯವರ ಹೆಂಡತಿ ಶಂಕರಮ್ಮ, ಶಿವಮೊಗ್ಗ ವಾಸಿ, ಮೃತಪಟ್ಟ ಸದರೀ ರಾಮಪ್ಪನವರಿಗೆ ಖಾಸ ಹೆಂಡತಿ ಆಗಬೇಕೆಂಬ ಹಕ್ಕುದಾರಿಯ ಮೇಲೆ ಶಿವಮೊಗ್ಗ ವಾಸಸ್ಥರಾಗಿ ಮೃತಪಟ್ಟ ರಾಮಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ (349—12—6) ಸಾಲವನ್ನು ವಸೂಲ್ಮಾಡುವದಕ್ಕೆ ಸ೯ 1901ನೆ ಇಸವಿ VIIನೆ ನಂ. ರೆಗ್ಯುಲೇಷ್ಣ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶಂಕರಮ್ಮನ ಅರ್ಜಿಯನ್ನು ಸ೯ 1904ನೆ ಇಸವಿ ಜುಲೈ ತಿಂಗಳು ತಾರೀಖು 22ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾಡಿಗ ರಾಮಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ೯ 1904ನೆ ಇಸವಿ ಜೂ೯ ತಿಂಗಳು 16ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ವೆಂಕಟವರದ ಐಯ್ಯಂಗಾರ್,
ಡಿಸ್ಟ್ರಿಕ್ಟ್ ಜಡ್ಜ್.

ಬೆಂಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ೯ 1903—1904ನೆ ಇಸವಿ ವಿ॥ ಅರ್ಜೀ ನಂಬರ್ 740.

ಅರ್ಜೀದಾರ್ರು ನೆಲವಂಗಲ ಕಸಬಾದಲ್ಲಿ ಇರುವ ನಾರಣಯ್ಯನ ಮಗ ಪಟ್ಟಾಭಯ್ಯ, ವೈನರಾದ ನೆಲವಂಗಲದ ತಾಲ್ಲೂಕು ತೆಪ್ಪದ ಬೇಗೂರು ಬಳಿ ಇರುವ ಫವತಿ ನಂಜುಂಡಯ್ಯನ ಮಕ್ಕಳು 1ನೆ ಕೃಷ್ಣಯ್ಯ, 2ನೆ ಪಾರ್ವತಮ್ಮನ ಆಸ್ತೀ ವಿಷಯದಲ್ಲಿ—

ಸದರೀ ವೈನರಾದ 1ನೆ ಕೃಷ್ಣಯ್ಯ ವಗೈರೇರಿಗೆ ಗ್ನಾತಿ ಆಗಬೇಕೆಂಬ ಹಕ್ಕಿನಮೇಲೆ ಪಟ್ಟಾಭಯ್ಯನು ಸದರೀ ವೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜಿಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ೯ 1904ನೆ ಇಸವಿ ಜುಲೈ ತಾರೀಖು 1ರಲ್ಲು ವೊಕರರು ಹಾಜರಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸ೯ 1904ನೆ ಇಸವಿ ಜೂ೯ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಪಿ. ಶಿಂಗ್ರಾಚಾರ್,
ಸಬ್ ಜಡ್ಜ್.

ಮೈಸೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

ಸ೯ 1903—1904ನೆ ಇಸವಿ ವಿ॥ ಅರ್ಜೀ ನಂಬರ್ 484.

ಕೃಷ್ಣರಾಜಪೇಟೆ ತಾ॥ ಹರಳಳ್ಳಿಲಿದ್ದು ಮೃತಪಟ್ಟ ಮರಿಗೌಡನ ಮಗ ಕೆಂಪೆಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಕೃಷ್ಣರಾಜಪೇಟೆ ತಾ॥ ಕಸಬಾ ಹೋಬಳಿ ರಾಮಸಮುದ್ರದಲ್ಲಿರುವ ಕಪ್ಪಣ್ಣನ ಮಗ ತಿಮ್ಮೇಗೌಡನ ಹೆಂಡತಿ ಬೋರಾಜಮ್ಮ, ಮೃತಪಟ್ಟ ಸದರೀ ಕೆಂಪೆಗೌಡನಿಗೆ ಮಗಳು ಆಗಬೇಕೆಂಬ ಹಕ್ಕುದಾರಿ ಮೇಲೆ ಕೃಷ್ಣರಾಜಪೇಟೆ ತಾ॥ ಹರಳಳ್ಳಿಲಿ ವಾಸಸ್ಥರಾಗಿ ಮೃತಪಟ್ಟ ಕೆಂಪೆಗೌಡನ ಜಿಂದಗಿ ಬಗ್ಯೆಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ೯ 1901ನೆ ಇಸವಿ 7ನೆ ರೆಗ್ಯುಲೇಷ್ಣ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಬೋರಾಜಮ್ಮನ ಅರ್ಜಿಯನ್ನು ಸ೯ 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 2ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪೆಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ೯ 1904ನೆ ಇಸವಿ ಜೂ೯ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 495.

ಮೃತಪಟ್ಟ C. V. ರಂಗನಾಥ ಅಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಮೈಸೂರು ಅರಮನೆ ಇಲಾಖಾ ಇಂಜನೀರ್ ಆಫೀಸಿನಲ್ಲಿ ಕ್ಯಾರ್ಕು ಆಗಿದ್ದ ರಂಗನಾಥ ಅಯ್ಯಂಗಾರ್ರ ಹೆಂಡತಿ ರಂಗನಾಯಕಮ್ಮ, ಮೃತಪಟ್ಟ ಸದರೀ C. V. ರಂಗನಾಥ ಅಯ್ಯಂಗಾರ್ರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ C. V. ರಂಗನಾಥ ಅಯ್ಯಂಗಾರ್ರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ರಂಗನಾಯಕಮ್ಮನ ಅರ್ಜಿಯನ್ನು ಸನ್ 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ C. V. ರಂಗನಾಥ ಅಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜೂನ್ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 500.

ನಂಜನಗೂಡ ಕಸಬಾದಲ್ಲಿದ್ದು ಮೃತಪಟ್ಟ ಮಾದಮ್ಮನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಂಜನಗೂಡು ಕಸಬಾದಲ್ಲಿ ವಾಸವಾಗಿದ್ದು ಮೃತಪಟ್ಟ ಮಾದಮ್ಮನ ಮಗ ಜವರಾ ಮೈ|| ಗಾ|| ಸುಬ್ಬೆಗೌಡ, ಮೃತಪಟ್ಟ ಸದರೀ ಮಾದಮ್ಮನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ನಂಜನಗೂಡು ವಾಸಸ್ಥರಾಗಿ ಮೃತಪಟ್ಟ ಮಾದಮ್ಮನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜವರಾ ಮೈ|| ಗಾ|| ಸುಬ್ಬೆಗೌಡನ ಅರ್ಜಿಯನ್ನು ಸನ್ 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಾದಮ್ಮನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜೂನ್ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 502.

ಮೃತಪಟ್ಟ ಹಾಳೇಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಹೆಗ್ಗಡದೇವನಕೋಟೆ ತಾ|| ಪನ್ನಹಳ್ಳಿ ಹೋಬಳಿ ಸರ್ವಮಾನ್ಯ ಗಂಗಡಹೊಸಳ್ಳಿಲಿರುವ ಚಿಕ್ಕೆಗೌಡನ ಮಗ ಚಿಕ್ಕೆಗೌಡ, ಮೃತಪಟ್ಟ ಸದರೀ ಹಾಳೇ ಗೌಡನಿಗೆ ಅಣ್ಣನ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಹೆಗ್ಗಡದೇವನಕೋಟೆ ತಾಲ್ಲೂಕು ಪನ್ನಹಳ್ಳಿ ಹೋ|| ಸರ್ವಮಾನ್ಯ ಗಂಗಡಹೊಸಹಳ್ಳಿ ವಾಸಸ್ಥರಾಗಿ ಮೃತಪಟ್ಟ ಹಾಳೇಗೌಡನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಚಿಕ್ಕೆಗೌಡನ ಅರ್ಜಿಯನ್ನು ಸನ್ 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಹಾಳೇಗೌಡನ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜೂನ್ ತಿಂಗಳು 11ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ|| ಅರ್ಜೀ ನಂಬರ್ 526.

ಮೃತಪಟ್ಟ ಚಿಕ್ಕ ತಿರುನಾರಣಯ್ಯಂಗಾರ್ರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಶ್ರೀರಂಗಪಟ್ಣದಲ್ಲಿರುವ ಮಂಡ್ಯದ ಕೃಷ್ಣಯ್ಯನ ಚಿಕ್ಕ ತಿರುನಾರಣಯ್ಯಂಗಾರ್ರ ಮಗ ಶ್ರೀನಿವಾಸಯ್ಯಂಗಾರ್ರು, ಮೃತಪಟ್ಟ ಸದರೀ ಚಿಕ್ಕ ತಿರುನಾರಣಯ್ಯಂಗಾರ್ರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಣದ ವಾಸಸ್ಥರಾಗಿ ಮೃತಪಟ್ಟ ಚಿಕ್ಕ ತಿರುನಾರಣಯ್ಯಂಗಾರ್ರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಶ್ರೀನಿವಾಸಯ್ಯಂಗಾರ್ರ ಅರ್ಜಿಯನ್ನು ಸನ್ 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಚಿಕ್ಕ ತಿರುನಾರಣಯ್ಯಂಗಾರ್ರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಜೂನ್ 11ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಮಿ॥ ಅರ್ಜೀ ನಂಬರ್ 545.

ಮೃತಪಟ್ಟ ಕೆಂಪೆಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ನಾಗಮಂಗಲದ ತಾ॥ ಹೊಣಕೆರೆ ಹೋಬಳಿ ಕರಡೇದ ಗ್ರಾಮದಲ್ಲಿರುವ 1ನೆ ಮೇಸ್ತ್ರಿ ಕೆಂಪೆಗೌಡನ ದತ್ತು ಮಗ ಕೆಂಪ ಮೈ॥ ಗಾ॥ ತಿಮ್ಮಮ್ಮ, 2ನೆ ತಿಮ್ಮಮ್ಮ, ಮೃತಪಟ್ಟ ಸದರೀ ಕೆಂಪೆಗೌಡರಿಗೆ 1ನೆ ಮಗ 2ನೆ ಯವರು ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ನಾಗಮಂಗಲದ ತಾಲ್ಲೂಕು ಹೊಣಕೆರೆ ಹೋ॥ ಕರಡೇದ ಗ್ರಾಮದ ವಾಸಸ್ಥರಾಗಿ ಮೃತಪಟ್ಟ ಕೆಂಪೆಗೌಡನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಕೆಂಪ ಮೈ॥ ಗಾ॥ ತಿಮ್ಮಮ್ಮ, 2ನೆ ತಿಮ್ಮಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 9ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕೆಂಪೆಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇಧೆ.

ಸನ್ 1904ನೆ ಇಸವಿ ಜೂನ್ ತಿಂಗಳು 17ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ್.

ಚಿಕ್ಕಬಳ್ಳಾಪುರ ಮುನ್‌ಸಿಫ್ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಚಿಕ್ಕಬಳ್ಳಾಪುರ ತಾಲ್ಲೂಕ್ ಕಳವರ ಗ್ರಾಮದ ಪಟೇಲ್ ಸಂಪಂಗಿವೆಂಕಟಶಾಮಿಗೌಡರ ವಿಷಯದಲ್ಲಿ—

ಸನ್ 1903—1904ನೆ ಇಸವಿ ದಿವಾಳಿಕೇಸ್ ನಂಬರು 283.

ಹುಕ್ಕುಂ.

ಮೇಲ್ಕಂಡ ಸಂಪಂಗಿವೆಂಕಟಶಾಮಿ ಗೌಡನು ನಿರ್ಬಂಧದಿಂದ ಖುಲಾಸೇ ಯಾಗಬೇಕೆಂದು ಕೊಟ್ಟ ಅರ್ಜೀ ಅಂಶವು ಮುನ್‌ಸೀಫ್ A. ನರಸಿಹ್ಮ ಅಯ್ಯಂಗಾರ್ ಎಸ್ಕ್ವಯರ್ ಯವರ ರೂಬರೂ ಅರ್ಜಿದಾರರಾದ ಸಂಪಂಗಿ ವೆಂಕಟಶಾಮಿಗೌಡನು ಮತ್ತು ಸದರಿ ಯವರ ಲೇಣೇದಾರರಾದ 1ನೆ ಮೈಲಪ್ಪನಹಳ್ಳಿ ಇಮಾಂಸಾಬಿಯವರ ತರಫ್ ಪ್ಲೀಡರ್ G. ಸುಬ್ಬರಾಯರು, 3ನೆ ಯಡಗೈ ಬಾಬಿಗೆ ಇವರಿಗೂ ಸಹ ದರ್ಯಾಫ್ತೀ ಮಾಡಲ್ಪಟ್ಟಿತು. ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರರು ತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ 2ನೆ ಕಳವರದ ಮೇಕೆ ಬಚ್ಚಂಣ, ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೆ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಸಂಪಂಗಿವೆಂಕಟಶಾಮಿಗೌಡರು ಹೊಂದುವದಕ್ಕೆ ಹಕ್ಕುದಾರರಾಗುವದರ ಮೂಲಕ ದಿವಾಳಿಯಾದವರೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವರನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧ ಪಡುವ ಜವಾಬ್‌ದಾರಿಯಿಂದ ಸಹ ಅವರನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1904ನೆ ಇಸವಿ ಜೂನ್ 17ನೆ ತಾರೀಖಿನಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್ತನಿಸಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೆದಾರರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲಿ ತಿಳಿಯಬಂದ ಅವರುಗಳ ವಾಸಸ್ಥಳ.	ಮೊಬಲಗು.	ಯಾವಾಗ ದೇಣೇ ಪುಂಟಾದದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವಿ ಏನಾದರೂ ಇದ್ದರೆ.	ಷರಾ.
1	ಮೈಲಪ್ಪನಹಳ್ಳಿ ಇಮಾಂಸಾಬಿ	17-12-6		ಡಿಕ್ರು ಬಾಬತು	
2	ಮೇಕೆ ಬಚ್ಚಂಣ, ಕಳವರ	400- 0-0	...	ಡಿಟೋ	
3	ಮಂಡಿಕಲ್ ಹೋಬಳಿ ಪಾತೂರು ಎಡಗೈ ಬಾಬಿಗ ..	50- 0-0		ಡಿಟೋ	
		467-12-6			

ಎ. ನರಸಿಹ್ಮಯ್ಯಂಗಾರ್.
ಜಡ್ಜ್.

ಮೈಸೂರ ಗೆಜೆಟ್ ಚಂದಾದಾರರು ವಗ್ಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತ್ತ, ಮತ್ತು ಸದರೀ ಗೆಜೆಟ್ಟನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ಮುಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8

ಚಷ್ ವಾಹೇ ಯಾ ಕ್ವಾರ್ಟರಿಗೆ

ದಾವಾಖಾಯಿ ಪ್ರಕಾರ ದರಗಳು

	ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಸ್ ಯಾ ಆಕ್ಟ್ಸಗಳು ಯಾವದೂ ಇಲ್ಲದಿದ್ದರೆ.	0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜ್ ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜುಲೈ 2ನೆ ಮರ್ಕುಂ 155ನೆ ನಂಬರ್ ಉಳ್ಳ ಗವರ್ಣಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭಾವಿಕೆ ಕೆಲಸ ನೋಡುತಲಿಧಾರೆಂಬದಾಗಿ ಆಯಾ ತಾಲ್ಲೂಕು ಅಮಲ್‌ದಾರರಿಂದ ಬಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂ೯ 21ನೆ ಮರ್ಕುಂ 24205—6—ಜಿ. 6200ನೆ ನಂಬರ್ ಗವರ್ಣಮೆಂಟ್ ಆರ್ಡರ್ ಅನುಸರಿಸಿ ಮೇಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವ್ ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1860ನೆ ಇಸವಿ XXVIIನೆ ಆಕ್ಟ್ಸ ಅನುಸರಿಸಿ ಸರ್ಟಿಫಿಕೇಟ್

ಬಗ್ಗೆ ನೋಟಿಸ್‌ಗಳು :—

	ರೂ. ಆ.
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಗೆ ಇಂಗ್ಲೀಷು ಅಥವಾ ಕನ್ನಡ ..	2 8
ಎರಡನೇ ಸಲ ವ ಆತರುವಾಯು ಪ್ರತಿ ಆವರ್ತಿಗೂ ಡಿಟೋ ..	1 4

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 347ನೆ ಸೆಕ್ಷನ್ ಅನುಸರಿಸಿ ದಿವಾಳಿ ಅಪ್ಲಿಕೇಷನ್‌ಗಳ ಬಗ್ಗೆ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯು ಪ್ರತಿ ದಫಾಕ್ಕೆ ..	2 0

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 354ನೆ ಸೆಕ್ಷನ್ ಅನುಸರಿಸಿ ಸಿವಿಲ್ ಕೋರ್ಟ್‌ಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಒಗರ್ ಚಾರ್ಜ್ ಪ್ರಕಟಿಸಲ್ಪಡುತ್ತ್ತವೆ.

ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗ್ಗೈರೆ ಕೊಡುವ ಬಗ್ಗೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—

ಮೊದಲನೇ ಸಲಕ್ಕೆ	ಪುಟ 1ಕ್ಕೆ	..	10 0
ಎರಡನೇ ಸಲ ವ ಆತರುವಾಯು ಪ್ರತಿ ಸಲಕ್ಕೂ	,,	..	5 0

ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—

ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ	ಪಙ್ತಿ 1ಕ್ಕೆ	..	0 8
ಎರಡನೇ ದಫಾ	ಡಿಟೋ	ಡಿಟೋ	0 6
ಮೂರನೇ ವ ಆತರುವಾಯು ಪ್ರತಿ ಸಲಕ್ಕೆ	..	..	0 4

ಸೂಚನೆ.—ಚಂದಾ ವಗ್ಗೈರೆ ಬಗ್ಗೆ ಪೋಸ್ಟೇಜ್ ಲೇಬಿಲ್ಲು ಕಳುಹಿಸಲ್ಪಟ್ಟಾಗ ರೂಪಾಯಿಗೆ ಒಂದಾಣೆಯಂತೆ ಜಾಸ್ತೀ ಲೇಬಿಲ್ಲು ಕಳುಹಿಸಲ್ಪಡತಕ್ಕದ್ದು.

ಗವರ್ಣಮೆಂಟ್ ಆರ್ಡರ್ ಪ್ರಕಾರ ತಮಾಂ ಚಂದಾ ವೊಬಲಗುಗಳೂ, ಪ್ರಕಟನೇ ಚಾರ್ಜ್‌ಗಳೂ ಮುಂಗಡವಾಗಿ ಪಾವತಿ ಮಾಡಲ್ಪಡಬೇಕು.

ಸರ್ಕಾರಿಯಾಗಿ ಗೆಜೆಟ್ ಪಡೆಯುವ ಬಗ್ಗಾದ ದರಖಾಸ್ತುಗಳು ಮೈಸೂರ್ ಗವರ್ಣಮೆಂಟ್ ಜನರಲ್ ಮತ್ತು ರೆವಿನ್ಯೂ ಇಲಾಖ ಸೆಕ್ರಿಟೆರಿಯವರಿಗೆ ಕಳುಹಿಸಲ್ಪಡತಕ್ಕದ್ದು.

ಗೆಜೆಟ್ ತಲಪಲಿಲ್ಲವೆಂಬ ಫಿರ್ಯಾದುಗಳು ಇದರಡಿ ರುಜು ಮಾಡಿರುವವರಿಗೆ ಅದು ತಲಪಬೇಕಾದ ವಾರೀಖು ಲಾಗಾಯತು ಬಂದು ವಾರದ ಒಳಗಾಗಿ ತಿಳಿಸಲ್ಪಡಬೇಕು.

ಮೈಸೂರ ಗಜೆಟ್‌ನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟಿಸ್ ವ ಇಸ್ತಿಹಾರ್‌ನಾಮೆಗಳೂ ಆ ಗೆಜೆಟ್ ಛಾಪಿಸಲ್ಪಡುವ ಹಿಂದಿನ ಮಂಗಳವಾರದ ದಿವಸ ಮಧ್ಯಾನ್ಹ 12 ಘಂಟೆ ವಳಗಾಗಿ ಕಂಪೈಲರ್ ಆಫೀಸಿಗೆ ತಲಪಬೇಕಾಗಿರುತ್ತೆ. ಆ ತರುವಾಯ ಕಳುಹಿಸಲ್ಪಡುವ ಯಾ ತಲಪುವ ಕಾಗದಗಳು, ಕೆಲಸ ನಿರ್ವಾಹಕ್ಕೆ ಅನುಕೂಲವಾಗಿದ್ದರೇನೇ ಹೊರ್ತು ಅನ್ಯಥಾ ಅದೇ ವಾರದ ಗೆಜೆಟ್ಟನಲ್ಲಿ ಛಾಪಿಸಲ್ಪಡುತ್ತೆಂಬ ಖಾತರಿ ಇಲ್ಲ.

ಜಿ. ಹ್ಯೂಂ ರೈಟ್,
ಕಂಪೈಲರ್, ಮೈಸೂರ ಗೆಜೆಟ್.

Mysore Govt. Central Press, Bangalore.—1904.

1063

ಮೈಸೂರ ಗೆಜೆಟ್.

ಸಂ. 39. ಸರ್ಕಾರದಿಂದ ಫಾಯಿಷ್ ಆದ್ದು. [ನಂ. 27.

ಬೆಂಗಳೂರು, ಗುರುವಾರ, ಜುಲೈ ತಾ|| 7, ಸ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರ ಬೇರೆಯಾಗಿ ಪುಟ ನಂಬರ್ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ–ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ಜನಾಂ ಸೂಪರ್ಟೆಂಡೆಂಟರು, ಕಾಂಪ್ಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇರ್ಷ ವ ಯುಡ್ಯುಕೇಷನ್ ಇನ್‌ಸ್ಪೆಕ್ಟರಿ ಜನರಲ್ಲವರು, ಮ್ಯುನಿಸಿಪಲ್ ಬೋರ್ಡ್ಸುಪ್ರಸಿಡೆಂಟರು ಡಿಸ್ಟ್ರಿಕ್ಟ್ ವ ಸೆಷನ್ ಜಡ್ಜಿರು, ಡಿಸ್ಟ್ರಿಕ್ಟ್ ಪೊಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗ್ಗೈರೆ ಕಾಲಸ್ಥತೀ ರಿಪೋರ್ಟುಗಳು; ಪೋಸ್ಟ್ಫಿಸ್ ನೋಟಿಸ್‌ಗಳು.

3ನೆ ಭಾಗ–ಲೆಜಿಸ್‌ಲೇಟಿವ್ ರಗ್ಯುಲೇಷ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ–ಸರ್ಕಾರೀ ಕಾಗದಪತ್ರಗಳು —ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ಜನರಲ್.—ನಂ.97, ತಾರೀಖು 6ನೆ ಜುಲೈ 1904, ಮೊಕ್ಕಾಂ ಬೆಂಗಳೂರು.

1904ನೆ ಇಸವಿ ಜೂನ್ ತಾರೀಖು 24ರಲ್ಲು ವರ್ಧಂತಿ ಮಹೋತ್ಸವ ಪ್ರಯುಕ್ತವಾದ ದರಬಾರಿನಲ್ಲಿ ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದೂರವರು ಬಿರುದನ್ನು ದಯಪಾಲಿಸಿ ಅಪ್ಪಣೆ ಕೊಟ್ಟ ಇದರ ಕೆಳಗೆ ಬರುವ ಪ್ರಸಿದ್ಧಪತ್ರಿಕೆಯನ್ನು ಸರ್ವರ ತಿಳುವಳಿಕೆ ಬಗ್ಗೆ ಪ್ರಕಟಪಡಿಸಿರುತ್ತೆ.

ಹುಕುಂ ಬಮೋಜೀಬ್,

ಬಿ. ಕೆ. ವೆಂಕಟವರದಯ್ಯಂಗಾರ್,

ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಗವರ್ನ್‌ಮೆಂಟ್ ಅಫಿಸಿಯೇಟಿಂಗ್ ಸೆಕ್ರಟೆರಿ.

ಪ್ರಸಿದ್ಧಪತ್ರಿಕೆ.

ಶ್ರೀ.

ಶ್ರೀಮತ್ಸಮಸ್ತ ಭೂಮಂಡಲಮಂಡನಾಯಮಾನ ನಿಖಿಳದೇಶಾವತಂಸ ಕರ್ಣಾಟಕಜನಪದ ಸಂಪದನುಭೂತ ಶ್ರೀಮನ್ಮಹೀಶೂರಮಹಾಸಂಸ್ಥಾನಮಧ್ಯ ದೇದೀಪ್ಯಮಾನಾವಿಕಲಕಳಾನಿಧಿ ಕುಲಕ್ರಮಾಗತರಾಜಕ್ಷಿತಿಪಾಲಪ್ರಮುಖ ನಿಖಿಳರಾಜಾಧಿರಾಜ ಮಹಾರಾಜ ಚಕ್ರವರ್ತಿಮಂಡಲಾನುಭೂತ ದಿವ್ಯರತ್ನ

ಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿಬಿರುದೆಂ
ತಂಬುರಗಂಡ ಲೋಕೈಕವೀರ ಯದುಕುಲಪಯಃಪಾರಾವಾರಕಳಾನಿಧಿ ಶಂಖಚಕ್ರಾಂಕುಶ ಕುಠಾರ ಮಕರ
ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀ ವರಾಹ ಹನೂಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತ
ರಾದ ಕರ್ನಾಟಕಸಿಂಹಾಸನಾಧೀಶ್ವರ

ಶ್ರೀಮತ್ಕೃಷ್ಣರಾಜ ಒಡೆಯರ್ ಬಹದ್ದೂರವರು.

ಶಾಲೀವಾಹನ ಶಕ ೧೮೮೬ನೆ ಕ್ರೋಧಿನಾಮ ಸಂವತ್ಸರದ ನಿಜಜ್ಯೇಷ್ಠ ಶುದ್ಧ ೧೧ ಗುರುವಾರ
ದಲ್ಲು ನಮ್ಮ ವರ್ಧಂತಿ ಮಹೋತ್ಸವ ಪ್ರಯುಕ್ತವಾದ ದರ್ಬಾರಿನಲ್ಲಿ ನಮ್ಮ ಅನುಗ್ರಹಕ್ಕೆ ಪಾತ್ರರಾದ
ದಿವಾಣ ಬಹದ್ದೂರ್ ಅಯ್ಯಾಸಾಮಿ ಐಯ್ಯರ್. ರಾಮಚಂದ್ರ ಐಯ್ಯರವರಿಗೆ 'ರಾಜಧರ್ಮ
ಪ್ರವೀಣ' ಎಂಬ ಬಿರುದನ್ನು ತಕ್ಕ ಮರ್ಯಾದೆಗಳೊಡನೆ ದಯಪಾಲಿಸಿರುತ್ತೇವೆ.

KRISHNARAJA WADIYAR.

ತಾರೀಖು 16ನೆ ಜೂನ್ 1904.

ನಂ. ಲೋ. ಬೋ. ಪಿ. 1539, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ
ರೋಗಗಳ ರೆಗ್ಯುಲೇಷ್ನ ಅನುಸರಿಸಿ 1893ನೆ ಫೆಬ್ರವರಿ 10ನೆ ಮುಕ್ಕಂ 9383—ಮಿ. ಫೈ. 21-96ನೆ ಮತ್ತು 9384—ಮಿ.
ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೂಡಲ್ಪಟ್ಟ ರೆಗ್ಯುಲೇಷ್ನಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟ
ಹೊಸದುರ್ಗ ತಾಲ್ಲೂಕಿನಲ್ಲಿರುವ ಶ್ರೀ ರಂಗಾಪುರಗ್ರಾಮವು ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು.

ತಾರೀಖು 16ನೆ ಜೂನ್ 1904.

ನಂ. ಲೋ. ಬೋ. ಪಿ. 1541, ಶಾಸನದ ಡಿಸ್ಟ್ರಿಕ್ಟ್ ಅರಕೀಕೆರೆ ತಾಲ್ಲೂಕಿನ ತಿರುಪತಿಯಲ್ಲಿ ನಡೆಯುವ ಶ್ರೀ ವೆಂಕಟರಮ
ಣಸ್ವಾಮಿಯ ರಥೋತ್ಸವದ ಸಂದರ್ಭದಲ್ಲಿ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟ
ರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದ
ವರಿಗೆ ನಿಷ್ಪನ್ನರ್ಷೆಯಾಗಿರುವದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರಿ ರಗ್ಯುಲೇಷನ್ನಿಂದ ತಮಗೆ
ಕೊಡಲ್ಪಟ್ಟ ಅಧಿಕಾರಗಳ ಜೆಲಾವಣೆಯಲ್ಲಿ, 1904ನೆ ಜುಲೈ 17ರ ಲಾಗಾಯುತ್ತು 27ರ ವರೆಗೆ ಪ್ಲೇಗ್ ರೋಗ ತಗಲಿದ ಪ್ರದೇಶ
ಗಳಿಂದ ಜನಗಳು ಸದರೀ ಸ್ಥಳಕ್ಕೆ ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು
ಅಡ್ಡೀಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಮೇಲ್ಕಂಡ ಉತ್ಸವಕ್ಕೆ ಕೂಡುವ ದಬ್ಬೋಬಸ್ತು ಜನಗಳು ವಾಪಸು ಕಳುಹಿಸಲ್ಪ
ಡುವದು.

ತಾರೀಖು 18ನೆ ಜೂನ್ 1904.

ನಂ. 1545—ಲೋ. ಬೋ. ಪಿ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾ
ಮಿಕ ರೋಗಗಳ ರೆಗ್ಯುಲೇಷ್ನ ಅನುಸರಿಸಿ 1893ನೆ ಫೆಬ್ರವರಿ 10ನೆ ಮುಕ್ಕಂ 9383—ಮಿ. ಫೈ. 21-96ನೆ ಮತ್ತು
9384-ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೂಡಲ್ಪಟ್ಟ ರೆಗ್ಯುಲೇಷ್ನಗಳ ಉದ್ದೇಶಗಳಿಗೋಸ್ಕರ ಚಿತ್ರ
ದುರ್ಗ ಡಿಸ್ಟ್ರಿಕ್ಟಿನ ಹೊಸದುರ್ಗ ತಾಲ್ಲೂಕಿನಲ್ಲಿರುವ ಅನಿವಾಳ ಗ್ರಾಮವು ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು.

ತಾರೀಖು 21ನೆ ಜೂನ್ 1904.

ನಂ. ಲೋ. ಬೋ. (ಪಿ.) 1555, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಆಗಾಗ್ಗೆ
ರೋಗ ತಗಲಿದ ಪ್ರದೇಶಗಳಾಗಿ ಪ್ರಸಿದ್ಧಪಡಿಸಲ್ಪಟ್ಟು, ಇಪರಡೀ ಕಂಡ ಸ್ಥಳಗಳು ಅಂತಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪ
ಟ್ಟಿರುತ್ತವೆ :—

ಕೋಲಾರ ಡಿಸ್ಟ್ರಿಕ್ಟ್.

ಸ್ಥಳ.	ತಾಲ್ಲೂಕು.
ಸಿಡ್ಲಗಟ್ಟ ಟರ್ಫ	... ಸಿಡ್ಲಗಟ್ಟ
ಕಲ್ಲಕಲ್ಲ	... ಚಿಂತಾಮಣಿ
ಕಾಸಂಬಳ್ಳಿ	... ಬಾರಿಂಗಪೇಟೆ
ಸಾದಲಿ	... ಸಿಡ್ಲಗಟ್ಟ
ಮಯಲಪ್ಪನಹಳ್ಳಿ	... ಚಿಕ್ಕಬಳ್ಳಾಪುರ
ಕೈವಾರ	... ಚಿಂತಾಮಣಿ
ಕೆಲ್ಲಕೋಟೆ	.. ಕೋಲಾರ
ಶಾಮನಪಳ್ಳಿ	.. ಡಿಟೋ

ಸ್ಥಳ.	ತಾಲ್ಲೂಕು.
ಗಂಗಮ್ಮನ ಪಳ್ಳ್ಯ	... ಬಾರಿಂಗಪೇಟೆ
ಕಾಳನಾಯಕನಹಳ್ಳಿ	.. ಸಿಡ್ಲಗಟ್ಟ
ಬೂಚಹಳ್ಳಿ	.. ಡಿಟೋ
ಇಡ್ಲೂಡು	.... ಡಿಟೋ
ಕಾಚೂರು	.. ಚಿಕ್ಕ ಬಳ್ಳಾಪುರ
ಕಾಮಸಂದ್ರ	.. ಬಾರಿಂಗಪೇಟೆ
ಸೂಲಿಕುಂಟೆ	.. ಡಿಟೋ

1065

ತಾರೀಖು 21ನೆ ಜೂನ್ 1904.

ನಂ: ಲೋ. ಬೋ. ಪಿ. 1553, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9384—ಮಿ. ಫೈ. 21—96 ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಗೆಜ್ಜೇನಹಳ್ಳಿ	ಶಿವಮೊಗ್ಗಾ.	ಚಿಕ್ಕಬಸೂರು	ಹೊನ್ನಾಳಿ.
ಕಲ್ಲಹಳ್ಳಿ	ಡಿಟೋ	ಸೊರತೂರು	ಡಿಟೋ
ಸಿದ್ಲಿಪುರ	ಡಿಟೋ	ಅರಬಗಟ್ಟೆ	ಡಿಟೋ
ಮೇಲಿನ ಹಣಸವಾಡಿ	ಡಿಟೋ	ಅರಕೆರೆ	ಡಿಟೋ
ಗಾಜನೂರು	ಡಿಟೋ	ಸೊರಬ	ಸೊರಬ.
ಇಸ್ಲಾಪುರ	ಡಿಟೋ	ಮಲ್ಲಾಪುರ	ಡಿಟೋ
ರಾಮೇನಕೊಪ್ಪ	ಡಿಟೋ	ಹಂಚಿ	ಡಿಟೋ
ಚಿಕ್ಕ ಕಡೂರು	ಡಿಟೋ	ಮುಡಿ	ಡಿಟೋ
ಪುರ್ಲೆ	ಡಿಟೋ	ಹಾಲೆಕೊಪ್ಪ	ಡಿಟೋ
ಗೊಂಡಿಹಳ್ಳಿ	ಡಿಟೋ	ಬೆಳಗಾವಿ	ಷಿಕಾರಿಪುರ.
ಸನ್ಯಾಸಿಕೊಡಮಗ್ಗಿ	ಡಿಟೋ	ಮಲ್ಲೇನಹಳ್ಳಿ	ಡಿಟೋ
ಜೋಳದಹಾಲು	ಚನ್ನಗಿರಿ.	ತೊಗರಸಿ	ಡಿಟೋ
ಮುದಿಗೆರೆ	ಡಿಟೋ	ಮೈತಮ್ಮನ ಮುಚಡಿ	ಡಿಟೋ
ಬನ್ನಿಹಟ್ಟಿ	ಡಿಟೋ	ಪಾಡನೆಲ್ಲ	ಸಾಗರ.
ಬಿಲ್ಲಹಳ್ಳಿ	ಡಿಟೋ	ಸಂಣಮನೆ	ಡಿಟೋ
ಪಾಂಡವಮತ್ತಿ	ಡಿಟೋ	ಕನುಕೋಟ	ಡಿಟೋ
ನವಲೆಹಾಲು	ಡಿಟೋ	ಬಾಳೆ ಕೊಪ್ಪ	ಕುಂಸಿ ಸಬ್ ತಾ॥
ತರಗನಹಳ್ಳಿ	ಹೊನ್ನಾಳಿ.	ತ್ಯಾಜವಳ್ಳಿ	ಡಿಟೋ

ತಾರೀಖು 30ನೆ ಜೂನ್ 1904.

ನಂ. ಲೋ. ಬೋ. ಪಿ. 1608, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಕೋಲಾರ ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
ಚೆನ್ನನಹಳ್ಳಿ	ಚಿಕ್ಕಬಳ್ಳಾಪುರ.	ಸೆಟ್ಟಿವಾರಪಲ್ಲಿ	ಚಿಕ್ಕಬಳ್ಳಾಪುರ.
ಕಾಮಸೆಟ್ಟಿಹಳ್ಳಿ	ಡಿಟೋ	ಸೀಗಿಮಾಕೊಲಹಳ್ಳಿ	ಡಿಟೋ
ಕೋರನಹಳ್ಳಿ	ಡಿಟೋ	ರಾಮಸಂದ್ರ	ಡಿಟೋ
	9	1 117	633	ಯಜಮಾನ ರಂಗ ..	3 ಅಂಕಣಗಳ ಹೆಂಚಿನ ಮನೆ, 6 ಅಂಕಣಗಳ ಹೆಂಚಿನ ಕೈಸಾಲೆ. ಜಮೀನು ..	22 8 17 + 5 2 6	27 5 27 8	ಪುಟ್ಟರಂಗನ ಮನೆ	ಗಲ್ಲಿ	ಗಲ್ಲಿ	ಪುಟ್ಟರಂಗಯ್ಯನ ಮನೆ
	95	118	..	ಬೇವಸ್ಥಾನ, ಯಜಮಾನ ರಂಗ	1 ಅಂಕಣದ ಹೆಂಚಿನ ಮನೆ, 1 ಅಂಕಣದ ಹೆಂಚಿನ ಕೈಸಾಲೆ. ಜಮೀನು	28	22	ತಿಮ್ಮಯ್ಯನ ಮನೆ	ಡಿಟೋ	ಡಿಟೋ	ಗಲ್ಲಿ
	96	119	640	ತಿಮ್ಮಯ್ಯ (ಗೌಡತನ)	6 ಅಂಕಣಗಳ ಹೆಂಚಿನ ಮನೆ, 3 ಅಂಕಣಗಳ ಹೆಂಚಿನ ½ ಕೈಸಾಲೆ. ಜಮೀನು ...	23	22	ರಸ್ತೆ	ರಂಗನ ಮನೆ	ಡಿಟೋ	ಡಿಟೋ

ನಂ. 33 ವ 34 ಇವುಗಳ ಸುತ್ತಲಿರುವ ಗುಡಿಸಲುಗಳನ್ನು ತೆಗೆದು ಹಾಕೋಣದರಿಂದ ಕಾಮಟಿಗೇರಿ ರಸ್ತೆಯನ್ನು ಅಗಲಪಡಿಸುವ ಬಗ್ಗೆ.

	97	36	571	ವೀರಭದ್ರಯ್ಯ ..	1 ಅಂಕಣದ ಹೆಂಚಿನ ಮನೆ, ಮಂಣಿನ ಗೋಡೆ 27 ಒಡು ಗಜಗಳು. ಜಮೀನು ...	86	6	ರಸ್ತೆ	ರಸ್ತೆ	ಅವರಸ್ವಂತ ಸ್ವತ್ತು	ಗಲ್ಲಿ
	98	34	570	ಗಿರಿಯಾಂಣ ..	3 ಅಂಕಣಗಳ ಹೆಂಚಿನ ಮನೆ, 3 ಅಂಕಣಗಳ ಹೆಂಚಿನ ಕೈಸಾಲೆ, 12 ಅಂಕಣಗಳ ಹುಲ್ಲಿನ ಮನೆ, 2 ಅಂಕಣಗಳ ಹುಲ್ಲಿನ ಕೈಸಾಲೆ, ಮಂಣಿನ ಗೋಡೆ 22 ಒಡು ಗಜಗಳು. ಜಮೀನು ..	41 21 18 6	37 36 30 12	ಮುಸಿಪಿಪಲ್ ಜಮೀನು	ಡಿಟೋ	ಅಚ್ಚಪ್ಪನ ಮನೆ	ರಸ್ತೆ

1201

ತಾರೀಖು 30ನೆ ಜೂನ್—7ನೆ ಜುಲೈ 1904.

ನಂ. ರೆ. 4291—ರೆ. ಫೈ. 75-02, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಆಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಹರಿಹರದಲ್ಲಿ ಕರ್ಣಿಕ ಉತ್ಸವ ವಗೈರೆಗೋಸ್ಕರ ಹಾದಿಯನ್ನು ಹಾಕುವ ಬಗ್ಯೆ ಬೇಕಾಗಿರುತ್ತವೆ. ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಖಾತೇದಾರ್ರ ಹೆಸರು.	ಸರ್ವೆ ನಂ. ನಂಬರ್.	ಸರ್ವೆ ನಂ. ವಿವರ.	ವಿಸ್ತೀರ್ಣ.	ಆಕಾರ	ಬೇಕಾಗಿರುವ ಜಮೀನು.	ಕೊಡತಕ್ಕ ಕಂಪನ್ಸೇಷನ್ ಮೊಬಲಗು.	ಚಕ್ಕುಬಂದಿ. ಪೂರ್ವ.	ಪಶ್ಚಿಮ	ಉತ್ತರ.	ದಕ್ಷಿಣ.
ಚಿತ್ರದುರ್ಗ	ಹರಿಹರ ಸಬ್ ತಾಲ್ಲೂಕು	ಮಹಜನಹಳ್ಳಿ	1. ತಿಪ್ಪವ್ವ .. 2. ಪಾಂಡುರಂಗರಾವು. 3. ನರಸಿಂಗರಾವು. 4. ದತ್ತಾತ್ರಿರಾವು 5. ಅಪ್ಪೂರಾವು/ಷೇಕ್ ಜಮಾಲ್ ಸಾಬ್.	102	ಖುಷ್ಕಿ	ಎ ಗು. 20 20	ರೂ. ಆ. ಪೈ. 33—0—0	ಎ ಗು. 0-25	ರೂ. ಆ. ಪೈ. 12—8—0	ಹರಿಹರದಿಂದ ಮಳೆಬೆನ್ನೂರಿಗೆ ಹೋಗತಕ್ಕ ರಸ್ತೆ ಮತ್ತು ಹನಗವಾಡಿ	ಸರ್ವೆ ನಂ. 91ರ ಪಶ್ಚಿಮದಿಕ್ಕಿಗೆ ಹಬ್ಬಿರುವ ದಕ್ಷಿಣಭಾಗ	ಸರ್ವೆ ನಂ. 91	ಸರ್ವೆ ನಂ. 102ರ ಭಾಗ
				91	ಡಿಟೋ	7 25	9—0—0	0— 5	...	ಸರ್ವೆ ನಂ. 102	ಸರ್ವೆ ನಂ 73	ಸರ್ವೆ ನಂ 91ರ ಭಾಗಗಳು	ಸರ್ವೆ ನಂ. 73ವ102

ತಾರೀಖು 21ನೆ ಜುಲೈ 1904.

ನಂ. ರೆ. 363—11-4, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಗೇಂಪ್ರಿಜರ್ವಗಳ ಚಾರ್ಜಿನಲ್ಲಿರುವ ಫಾರೆಸ್ಟಿನ ಡೆಪ್ಯುಟಿ ಕನ್ಸರ್ವೇಟರಾದ ಮೆ॥ ಜಿ. ಇ. ರಿಕೆಟ್ಸ್ ಯವರಿಗೆ 1904ನೆ ಜುಲೈ 25ನೆ ತಾರೀಖಿನಾರಭ್ಯ 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 22ನೆ ಜುಲೈ 1904.

ನಂ. ರೆ. 428—46-4, ಇದರಿಂದ ಸಮಸ್ತ ಜನಗಳಿಗೆ ತಿಳಿಯಪಡಿಸುವದೇನಂದರೆ, ಇದರಡೀ ಕಂಡ ಮರವು ಉಳಿಸಿಕೊಳ್ಳಲ್ಪಟ್ಟ ಮರದಹಾಗೆ ಸೇರಿಸಿಕೊಳ್ಳಲ್ಪಟ್ಟ 1901ನೆ ಅಕ್ಟೋಬರ್ 2ನೆ ಮರ್ಕುಂ 245—1300ನೆ ನಂಬರ್ ಇಸ್ತಿಹಾರ್ನಾಮೆಯನುಸಾರವಾಗಿ ಫಾಯಿಷಾದ ಡಿಸ್ಟ್ರಿಕ್ಟು ಫಾರೆಸ್ಟುಗಳ ಆಡಳತಕ್ಕೆ ಸಂಬಂಧಪಟ್ಟ ರೂಲುಗಳ 4ನೆ ರೂಲು ಅನುಸರಿಸಿ ಫಾಯಿಷಾದ ಉಳಿಸಿಕೊಳ್ಳಲ್ಪಟ್ಟ ಮರಗಳ ಪಟ್ಟೀಗೆ ದಾಖಲ್ಮಾಡಲ್ಪಡುವದು :—

ಸಸ್ಯ ವಿದ್ಯೆಯ ಸಂಬಂಧವಾದ ಹೆಸರು.	ಇಂಗ್ಲೀಷ್ ಹೆಸರು.	ಕನ್ನಡ ಹೆಸರು.
ಹೊಪಿಯ ಪರ್ವಿಫ್ಲೋರ ...	..	ಕಿರಲೆಬಾಗಿ ಯಾ ಸಂಣ ಎಲೆಬಾಗಿ.

ತಾರೀಖು 22ನೆ ಜುಲೈ 1904.

ನಂ. ರೆ. 461—227-5, ಸನ್ 1904ನೆ ಜೂನ್ 15ನೆ ಮರ್ಕುಂ ರೆ. 3955ನೆ ನಂಬರ್ ಇಸ್ತಿಹಾರ್ನಾಮೆಯನುಸಾರವಾಗಿ ತುಮಕೂರು ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಎ. ಹೇಜ್ ಯವರ ನೌಕರಿಯು ಯಳಂದೂರ ಜಹಗೀರ್‌ದಾರ್ರಿಗೆ ಕುಮಕಿ ಕೊಟ್ಟಿರುವದ್ದರಿಂದ, ಹಾಲಿ ರಜಾದ ಮೇಲಿರುವ ಚನ್ನಪಟ್ಣದ ಅಮಲ್ದಾರ್ರಾದ ಮೆ॥ ಹೆಚ್. ಸೀತಾರಾಮಯ್ಯನವರು ತುಮಕೂರು ತಾಲ್ಲೂಕಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ. ಅವರ ರಜಾ ಪೂರೈಸಿದ ನಂತರ ಕೆಲಸಕ್ಕೆ ದಾಖಲಾಗತಕ್ಕದ್ದು.

ತಾರೀಖು 22ನೆ ಜುಲೈ 1904.

ನಂ ರೆ. 496—207-2, ಮೈಸೂರ ಲ್ಯಾಂಡ್ ರೆವಿನ್ಯೂ ಕೋಡಿನ 236ನೆ ಸೆಕ್ಷನ್ ಅನುಸರಿಸಿ ಕುಣಿಗಲ್ ತಾಲ್ಲೂಕಿನಲ್ಲಿರುವ ದೊಡ್ಡ ಮತ್ತೂರು ವ ಬೀರ್‌ಗೋನಹಳ್ಳಿ ಸರ್ವಮಾನ್ಯ ಗ್ರಾಮಗಳಿಗೆ ಸದರೀ ಕೋಡಿನ VIII ರಿಂದ Xರ ವರಿಗಿನ ಅಧ್ಯಾಯಗಳ ನಿಯಮಗಳನ್ನು ಲಗಾವು ಮಾಡುವ ಬಗ್ಯೆ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

ತಾರೀಖು 22ನೆ ಜುಲೈ 1904.

ನಂ. ರೆ. 507—180-13, ಪೂಲೂರು ತಾಲ್ಲೂಕಿನ ಅಮಲ್ದಾರ್ರಾದ ಮೆ॥ ಮಾಚಯ್ಯನವರಿಗೆ 1904ನೆ ಜೂನ್ 14ನೆ ಮರ್ಕುಂ ರೆ. 3937ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ತಲಬಿಲ್ಲದ 3 ತಿಂಗಳ ರಜಾ ಇನ್ನೂ 1 ತಿಂಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 28ನೆ ಜುಲೈ 1904.

ನಂ. ರೆ. 708-71-4, ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜರವರ ಗವರ್ನಮೆಂಟಿನ ಅಫೀಷಿಯೇಟಿಂಗ್ ಸೆಕ್ರಿಟೆರಿಯವರಾದ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರವರು ಸದರೀ ಉದ್ಯೋಗದಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 30ನೆ ಜೂನ್ 1904.

ನಂ. ಕೆ. 4314 - ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಆಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇತರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಸಿದ್ದಘಟ್ಟದ ತಾಲ್ಲೂಕಿನಲ್ಲಿ ಚಿಂತಾಮಣಿಯಿಂದ ಚೇಳೂರಿಗೆ ರಸ್ತೆಯನ್ನು ಹಾಕುವ ಬಗ್ಯೆ ಬೇಕಾಗಿರುತ್ತವೆ. ವತ್ತು ಸಿದ್ದಘಟ್ಟದ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳಿನ ಸರಿಸಿ ಸರ್ವೇ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಪ್ಪಣೆ ಕೊಡಲ್ಪಟ್ಟಿರುತ್ತಾರೆ:

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರ್ರ ಹೆಸರು.	ಸರ್ವೆ ನಂ.	ಜಮೀನಿನ ವಿವರ.	ತೆಗದುಕೊಂಡ ಜಮೀನಿನ ವಿಸ್ತೀರ್ಣ. ಎ.	ಗು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ.	ಸಿದ್ದಘಟ್ಟ.	ಚೇಳೂರ್ಸರ್ಕ್ಯು.	ಕಂಚರ್ಲ ಹಳ್ಳಿ.	ನಾಗ ..	7	ಖುಷ್ಕಿ	0	3	ನಾಗ ಎಸ್. ನಂ. 7	ನಾಗ ಎಸ್. ನಂ. 7	ಖರಾಬ್ ಎಸ್. ನಂ. 18	ವೆಂಕಟಿಗ ಎಸ್. ನಂ. 6
				ಖದ್ರಪ್ಪ ..	2	ಡಿಟೋ	0	23	ಖದ್ರಪ್ಪ ಎಸ್. ನಂ. 2	ಖದ್ರಪ್ಪ ಎಸ್. ನಂ. 2	ರಸ್ತೆ ಎಸ್. ನಂ. 6	ರಸ್ತೆ ಎಸ್. ನಂ. 1
				ಎರ್ರಗ ..	1	ಡಿಟೋ	0	15	ವೆಂಕಟಿಗ ಎಸ್. ನಂ. 1	ವೆಂಕಟಿಗ ಎಸ್. ನಂ. 1	ಡಿಟೋ 2	ಡಿಟೋ 147
				ವೆಂಕಟಿಗ ...	138	ಡಿಟೋ	0	14	ವೆಂಕಟಿಗ ಎಸ್. ನಂ. 138	ವೆಂಕಟಿಗ ಎಸ್. ನಂ. 138	ಡಿಟೋ 140	ಡಿಟೋ 127
				ನರಸಿಗ	127	ಡಿಟೋ	0	15	ನರಸಿಗ ಎಸ್. ನಂ. 127	ನರಸಿಗ ಎಸ್. ನಂ. 127	ಡಿಟೋ 138	ಡಿಟೋ
				ಸಿದ್ದಿರಾಮಯ್ಯ .	127	ಡಿಟೋ	0	2	ಎಸ್. ರಾಮಯ್ಯ ಎಸ್. 127	ಎಸ್. ರಾಮಯ್ಯ ಎಸ್. ನಂ. 127	ಡಿಟೋ 127	ಡಿಟೋ
				ಸುಬ್ಬರಾಯ ..	127	ಡಿಟೋ	0	10	ಸುಬ್ಬರಾಯ ಎಸ್. ನಂ 127	ಸುಬ್ಬರಾಯ ಎಸ್. ನಂ 127	ಡಿಟೋ	ಡಿಟೋ 126
				ವೆಂಕಟಿಗ ..	126	ಡಿಟೋ	0	7	ವೆಂಕಟಿಗ ಎಸ್. ನಂ. 126	ವೆಂಕಟಿಗ ಎಸ್. ನಂ. 126	ಡಿಟೋ	ಡಿಟೋ 124
				ವೆಂಕಟರಮಣ	124	ಡಿಟೋ	0	8	ವೆಂಕಟರಮಣ ಎಸ್. ನಂ. 124	ವೆಂಕಟರಮಣ ಎಸ್. ನಂ. 124	ಡಿಟೋ 126	ಡಿಟೋ 122
				ನಂಜೆಗ ..	121	ಡಿಟೋ	2	21	ನಂಜೆಗ ಎಸ್. ನಂ. 121	ನಂಜೆಗ ಎಸ್. ನಂ. 121	ಡಿಟೋ 122	ಕೆರೆ ಹಿರಿ
				ವೆಂಕಟ ..	6	ಡಿಟೋ	0	26	ವೆಂಕಟ ಎಸ್. ನಂ. 6	ವೆಂಕಟ ಎಸ್. ನಂ. 6	ಡಿಟೋ 7	ರಸ್ತೆ ಎಸ್. ನಂ. 2
				ವೆಂಕಟಿಗ ಹಜಾಂ ..	140	ಡಿಟೋ	0	14	ವೆಂಕಟಿಗ ಎಸ್. ನಂ. 140	ವೆಂಕಟಿಗ ಎಸ್. ನಂ. 140	ಡಿಟೋ 145	ಡಿಟೋ 138
				ಸುಬ್ಬ ...	122	ಡಿಟೋ	0	7	ನಂಜ ಎಸ್. ನಂ. 121	ಸುಬ್ಬ ಎಸ್. ನಂ. 122	ಡಿಟೋ 124	ಡಿಟೋ ನಂ. 121
				ನೌಕರಿ ಇನಾಂ ..	147	ಡಿಟೋ	0	18	ಗ್ರಾಮ ನಿವೇಶನ	ಎಸ್. ನಂ. 145	ಎಸ್. ನಂ. 1 ವ 2	ಎಸ್. ನಂ. 145
				ಜುಮ್ಲಾ ..			6	23				
				ಎಂ. ಪೆದ್ದನ್ನ ..	2	ಖುಷ್ಕಿ	0	10				
				ಸುಬ್ಬಕ್ಕ	2	ಡಿಟೋ	0	8				
				ಚೌಡಯ್ಯ ..	2	ಡಿಟೋ	0	7	ರಾಮಂಣನ ಎಸ್. ನಂ. 1	ಚೌಡಪ್ಪನ ಎಸ್. ನಂ. 5	ಹಜಾಂ ಇನಾಂ ವತ್ತು ಎಸ್. ನಂ. 10	ಗಲ್ಲಿ
				ವೆಂಕಟ್ರಮಣ ..	2	ಡಿಟೋ	0	8				

ಡಿಟೋ	ಡಿಟೋ	ಡಿಟೋ	ಚಿಲಕಲನೇರು	ವೆಂಕಟಸುಬ್ಬನ ಭೋಯಿ ...	292	ಡಿಟೋ	0	32	ಲಿಂಗಸೆಟ್ಟಿ ಇನಾಂ ಎಸ್. ನಂ. 296	ವೆಂಕಂಭಟ್ಟಾ ಎಸ್. ನಂ 291	ಗಲ್ಲಿ	ಖರಾಬ್ 293
				ಬಿ ಮದ್ದುಗ ..	205	ಡಿಟೋ	0	35	ಎಸ್. ನಂ. 208	ಇನಾಂ 5 ಎಸ್. ನಂ. 204	ಖರಾಬ್ ಎಸ್. ನಂ. 283	ಎಸ್. ನಂ. 206
				ವೆಂಕಟಸುಬ್ಬ ..	206	ಡಿಟೋ	0	7	ಡಿಟೋ 207	ನಂ. 204	ಎಸ್. ನಂ. 205	ಡಿಟೋ 194
				ವೆಂಕಟಮ್ಮ ...	206	ಡಿಟೋ	0	7				
				ವಾಸುದೇವಭಟ್ಟ ..	58	ಡಿಟೋ	0	5	ಡಿಟೋ 55	ಎಸ್. ನಂ. 63	ಡಿಟೋ 63	ಡಿಟೋ 55 ವ 57
				ವೆಂಕಟ್ರಾಮ ಕಜಾಂ ...	10	ಡಿಟೋ	0	6	ಡಿಟೋ 1	ಡಿಟೋ 7	ಡಿಟೋ 69 ವ 11	ಡಿಟೋ 2
				ಲಿಂಗಸೆಟ್ಟಿ	294	ಡಿಟೋ	0	20	ಡಿಟೋ 295	ಡಿಟೋ 292	ಗಲ್ಲಿ	ಡಿಟೋ 293
				ಕೆ. ಬಸಪ್ಪ .	295	ಡಿಟೋ	0	3	ಡಿಟೋ 296	ಡಿಟೋ 294	ಡಿಟೋ	ಡಿಟೋ
				ಅಕ್ಕಲಗ ಧೋಬಿ ...	204	ಡಿಟೋ	0	4	ಡಿಟೋ 205	ಡಿಟೋ 203	ಎಸ್. ನಂ. 283	ಕೆರೆ. ಎಸ್. ನಂ. 196
				ಹನುಮಂತರಾಯಪ್ಪ	114	ಡಿಟೋ	0	29	ಡಿಟೋ 63	ಡಿಟೋ 113	ಡಿಟೋ 63	ಎಸ್. ನಂ. 63
				ಈಶ್ವರದೇವರ ಇನಾಂ ...	283	ಡಿಟೋ	0	32	ಡಿಟೋ 226	ಡಿಟೋ 284	ಡಿಟೋ 282 ವ 293	ಡಿಟೋ 208, 205, 204 & 203
				ಆಂಜನೇಯಸ್ವಾಮಿ ಇನಾಂ ...	9	ಡಿಟೋ	0	28	ಗಲ್ಲಿ ಮತ್ತು ಎಸ್. ನಂ. 9 ವ 11	ಬಂಜರ್ ಜಮೀನು	ಗಲ್ಲಿ	ಎಸ್. ನಂ. 7, 9 ವ 10
				(ಊರು ಮಾರಿಗ ಇನಾಂ) ..	57	ಡಿಟೋ	1	31	ಎಸ್. ನಂ. 55	ಎಸ್. ನಂ. 63	ಎಸ್. ನಂ. 68	ಗಲ್ಲಿ
				ಜುಮ್ಲಾ ...			7	32				
			ಮುಸಿಚೆಕ್ಕಿ	ಎಂ. ವೆಂಕಟಪ್ಪ ...	61	ತರಿ	0	25	ಡಿಟೋ 61	ನದಿ	ಡಿಟೋ 61	ಎಸ್. ನಂ. 62 ವ 63
			ಹೊಸಹುಸ್ಕೆ	ಬಿ ದಾಸಿಗ ...	6	ಖುಷ್ಕಿ	0	21	ಡಿಟೋ 7 ವ 5	ಎಸ್. ನಂ. 5 ವ 91	ಡಿಟೋ 7	ಡಿಟೋ 5
				ಚಿಕ್ಕವೆಂಕಟ	5	ಡಿಟೋ	0	19	ಡಿಟೋ 6 ವ 15	ತೋಟ ಇನಾಂ	ಡಿಟೋ 91	ಡಿಟೋ 2, 13, 3 ವ 4
				ಸರ್ಕಾರ ಬಂಜರ್ ...	91	ಡಿಟೋ	0	13	ಡಿಟೋ 6 ವ 7	ಎಸ್. ನಂ. 87 ವ 90	ಬಿದ್ದಲಹಳ್ಳಿ ಗ್ರಾಮದ ಎಲ್ಲೆ	ಡಿಟೋ 1, 5 ವ 92
				ಜುಮ್ಲಾ ...			1	13				
			ಬಿದ್ದಲಹಳ್ಳಿ	ಯರ್ರಣ ...	6	ಡಿಟೋ	0	31	ಕುಶಾವತಿ ಕಾಲವೆ	ಡಿಟೋ 52.	ಗ್ರಾಮ ನಿವೇಶನ	ಡಿಟೋ 7
				ಲಕ್ಷ್ಮಿನರಸಿಂಹಭಟ್ಟ ..	7	ಡಿಟೋ	0	31	ಡಿಟೋ	ಡಿಟೋ 8	ಎಸ್. ನಂ. 52 ವ 16	ಡಿಟೋ 9
				ಲಿಂಗಸೆಟ್ಟಿ	9	ಡಿಟೋ	0	17	ಡಿಟೋ	ಎಸ್. ನಂ. 11 ವ 12	ಖರಾಬ್ ಎಸ್. ನಂ. 7 ವ 8	ಡಿಟೋ 91
				ಜುಮ್ಲಾ ...			1	39				

1203

228

118

ಹಳ್ಳಿಯ ಹೆಸರು.	ಹೊಲದ ಹೆಸರು.	ಮಾಲೀಕರ ಹೆಸರು.		ಸರ್ವೆ ನಂ.	ಹಿಸ್ಸಾ ನಂ.	ವಿಸ್ತೀರ್ಣ ಎಕರೆ.	ವಿಸ್ತೀರ್ಣ ಗುಂಟೆ.	ಜಮೀನಿನ ಹದ್ದುಬಸ್ತು.	ಹದ್ದುಬಸ್ತಿನ ಜಮೀನಿನ ಮಾಲೀಕರು.		
									ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ.	ಪಾಳ್ಯ.	ಮುನಿವೆಂಕಟಪ್ಪ		90	ಮುಷ್ಟಿ	0	25	ಎಸ್. ನಂ. 91	ಎಸ್. ನಂ. 89	ಎಸ್. ನಂ. 91	ಎಸ್. ನಂ. 93
		ನಾರಾಯಣಪ್ಪ		93	ಡಿಟೋ	0	25	ಡಿಟೋ 91	ಡಿಟೋ 94	ಡಿಟೋ 90 ಮತ್ತು 91	ಡಿಟೋ 2 ಮತ್ತು 3
		ವೆಂಕಟಪ್ಪ		3	ಡಿಟೋ	0	34	ಡಿಟೋ 91	ಡಿಟೋ 1	ಡಿಟೋ 93	ಡಿಟೋ 6
		ಸುಬ್ಬಮ್ಮ		19	ಡಿಟೋ	0	34	ತೋಪು ಎಸ್. ನಂ. 5	ಡಿಟೋ 17	ಡಿಟೋ 6 ಮತ್ತು 18	ಮಡಮ್ಮಾನ ನದಿ
		ಸರ್ಕಾರ ಬಂಜರು		6	ಡಿಟೋ	2	10	ಎಸ್. ನಂ 4	ಎಸ್. ನಂ. 18 ಮತ್ತು ಗ್ರಾಮ ಸಿವೇರ.	ಡಿಟೋ 3	ಎಸ್ ನಂ. 19 ನತ್ತು ಮನೆಯನೆ ಜಮೀನು
		ಜುಮ್ಲಾ				5	8				
		ನರಸಪ್ಪ		76	ಡಿಟೋ	0	14	ಡಿಟೋ 16 ಮತ ಬಂಜರು ಜಮೀನು	ಎಸ್. ನಂ. 1 ನರಸಪ್ಪನ ಜಾತಿ ಗ್ರಾಮ ಸಿವೇರನ	ಡಿಟೋ 2 ಬಂಜರು ಜಮೀನು ಶಾಖಪೋನೆ ನರಸಪ್ಪನ ಇನಾಂ ಮುಸ್ತ ಎಸ್. ನಂ. 1 ಮತ 76	ಎಸ್. ನಂ. 5 ಮತ 15 ನರಸಪ್ಪನ ಇನಾಮತಿ ಕೊನೆಗನ ಜಾತಿ ಎಸ್. ನಂ. 16
		ಡಿಟೋ		15	ಡಿಟೋ	0	3	ಡಿಟೋ			
		ಜುಮ್ಲಾ				0	17				
		ರಾಮಣ್ಣ		55	ಡಿಟೋ	1	7	ಖರಾಬ್ ಮತ ಬೈರಗನ ಜಾತಿ ಎಸ್. ನಂ. 56	ಖರಾಬ್ ಎಸ್. ನಂ. 5	ಖರಾಬ ಎಸ್. ನಂ. 5	ಚೌಡಗನ ಎಸ್. ನಂ. 54
		ಚಿಕಪ್ಪ		54	ಡಿಟೋ	0	22	ತೋಪು ಎಸ್. ನಂ. 57	ಖರಾಬ್ ಎಸ್. ನಂ. 53	ಎಸ್. ನಂ 55 ರಾಮಣ್ಣನ ಜಾತಿ	ರಾಮುಂಣನ ಜಾತಿ ಎಸ್. ನಂ. 18
		ಸರ್ಕಾರ ಬಂಜರ್		17	ಡಿಟೋ	0	28	ಖರಾಬ್ ಎಸ್ ನಂ. 5	ರಾಮಯ್ಯನ ಜಮೀನು ಎಸ್ ನಂ. 18	ಖರಾಬ್ ಎಸ್. ನಂ. 5	ಖರಾಬ್ ಎಸ್. ನಂ. 5
		ಜುಮ್ಲಾ				2	17				
		ಒಟ್ಟು ಜುಮ್ಲಾ				26	14				

ಹುಕುಂ ಬರೋಜಿಕ್ಕೆ,
ಬಿ. ಕೆ. ವೆಂಕಟನರಸಯ್ಯಂಗಾರ್,
ಜನರಲ್ ಪ ಲಿಸ್ಟ್ರಿ ಇಲಾಖೆಗಳ ಗವರ್ನ್‌ಮೆಂಟ್ ಸೆಕ್ರಿಟೆರಿ.

230

1205

ಫಾರೆಸ್ಟ್.

ನಂಬರ್ 931—10403, ತಾರೀಖು 16ನೆ ಜೂನ್ 1904.

1901ನೆಯ ಜನವರಿ 7ನೆಯ ತಾರೀಖಿನ ನಂ. 419—ಫಾ. ಎಫ್. 15-00 ಇಸ್ತಿಹಾರ್ನಾಮೆಯಲ್ಲಿ ಕುರಿತಿರುವ 1900ನೆಯ ಡಿಸೆಂಬರ್ 31ನೆಯ ತಾರೀಖಿನ ನಂ. 405—ಫಾ. ಎಫ್. 39-95 ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ವಿವರಿಸಿರುವುವುಗಳಿಗೆ ಬದಲಾಗಿ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಬಸವನಕೋಟೆ, ಬಸ್ತಿ ಮತ್ತು ಸರಗೂಡು ಸ್ಟೇಟ್ ಜಂಗಲುಗಳ ತಿದ್ದುಪಾಟಾದ ಎಲ್ಲೆಗಳನ್ನು ಪ್ರಕಟಿಸಲು ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರು ಅಪ್ಪಣೆ ದಯಪಾಲಿಸುತ್ತಾರೆ:—

ಕ್ರಮ ಸಂಖ್ಯೆ.	ತಾಲ್ಲೂಕು.	ಸ್ಟೇಟ್ ಜಂಗಲಿನ ಹೆಸರು.	ಸುಮಾರು ವಿಸ್ತೀರ್ಣ.	ಎಲ್ಲೆಗಳು.
	ಚಿಕ್ಕಮಗಳೂರು.	ಬಸವನಕೋಟೆ ಸ್ಟೇಟ್ ಜಂಗಲು.	ಎಕರೆ 7,720, ಗುಂಟೆ 18.	ಉತ್ತರಕ್ಕೆ.—ಕರೀಹಳ್ಳಿಯ ಪ್ಲಾನ್‌ಟೇಪನಿನ ಮತ್ತು ದೇವದಾನ ಗ್ರಾಮದ ಎಲ್ಲೆಗಳು ಸೇರುವ ಸ್ಥಳದಿಂದ ಹೊರಟು, ಭದ್ರಾನದಿಯ ಬಲದಡದ ಮೇಲೆ, ದೇವದಾನ ಗ್ರಾಮದ ಸರ್ವೆ ನಂ. 299ರ ಉತ್ತರ ಎಲ್ಲೆಯಲ್ಲಿ ಬಾಳೆ ಹೊನ್ನೂರು—ಚಿಕ್ಕಮಗಳೂರು ಹೈರೋಡಿನ ಹತ್ತರದಲ್ಲಿ ಪೂರ್ವ ದಿಕ್ಕಿನಲ್ಲಿ ಹೋಗಿ ಕಡೆಗೆ ಸರ್ವೆ ನಂ. 51ರ ಪಶ್ಚಿಮದ ಬಾಂದನ್ನು ಎಲ್ಲೆಯು ಸೇರುತ್ತದೆ; ತರುವಾಯ ಸರ್ವೆ ನಂ. 51ರಲ್ಲಿ ಹೋಗಿ ಅದೇ ಸರ್ವೆ ನಂ. 51ರ ಪೂರ್ವ ದಿಕ್ಕಿನ ಬಾಂದನ್ನು ಬಿಟ್ಟಮೇಲೆ ಪೂರ್ವಕ್ಕೂ ಆಗ್ನೇಯಕ್ಕೂ ಹೋಗಿ ಸರ್ವೆ ನಂ. 184ರಲ್ಲಿ ತಿರಿಗಿ ಪೂರ್ವಕ್ಕೆ ಹೋಗಿ ಕಡೆಗೆ ಸರ್ವೆ 184 ಮತ್ತು 288 ನಂಬರುಗಳ ಮಧ್ಯೆ ಇರುವ ಎಲ್ಲೆಯ ಬಾಂದನ್ನು ಸೇರುತ್ತದೆ; ತರುವಾಯ ಸರ್ವೆ ನಂ. 288ರಲ್ಲಿ ಸರ್ವೆ ನಂ. 289ರ ಪಶ್ಚಿಮದ ಎಲ್ಲೆಗಳ ವರಿಗೂ ಪೂರ್ವಕ್ಕೆ ಹೋಗುತ್ತದೆ; ತರುವಾಯ ತಿರಿಗಿ ಸರ್ವೆ ನಂ. 289ರ ವಾಯವ್ಯ ಎಲ್ಲೆಯಲ್ಲಿ ಡೊಂಕುಡೊಂಕಾಗಿ ಹೋಗುತ್ತದೆ; ತರುವಾಯ ಆಗ್ನೇಯಕ್ಕೆ ತಿರಿಗಿ ಸರ್ವೆ ನಂ. 289ರ ಉತ್ತರ ಎಲ್ಲೆಯಲ್ಲೆ ಅದರ ಈಶಾನ್ಯದ ಕೊನೆಯ ವರೆಗೂ ಹೋಗುತ್ತದೆ. ಪೂರ್ವಕ್ಕೆ.—ಮೇಲ್ಕಂಡ ಸ್ಥಳದಿಂದ, ಎಲ್ಲೆಯು ದೇವದಾನ ಗ್ರಾಮದ ಸರ್ವೆ ನಂ. 289ರ ಪೂರ್ವದ ಎಲ್ಲೆಯಲ್ಲಿ ದಕ್ಷಿಣಕ್ಕೆ ಹೋಗಿ, ಪಶ್ಚಿಮಕ್ಕೆ ತಿರಿಗಿ ಅದೇ ಗ್ರಾಮದ ಸರ್ವೆ ನಂ. 289 ಮತ್ತು 288ಗಳ ದಕ್ಷಿಣ ಎಲ್ಲೆಗಳಲ್ಲಿ ವಾಯವ್ಯವಾಗಿ ಹೋಗಿ ಕಡೆಗೆ ದೇವದಾನ ಗ್ರಾಮದ ಸರ್ವೆ ನಂ. 288 ಮತ್ತು 184ರ ಮತ್ತು ಹಿರಿಗೆರೆ ಗ್ರಾಮದ ಸರ್ವೆ ನಂ. 97ರ ಮೂರು ಬಾಂದುಗಳು ಕೂಡುವ ಸ್ಥಳಕ್ಕೆ ಸೇರುತ್ತದೆ; ತರುವಾಯ ಹಿರಿಕೆರೆ ಗ್ರಾಮದ ಸರ್ವೆ ನಂ. 97, 98 ಮತ್ತು 130 ಈ ಮೂರು ಕೂಡುವ ಸ್ಥಳಕ್ಕೆ ಹೋಗುತ್ತದೆ; ಅಲ್ಲಿಂದ ಸರ್ವೆ ನಂ. 130ರಲ್ಲಿ ದಕ್ಷಿಣವಾಗಿ ಹೋಗಿ ಸರ್ವೆ ನಂ. 131ರ ವಾಯವ್ಯ ಎಲ್ಲೆಗೆ ಸೇರುತ್ತದೆ; ಅಲ್ಲಿಂದ (ಕಾಫಿ) ಸರ್ವೆ ನಂ. 131ರ ಪಶ್ಚಿಮ ಮತ್ತು ದಕ್ಷಿಣ ಎಲ್ಲೆಗಳಲ್ಲಿ ಹೊರಟು ಮನಬೂರು ಗ್ರಾಮದ ಸರ್ವೆ ನಂ. 28ರ ಮೂರು ಬಾಂದುಗಳ ಸಂಧಿಗೆ ಸೇರುತ್ತದೆ; ಅಲ್ಲಿಂದ ದಕ್ಷಿಣಕ್ಕೆ ತಿರಿಗಿ ಸ್ವಲ್ಪ ದೂರದ ವರೆಗೂ ಸರ್ವೆ ನಂ. 28ರ ಈಶಾನ್ಯದ ಎಲ್ಲೆಯಲ್ಲಿ ಹೋಗಿ ಸರಗೂಡು ಗ್ರಾಮದ ಸರ್ವೆ ನಂ. 95 ಮತ್ತು 104 ಗಳಲ್ಲಿ ಮೊದಲು ಪೂರ್ವಕ್ಕೂ ತರುವಾಯ ಈಶಾನ್ಯಕ್ಕೂ ತಿರಿಗಿ ಅಲ್ಲಿಂದ ಅದೇ ಸರ್ವೆ ನಂ. 104ರ ಈಶಾನ್ಯದ ಎಲ್ಲೆಯಲ್ಲಿ ಹೋಗುತ್ತದೆ; ಅಲ್ಲಿಂದ ಐದಹಳ್ಳಿ ಗ್ರಾಮದ ಸರ್ವೆ ನಂ. 11ರ ವಾಯವ್ಯದ ಎಲ್ಲೆಯಲ್ಲಿ ಉತ್ತರಕ್ಕೆ ಹೋಗಿ ಅದೇ ಗ್ರಾಮದ ಸರ್ವೆ ನಂ. 13ರ ಉತ್ತರದ ಎಲ್ಲೆಯಲ್ಲಿ ಈಶಾನ್ಯಕ್ಕೆ ಹೋಗುತ್ತದೆ; ಅಲ್ಲಿಂದ ಆಗ್ನೇಯಕ್ಕೆ ತಿರುಗಿ ಅದೇ ಸರ್ವೆ ನಂಬರ ಪೂರ್ವದ ಎಲ್ಲೆಯಲ್ಲಿ ಸ್ವಲ್ಪದೂರ ಹೋಗಿ; ಸರ್ವೆ ನಂ. 13, 12 ಮತ್ತು 11 ರಲ್ಲಿ ನೆಟ್ಟಗೆ ನೈರುತ್ಯಕ್ಕೆ ಹೋಗಿ ಸರ್ವೆ ನಂ. 11ರ ದಕ್ಷಿಣದ ಎಲ್ಲೆಯನ್ನು ಸೇರುತ್ತದೆ.

ಕ್ರಮ ಸಂಖ್ಯೆ.	ತಾಲ್ಲೂಕು.	ಸ್ಟೇಟ್ ಜಂಗಲಿನ ಹೆಸರು.	ಸುವಹರು ವಿಸ್ತೀರ್ಣ.	ಎಲ್ಲೆಗಳು.
	ಚಿಕ್ಕಮಗಳೂರು.	ಬಸವನಕೋಟೆ ಸ್ಟೇಟ್ ಜಂಗಲು	ಎಕರೆ 7,720. ಗಂಟೆ 18.	ದಕ್ಷಿಣಕ್ಕೆ.—ಎಲ್ಲೆಯು ತರುವಾಯ ಐದಹಳ್ಳಿ ಗ್ರಾಮದ ಸರ್ವೆ ನಂ. 11ರ ದಕ್ಷಿಣ ಎಲ್ಲೆಯಲ್ಲಿ ವಾಯವ್ಯವಾಗಿ ಹೋಗಿ ಸರಗೋಡು ಗ್ರಾಮದ ಸರ್ವೆ ನಂ. 104ರ ಪೂರ್ವದ ಎಲ್ಲೆಯನ್ನು ಸೇರುತ್ತದೆ, ಅಲ್ಲಿಂದ ಸರ್ವೆ ನಂ. 104 ಮತ್ತು 95ರಲ್ಲಿ ನೈರುತ್ಯವಾಗಿ ಹೋಗಿ, ಸರ್ವೆ ನಂ. 94 ಮತ್ತು 93ರಲ್ಲಿ ದಕ್ಷಿಣವಾಗಿ ಹೋಗಿ, ಸರ್ವೆ ನಂ. 93ರ ಪೂರ್ವದ ಎಲ್ಲೆಗೆ ಸೇರುತ್ತದೆ; ಅಲ್ಲಿಂದ ನೆಟ್ಟಗೆ ಪಶ್ಚಿಮಕ್ಕೆ ತಿರುಗಿ ಸ್ವಲ್ಪದೂರ ಹೋದಮೇಲೆ ಪುನಃ ಉತ್ತರಕ್ಕೆ ತಿರುಗಿ ಸರ್ವೆ ನಂ. 94ರ ದಕ್ಷಿಣ ಎಲ್ಲೆಯನ್ನು ಸೇರಿ, ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಅದೇ ಸರ್ವೆ ನಂ. 94ರ ಪಶ್ಚಿಮದ ಎಲ್ಲೆಯಲ್ಲಿ ಮತ್ತು ಮನಬೂರು ಗ್ರಾಮದ ಸರ್ವೆ ನಂ. 27ರ ಪೂರ್ವ ದಕ್ಷಿಣ ಎಲ್ಲೆಗಳ ಸಂಧಿಯಲ್ಲಿ ಈಶಾನ್ಯಕ್ಕೆ ತಿರುಗಿ; ಅಲ್ಲಿಂದ ವಾಯವ್ಯಕ್ಕೆ ಹೋಗಿ ಅಲ್ಲಿಂದ ಅದೇ ಸರ್ವೆ ನಂಬರ ಪಶ್ಚಿಮ ಎಲ್ಲೆಯ ವರೆಗೂ ಆ ನಂಬರಲ್ಲಿ ಪುನಃ ನೈರುತ್ಯವಾಗಿ ಹೋಗಿ ಅಲ್ಲಿಂದ ಹೈಗೆರೆ ಗ್ರಾಮದ ಸರ್ವೆ ನಂ. 132ರ ಆಗ್ನೇಯ ದಕ್ಷಿಣ ಎಲ್ಲೆಗಳ ಮೇಲೆಯೇ ಹೋಗಿ ಅದೇ ಸರ್ವೆ ನಂಬರ ಪಶ್ಚಿಮ ಎಲ್ಲೆಯನ್ನು ಸೇರುತ್ತದೆ. ಪಶ್ಚಿಮಕ್ಕೆ.—ಎಲ್ಲೆಯು ಹೈಗೆರೆ ಗ್ರಾಮದ ಸರ್ವೆ ನಂ. 132ರಲ್ಲಿ ಉತ್ತರವಾಗಿ ಹೊರಟು ಅದೇ ಸರ್ವೆ ನಂಬರ ಉತ್ತರ ಎಲ್ಲೆಯನ್ನು ಸೇರಿ, ಅಲ್ಲಿಂದ ಪೂರ್ವಕ್ಕೆ ತಿರುಗಿ, ಸರ್ವೆ ನಂ. 132ರ ಉತ್ತರ ಬಾಂದುಗಳ ಹತ್ತರ ಸ್ವಲ್ಪದೂರದ ವರೆಗೂ ಹೋಗಿ ಪುನಃ ಉತ್ತರಕ್ಕೆ ತಿರುಗಿ ಸರ್ವೆ ನಂ. 130, 98, & 97 ರೊಳಗೆ ಹೋಗಿ, ಸರ್ವೆ ನಂ. 96ರ ಪೂರ್ವದ ಎಲ್ಲೆಗೆ ಸೇರುತ್ತದೆ; ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಪುನಃ ಸರ್ವೆ ನಂ. 96ರಲ್ಲಿ ವಾಯವ್ಯವಾಗಿ ಹೋಗಿ ಭದ್ರಾನದಿಯ ಪೂರ್ವದ ದಡವನ್ನು ಸೇರುತ್ತದೆ; ಅಲ್ಲಿಂದ ಭದ್ರಾನದಿಯ ದಡದಲ್ಲಿ ಎಲ್ಲೆಯು ಪ್ರಾರಂಭಿಸಿದ ಸ್ಥಳಕ್ಕೆ ಸೇರುತ್ತದೆ.

ಈ ಪ್ರದೇಶದಲ್ಲಿ ಕೆಳಗೆ ನಮೂದಾಗುವ ದಾರಿಯ ಹಕ್ಕುಗಳು ಬಿಟ್ಟುಕೊಡಲ್ಪಟ್ಟಿವೆ :—

1. ಸರಗೋಡು—ದೇವದಾನದ ಕಾಲುದಾರಿ, 5 ಅಡಿ ಅಗಲ ಮತ್ತು 4 ಮೈಲಿ ಉದ್ದ, ಮನುಷ್ಯರೂ ದನಗಳೂ ಹೋಗಬಹುದು; ಕಬ್ಬದ ಹತ್ತರ ಸ್ಟೇಟ್ ಜಂಗಲನ್ನು ಪ್ರವೇಶಿಸಿ ಹಳ್ಳವು ಸರಗೋಡು ಗ್ರಾಮದ ಸರ್ವೆ ನಂ. 93, 94 ಮತ್ತು 95ಗಳೊಳಗೆ ಉತ್ತರಕ್ಕೆ ಹೋಗಿ ಸರ್ವೆ ನಂ. 95ರ ಉತ್ತರ ಎಲ್ಲೆಯಲ್ಲಿ ಆ ಜಂಗಲನ್ನು ಬಿಡುತ್ತದೆ.

2. ಐದಹಳ್ಳಿ ಮನಬೂರು ಕಾಲುದಾರಿ—5 ಅಡಿ ಅಗಲ, ಮತ್ತು 2 ಮೈಲಿ 3 ಫರ್ಲಾಂಗ್ ಉದ್ದ; ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತದೆ, ಜನಗಳೂ ದನಗಳೂ ಹೋಗಬಹುದು, ಐದಹಳ್ಳಿಯ ಸರ್ವೆ ನಂ. 11ರ ಪೂರ್ವದ ಎಲ್ಲೆಯಲ್ಲಿ ಸ್ಟೇಟ್ ಜಂಗಲನ್ನು ಪ್ರವೇಶಿಸಿ; ಸರಗೋಡು ಗ್ರಾಮದ ಸರ್ವೆ ನಂಬರು 94ರೊಳಗೆ ಪಶ್ಚಿಮಕ್ಕೆ ಹೋಗಿ ಮನಬೂರು ಎಲ್ಲೆಯಲ್ಲಿ ಸ್ಟೇಟ್ ಜಂಗಲನ್ನು ಬಿಡುತ್ತದೆ.

3. ಮನಬೂರು—ದೇವದಾನದ ಕಾಲುದಾರಿ, 5 ಅಡಿ ಅಗಲ ಮತ್ತು 6 ಮೈಲಿ ಉದ್ದ, ಮನುಷ್ಯರೂ ದನಗಳೂ ಹೋಗಬಹುದು; ಹೈಗೆರೆ ಮನಬೂರು ಎಲ್ಲೆಯ ಮಧ್ಯೆ ಹೈಗೆರೆ ಸರ್ವೆ ನಂ. 132ರಲ್ಲಿ ಸ್ಟೇಟ್ ಜಂಗಲನ್ನು ಪ್ರವೇಶಿಸಿ, ಹೈಗೆರೆ ಗ್ರಾಮ ಸರ್ವೆ ನಂ. 132ರಲ್ಲಿ ಉತ್ತರಕ್ಕೆ ಹೋಗಿ, ಜಂಗಲಿನ ಡಿಮಾರ್ಕೇಷನ್ ಲೈನಿನ ಪಕ್ಕದಲ್ಲಿಯೇ ಹೋಗಿ ಸರ್ವೆ ನಂ. 96ರಲ್ಲಿ ಸ್ಟೇಟ್ ಜಂಗಲನ್ನು ಪುನಃ ಪ್ರವೇಶಿಸಿ, ದೇವದಾನ ಗ್ರಾಮದ ಸರ್ವೆ ನಂ. 184 ರೊಳಗೆ ಹೋಗಿ, 184ನೆಯ ನಂಬರ ಉತ್ತರ ಎಲ್ಲೆಯಲ್ಲಿ ಜಂಗಲನ್ನು ಬಿಡುತ್ತದೆ.

4. ಖಾಸಗಿಮಾನ—ನಡಗುಂಡಿರಾಯನಗಿರಿ ಕಾಲುದಾರಿ, 5 ಅಡಿ ಅಗಲ, 1 ಮೈಲಿ 5 ಫರ್ಲಾಂಗ್ ಉದ್ದ, ಜನಗಳೂ ದನಗಳೂ ಹೋಗಬಹುದು; ಸರ್ವೆ ನಂ. 104ರ ಪಶ್ಚಿಮ ಕೊನೆಯಲ್ಲಿ ಜಂಗಲನ್ನು ಪ್ರವೇಶಿಸಿ, ಸರ್ವೆ ನಂ. 104 ರೊಳಗೆ ಹೋಗಿ, ನಂ. 11ನ್ನು ಪ್ರವೇಶಿಸಿ, ಪೂರ್ವದ ಎಲ್ಲೆಯಲ್ಲಿ ಜಂಗಲನ್ನು ಬಿಡುತ್ತದೆ.

232

1202

ಕ್ರಮ ಸಂಖ್ಯೆ.	ತಾಲ್ಲೂಕು.	ಸ್ಟೇಟ್ ಜಂಗಲಿನ ಹೆಸರು.	ಸುಮಾರು ವಿಸ್ತೀರ್ಣ.	ಎಲ್ಲೆಗಳು.
	ಚಿಕ್ಕ ಮಗಳೂರು.	ಬಸವನಕೋಟೆ ಸ್ಟೇಟ್ ಜಂಗಲಿನಲ್ಲಿ ಬಸ್ತಿ ಭಾಗ.	ಎಕರೆಗಳು 3,180.	ಉತ್ತರಕ್ಕೆ.—ಬಿಕ್ಕುಣಿ ಗ್ರಾಮದ ಸರ್ವೆ ನಂ. 31ರ ವಾಯವ್ಯ ಮೂಲೆಯಿಂದ ಎಲ್ಲೆಯು ಪ್ರಾರಂಭಿಸಿ, ಅದೇ ಸರ್ವೆ ನಂ. 31ರ ಉತ್ತರ ಎಲ್ಲೆಯಲ್ಲಿ ಪೂರ್ವಕ್ಕೆ ಹೋಗಿ; ಅಲ್ಲಿಂದ ಬಸವನಕೋಟೆ ಸ್ಟೇಟ್ ಜಂಗಲಿನ ದಕ್ಷಿಣ ಎಲ್ಲೆಯಲ್ಲಿಯೇ ಹೋಗಿ ಸರಗೋಡು ಗ್ರಾಮದ ಸರ್ವೆ ನಂ. 93 ಮತ್ತು 114 ರೊಳಗೆ ಹೋಗಿ; ಉತ್ತರಕ್ಕೆ ತಿರುಗಿ, ಅದೇ ಗ್ರಾಮದ ಸರ್ವೆ ನಂ. 115ರ ವಾಯವ್ಯ ಎಲ್ಲೆಯಲ್ಲಿಯೇ ಹೋಗಿ, ಸರ್ವೆ ನಂ. 115ರ ಉತ್ತರ ಎಲ್ಲೆಯಲ್ಲಿ ಪೂರ್ವಕ್ಕೆ ಪುನಹ ತಿರುಗುತ್ತದೆ. ಪೂರ್ವಕ್ಕೆ.—ಆಮೇಲೆ ಎಲ್ಲೆಯು ದಕ್ಷಿಣಕ್ಕೆ ತಿರುಗಿ ಸರ್ವೆ ನಂ. 115ರ ಪೂರ್ವ ದಿಕ್ಕಿನ ಎಲ್ಲೆಯ ಸಮೀಪದಲ್ಲಿಯೇ ಹೋಗಿ; ಆಮೇಲೆ ನೈರುತ್ಯಕ್ಕೆ ತಿರುಗಿ, ದೊಡ್ಡ ಮಗರವಳ್ಳಿಗೆ ಹೋಗುವ ರಸ್ತೆಗೆ ಸೇರಿ, ಆಮೇಲೆ ಸರ್ವೆ ನಂ 116 ರಲ್ಲಿ ಆಗ್ನೇಯವಾಗಿ ತಿರುಗಿ ಅದೇ ಸರ್ವೆ ನಂಬರ ಆಗ್ನೇಯ ಎಲ್ಲೆಗೆ ಸೇರುತ್ತದೆ. ದಕ್ಷಿಣಕ್ಕೆ.—ಎಲ್ಲೆಯು ಆಗ ನೈರುತ್ಯಕ್ಕೆ ತಿರುಗಿ ಸರ್ವೆ ನಂಬರ 116ರ ದಕ್ಷಿಣ ಎಲ್ಲೆಯಲ್ಲಿ ಹೋಗಿ; ಆಮೇಲೆ ಪಶ್ಚಿಮಕ್ಕೆ ತಿರುಗಿ, ಸರ್ವೆ ನಂ. 131 ರೊಳಗೆ ಹೋಗಿ, ಸರ್ವೆ ನಂಬರ 142ರಲ್ಲಿ ವಾಯವ್ಯವಾಗಿ ಹೋಗಿ ದೊಡ್ಡ ಮಗರವಳ್ಳಿಯ ರಸ್ತೆಗೆ ಸೇರುತ್ತದೆ; ಆಮೇಲೆ ಪಶ್ಚಿಮಕ್ಕೆ ತಿರುಗಿ, ಸರಗೋಡು ಗ್ರಾಮದ ಸರ್ವೆ ನಂ. 93 ರೊಳಗೆ ಹೋಗಿ, ನೈರುತ್ಯಕ್ಕೆ ತಿರುಗಿ ಬಿಕ್ಕರಣಿ ಹಳ್ಳಿಯ ಸರ್ವೆ ನಂ. 31 ರೊಳಗೆ ಹೋಗಿ, ಎಡಗೆಹಳ್ಳದ ಹತ್ತರ ಬಿಕ್ಕರಣಿ-ಸರಗೋಡು ಬಂಡಿ ಜಾಡನ್ನು ದಾಟಿ, ಹೊಳೆಯ ಮತ್ತು ಸರ್ವೆ ನಂ. 31ರ ಹತ್ತರ ಕೂವೆ ಮತ್ತು ಬಿಕ್ಕರಣಿ ಗ್ರಾಮಗಳ ಎಲ್ಲೆ ಬಾಂದುಗಳನ್ನು ಸೇರುತ್ತದೆ. ಪಶ್ಚಿಮಕ್ಕೆ.—ಮೇಲ್ಕಂಡ ಸ್ಥಳದಿಂದ ಎಲ್ಲೆಯು ಉತ್ತರಕ್ಕೆ ಹೋಗಿ, ಬಿಕ್ಕರಣಿ ಗ್ರಾಮದ ಸರ್ವೆ ನಂ. 31ರ ಪೂರ್ವ ದಿಕ್ಕಿನ ಎಲ್ಲೆಯನ್ನು ಅನುವರ್ತಿಸಿ ಎಲ್ಲೆಯು ಪ್ರಾರಂಭಿಸಿದ ಸ್ಥಳವನ್ನು ಸೇರುತ್ತದೆ.

ಈ ಪ್ರದೇಶದಲ್ಲಿ ಈ ಕೆಳಗೆ ನಮೂದಾಗುವ ದಾರಿಯ ಹಕ್ಕುಗಳು ಬಿಟ್ಟು ಕೊಡಲ್ಪಟ್ಟಿವೆ :—

(1) ಹಳೆ ಆಲ್ದೂರು—ಕಳಸದ ರಸ್ತೆ, 11 ಗಜ ಅಗಲ, 3 ಮೈಲಿ 3 ಫರಲಾಂಗ್ ಉದ್ದ, ಬಂಡಿಗಳು ಮತ್ತು ದನಗಳು ಹೋಗಬಹುದು; ಸರಗೋಡು ಗ್ರಾಮದ ಸರ್ವೆ ನಂ. 116 ಮತ್ತು 115ಕ್ಕೆ ಮಧ್ಯೆ ಪೂರ್ವ ದಿಕ್ಕಿನ ಎಲ್ಲೆಯಲ್ಲಿ ಈಗ ಜಂಗಲನ್ನು ಪ್ರವೇಶಿಸಿ, ಸರಗೋಡು ಗ್ರಾಮದ ಸರ್ವೆ ನಂ. 114 ಮತ್ತು 142 ರೊಳಗೆ ಪಶ್ಚಿಮಕ್ಕೆ ತಿರುಗಿ, ಸರ್ವೆ ನಂ. 93ರನ್ನು ಪ್ರವೇಶಿಸಿ ಕಬ್ಬನಹಳ್ಳದ ಹತ್ತರ ಅದನ್ನು ಬಿಡುತ್ತದೆ.

(2) ಬಂದು ಕಾಲುದಾರಿ 5 ಅಡಿ ಅಗಲ, 1 ಮೈಲಿ 4 ಫರಲಾಂಗ್ ಉದ್ದ; ಜನಗಳು ಹನಗಳು ಹೋಗಬಹುದು, ಕಬ್ಬನ ಹಳ್ಳದ ಹತ್ತರ ಸರ್ವೆ ನಂ. 93ರಲ್ಲಿ ಜಂಗಲನ್ನು ಪ್ರವೇಶಿಸಿ, ಸರ್ವೆ ನಂ. 93ರಲ್ಲಿ ಹೊಳೆಯ ಪಕ್ಕದಲ್ಲಿ ಉತ್ತರಕ್ಕೆ ಹೋಗಿ, ಮನಬೂರಿನ ಹತ್ತರ ಜಂಗಲನ್ನು ಬಿಡುತ್ತದೆ.

ಕ್ರಮ ಸಂಖ್ಯೆ.	ತಾಲ್ಲೂಕು.	ಸ್ಟೇಟ್ ಜಂಗಲಿನ ಹೆಸರು.	ಸುಮಾರು ವಿಸ್ತೀರ್ಣ.	ಎಲ್ಲೆಗಳು.
	ಚಿಕ್ಕ ಮಗಳೂರು ಮತ್ತು ಮೂಡಗೆರೆ.	ಸರಗೋಡು ಸ್ಟೇಟ್ ಜಂಗಲು.	ಎ. 9,204, ಗು. 25	ಉತ್ತರಕ್ಕೆ.—ಎಲ್ಲೆಯು ಹಳೆ ಕಳಸದ ಬಂಡಿ ಜಾಡಿನ ಹತ್ತರದಿಂದ ಹೊರಟು, ಕೂವೆ ಗ್ರಾಮದ ಸರ್ವೆ ನಂಬರು 156 ರೊಳಗೆ ಆಗ್ನೇಯವಾಗಿ ಹೋಗಿ, ಪೂರ್ವಕ್ಕೆ ತಿರುಗಿ ಸರಗೋಡು ಗ್ರಾಮದ ಸರ್ವೆ ನಂ. 46 ರೊಳಗೆ ಹೋಗುತ್ತದೆ; ಆಮೇಲೆ ಸರ್ವೆ ನಂ. 45 ರೊಳಗೆ ಆಗ್ನೇಯವಾಗಿ ಹೋಗಿ, ಸರ್ವೆ

ಕ್ರಮ ಸಂಖ್ಯೆ.	ತಾಲ್ಲೂಕು.	ಸ್ಪಷ್ಟ ಹೆಸರುಗಳಾದ ಹೆಸರು.	ಸರ್ವೇಯರು ಪೈಕಿ ಬಿಟ್ಟ ಸಂಖ್ಯೆ.	ಎಲ್ಲೆಗಳು.
				ನಂ. 6 ರೊಳಗೆ ಪ್ರವಹ ಪೂರ್ವಕ್ಕೆ ಹೋಗಿ; ಆಮೇಲೆ ಬದನವ ಗ್ರಾಮದ ಸರ್ವೆ ನಂಬರ 14 ರೊಳಗೆ ಆಗ್ನೇಯಕ್ಕೆ ಹೋಗಿ, ಸರ್ವೆ ನಂ. 183ರ ವಾಯವ್ಯ ಮತ್ತು ಉತ್ತರ ಎಲ್ಲೆಗಳ ಸವಿೂಪದಲ್ಲೂ ಮತ್ತು ಕುಂದೂರು ಗ್ರಾಮದ ಸರ್ವೆ ನಂ. 214ರ ಉತ್ತರ ಎಲ್ಲೆಯಲ್ಲಿ ಹೋಗಿ ಆಗ್ನೇಯಕ್ಕೆ ತಿರುಗಿ, ಸರ್ವೆ ನಂ. 123 ಮತ್ತು 105ರ ದಕ್ಷಿಣ ಎಲ್ಲೆಯೊಂದಿಗೂ ಸರ್ವೆ ನಂ. 92 ಮತ್ತು ಸರ್ವೆ ನಂ. 118ರ ಒಂದು ಭಾಗ ಇವುಗಳೊಳಗೂ ಈಶಾನ್ಯವಾಗಿಯೂ ಹೋಗಿ, ಸರ್ವೆ ನಂ. 113 ರೊಳಗೆ ವಾಯವ್ಯಕ್ಕೆ ತಿರುಗಿ, ಆಮೇಲೆ ಅದೇ ಸರ್ವೆ ನಂ. 118ರ ಪಶ್ಚಿಮ ಎಲ್ಲೆಯೊಂದಿಗೆ ನೈರುತ್ಯಕ್ಕೂ ಸರ್ವೆ ನಂ. 123 ರೊಳಗೆ ಪಶ್ಚಿಮಕ್ಕೂ; ಆಮೇಲೆ ಸರ್ವೆ ನಂ. 123 ವಾಯವ್ಯ ಎಲ್ಲೆಯೊಂದಿಗೂ, ಆಮೇಲೆ ಹೊಳಯವರೆಗೆ ಸರ್ವೆ ನಂಬರ 124ರ ದಕ್ಷಿಣ ಮತ್ತು ಪಶ್ಚಿಮ ಎಲ್ಲೆಗಳೊಂದಿಗೂ ಹೋಗುತ್ತದೆ. ಈ ನಂಬರುಗಳೆಲ್ಲ ಕುಂದೂರು ಗ್ರಾಮಕ್ಕೆ ಸೇರಿದವು.
				ಪೂರ್ವಕ್ಕೆ —ಎಲ್ಲೆಯು ಆಮೇಲೆ ದಕ್ಷಿಣಕ್ಕೆ ತಿರುಗಿ ಕುಂದೂರು ಗ್ರಾಮದ ಸರ್ವೆ ನಂ. 124, 118, 92 ಮತ್ತು 91 ಇವುಗಳ ಪೂರ್ವದ ಎಲ್ಲೆಯೊಂದಿಗೆ ಆಗ್ನೇಯವಾಗಿ ಹೋಗಿ; ಆಮೇಲೆ ಸರ್ವೆ ನಂ. 88ರ ಉತ್ತರ ಎಲ್ಲೆಯೊಂದಿಗೆ ನೆಟ್ಟಗೆ ಪೂರ್ವಕ್ಕೆ ಹೋಗಿ; ಆಮೇಲೆ ಅದೇ ನಂಬರ ಪೂರ್ವದ ಎಲ್ಲೆಯೊಂದಿಗೆ ದಕ್ಷಿಣಕ್ಕೆ ತಿರುಗಿ; ಆಮೇಲೆ ಸರ್ವೆ ನಂ. 88ರ ದಕ್ಷಿಣ ಎಲ್ಲೆಯೊಂದಿಗೆ ಪಶ್ಚಿಮಕ್ಕೆ ತಿರುಗಿ; ಆಮೇಲೆ ಉತ್ತರಕ್ಕೆ ಹೋಗಿ, ಆಮೇಲೆ ಸರ್ವೆ ನಂ. 88ರ ದಕ್ಷಿಣ ಎಲ್ಲೆಯ ಮೇಲೆ ಪಶ್ಚಿಮಕ್ಕೂ ತಿರುಗಿ ದಕ್ಷಿಣಕ್ಕೂ ಪಶ್ಚಿಮಕ್ಕೂ ಹೋಗಿ, ಸರ್ವೆ ನಂ. 92 ಮತ್ತು 3ರ ಪೂರ್ವದ ಎಲ್ಲೆಯ ಮೇಲೆ ದಕ್ಷಿಣಕ್ಕೆ ಹೋಗಿ, ಆಮೇಲೆ ಸರ್ವೆ ನಂ. 37ರ ದಕ್ಷಿಣ ಎಲ್ಲೆಯ ಮೇಲೆ ಪಶ್ಚಿಮಕ್ಕೆ ತಿರುಗಿ; ಆಮೇಲೆ ಸರ್ವೆ ನಂ. 21, 22, 38 ಮತ್ತು 37ರ ಎಲ್ಲೆಗಳ ವರೆಗೂ ಉತ್ತರಕ್ಕೆ ಹೋಗಿ; ಆಮೇಲೆ ಉತ್ತರಕ್ಕೆ ಹೋಗಿ ಸರ್ವೆ ನಂ. 20ರ ದಕ್ಷಿಣ ಎಲ್ಲೆಗಳ ಮೇಲೆ ಪಶ್ಚಿಮಕ್ಕೆ ಹೋಗುತ್ತದೆ. ಈ ನಂಬರುಗಳೆಲ್ಲಾ ಕುಂದೂರು ಗ್ರಾಮಕ್ಕೆ ಸೇರಿದವು.
				ದಕ್ಷಿಣಕ್ಕೆ.—ಆಮೇಲೆ ಎಲ್ಲೆಯು ಕುಂದೂರು ಗ್ರಾಮದ ಸರ್ವೆ ನಂ. 37ರ ಪೂರ್ವದ ಎಲ್ಲೆಯ ಮೇಲೆ ದಕ್ಷಿಣಕ್ಕೆ ತಿರುಗಿ; ಆಮೇಲೆ ಅದೇ ನಂಬರ ದಕ್ಷಿಣ ಎಲ್ಲೆಯ ಮೇಲೆ ಪಶ್ಚಿಮಕ್ಕೆ ತಿರುಗಿ; ಆಮೇಲೆ ಸರ್ವೆ ನಂ. 21, 22, 38 ಮತ್ತು 37ರ ಎಲ್ಲೆಗಳ ವರೆಗೂ ಉತ್ತರಕ್ಕೆ ತಿರುಗಿ; ಆಮೇಲೆ ಸರ್ವೆ ನಂ. 21 ರ ದಕ್ಷಿಣ ಎಲ್ಲೆಗಳೊಂದಿಗೆ ವಾಯವ್ಯಕ್ಕೂ; ಆಮೇಲೆ ಸರ್ವೆ ನಂ. 20 ದಕ್ಷಿಣ ಎಲ್ಲೆಗಳೊಂದಿಗೆ ಪಶ್ಚಿಮಕ್ಕೂ; ಆಮೇಲೆ ಉತ್ತರಕ್ಕೂ, ಆಮೇಲೆ ಪಶ್ಚಿಮಕ್ಕೂ, ಪ್ರವಹ ಸರ್ವೆ ನಂ. 215ರ ನೈರುತ್ಯ ಎಲ್ಲೆಯ ಮೇಲೆ ಉತ್ತರಕ್ಕೂ; ಆಮೇಲೆ ಹೆಗ್ಗಡ್ಲು ಗ್ರಾಮದ ಸರ್ವೆ ನಂ. 97ರ ಪೂರ್ವದ ಎಲ್ಲೆಗಳ ಮೇಲೆ ದಕ್ಷಿಣಕ್ಕೂ ತಿರುಗುತ್ತದೆ, ಮತ್ತು ಸ್ವಲ್ಪದೂರದ ವರೆಗೂ ಸರ್ವೆ ನಂ. 95 ರೊಳಗೆ ಹೋಗಿ, ವಾಯವ್ಯಕ್ಕೆ ತಿರುಗುತ್ತದೆ; ಅಲ್ಲಿಂದ ಎಲ್ಲೆಯು ವಾಯವ್ಯಕ್ಕೆ ತಿರುಗಿ, ಕುಂದೂರು ಗ್ರಾಮದ ಸರ್ವೆ ನಂ. 91ರ ನೈರುತ್ಯ ಎಲ್ಲೆಯೊಂದಿಗೆ ಹೋಗಿ, ಪಶ್ಚಿಮಕ್ಕೆ ತಿರುಗಿ, ಸರ್ವೆ ನಂ. 92ರ ದಕ್ಷಿಣ ಎಲ್ಲೆಯ ಮೇಲೆ ಹೋಗಿ; ಆಮೇಲೆ ಕುಂದೂರು ಗ್ರಾಮದ ಸರ್ವೆ ನಂ. 215, 214 ಮತ್ತು 183 ಗಳ ಮೂರುಬಾಂದು ಕೂಡುವ ಸ್ಥಳದ ವರೆಗೂ ಸರ್ವೆ ನಂ. 215ರ ಈಶಾನ್ಯ ಮತ್ತು ವಾಯವ್ಯ ಎಲ್ಲೆಗಳ ಮೇಲೆ ನೈರುತ್ಯಕ್ಕೂ ವಾಯವ್ಯಕ್ಕೂ ತಿರುಗಿ, ಆಮೇಲೆ ಹೆಗ್ಗಡ್ಲು ಗ್ರಾಮದ ಸರ್ವೆ ನಂ. 97ರ ಪೂರ್ವ ಎಲ್ಲೆಯ ಮೇಲೆ ಹೋಗಿ ನೈರುತ್ಯಕ್ಕೆ ತಿರುಗಿ, ಸಲ್ಪದೂರದ

ಚಿಕ್ಕಮಗಳೂರು ಮತ್ತು ಸೂಡಿಗೆ.

ಸರಗೋಡು ಸ್ಪಷ್ಟ ಹಂಗೆಲು.

ಸ್ಥಳಗಳು 9,201, ಗಂಟಿಗಳು 25.

232

ಕ್ರಮ ಸಂಖ್ಯೆ.	ತಾಲ್ಲೂಕು.	ಪ್ರಸ್ತಾಪ ಜಂಗಲಿನ ಹೆಸರು.	ಸುಪಾರು ವಿಸ್ತೀರ್ಣ.	ಎಲ್ಲೆಗಳು.	ಷರತ್ತು.
1209	ಚಿಕ್ಕನಾಯಕನಹಳ್ಳಿ ಮತ್ತು ಮಧುಗಿರಿ.	ಸರಗೋಡು ಪ್ರಸ್ತಾಪ ಜಂಗಲು.	ಎಕರೆಗಳು 9,204 ಗುಂಟೆಗಳು 25.	ವರೆಗೂ ಸರ್ವೆ ನಂ. 98 ರೊಳಗೆ ಹೋಗಿ, ಸರ್ವೆ ನಂ. 98 ಮತ್ತು 96 ರೊಳಗೆ ಹೋಗಿ ವಾಯವ್ಯಕ್ಕೆ ತಿರುಗಿ; ಸರ್ವೆ ನಂ. 93 ರೊಳಗೆ ನೈರುತ್ಯಕ್ಕೂ ವಾಯವ್ಯಕ್ಕೂ ತಿರುಗಿ; ಹೆಗ್ಗಡ್ಲು ಗ್ರಾಮದ ಅದೇ ಸರ್ವೆ ನಂ. 93 ರ ಪಶ್ಚಿಮ ಎಲ್ಲೆಗೆ ಸೇರುತ್ತದೆ. ಪಶ್ಚಿಮಕ್ಕೆ.—ಎಲ್ಲೆಯು ಕುವೆ ಗ್ರಾಮದ ಸರ್ವೆ ನಂ. 230ರ ಪೂರ್ವದ ಎಲ್ಲೆಯ ಮೇಲೆ ಉತ್ತರಕ್ಕೆ ತಿರುಗಿ, ಪಶ್ಚಿಮಕ್ಕೂ, ಪುನಹ ಅದೇ ಸರ್ವೆ ನಂ. 230 ರೊಳಗೆ ಹೋಗಿ ಉತ್ತರಕ್ಕೂ ತಿರುಗಿ; ಆಮೇಲೆ ಕಡತಲಗೂರು ಗ್ರಾಮದ ಸರ್ವೆ ನಂ. 42 ರೊಳಗೂ ಕುವೆ ಗ್ರಾಮದ ಸರ್ವೆ ನಂ. 156 ರೊಳಗೂ ನೆಟ್ಟಗೆ ಹೋಗಿ ಕಡೆಗೆ ಎಲ್ಲೆಯು ಪ್ರಾರಂಭಿಸಿದ ಸ್ಥಳಕ್ಕೆ ಸೇರುತ್ತದೆ.	

ಈ ಜಂಗಲಿನಲ್ಲಿ ಕೆಳಗೆ ನಮೂದಾಗುವ ದಾರಿದು ಹಕ್ಕುಗಳು ಬಿಟ್ಟುಕೊಡಲ್ಪಟ್ಟಿವೆ :—

(1) ಕಾಲುದಾರಿ, 5 ಅಡಿ ಅಗಲ ಮತ್ತು 6 ಮೈಲಿ ಉದ್ದ, ಹೆಗ್ಗಡ್ಲು ಗ್ರಾಮದ ಸರ್ವೆ ನಂ. 98ರ ದಕ್ಷಿಣ ಎಲ್ಲೆಯಲ್ಲಿ ಜಂಗಲನ್ನು ಪ್ರವೇಶಿಸಿ, ಹೆಗ್ಗಡ್ಲು ಗ್ರಾಮದ ಸರ್ವೆ ನಂ. 98 ಮತ್ತು 97 ರೊಳಗೆ ಕುಂದೂರು ಗ್ರಾಮದ ಸರ್ವೆ ನಂ. 183, 214, 215, 105 ಮತ್ತು 92 ರೊಳಗೂ ಹೋಗಿ, ಕುಂದೂರು ಗ್ರಾಮದ ಸರ್ವೆ ನಂ. 118ರ ಪೂರ್ವ ದಿಕ್ಕಿನ ಬಾಂದುಗಳ ಹತ್ತರ ಜಂಗಲನ್ನು ಬಿಡುತ್ತದೆ.

(2) ಕಾಲುದಾರಿ, 5 ಅಡಿ ಅಗಲ, 2 ಮೈಲಿ 3 ಫರ್ಲಾಂಗ್ ಉದ್ದ, ಸರಗೋಡು ಗ್ರಾಮದ ಸರ್ವೆ ನಂ. 93ರ ಪೂರ್ವ ದಿಕ್ಕಿನ ಬಾಂದುಗಳ ಹತ್ತರ ಜಂಗಲನ್ನು ಪ್ರವೇಶಿಸಿ ಅದರೊಳಗೇ ಹೋಗಿ ಕುವೆ ಗ್ರಾಮದ ಸರ್ವೆ ನಂ. 230ರ ಪೂರ್ವ ದಿಕ್ಕಿನ ಬಾಂದುಗಳ ಹತ್ತರ ಸ್ಟೇಟ್ ಜಂಗಲನ್ನು ಬಿಡುತ್ತದೆ.

ಹುಕುಂ ಬಮೋಜಿಬ್,

ಎಂ. ಮುತ್ತಣ್ಣ,

ಫಾರೆಸ್ಟ್ ಅಲಾಟಿಯ ಗವರ್ನಮೆಂಟ್ ಅಫೀಷಿಯೇಟಿಂಗ್ ಸೆಕ್ರಟರಿ.

ಮೈಸೂರ ಗೆಜಿಟ್ಟು.

ಸಂ. 39.] ಸರ್ಕಾರದಿಂದ ಪ್ರಾಂಯಿಷ್ ಆದ್ದ. [ನಂ. 30.

ಬೆಂಗಳೂರು, ಗುರುವಾರ, ಜುಲೈ ತಾ|| 28, ಸ್ಯ 1904.

IIನೆ ಭಾಗ.

ಇಂಡ್ಯಗವರ್ಣ ಮೆಂಟ್, ರೆಸಿಡೆಂಟರು, ಜೀಲ್ಲಾ ಜಡ್ಜ್‌ಗಳು ವಗ್ಗೈರೆಯವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಫಾರೆಸ್ಟ್ ಇಲಾಖೆ.

ತಾರೀಖು 6ನೆ ಜುಲೈ 1904, ಚಿಕ್ಕಮಗಳೂರು.

ಇದರಿಂದ ತಿಳಿಸುವದೇನಂದರೆ :—ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಆಫೀಸಿನಲ್ಲಿ ಈ ಕೆಳಗೆ ಕಂಡ ತಪಶೀಲ್ ಮೇರೆ ಸಂಬಳ ಮತ್ತು ಭತ್ಯ ಮೊಬಲಗು ಸಹ ಪಾವತಿ ಆಗದೆ ಬಾಕೀಲಿ ಇರುತ್ತೆ. ಈ ನೋಟೀಸು ಪ್ರಾಯಿಷ್ ಆದ ಮೂರು ತಿಂಗಳೊಳಗಾಗಿ ಬಾಧ್ಯತೆ ಇರತಕ್ಕವರು ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ರೂಬರೂಬು ಹಾಜರಾಗಿ ಮೊಬಲಗು ಪಡಿಯಬೇಕು. ಹಾಗೆ ಇಲ್ಲದ ಪಕ್ಷದಲ್ಲಿ ಸರಕಾರಕ್ಕೆ ಸೇರಿಸಿಕೊಳ್ಳಲ್ಪಡುತ್ತೆ :—

ನಂಬರು.	ಹೆಸರು.	ಹುದ್ದೆ.	ತಪಶೀಲ್.			ರೀಮಾರ್ಕ.
			ಸಂಬಳ &c.		ಮೊಬಲಗು.	
1	ರಂಗ	ಗಾರ್ಡ್	1901ನೆ ಏಪ್ರೀಲ್ ತಲಬು	..	3 6 5	
2	ವೈಲಾರೈಯ್ಯ	ಡಿಟೋ	ಡಿಟೋ ಮಾರ್ಚಿ ತಲಬು		1 14 1	
3	ನಾಗಾ	ಡಿಟೋ	ಡಿಟೋ ಜುಲೈ ತಲಬು	..	1 7 3	
4	ಲಿಂಗಂಣ	ಡಿಟೋ	1902ನೆ ಮೇ ತಲಬು	...	1 12 11	
5	ವೆಸುವರ್ಮಾಸಾಬ್	ಡಿಟೋ	ಡಿಟೋ ಮೇ ತಲಬು	..	0 14 5	
6	ಹನುಮಂತರಾವ್	ಫಾರೆಸ್ಟರು	1901ನೆ ಆಗಸ್ಟು, ಸೆಪ್ಟಂಬರ್ ಭತ್ಯ		5 12 0	
			ಡಿಟೋ ಅಕ್ಟೋಬರ್ ತಲಬು	...	14 0 0	
			ಸಾದಿಲ್ವಾರ್ ವೊಬಲಗು	...	0 13 0	
			ಜುಮ್ಲಾ	...	30 0 1	

ನೋಟಸ್.

ತಾರೀಖು 7ನೆ ಜುಲೈ 1904ನೆ ಇಸವಿ.

1900ನೆ ಇಸವಿ ಫಾರೆಸ್ಟು ರೆಗ್ಯುಲೇಷನ್ 40ನೆ ಸೆಕ್ಷನ್ ಮೇರೆ ಈ ಕೆಳಗೆ ನಮೂದಿರುವ ಶ್ರೀಹೊನ್ನೆ ನಾಟು ಮಕ್ಕಿಕೊಪ್ಪದ ಹೊಳೆಯಲ್ಲಿ ತೇಲಿಕೊಂಡು ಬಂದದ್ದು ಕೊಪ್ಪ ರೇಂಜು ಆಫಿಸರವರ ಸುಪರ್ದಿನಲ್ಲಿರುತ್ತೆ. ಇದರ ಹಕ್ಕುದಾರ್ರು ಯಾರಾದರೂ ಇದ್ದಲ್ಲಿ ಸದರಿ ಫಾರೆಸ್ಟ್ ಹಕ್ಕನ್ನು ಸ್ಥಿರಪಡಿಸಿ ಇರತಕ್ಕ ಲಿಖಿತವಾದ ಸ್ಟೇಟುಮೆಂಟನ್ನು ಈ ಲಾಗಾಯಿತು ಒಂದು ತಿಂಗಳೊಳಗಾಗಿ ಕಡೂರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಲ್ಲಿ ಹಾಜರ್ಪಡಿಸತಕ್ಕದ್ದು. ತಪ್ಪಿದಲ್ಲಿ ಸದರಿ ವಾರದ ಬಾಧ್ಯತೆಯು ಯಾವ ಆಟಂಕವೂ ಇಲ್ಲದಂತೆ ಸರಕಾರಕ್ಕೆ ವಶಪಡಿಸಿಕೊಳ್ಳುವದು.

2. ಸದರಿ ನಾಟುವನ್ನು ಸ್ವಾಧೀನಪಡಿಸಿಕೊಳ್ಳಲು ಹಕ್ಕುದಾರರಾಗತಕ್ಕವರು ಸದರಿ ತೊಲೆ ಪತ್ತೆ ಮತ್ತು ಭದ್ರಪಡಿಸಿದ್ದಕ್ಕೆ ತಗಲಿದ ಲಾಗವಡನ್ನು ಫಾರೆಸ್ಟು ಅಧಿಕಾರಿಗಳಿಗೆ ಕೊಡಲು ಬದ್ಧರಾಗಿರುತ್ತಾರೆ :—

ನಂಬರು.	ಯಾವ ಜಾತಿ ನಾಟು.	ತೊಲೆ ವಿವರ.	ಲಾಂಬಿ.	ಸುತ್ತು	ಗಲೆ ಅಡಿ.
1	ಶ್ರೀಹೊನ್ನೆ ನಾಟು.	ದುಂಡು ನಾಟು, ಯಾವವಿಧವಾದ ಕಾಂಗಾರಿಯು ನಡದ್ದಲ್ಲ ಮತ್ತು ನಂಬರು ವಗ್ಗೈರೆ ಸಿಮೂರಿಲ್ಲ, ಸೊಳ್ಳೆಕೈಲ್ ಹತ್ತರ ಮಕ್ಕಿಕೊಪ್ಪ ಗ್ರಾಮದಲ್ಲಿ ಬಿದ್ದಿರುತ್ತೆ.	45 ಅಡಿ	6′ - 3″	104

ಎಂ. ಜಿ ರಾಮರಾವ್,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫೀಸರ್, ಕಡೂರು ಡಿಸ್ಟ್ರಿಕ್ಟ್.

ನೋಟಿಸ.

1904ನೆ ಇಸವಿ ಜುಲೈ 14ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ 428—429ನೆ ಪುಟನಲ್ಲಿ ಹಾಸ್ಯ ಡಿಸ್ಟ್ರಿಕ್ಟು 1904—05ನೆ ಸಾಲಿನ ಮೈನರ್ ಫಾರಸ್ಟ್ ಪ್ರಾಡ್ಯೂಸ್ ಹರಾಜ್ ವಿಚಾರದ ನೋಟಿಫಿಕೇಷನ್ ಫಾಯಿಷ್ ಮಾಡಿರುತ್ತೆ ಎಲ್ಲಾ ಜನಗಳಿಗೂ ತಿಳಿಯತಕ್ಕದ್ದು.

ವೈ. ಸೀತಾರಾಮಯ್ಯ,
ಫಾರ್ ಡೆಪ್ಯುಟಿ ಕಮಿಷನರ್, ಹಾಸನದ ಡಿಸ್ಟ್ರಿಕ್ಟು.

ಇಸ್ತಿಹಾರ್.

ಚಿಕ್ಕಮಗಳೂರು, ತಾರೀಖು 19ನೆ ಜುಲೈ 1904.

ಸರ್ವಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ಕಂಡ ತಾಲ್ಲೂಕ್‌ಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟ್ ಮತ್ತು ಪ್ರೈವೇಟೇರ್ಪಡಗಳು ವಿನಃ) ಹಿಡುವಳೀಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕ್ಕೆ ಚಕ್ಕೆಯನ್ನು 1904ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1905ನೆ ಇಸವಿ ಜೂನ್ 30ನೆ ತಾರೀಖು ವರಗೆ ಜವಾಯಿಸಿ ತೆಗದು ಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕು ದಾರಿಯು ಈ ಕೆಳಗೆ ವಿವರಿಸಿ ಇರುವ ತಾರೀಖುಗಳಲ್ಲಿ ಆಯಾಯ ತಾಲ್ಲೂಕ್ ಅಮಲ್ದಾರ್ರಿಂದ ರೇಂಜಾಫಿಸರಗಳಿಂದನೆ ಹರಾಜು ಮಾಡಿಸಲ್ಪಡುತ್ತ :—

ತಾಲ್ಲೂಕ್ ಹೆಸರು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.
1. ಚಿಕ್ಕಮಗಳೂರು	8—8—04	ತಾಲ್ಲೂಕ್ ಕಛೇರಿಲಿ.
2. ಕಡೂರು	10—8—04	ಡಿಟೋ
3. ತರೀಕೆರೆ	12—8—04	ಡಿಟೋ

ಪರಾ—ಹರಾಜು ನಿಬಂಧನೆ ಮುಂತಾದ ತಪಸೀಲ್‌ಗಳನ್ನ ಈ ಬಗ್ಗೆ ಫಾಯಿಷ್ಮಾಡಿಸಿ ಇರುವ ಮೈಸೂರು ಗೆಜೆಟ್ II‌ನೆ ಭಾಗದ 28ನೆ ನಂಬರು 1904ನೆ ಇಸವಿ ಜುಲೈ ತಾರೀಖಿನ 427, 428ನೆ ಪೇಜಾಗಳಲ್ಲಿನ ಇಸ್ತಿಹಾರ್ ಮೂಲಕ ತಿಳಿದುಕೊಳ್ಳಬಹುದು.

ಎ. ವೇದಾಂತದೇಸಿಗಂ ಅಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್, ಕಡೂರು ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟು.

ತಾರೀಖು 4ನೆ ಜುಲೈ 1904ನೆ ಇಸವಿ.

ಮೂರ್ಜನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು ಸದರಿ ಇನಾಂ ದಾರ್ರುಗಳಿಂದ ಬರಬೇಕಾದ ಬಾಕಿ ವೊಬಲಗಿಗೋಸ್ಕರ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 30ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಜೋಡಿ ಬೊಮ್ಮೇನಹಳ್ಳಿ ಕಸಬಾ ಹೋಬಳಿ ಚಿಕ್ಕಬಳ್ಳಾಪುರದ ತಾಲ್ಲೂಕು.
2. ಖಾಯಂಗುತ್ತಾ ದಾಸರೇನಹಳ್ಳಿ, ಹೊಸೂರು ಹೋಬಳಿ ಗೋರೀಬಿದನೂರು ತಾ॥

(ಹೆಚ್ಚು ತಪಸೀಲ್ ಬಗ್ಗೆ 14—7—1904ನೆ ಮುಕ್ತಂ 28 ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 430—431ನೆ ನಂಬರ್ ಪೇಜು ನೋಡತಕ್ಕದ್ದು.

ತಾರೀಖು 7ನೆ ಜುಲೈ 1904ನೆ ಇಸವಿ.

ಮೂರ್ಜನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕಿ ವೊಬಲಗಿಗೋಸ್ಕರವಾಗಿ, ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 30ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

1. ಖಾಯಂಗುತ್ತಾ ವೀರೇನಹಳ್ಳಿ-ವೇಮಗಲ್ ಹೋಬಳಿ, ಕೋಲಾರ ತಾಲ್ಲೂಕು.
2. ಜೋಡಿ ಬೆಸ್ತರಹಳ್ಳಿ-ಪಾತಪಾಳ್ಯ ಹೋಬಳಿ, ಬಾಗೆಪಲ್ಲಿ ತಾಲ್ಲೂಕು.

(ಹೆಚ್ಚು ತಪಸೀಲ್ ಬಗ್ಗೆ 14—7—1904ನೆ ಮುಕ್ತಂ 28ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 432—433ನೆ ನಂಬರ್ ಪೇಜು ನೋಡತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 15ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಜೋಡಿ ಕೊಂಡರಾಜನಹಳ್ಳಿ ಗ್ರಾಮದ ಕಟ್ಟೆ ರಾಮೂಚಾರ್ ವಗೈರೇರಿಂದ ಬರಬೇಕಾದ ಜಪ್ತಿ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಳ್ಳೇರಿಯಲ್ಲಿ 1904ನೆ ಇಸವಿ ಸೆಪ್ಟಂಬರ್ ಮಾಹೆ 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಜಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ ಮೇರಿಗೆ ರೂಪಾಯಿ 176—10—9 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಪಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರಿ ಮಾಡಲ್ಪಟ್ಟು ಡೆಪ್ಯುಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಲ್ಪತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್.							ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
				ಕಟ್ಟಡಗಳು.		ಜಮೀನು.								
				ಕಟ್ಟಡಗಳ ಹೆಸರು.	ಅಂದಾಜಿ ಕಿಮ್ಮತ್ತು.	ನಂಬರ್ ಪ್ಲಾನಿನ ಹೆಸರು.	ಖುಷ್ಕಿ ತರೀ ಅಥವಾ ಬಾಗಾಯತು.	ಏನ್ಸ್ (ಗ್ರಾಂಟ್).	ವಿಸ್ತೀರ್ಣ.					
					ರೂ. ಆ. ಪೈ.			ಎ. ಗು	ರೂ. ಆ. ಪೈ.			ರೂ.	ಆ.	ಪೈ.	
ಕೋಲಾರ.	ಈಸೆಬು.	ಜೋಡಿ ಕೊಂಡರಾಜನಹಳ್ಳಿ.	ಕಟ್ಟೆ ರಾಮೂಚಾರ್ ವಗೈರೆರು.	....	..	ಪರಂಪೋಕು	181	11 5	12	0		175	2	9	ಶೋಭಕೃತು
						ತರಿ ...	6	33 21	8	0		1	8	0	ಪ್ಲೇನ್ಸ್ ಫೀ
						ಖುಷ್ಕಿ ...	207	28 337	8	0		——	—	—	
						ಬಾಗಾಯತು.	24	24 106	0	0		176	10	9	
							420	16 470	12	0					

ಚಕ್ಕುಬಂದಿ.

ಪೂರ್ವಕ್ಕೆ — ಸುಲ್ತಾನ್ ತಿಪ್ಪಸಂದ್ರ.
ಪಶ್ಚಿಮಕ್ಕೆ — ಪಾಪರಾಜನಹಳ್ಳಿ.
ಉತ್ತರಕ್ಕೆ — ಸುಲ್ತಾನ್ ತಿಪ್ಪಸಂದ್ರ.
ದಕ್ಷಿಣಕ್ಕೆ — ಅಮ್ಮೇರಕಹಳ್ಳಿ.
(ವೃತ್ತಿವಾರಾಗಿ ಹರಾಜು ಮಾಡಿಸಲ್ಪಡುತ್ತೆ.)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

236

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 15ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ನುಲ್ಲಸಂದ್ರ ಗ್ರಾಮದ ಜಿ. ಸುಬ್ಬರಾವು ವಗೈರೇರಿಂದ ಬರಬೇಕಾದ ಜಮ್ಮಾಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಸೆಪ್ಟಂಬರ್ ಮಾಹೆ 6ನೆ ತಾರೀಖಿನಲ್ಲಿ ಒಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ರೂಪಾಯಿ 74—8—10 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳೊಳಗೆ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ವ್ಯವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8 ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು, ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟಿ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ವಾಲಿತ್ಯಗಳಿಗೆ ಗವರ್ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕರ್ನೂಲಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು. ಹೋಬಳಿ. ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜು ಕನ್ನಾತು. ರೂ. ಆ. ಪೈ.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ಸೋಟಸ್ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು. ರೂ.	ಆ.	ಪೈ.	
ಕೋಲಾರ. ಹೊಳ್ಳೂರು ಖಾಯಂಗುತ್ತಾ ನುಲ್ಲಸಂದ್ರ.	ಜಿ. ಸುಬ್ಬರಾವು ವಗೈರೇರು.	...	...	...	ಪರಂಪೋಕು.	217	13	..	..	...	73	0	10	ಶೋಭಕೃತು
					ಖುಷ್ಕಿ	144	6	166	12	0	1	8	0	ಪ್ರೊಸೆಸ್ ಫೀ
					ತರಿ ..	46	17	196	12	0				
					ಬಾಗಾಯತು.	11	19	43	0	0	74	8	10	
						419	15	406	8	0				

ಚಕ್ಕುಬಂದಿ.
ಪೂರ್ವಕ್ಕೆ—ನುಕ್ಕನಹಳ್ಳಿ ಸರಹದ್ದು.
ಪಶ್ಚಿಮಕ್ಕೆ—ಅರಿನಾಗಿನಹಳ್ಳಿ ಡಿಟೋ
ಉತ್ತರಕ್ಕೆ—ಮುದವಾಡಿ ಡಿಟೋ
ದಕ್ಷಿಣಕ್ಕೆ—ಜಯಸಂದ್ರ ಡಿಟೋ
(ವ್ಯತ್ತಿವಾರಾಗಿ ಹರಾಜು ಮಾಡಿಸಲ್ಪಡುತ್ತೆ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜು ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್‌ವ ಪ್ರಸಿದ್ಧಪತ್ರಿಕೆ.

ತಾರೀಖು 15ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಜೋಡಿ ರಾಮಸಂದ್ರ ಗ್ರಾಮದ ನಂಜುಂಡಾವಧಾನಿ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಸೆಪ್ಟಂಬರ್ ಮಾಹೆ 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 45—7—6 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಕೋಲಾರ	ಕಸಬಾ	ಜೋಡಿ ರಾಮಸಂದ್ರ	ನಂಜುಂಡಾವಧಾನಿ ವಗೈರೇರು	...	...	....	ಪರಂಪೋಕು.	15	32		...		43	15	6	ಶೋಭಕೃತು
							ಖುಷ್ಕಿ ...	220	21	241	0	0	1	8	0	ಪ್ರೊಸೆಸ್ ಫೀ
							ಬಾಗಾಯತು.	..	21	1	0	0				
								236	34	242	0	0	45	7	6	

ಚಕ್ಕು ಬಂದಿ.
ಪೂರ್ವಕ್ಕೆ — ಹೊನ್ನೇನ ಹಳ್ಳಿ
ಪಶ್ಚಿಮಕ್ಕೆ — ಕೋಲಾರ ಅಮಾನಿಕೆರೆ
ಉತ್ತರಕ್ಕೆ — ಟಮಕ ಸರಹದ್ದು
ದಕ್ಷಿಣಕ್ಕೆ — ಬಸವನತ್ತದ ಸರಹದ್ದು
(ವೃತ್ತಿವಾರಾಗಿ ಹರಾಜು ಮಾಡಿಸಲ್ಪಡುತ್ತೆ.)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 15ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಕ್ಯಾಲನೂರು ಗ್ರಾಮದ ರಾಮಪ್ಪನವರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಸೆಪ್ಟಂಬರ್ ಮಾಹೆ 5ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1904ನೆ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 4,330 – 13 – 8 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನ್‌ಮೆಂಟನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಪ್ಪೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.	
ಕೋಲಾರ	ಪೇಮಗಲ್	ಖಾಯಂಗುತ್ತಾ ಕ್ಯಾಲನೂರು	ರಾಮಪ್ಪನವರು		..	..	ಪರಂಪೋಕು	80	33	2	8	0	4,081	0	4	ಸ್ವಭಾನು ಲಾಗಾಯ್ತು ಹೇವಿಳಂಬಿ ವರಿಗೆ.
							ಖುಷ್ಕಿ	358	10	525	15	0				
							ತರಿ	23	32	131	10	0				
							ಬಾಗಾಯತು	70	29	344	0	0	1	0	2	ಶುಭಕೃತು
													247	13	2	ಶೋಭಕೃತು
								533	24	1,004	1	0	1	0	0	ಪ್ರೊಸೆಸ್ ಫೀ
							ಚಕ್ಕು ಬಂದಿ.						4330	13	8	

ಪೂರ್ವಕ್ಕೆ — ಕ್ಯಾಲನೂರು ಅಮಾನಿಕೆರೆ ಸರಹದ್ದು
ಪಶ್ಚಿಮಕ್ಕೆ — ಚನ್ನಸಂದ್ರ
ಉತ್ತರಕ್ಕೆ — ಸರ್ವಮಾನ್ಯ ಕರಿಯನಹಳ್ಳಿ ಸರಹದ್ದು
ದಕ್ಷಿಣಕ್ಕೆ — ಬೈರಂಡಹಳ್ಳಿ
(ಪೂರಾ ಗ್ರಾಮ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

1217

ತಾರೀಖು 18ನೆ ಮಾಹೆ ಜುಲೈ 1904.

ಅಮಾನಿ ಭೈರಸಾಗರಕೆರೆ ಶಾನುಭಾಗ ಕೃಷ್ಣಪ್ಪನೆಂಬುವನು ಕೋಲಾರ ಡಿಸ್ಟ್ರಿಕ್ಟು ಗುಡಿಬಂಡೆ ಸಬ್ ತಾಲ್ಲೂಕು ಗುಡಿಬಂಡೆ ಹೋಬಳಿ ಬೇಚರಾಕ್ ಬೋಡೇನಹಳ್ಳಿ ಗ್ರಾಮದ ಈ ಕೆಳಗೆ ವಿವರಿಸಿರುವಂತೆ 63 ಎಕರೆ, 34 ಗುಂಟೆ ಜಮೀನಿಗೆ ಆಕಾರ 61—0—0 ರೂಪಾಯಿವುಳ್ಳ ಜಮೀನನ್ನ ಸ್ವಂತ ಲಾಗವಡಿನಿಂದ ಆಬಾದಿಗೆ ತಂದುಕೊಂಡು ಹತ್ತು ವರುಷಗಳಲ್ಲಿ ಪೂರಾ ಕಂದಾಯ ಕೊಡುವ ಷರತ್ತಿನ ಮೇಲೆ ಕ್ರಯಕ್ಕೆ ಕೊಡಿಸಬೇಕೆಂದು ದರಖಾಸ್ತು ಮಾಡಿರುತ್ತಾನೆ. ಇದಕ್ಕಿಂತ ಕಮ್ಮಿ ಸಾಲುಗಳ ಶ್ರಯಕ್ಕೂ ಮತ್ತು ಸರಕಾರಕ್ಕೆ ಫಾಯಿದೆಕರವಾಗಿಯೂ ಮಾಡುವರ್ಯಾರಾದರೂ ಇದ್ದರೆ ಈ ನೋಟೀಸು ಪ್ರಸಿದ್ಧವಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಈ ಆಫೀಸಿಗೆ ದರಖಾಸ್ತುಗಳನ್ನ ಕೊಡಬಹುದು. ತಪ್ಪಿದರೆ ರೂಲ್ಸು ಅನುಸರಿಸಿ ವ್ಯವಸ್ಥೆ ಮಾಡಲ್ಪಡುತ್ತೆ.

ಸರ್ವೆ ನಂಬರು.	ಖುಷ್ಕಿ.					ತರಿ.					ಬಾಗಾಯತು.			ಜುಮ್ಲಾ.					ಗಿಡಗಳು ವಗೈರೆ.				ಪಂಚಾಯಿತರ ಅಂದಾಜು ಸೊಬಲಿಗೆ.		
	ಜಮೀನು.		ಆಕಾರ.			ಜಮೀನು.		ಆಕಾರ.			ಜಮೀನು.		ಆಕಾರ.	ಜಮೀನು.		ಆಕಾರ.			ಕುಂಗಿ.	ಹುಣಸೆ.	ಈಚಲುಗಿಡ ಬಂದು ಗಜದಮೇಲೆ ಇರುವದು.	ಈಚಲು ಸೊಸಿಗಳು ಬಂದು ಗಜದ ಮೇಲೆ ಇರುವದು.			
	ಎ.	ಗು.	ರೂ	ಆ.	ಪೈ.	ಎ.	ಗು.	ರೂ	ಆ.	ಪೈ	ಎ.	ಗು.	ರೂ	ಎ.	ಗು.	ರೂ	ಆ.	ಪೈ.					ರೂ	ಆ.	ಪೈ.
1	22	0	19	4	0		..	...	...	..	...	...		22	0	19	0	0	32	...	4	62	4	0	0
*2	26	0	21	2	0	...	...	...	..		...	...	..	26	0	21	0	0	30	1	1	1	2	8	0
3	13	0	11	6	0	2	34	9	12	9	...	...	..	15	34	21	0	0	160	..	8	11	9	4	0
..	61	0	51	12	0	2	34	9	12	9	...	...	...	63	34	61	0	0	222	1	13	74	15	12	0

* ಪರಾ.—ಅಂದಾಜಾ ನಾ ಲಾಯಖಾದ 100 ಕಲ್ಲುಗಳಿವೆ.

		ಎ.	ಗು.	
ನೋಟ್.—ಬಟ್ಟು ಜಮೀನು	...	78	35	
ಪೈಕಿ ವಜಾ ಖರಾಬು		15	1	
ಜಾತಾ ಬಾಕಿ	...	63	34	ಮೇಲ್ಕಂಡ ತಪಶೀಲ್ ಮೇರಿಗೆ.

ಕೆ. ಪಿ. ಪುಟ್ಟಣ ಚೆಟ್ಟಿ,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮಾ—ತಾರೀಖು 5ನೆ ಜುಲೈ 1904.

ಎಡತೊರೆ ತಾಲ್ಲೂಕಿಗೆ ಶೇರಿದ ಸರ್ವಮಾನ್ಯ ದಿಡ್ಡಹಳ್ಳಿ ಗ್ರಾಮವು ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಎಡತೊರೆ ತಾಲ್ಲೂಕು ಅಮಲ್ದಾರ್ರವರ ಕಚೇರಿಯಲ್ಲಿ 1904ನೆ ಇಸವಿ ಆಗಸ್ಟು ಮಾಹೆ 20ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹೆಚ್ಚು ತಪಶೀಲ್ ಬಗ್ಗೆ ತಾರೀಖು 14—7—1904ನೆ ಪುರ್ಕುಂ 28ನೆ ನಂಬರ್ ಮೈಸೂರು ಗೆಜೆಟ್ಟಿನ 2ನೆ ಭಾಗದ 434ನೆ ನಂಬರು ಪೇಜು ನೋಡತಕ್ಕದ್ದು.

ಎಂ. ಕಾಂತರಾಜೆ ಅರಸ್,
ಅಫಿಷಿಯೇಟಿಂಗ್ ಡೆಪ್ಯುಟಿ ಕಮಿಷನರ್.

ತಾರೀಖು 7ನೆ ಜುಲೈ 1904.

1904ನೆ ಇಸವಿ ಜೂನ್ ತಾರೀಖು 22ನೆ ಬುಧವಾರ ಮಧ್ಯಾಹ್ನ 2 ಘಂಟೆಯಲ್ಲಿ ಮೈಸೂರುನಲ್ಲಿ ನಡದ ಮೈಸೂರು ಡಿಸ್ಟ್ರಿಕ್ಟು ಬೋರ್ಡು ಮೀಟಿಂಗಿನ ಪ್ರೊಶೀಡಿಂಗ್ಸು.

ಮೆ॥ ಎಂ. ಕಾಂತರಾಜೆ ಅರಸಿನವರು, ಬಿ. ಎ., ಪ್ರಸಿಡೆಂಟರು (ಗೈರ್ಹಾಜರು.)

ಹಾಜರಿದ್ದವರು.

1. ವೈಸ್ ಪ್ರೆಸಿಡೆಂಟರು ಮೆ॥ ಸಿ. ಕೃಷ್ಣರಾಯರು (ಇವರು ಪ್ರಸಿಡೆಂಟರಾಗಿದ್ದರು.)
2. ನಂಜನಗೂಡು ಡಿವೀಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್ ಮೆ॥ ವೈದ್ಯನಾಥಯ್ಯರವರು.
3. ಹುಣಸೂರು ಡಿವೀಜನ್ ಅಸಿಸ್ಟೆಂಟ್ ಕಮಿಷನರ್ ಮೆ॥ ದೇವರಾಜೇ ಅರಸಿನವರು.

240

4. ಫ್ರೆಂಚರಾಕ್ಸ್ ಡಿವೀರ್ಜ ಅಸಿಸ್ಟೆಂಟ್ ಕಮೀಷನರ್ ಮೆ|| ಸಿ. ವೆಂಕಟರಾಯರು.
5. ಕೃಷ್ಣರಾಜಪೇಟೆ ಡಿವೀರ್ಜ ಅಸಿಸ್ಟೆಂಟ್ ಕಮೀಷನರ್ ಮೆ|| ಸುಬ್ರಮಣ್ಣಯ್ಯನವರು.
6. ಮೈಸೂರು ಡಿವೀರ್ಜ ಎಗ್ಜಿಕ್ಯುಟಿವ್ ಇರ್ಜಿನಿಯರ್ ಮೆ|| ಅರ್ಲಾಚಲಂ ಮೊದಲಿಯಾರು.

(ಬ) ತಾಲ್ಲೂಕುಗಳ ಪ್ರಜಾ ಪ್ರತಿನಿಧಿಗಳು.

ಹೆಸರು.	ತಾಲ್ಲೂಕು.	ಹೆಸರು.	ತಾಲ್ಲೂಕು.
1. ಮೆ|| ಅಂಬೈ ಅಣ್ಣಯ್ಯ ಪಂಡಿತರು,	ಮೈಸೂರು.	8. ಮೆ|| ಎಸ್. ಸುಬ್ಬರಾಯರು,	ಶ್ರೀರಂಗಪಟ್ಟಣ.
2. ,, ಸಿವೋಜಿರಾಯರು,	ಯಡತೊರೆ	9. ,, ನಾಡಿಗ ಕೃಷ್ಣಪ್ಪನವರು,	ಕೃಷ್ಣರಾಜಪೇಟೆ
3. ,, ಅಂತಹಳ್ಳಿ ಮುದ್ದೇಗೌಡರು,	ಹುಣಸೂರು.	10. ,, ಚಂದ್ರಶೇಖರಯ್ಯನವರು,	ನಾಗಮಂಗಲ.
4. ,, ಸಿದ್ದಲಿಂಗಪ್ಪನವರು,	ಗುಂಡ್ಲುಪೇಟೆ.	11. ,, ವೈ. ರಾಮಣ್ಣನವರು,	ಮಂಡ್ಯ.
5. ,, ವಾಸುದೇವಯ್ಯನವರು,	ಚಾಮರಾಜನಗರ.	12. ,, ಗೋವಿಂದಪ್ಪನವರು,	ಮಳವಳ್ಳಿ.
6. ,, ಭೀಮರಾಯರು,	ನಂಜನಗೂಡು.	13. ,, ಶ್ರೀಕಂಠಶೆಟ್ಟರು,	ಫ್ರೆಂಚರಾಕ್ಸ್ನ ಸಬ್ ತಾಲ್ಲೂಕ್.
7. ,, ತಲ್ಕಾಡು ಕೃಷ್ಣರಾಯರು,	ಟಿ. ನರಸೀಪುರ.		

'ಲ' ಕ್ಲಾಜಿನ ಮೇರೆ ಇತರ ಪ್ರಜಾಪ್ರತಿ ನಿಧಿಗಳು.

1. ಮೆ|| ಎ. ರಾಮಣ್ಣನವರು, ಅಡ್ವೊಕೇಟ್ ಮತ್ತು ಜರ್ಮೀದಾರ್ರು.
2. ,, ಮಾದಪ್ಪನವರು, ಇನಾಂದಾರ್ರು.
3. ,, ಎ. ಗೋವಿಂದಾಚಾರ್ಲುರವರು, ರಿಟೈರಾದ ಎ|| ಇಂಜನಿಯರ.
4. ,, ತಾಯೂರು ಕೃಷ್ಣರಾಯರು, ರಿಟೈರಾದ ಅಮಲ್ದಾರ್ರು.
5. ,, ಉಂಡವಾಡಿ ನರಶಿಂಗರಾಯರು, ಶ್ಯಾನುಭೋಗರು ಮತ್ತು ಜರ್ಮೀದಾರ್ರು.

ಗೈರ್ಹಾಜರಾದವರು.

1. ಮೈಸೂರು ಸಿವಿಲ್ ಸರ್ಜರ್ನರವರು.
2. ಫ್ರೆಂಚರಾಕ್ಸ್ ಡಿವೀರ್ಜ ಎ|| ಇಂಜನಿಯರ್ರವರು.
3. ಮೈಸೂರು ದಕ್ಷಿಣ ಸರ್ಕಲ್ ಸ್ಕೂಲುಗಳ ಡೆಪ್ಯುಟಿ ಇನ್ಸ್ಪೆಕ್ಟರು.
4. ಹೆಗ್ಗಡದೇವನಕೋಟೆ ತಾಲ್ಲೂಕು ಪ್ರಜಾ ಪ್ರತಿನಿಧಿ ಮೆ|| ದಾಸೇಗೌಡರು.
5. 'ಲ' ಕ್ಲಾಜ್ ಮೇರೆ ಪ್ರಜಾ ಪ್ರತಿನಿಧಿ ಮೆ|| ಹರ್ಕೇಅಲ್ಲಿ ಜೇಗರವರು.

I. ಈ ಕೆಳಗೆ ಕಂಡ ಗೌರ್ಮೆಂಟ್ ಪ್ರೊಸೀಡಿಂಗ್ಸ್ಗಳು ಓದಲ್ಪಟ್ಟು ರಿಕಾರ್ಡು ಮಾಡಲ್ಪಟ್ಟವು.

(1) ಲೋಕಲ್ ಬೋರ್ಡ್ಸ್ ರೂಲ್ಸು 11ನೆ ಪ್ಯಾರಾದಲ್ಲಿ ಕಂಡ ಮೇರೆ ಬಂದು ತಾಲ್ಲೂಕಿನ ಎರಡು ಅಥವಾ ಎರಡಕ್ಕಿಂತ ಜಾಸ್ತಿಯಾದ "ಗ್ರೂಪು" ಗಳಲ್ಲಿ 50 ರೂಪಾಯಿಗೆ ಕಮ್ಮಿ ಇಲ್ಲದೆ ಕಂದಾಯ ಕೊಡುವನು ಅಂಥ ಪ್ರತಿಬಂದು ಗ್ರೂಪಿನ ಮೆಂಬರಿಗೋಸ್ಕರ ಓಟ್ ಮಾಡಬಹುದೆಂದು ಬಂದಿರುವ 19—2—1904ನೆ ಮಕ್ಕಂ 3087—94—L. F. 6603ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸು.

(2) 5—5—04ನೆ ಮಕ್ಕಂ 3366—75—L. F. 105—03ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸ್ನಲ್ಲಿ ಕಂಡ ತಿಳುವಳಿಕೆ ಅನುಸರಿಸಿ ಸಾಲಶೂಡಾ ಲೆಖ್ಕಗಳನ್ನು ತಯಾರ್ಮಾಡಬೇಕೆಂದು ಬಂದ ಮೇಲ್ಕಂಡ ಪ್ರೊಸೀಡಿಂಗ್ಸು.

(3) ಹತ್ತು ವರುಷಗಳು ಆದನಂತರ ಅಮೃತಮಹಾಲ್ ಇಲಾಖೆಯ ಗೂಳಿಯು ಕೆಲಸಕ್ಕೆ ಬಾರದೆ ಹೋಗುವ ಪಕ್ಷಕ್ಕೆ ಈ ಗೂಳಿಯನ್ನು ಮಾರಿಬಿಟ್ಟು ಬನಗಳಿಗೆ ಗೂಳಿ ಹಾರಿಸುವದಕ್ಕೋಸ್ಕರ ಅಮೃತಮಹಾಲ್ ಇಲಾಖೆಯಿಂದ ಹೊಸದಾಗಿ ಗೂಳಿಯನ್ನು ತೆಗದುಕೊಳ್ಳಬೇಕೆಂದು ಬಂದ 20—4—1904ನೆ ಮಕ್ಕಂ 4015—24—L. F. 32—03ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸು.

II. ಮಸರ್ಸ್ "ಬರ್ಸ್ ಅಂಡ್ ಕೋ" ಇಂದ ಹೊಸದಾಗಿ ಬಂದ ನೇಗಲುಗಳನ್ನು ನಂಜನಗೂಡು ಆಂಗ್ಲೋ ವರ್ನಾಕ್ಯುಲರ್ ಸ್ಕೂಲಿಗೆ ಕೇರಿರುವ ಹೊಲದಲ್ಲಿ ಉಪಯೋಗಿಸಿದ್ದರ ರಿಪೋರ್ಟಿನ ಮೇಲೆ ಬಂದ 8—2—04ನೆ ಮಕ್ಕಂ 2907—15—L. F. 85—03ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸನ್ನು ಓದಿ ರಿಕಾರ್ಡು ಮಾಡಲ್ಪಟ್ಟದ್ದಲ್ಲದೆ ಪ್ರತಿ ನೇಗಿಲಿನ ನಮೂನೆಯನ್ನು ಅಜಮಾಯಿಷೀಗು ಮತ್ತು ಇವುಗಳನ್ನು ಉಪಯೋಗಿಸುವಂತೆ ಜನಗಳಿಗೆ ಪ್ರೋತ್ಸಾಹ ಪಡಿಸುವದಕ್ಕು ಸಹ ತಾಲ್ಲೂಕುಗಳಿಗೆ ಸರಫರಾಜು ಮಾಡಿಸಬೇಕೆಂದು ಗೌರ್ಮೆಂಟಿಗೆ ಬರೆಯಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

III. ಇಂಡಿಯರ್ ಮೆಡಿಕಲ್ ಸರ್ವಿಸ್ J. W. W. ಸ್ಟೀರ್ಪೆನ್ಸ್ ಮತ್ತು ಲೆಪಟಿನೆಂಟ್ ಕ್ರಿಸ್ಟೋಫರ್ಸ್ ಡಾಕ್ಟರುಗಳಿಂದ ಬರೆಯಲ್ಪಟ್ಟ "Practical study of Malaria" ಎಂಬ ಬುಕ್ಕನ್ನು ಜನಗಳು ಉಪಯೋಗಿಸುವ ವಿಚಾರದಲ್ಲಿ ಬಂದ 29—3—04ನೆ ಮಕ್ಕಂ 4794—803ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸು ಓದಲಾಯಿತು. ಮತ್ತು ತಾಲ್ಲೂಕು ಗಳಿಗೂ ಮೆಂಬರುಗಳಿಗೂ ಕಳುಹಿಸಲು ಮೇಲ್ಕಂಡ ಬುಕ್ಕಿನ ಪ್ರತಿಗಳನ್ನು ತರಿಸಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

IV. ಡಿಸ್ಟ್ರಿಕ್ಟು ಬೋರ್ಡಿನ ಅಭಿಪ್ರಾಯದ ಮೇಲೆ ಗೌರ್ಮೆಂಟಿನಿಂದ ಇತ್ಯರ್ಥವಾದ ಅರ್ಜಿಯು ಒರುವ ವರಿಗೂ ಮನೆಗಳ ಕಿಮ್ಮತಿನ ಮೇಲೆ ವಿಲೇಜ್ ಯೂನಿಯರ್ಮಗಳಲ್ಲಿ ಮನೆ ಕಂದಾಯವನ್ನು ವಸೂಲ್ಮಾಡಬೇಕೆಂದು ಬಂದ 8—4—04ನೆ ಮರ್ಕುಂ 3878—85—L. F. 109—03ನೆ ನಂಬರ್ ಗೌರ್ಮೆಂಟ್ ಪ್ರೊಸಿಡಿಂಗ್ಸ್ ವಿಚಾರದಲ್ಲಿ ಹಾಲಿ ಗೌರ್ಮೆಂಟ್‌ನಿಂದ ದಾಖಲಾಗಿರುವ ದರವು ನ್ಯಾಯವಾಗಿರುವದರಿಂದ ಈದರವೇ ನಧ್ಯಕ್ಕೆ ಇರಬಹುದೆಂದು ತೀರ್ಮಾನ ಮಾಡಲ್ಪಟ್ಟಿತು.

V. ಸಂತೆ ಮತ್ತು ಜಾತ್ರೆಗಳ ಕಾಲದಲ್ಲಿ ಯೂನಿರ್ಮಗಳಲ್ಲಿ ಹಂಗಾಮಿಯಾಗಿ ಚಪ್ಪಗಳನ್ನು ಹಾಕುವದಕ್ಕು ಭಂಡಿ ವೋಟನ್ನು ಉಪಯೋಗಿಸುವದಕ್ಕು ಸಹ 1902ನೆ ಇಸವಿ ಲೋಕಲ್ ಬೋರ್ಡು ರೆಗ್ಯುಲೇಷ್ನ 20 (6) & (ನೆ ಸೆಕ್ಷ್ನಗಳಲ್ಲಿ ವಿಧಿಸಿರುವ ಪ್ರಕಾರ 'ಫ' ವಸೂಲ್ಮಾಡುವ ವಿಚಾರದಲ್ಲಿ ಪ್ಲೇಗ್ ಮತ್ತು ಇತರ ಅನಾನುಕೂಲಗಳಿಂದ ಈ ವಿಚಾರವನ್ನು ಇತ್ಯರ್ಥ ಮಾಡುವದನ್ನು ತಾಲ್ಲೂಕಿಗೆ ಮನ್ನ ಮಾಡಬೇಕೆಂದು ಇತ್ಯರ್ಥ ಮಾಡಲ್ಪಟ್ಟಿತು.

VI. ಲೋಕಲ್ ಬೋರ್ಡು ರೂಲ್ಸು 22ನೆ ಪ್ಯಾರಾದಲ್ಲಿ ಕಂಡ ಅಂಶಕ್ಕೆ ಲೋಕಲ್ ಬೋರ್ಡು ವಿಾಟಿಂಗಿಗೆ ಬರುವ ಪೀರೋಜಾಗಾರ್ ಮೆಂಬರುಗಳಿಗೆ ಸಲ್ಲಬೇಕಾದ ಮೈಲೇಜನ್ನು ನಿಷ್ಕರ್ಷೆ ಮಾಡಬೇಕೆಂಬ ಸಂಗತಿಯಲ್ಲಿ ಡಿಸ್ಟ್ರಿಕ್ಟು ಬೋರ್ಡು ಮತ್ತು ತಾಲ್ಲೂಕು ಬೋರ್ಡಿನ ಮೆಂಬರುಗಳಿಗೆ ಹಾಲಿ ಇರುವ ದರದ ಮೇರೆ ಮೈಲೇಜು ಕೊಡುತ್ತಾ ಬರಬಹುದೆಂತಲೂ ತಾಲ್ಲೂಕು ಬೋರ್ಡು ಮತ್ತು ಲೋಕಲ್ ಬೋರ್ಡು ಇವುಗಳಿಗೆ ಪರಸ್ಪರ ವೆತ್ಯಾಸವಿಧೆ ಎಂಬುವದಕ್ಕೆ ಮೇಲ್ಕಂಡ ಪ್ಯಾರಾದಲ್ಲಿ ಏನೂ ಉಕ್ತವಾಗಿ ಇಲ್ಲವೆಂದು ತೀರ್ಮಾನ ಮಾಡಲ್ಪಟ್ಟಿತು.

VII. ಹಾಲಿ ತಯಾರ್ಮಾಡಿರುವ ತಖ್ತೆಯಲ್ಲಿ ಕಂಡ ಪ್ರತಿಬಂದು ಕೆಲಸಕ್ಕೆ ಶಿಡ್ಯೂಲಿನಲ್ಲಿ ಕಂಡ ದರ ಅನುಸರಿಸಿ ಕೂಲ್ಸಿನ 91ನೆ ಪ್ಯಾರ ಮೇರೆ ಅಂದಾಜು ಮಂಜೂರ್ಮಾಡಬಹುದೆ ಎಂಬ ವಿಚಾರದಲ್ಲಿ ಎಗ್ಸಿಕ್ಯುಟಿವ್ ಇಂಜಿನಿಯರ್ರವರಿಂದ ಬಂದ ಕೇಟನ ಶಿಡ್ಯೂಲುಗಳನ್ನು ಮೆಂಬರುಗಳಿಗೆ ಕಳುಹಿಸಿ ಮುಂದಿನ ವಿಟಿಂಗಿನಲ್ಲಿ ಈ ವಿಚಾರವನ್ನು ವ್ಯವಸ್ಥೆ ಮಾಡಬಹುದೆಂದು ತೀರ್ಮಾನವಾಯಿತು.

VIII. ಮಾಹೇವಾರಿಗಳು ಸಕಾಲದಲ್ಲಿ ಕಂಟ್ರೋಲರ್ ಸಾಹೇಬರಿಗೆ ಕಳುಹಿಸುವದಕ್ಕೋಸ್ಕರ ರೂಲ್ಸಿನ 121ನೆ ಪ್ಯಾರ ಮೇರೆ "Finance Committee" ಕೂರಲು ಬಂದು ಕೇಟನ್ನು ಇಡಬೇಕೆಂಬ ವಿಚಾರದಲ್ಲಿ ಪ್ರಕೃತ ಪ್ರತಿ ಮಾಹೆ 18ನೆ ತಾರೀಖನ್ನು ಗೊತ್ತು ಮಾಡಲ್ಪಟ್ಟಿತು.

IX. 7—10—03ನೆ ಮರ್ಕುಂ 1124ನೆ ನಂಬರ್ ಗೌರ್ಮೆಂಟ್ ಪ್ರೊಸೀಡಿಂಗ್ಸ್ 3 (4)ನೆ ಪ್ಯಾರಾದಲ್ಲಿ ಕಂಡ ಮೇರೆ 1904ನೆ ಜುಲೈ ಗುರ್ತೇ ಲಾಗಾಯಿತು ಯೂನಿರ್ಮಗಳಾಗಿ ಮಾಡಲ್ಪಡುವ

* 1. ಸಾಲಿಗ್ರಾಮ.
2. ಮಿರ್ಲೆ.
3. ಸರಗೂರು.
4. ಕಳಲೆ.
5. ಸೋಸಲೆ.
6. ಪಾಲಹಳ್ಳಿ.
7. ಕಿಕ್ಕೇರಿ.
8. ಮದ್ದೂರು.

* ಈರೇಬಿಯಲ್ಲಿ ಕಂಡ ಮೈನರ್ ಮ್ಯೂನಿಸಿಪಾಲಿಟಿಗಳಲ್ಲಿ ಸ್ಯಾನಿಟೇಷ್ನ ಕ್ಕೆ ಸರ್ವೆನ್ಸ್-ಲೈಟಿಂಗ್ ಈ ಕೆಲಸಗಳಿಗೆ ಹಾಲಿ ಇರುವ ಶಿಬ್ಬಂದಿಗಳೇ ಡಿಸ್ಟ್ರಿಕ್ಟು ಬೋರ್ಡಿನವರು ಬೇರೆ ವಿಧವಾಗಿ ತೀರ್ಮಾನ ಮಾಡುವ ವರಿಗೂ ಇರಬೇಕೆಂಬ ವಿಚಾರದಲ್ಲಿ ಈಗಿನ ಶಿಬ್ಬಂದಿಗಳು 1904ನೆ ಸೆಪ್ಟಂಬರ್ ಆಖೈರ್ ವರಿಗೆ ಇರಬೇಕೆಂತಲೂ ಈ ಮಧ್ಯೆ ಯೂನಿರ್ಮಗಳ ಅಭಿವೃದ್ಧಿ ಮತ್ತು ನಗದಿ ಜಮಾ ಖರ್ಚು ಸ್ಥಿತಿ ವಿಷಯವನ್ನು ತಿಳಿಸಬೇಕೆಂದು ತಾಲ್ಲೂಕು ಬೋರ್ಡುಗಳಿಗೆ ಬರೆಸಬೇಕೆಂದೂ ತೀರ್ಮಾನ ಮಾಡಲ್ಪಟ್ಟಿತು.

X. ಮೇಲ್ಕೋಟೆಯಲ್ಲಿ ಬಂದು ಆಸ್ಪತ್ರೆಯನ್ನು ಇಡಬೇಕು ಅಥವಾ ಬಬ್ಬರು ನೇಟೀವ್ ಪಂಡಿತರಿಗಾದರು ಅಲೊವನ್ಸು ಕೊಡಬೇಕು. (2) ಫ್ರೆಂಚರಾಕ್ಸ್‌ನಲ್ಲಿ ಬಂದು ಮೂರನೇ ಕ್ಲಾಸ್ ಟ್ರಾವಲರ್ಸ್ ಬಂಗ್ಲೆಯನ್ನು ಕಟ್ಟಬೇಕು. (3) ಫ್ರೆಂಚರಾಕ್ಸ್ ಆಸ್ಪತ್ರೆಗೆ ಬಬ್ಬಳು ಮಿಡ್‌ವೈಫನ್ನು ಕೊಡಬೇಕು. (4) ಶ್ರೀರಂಗಪಟ್ಟಣ ಮತ್ತು ಶಿವನಮುದ್ರದ ಬಳಿ ಇರುವ ಬ್ಲಾಕ್‌ನಲ್ಲಿ ಮುಸಾಫರ ಜಾನೆಗಳನ್ನು ಕಟ್ಟಬೇಕು. (5) ಸೋಮನಹಳ್ಳಿ ಮತ್ತು ಶಟ್ಟಳ್ಳಿ 1ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲಾಗಳನ್ನು IIನೆ ಮತ್ತು IIIನೆ ತರಗತಿಗಳಾಗಿ ಮಾಡಬೇಕೆಂತಲೂ ಸಹ ಫ್ರೆಂಚರಾಕ್ಸ್ ಡಿವಿರ್ಜ್ ಅಸಿಸ್ಟೆಂಟ್ ಕಮಿಷ್ನರವರ 11—6—04ನೆ ಮರ್ಕುಂ ಮೆಮೊ ವಿಚಾರದಲ್ಲಿ.

(1) ಮೇಲ್ಕೋಟೆಯಲ್ಲಿ ಬಂದು ಆಸ್ಪತ್ರೆ ಇಡುವದು ಅವಶ್ಯಕವೆಂತಲೂ ಇದಕ್ಕೆ ಬೇಕಾದ ಸ್ಥಳ ಮಾಡಬೇಕೆಂತಲೂ (2) ಜನಗಳ ಉಪಯೋಗಕ್ಕಾಗಿ ಫ್ರೆಂಚರಾಕ್ಸ್ ರೈಲ್ವೆ ಸ್ಟೇಷ್ನ ಬಳಿ ಬಂದು 3ನೆ ಕ್ಲಾಸ್ ಟ್ರಾವಲರ್ಸ್ ಬಂಗ್ಲೆ ಅವಶ್ಯಕವೆಂತಲೂ (4) ಈಗಿನ ಸಂದರ್ಭದಲ್ಲಿ ಶ್ರೀರಂಗಪಟ್ಟಣದಲ್ಲಿ ಮುಸಾಫರಖಾನೆ ಅವಶ್ಯಕವಿಲ್ಲವೆಂತಲೂ ಶಿವನಮುದ್ರದ ಬ್ಲಾಕ್‌ನಲ್ಲಿ ಬಂದು ಬಳ್ಳೆ ಮುಸಾಫರಖಾನೆ ಬೇಕೆಂತಲೂ ಇದರ ಖರ್ಚನ್ನು ಡಿಸ್ಟ್ರಿಕ್ಟು ಫಂಡಿನಿಂದ ಕೊಡಲು ಸಾಧ್ಯವಿಲ್ಲವಾಗಿ ಪ್ರೊವಿಷಿಯಲ್ ಫಂಡಿನಿಂದ ಕೊಡಬೇಕೆಂದು ಗೌರ್ಮೆಂಟಿಗೆ ಬರೆಯಬೇಕೆಂತಲೂ (5) ಸೋಮನಹಳ್ಳಿ ಮತ್ತು ಶಟ್ಟಳ್ಳಿ ಬಂಗ್ಲಾ ವಿಚಾರವನ್ನು ವ್ಯವಸ್ಥೆ ಮಾಡಲು ಡೆಪ್ಯುಟಿ ಕಮಿಷ್ನರ್ ಸಾಹೇಬರಿಗೆ ವಹಿಸಬೇಕೆಂತಲೂ ತೀರ್ಮಾನ ಮಾಡಲ್ಪಟ್ಟಿತು.

XI. ಈರೇಬಿಯಲ್ಲಿ ಕಂಡ ಗ್ರಾಮಗಳಲ್ಲಿ ಮಾಹೆಯಾನ 5 ರೂಪಾಯಿ

1. ಬೂಕಿನಕೆರೆ.
2. ಸಾಧಘಟ್ಟ
3. ಕನ್ಯಂಬಾಡಿ.
4. ಅಕ್ಕಿ ಹೆಬ್ಬಾಳು.
5. ಹೊಸ ಹೂಳಲು.

ತಲಬಿನ ಮೇಲೆ ಜಾಡಮಾಲಿಗಳನ್ನು ಇಡಬೇಕೆಂದು ಬಂದ ಕೃಷ್ಣರಾಜಪೇಟೆ ತಾಲ್ಲೂಕು ಬೋರ್ಡಿನ ಪ್ರೊಸೀಡಿಂಗ್ಸಿನ ವಿಚಾರದಲ್ಲಿ ಈ ಸಂಗತಿಯನ್ನು ಈಗ ನ ವ್ಯಕ್ಕೆ ಯೋಚನೆಗೆ ತರತಕ್ಕದ್ದಲ್ಲವೆಂದು ತೀರ್ಮಾನ ಮಾಡಲ್ಪಟ್ಟಿತು.

XII. ದೊಡ್ಡಿಗೆ ಕೂಡುವ ದನಕರುಗಳನ್ನ ಕಾವಲಗಾರ್ರು ಈಗಲಗಿಂತಲೂ ಹೆಚ್ಚಾಗಿ ನಿಗಾವಣೆ ಮಾಡಬೇಕೆಂತಲೂ ಅವುಗಳನ್ನ ಹೀನಕ್ರಯಕ್ಕೆ ಕೊಡಕೂಡದೆಂತಲೂ 1903ನೆ ಇಸವಿ ಪ್ರಜಾ ಪ್ರತಿನಿಧಿ ಸಭೆಯ 67ನೆ ವಿಷಯದಲ್ಲಿ "Cattle Tresspass Regulation" ನಲ್ಲಿ ಈ ಭಾಗಕ್ಕೆ ತಕ್ಕ ಏರ್ಪಾಟು ವಿಧಿಸಿರುತ್ತೆಂದು ರಿಕಾರ್ಡು ಮಾಡಲ್ಪಟ್ಟಿತು.

XIII. ಮುಂದೆ ಬರುವ ದಸರಾ ಪ್ರಜಾ ಪ್ರತಿನಿಧಿ ಸಭೆಗೆ ಮೆ" ಅಂಬ್ಳೆ ಅಣ್ಣಯ್ಯಪಂಡಿತರನ್ನ ಮತ್ತು ಅಡ್ವೋಕೇಟ್ ರಾಮಣ್ಣನವರನ್ನ ಸಹ ಮೆಂಬರುಗಳಾಗಿ ನಾನ್ ಅಫಿಷಿಯಲ್ ಮೆಂಬರುಗಳು ಚುನಾಯಿಸಿದರು.

XIV. ತಾಲ್ಲೂಕಿನ ಡಿಸ್ಟ್ರಿಕ್ಟು ಬೋರ್ಡು ಮೆಂಬರುಗಳಿಗೆ ಆಯಾಯ ತಾಲ್ಲೂಕು ಬೋರ್ಡಿನ ಪ್ರೊಸಿಡಿಂಗ್ಸ್ ಕಾಪಿಯನ್ನ ಕೊಡುವಂತೆ ಮಾಡಬೇಕೆಂದು ಮೆ" ಅಂಬ್ಳೆ ಅಂಣಯ್ಯ ಪಂಡಿತರು ಸಲಹೆ ಕೊಟ್ಟದ್ದರ ಮೇಲೆ ಈರೀತಿ ಮಾಡಲು ತಾಲ್ಲೂಕು ಬೋರ್ಡು ವೈಸಿ ಪ್ರೆಸಿಡೆಂಟರಿಗೆ ಬರೆಯಬೇಕೆಂದು ತೀರ್ಮಾನ ಮಾಡಲ್ಪಟ್ಟಿತು.

XV. ಮೆ" ಬಾದಾಮಿ ಭೀಮರಾಯರು ಕೊಟ್ಟ ಈ ಕೆಳಗೆ ಕಂಡ ಸಲಹೆಗಳು ಚರ್ಚೆ ಮಾಡಲ್ಪಟ್ಟವು: —

(i) ನಂಜನಗೂಡು ತಾಲ್ಲೂಕು ಹುರಾ ರಸ್ತೆಯನ್ನ ರಿಪೇರಿ ಮಾಡಬೇಕಲ್ಲದೆ ಹಡಿಯಾಲದ ವರಿಗೆ ಬಿಡಾಯಿಸಬೇಕು.

(ii) ಸಾಲಮರಗಳ ಸುತ್ತಮುತ್ತಲು 8 ಅಡಿ ವಳಗೆ ಗ್ರಾವಲ ಗುಂಡಿಗಳನ್ನ ತೆಗಿಯದಂತೆ ಇಂಜಿನಿಯರ್ ಇಲಾಖೆಗೆ ಬರೆಸಬೇಕು.

(iii) ಒಣಗಿದ ಮರಗಳನ್ನ ಹರಾಜು ಮಾಡುವದರಿಂದ ಉತ್ಪತ್ತಿಯಾದ ಮೊಬಲಗನ್ನ ಫಾರೆಸ್ಟು ರಿವಿನ್ಯೂಗೆ ಬದಲಾಗಿ ಡಿಸ್ಟ್ರಿಕ್ಟು ಫಂಡಿಗೆ ಜಮಾ ಕಟ್ಟಿಸಬೇಕು. ಈ ಪೈಕಿ ಮೊದಲನೇ ಪ್ರಶ್ನೆ ವಿಚಾರಕ್ಕೆ ರಿಪೋರ್ಟು ಮಾಡಲು ತಾಲ್ಲೂಕಿಗೆ ಬರೆಸಬೇಕೆಂತಲೂ 2ನೆ ಪ್ರಶ್ನೆ ವಿಷಯದಲ್ಲಿ ಅಂಥಾ ಸಂದರ್ಭಬಿದ್ದಾಗ ಬೋರ್ಡಿನ ನೋಟೀಸಿಗೆ ತರಬೇಕೆಂತಲೂ ಮೂರನೇ ವಿಷಯದಲ್ಲಿ ಹಾಲಿ ಇರುವ ರೂಲ್ಸು ಸ್ಪಷ್ಟವಾಗಿಯೂ ಸಾಕಾಗಿಯೂ ಇರುತ್ತವೆಂತ ತೀರ್ಮಾನ ಮಾಡಲ್ಪಟ್ಟಿತು.

XVI. ಮೆ" ನಾಡಿಗ ಕೃಷ್ಣಪ್ಪನವರು ಪ್ರಪೋಜ್ ಮಾಡಿದ—(1) ಕೃಷ್ಣರಾಜಪೇಟೆಯಲ್ಲಿ ಒಂದು ಮುಸಾಫರಖಾನೆಯನ್ನ ಕಟ್ಟಬೇಕೆಂಬ ವಿಚಾರದಲ್ಲಿ, ಮುಸಾಫರಖಾನೆಗೆ ಬದಲಾಗಿ ಹಾಲಿ ಇರುವ ಛತ್ರವನ್ನೇ ರಿಪೇರಿ ಮಾಡಬೇಕೆಂದು ಮುಜರಾಯಿ ಇಲಾಖೆಗೆ ಬರೆಯಬೇಕೆಂತಲೂ (2) ಕೃಷ್ಣರಾಜಪೇಟೆ ಕೆರೆ ಏರಿ ಕೆಳಗೆ ಇರುವ ಕೊಳವನ್ನ ರಿಪೇರಿ ಮಾಡಬೇಕು. (3 ಕೃಷ್ಣರಾಜಪೇಟೆ ಅಕ್ಕಿಹೆಬ್ಬಾಳು ರಸ್ತೆಯ ರಿಪೇರಿಗಾಗಿ ಸಾಲಿಯಾನ ರಿಪೇರಿಗಾಗಿ ಕೊಡುವ ಮೊಬಲಗನ್ನ ರಸ್ತೆಯನ್ನ 2—3 ಮೈಲಿ ವರಿಗೂ ಪೂರ್ತಿಯಾಗಿ ರಿಪೇರಿ ಮಾಡಲು ಉಪಯೋಗಿಸಬೇಕೆಂಬ ಇವೆರಡು ವಿಷಯಗಳಿಗೆ ತಕ್ಕ ಕ್ರಮ ನಡಿಸಲು ತಾಲ್ಲೂಕು ಬೋರ್ಡಿಗೆ ಬರೆಯಬೇಕೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

XVII. ಸಂತೆಮರಹಳ್ಳಿ ಮಾರ್ಕೆಟ್ ಸರಹದ್ದಿನಲ್ಲಿ ಬಸವನಗುಡಿಬಳಿ ಇರುವ ಹಳ್ಳವನ್ನ ಮುಚ್ಚಿಸಬೇಕೆಂತಲೂ, ಚಾಮರಾಜನಗರದ ತಾಲ್ಲೂಕು ಪೂರ್ವಕ್ಕೆ ಕೆಲವು ರಸ್ತೆಗಳನ್ನ ಮಾಡಬೇಕೆಂತಲೂ ಬಡ್ಜೆಟ್ ಗ್ರಾಂಟಿನ ಅರ್ಧವನ್ನ ಜರೂರ್‌ಯಾತಿ ಕೆಲಸಕ್ಕೆ ಅಮಲ್ದಾರ್ರು ವೆಚ್ಚಮಾಡಲು ಅಪ್ಪಣೆ ಕೊಡಬೇಕೆಂತಲೂ ಸಹ ಪ್ರಪೋಜ್ ಮಾಡಿದ್ದರ ಮೇಲೆ 1—2ನೆ ಪ್ರಶ್ನೆಗಳನ್ನ ತಾಲ್ಲೂಕು ಬೋರ್ಡಿಗೆ ರಿಫರ್ ಮಾಡಬೇಕೆಂತಲೂ, ಮೂರನೇ ಸಂಗತಿಗೆ ಹಾಲಿ ಇರುವ ರೂಲ್ಸ್‌ಗಳೆ ಸಾಕಾಗಿಧಯಂತಲೂ ತೀರ್ಮಾನ ಮಾಡಲ್ಪಟ್ಟವು.

XIX. ಮುಂದಿನ ಬೋರ್ಡಿನ ಮೀಟಿಂಗನ್ನ 1904ನೆ ಜುಲೈ ಮಾಹೆ 30ನೆ ತಾರೀಖು ಶನಿವಾರ ಮಾಡಬೇಕೆಂತಲೂ ಆ ಮಾಹೆ 15ನೆ ತಾರೀಖು ಒಳಗಾಗಿ ಮೆಂಬರುಗಳು ಪ್ರಪೋಜಲ್‌ಗಳನ್ನ ಕಳುಹಿಸಬೇಕೆಂತಲೂ ಸಹ ತೀರ್ಮಾನ ಮಾಡಲ್ಪಟ್ಟಿತು.

XX. ಗೈರಹಾಜರಾದ ಮೆಂಬರುಗಳ ಪೈಕಿ ಸೆಷನ್ ಕೋರ್ಟಿನಲ್ಲಿ ಕೆಲಸವಿತ್ತೆಂದು ಸ್ಕೂಲಿನ ಡೆಪ್ಯುಟಿ ಇನ್‌ಸ್ಪಕ್ಟರು ಸಮಜಾಯಿಷಿ ಕೊಟ್ಟಿರುತ್ತಾರೆ. ಇತರ ಮೆಂಬರುಗಳು ಈ ಭಾಗದಲ್ಲಿ ಸಮಜಾಯಿಷಿ ಕೊಟ್ಟಿಲ್ಲಾ.

ಸಿ. ಕೃಷ್ಣರಾವ್,
ಫಾರ್ ಪ್ರೆಸಿಡೆಂಟ್.

ಬೆಂಗಳೂರು ಡಿವೀಜನ್ ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1904—1905ನೆ ಇಸವಿ ಅರ್ಜೀ ನಂಬರ್ 8.

ಮೃತಪಟ್ಟ ಮೇಸ್ತ್ರಿ ಧನಾಜಿರಾಯರೆಂಬುವರ ಆಸ್ತೀ ವಿಷಯದಲ್ಲಿ —

ಅರ್ಜೀದಾರರು ಬೆಂಗಳೂರು ದಂಡು ಸೂಳೆಯಲ್ಲಿರುವ 1ನೆ ಸುಬ್ಬರಾವು, 2ನೆ ಸಂತೂಜಿರಾವು, ಮೃತಪಟ್ಟ ಸದರೀ ಮೇಸ್ತ್ರಿ ಧನಾಜಿರಾಯರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರು ಬಸವನಗುಡಿ ಎಕ್‌ಸ್ಟೆನ್‌ಷನ್ ವಾಸಸ್ಥರಾಗಿ ಮೃತಪಟ್ಟ ಮೇಸ್ತ್ರಿ ಧನಾಜಿರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಸುಬ್ಬರಾವು, 2ನೆ ಸಂತೂಜಿರಾಯರ ಅರ್ಜಿಯನ್ನು ಸನ್ 1904ನೆ ಇಸವಿ ಸೆಪಟಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೇಸ್ತ್ರಿ ಧನಾಜಿರಾಯರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇದೆ.

ಸನ್ 1904ನೆ ಇಸವಿ ಜುಲೈ 23ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

243

ಮೈಸೂರು ಡಿಸ್ಟ್ರಿಕ್ಟ್ ಜಡ್ಜರವರ ಕೋರ್ಟ್‌ನಲ್ಲಿ.

122

ಸನ 1903—1904ನೆ ಇಸವಿ ಅರ್ಜೀ ನಂಬರ್ 578.

ಅರ್ಜೀದಾರು) ಮಳವಳ್ಳಿ ತಾಲ್ಲೂಕು ಕಸಬಾಪಟ್ಟಣದಲ್ಲಿರುವ ಅರಕಿಕೆರೆ ತಾಲ್ಲೂಕು ಹಿಡಿ ಗುಮಾಸ್ತ ಮಲ್ಲಂಗೈಯ್ಯನವರ ಹೆಂಡತಿ ಪುಟ್ಟವ್ಮನವರು, ಮೈನರಾದ ಮಳವಳ್ಳಿ ಸ್ಥಳದ ಪವ್ವತಿಯಾದ ಮಲ್ಲಂಗೈಯ್ಯನವರ ಮಗ 1ನೆ ಸುಬ್ಬಾಯ, ಮಗಳು 2ನೆ ಸುಬ್ಬಮ್ಮ ಇವರ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಸುಬ್ಬಾಯ, ಸುಬ್ಬಮ್ಮ ಇವರಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮಳವಳ್ಳಿ ಸ್ಥಳದ ಪುಟ್ಟವ್ಮನವರು ಸದರೀ ಮೈನರ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟಿದ್ದು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ 1904ನೆ ಇಸವಿ ಆಗಸ್ಟು ತಾರೀಖು 19ರಲ್ಲು ವೊಕರರು ವ್ಹಾಡಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸನ 1904ನೆ ಇಸವಿ ಜುಲೈ ತಿಂಗಳು 4ನೆ ತಾರೀಖಿನಲ್ಲಿ ಕೋರ್ಟ್ ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ 1903—04ನೆ ಇಸವಿ ಮಿ॥ ಅರ್ಜೀ ನಂಬರ್ 584.

ಅರ್ಜೀದಾರಳು ನಂಜಿನಗೂಡು ತಾಲ್ಲೂಕು ಕಸಬಾದಲ್ಲಿರುವ ನಾಯಕಸಾನಿ ಚಿಕ್ಕ ಮಗಳು ವೆಂಕಟ್ಟಲಕ್ಷ್ಮಿ, ಮೈನರಾದ ನಂಜಿನಗೂಡು ಸ್ಥಳದ ದೇವಿಯ ಮಕ್ಕಳು 1. ರಾಮಲಿಂಗ, 2. ಶಿವ, 3. ಪಾರ್ವತಿ ಇವರ ಆಸ್ತೀವಿಷಯದಲ್ಲಿ—

ಸದರೀ ಮೈನರಾದ ರಾಮಲಿಂಗ, ಶಿವ, ಪಾರ್ವತಿಯವರಿಗೆ ಗಾರ್ಡಿಯ್ ಆಗಬೇಕೆಂಬ ಹಕ್ಕಿನ ಮೇಲೆ ನಂಜಿನಗೂಡು ಸ್ಥಳದ ವೆಂಕಟಲಕ್ಷ್ಮಿ ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ಟು ಬಗ್ಯೆ ಅರ್ಜೀಕೊಟ್ಟು ಇರುತ್ತಾಳೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ 1904ನೆ ಇಸವಿ ಆಗಸ್ಟು ತಾರೀಖು 12ರಲ್ಲು ವೊಕರರು ವ್ಹಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿದೆ.

ಸನ 1904ನೆ ಇಸವಿ ಜುಲೈ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟ್ ವೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸನ 1904—1905ನೆ ಇಸವಿ ಅರ್ಜೀ ನಂಬರ 9.

ಮೃತಪಟ್ಟ ಪೋಸ್ಟ್‌ಮಾಸ್ಟರು ಸುಬ್ಬಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ತಿ॥ ನರೇಪುರದ ತಾಲ್ಲೂಕು ಬನ್ನೂರಿನಲ್ಲಿರುವ ಲೇಟ್ ಬ್ಯಾಂಕ್ ಪೋಸ್ಟ್ ಮಾಸ್ಟರು ಸುಬ್ಬಾಯರ ಕುಟುಂಬ ಪವ್ವತಮ್ಮ, ಮೃತಪಟ್ಟ ಸದರೀ ಸುಬ್ಬಾಯರಿಗೆ ಹೆಂಡತಿ ಆಗಬೇಕೆಂಬ ಹಕ್ಕು ದಾರಿ ಮೇಲೆ ಬನ್ನೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ಸುಬ್ಬಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನು ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1904ನೆ ಇಸವಿ ಜುಲೈ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟ್ ವೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ 1903—1904ನೆ ಇಸವಿ ಅರ್ಜೀ ನಂಬರು 592.

ಮೃತಪಟ್ಟ ಮುನಿಯಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು 1ನೆ ನಾರಾಯಣಮ್ಮ, 2ನೆ ಅನಪೂರ್ಣಮ್ಮ, 3ನೆ ಶೇಷಮ್ಮ ಇವರುಗಳ ಮೈನರ್ ಗಾರ್ಡಿಯ್ ಮೈಸೂರು ದೇವರಾಜಮೊಹಲ್ಲಾ ಆನೆ ಸಾರೋಟು ಬೀದಿಲಿರುವ ಬೆಂಗಳೂರು ನಾಗಮ್ಮನವರ್ರು, ಮೃತಪಟ್ಟ ಸದರೀ ಮುನಿಯಮ್ಮನವರಿಗೆ ತಾಯಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಮುನಿಯಮ್ಮನವರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು 1904ನೆ ಇಸವಿ ಆಗಸ್ಟು ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನು ವಿವರ್ಸಿ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮುನಿಯಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟ್‌ನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸನ 1904ನೆ ಇಸವಿ ಜುಲೈ ತಿಂಗಳು 21ನೆ ತಾರೀಖಿನಲ್ಲಿ ಕೋರ್ಟ್ ವೊಹರು ನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮೇಶ್ವರ ಅಯ್ಯರ್,
ಸಬ್ ಜಡ್ಜ್.

ಚಿಕ್ಕಮಗಳೂರು ಸಬ್ ಜಡ್ಜ್‌ರವರ ಕೋರ್ಟಿನಲ್ಲಿ.

1904—1905ನೆ ಇಸವಿ ಅರ್ಜೀ ನಂ. 14.

ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟ್ ಕಡೂರುನಲ್ಲಿರುವ ಸಂಪತ್ತು ವೀರಯ್ಯಂಗಾರ್ ಮೈನರ್, ಗಾರ್ಡಿಯ್ಯ ತಂದೆ ಎಂ. ವಿ. ನರಸಿಂಹಾಚಾರ್, ಹಾಸ್ಪಿಟಲ್ ಅಸಿಸ್ಟೆಂಟ್ ವೊಸಲಿಕಟ್ಟೆ ಸಾಯರ್ ಸೂಪರ್‌ಟೆಂಡೆಂಟ್ ಆಗಿದ್ದು ಪೆನ್ಷನ್ ತೆಗದುಕೊಳ್ಳುತ್ತಿದ್ದು ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ರಿಗೆ ಮಗಳ ಮಗ ಆಗಬೇಕೆಂಬ ಹಕ್ಕುದಾರಿಯ ಮೇಲೆ ಕಡೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ರವರ ಜೆಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಸಂಪತ್ತು ವೀರೈಯ್ಯಂಗಾರ್ ಮೈನರ್, ಗಾರ್ಡಿಯ್ಯ ತಂದೆ ಎಂ. ವಿ. ನರಸಿಂಹಾಚಾರ್ ಯವರ ಅರ್ಜಿಯನ್ನು 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 12ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಶ್ರೀನಿವಾಸೈಯ್ಯಂಗಾರ್ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇವರಿಂದ ತಿಳಿಯಪಡಿಸಿದೆ.

ಸ್ವ 1904ನೆ ಇಸವಿ ಜುಲೈ 22ನೆ ತಾರೀಖಿನಲ್ಲಿ ಕೋರ್ಟು ವೊಹರನಿಶಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ವ 1904—1905ನೆ ಇಸವಿ ಅರ್ಜೀ ನಂಬರ್ 39.

ಮೃತಪಟ್ಟ ಎಂ. ಆರ್. ತಿರುಮಲಾಚಾರ್ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರುನಲ್ಲಿರುವ ನಾರಾಯಣಾ, ವಯಸ್ಸು 5 ವರುಷ, ಮೈನರ್, ಗಾರ್ಡಿಯ್ಯ ಎಂ. ಆಳಸಿಂಗ್ಯಾಚಾರ್, ಚಿಕ್ಕಮಗಳೂರು ಗೌರ್ಮೆಂಟ್ ಸ್ಕೂಲಿನಲ್ಲಿ ಟೀಚರ್ ಆಗಿ ಇದ್ದಾರೆ, ಮೃತಪಟ್ಟ ಎಂ. ಆರ್. ತಿರುವಲಾಚಾರ್ಯರಿಗೆ ಮೈನರ್ ನಾರಾಯಣ ಮಗ ಆಗಬೇಕೆಂಬ ಹಕ್ಕುದಾರಿಯ ಮೇಲೆ ಚಿಕ್ಕಮಗಳೂರುನಲ್ಲಿ ವಾಸಸ್ಥರಾಗಿ ಮೃತಪಟ್ಟ ಎಂ. ಆರ್. ತಿರುಮಲಾಚಾರ್ಯರವರ ಜೆಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ವ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ನಾರಾಯಣ ಮೈನರ್, ಗಾರ್ಡಿಯ್ಯ ಆಳಸಿಂಗರಾಚಾರ್ ಯವರ ಅರ್ಜಿಯನ್ನು ಸ್ವ 1904ನೆ ಇಸವಿ ಆಗಸ್ಟ್ ತಿಂಗಳು ತಾರೀಖು 30ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆದುನ್ನ ವಿಮರ್ಶೆ ಮಾಡಲ್ಪಡುತ್ತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಎಂ. ಆರ್. ತಿರುಮಲಾಚಾರ್ಯರಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ವ 1904ನೆ ಇಸವಿ ಜುಲೈ ತಿಂಗಳು 22ನೆ ತಾರೀಖಿನಲ್ಲಿ ಕೋರ್ಟು ವೊಹರನಿಶಿ ನನ್ನ ದಸ್ತಖತ್ತೊಡನೆ ಕೊಡೋಣಾಗಿದೆ.

ಎಂ. ಹಂಚಾಹುಸೇನ್,
ಸಬ್ ಜಡ್ಜ್.

245
1223

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 31.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 4, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಣಿಟೆಂಡೆಂಟರು, ಕನ್‌ಟ್ರೋಲರವರು, ಪಬ್ಳಿಕ್‌ವರ್ಕ್‌ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಣಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 25—26ನೆ ಜುಲೈ 1904.

ನಂ. 633—31-2—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ತುಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಬೆಂಗಳೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಸಂಪೆಗೆಹಳ್ಳಿ	ಬೆಂಗಳೂರು.	14.	ಹೊನ್ನಸಂದ್ರ	ನೆಲಮಂಗಲ.
2.	ಚಂದಾಪುರ	ಆನೆಕಲ್	15.	ಮೋಟಗಾನಹಳ್ಳಿ	ಮಾಗಡಿ.
3.	ಬಾನಹಳ್ಳಿ	ಡಿಟೋ	16.	ಮೂಗಬಾಳ್	ಹೂಸಕೋಟೆ.
4.	ಮಾಯಸಂದ್ರ	ಡಿಟೋ	17.	ಕಾಡಗೋಡಿ	ಡಿಟೋ
5.	ಇತ್ತಂಗೂರು	ಡಿಟೋ	18.	ಕಿಟ್ಟಗನೂರು	ಡಿಟೋ
6.	ಹಂದೇನಹಳ್ಳಿ	ಡಿಟೋ	19.	ನಿಡಘಟ್ಟ	ಡಿಟೋ
7.	ನಂಜಾಪುರ	ಡಿಟೋ	20.	ಜೋಡಿ ಮಾರಗೊಂಡಹಳ್ಳಿ	ಡಿಟೋ
8.	ಯೆಮರೆ	ಡಿಟೋ	21.	ಬಿಲಿಸಿವಲೆ	ಡಿಟೋ
9.	ಸರ್ಜಾಪುರ	ಡಿಟೋ	22.	ಸೋಂಪುರ	ಡಿಟೋ
10.	ಹುಲ್ಲೇಗೌಡನಹಳ್ಳಿ	ನೆಲಮಂಗಲ.	23.	ತಾವರೆಕೆರೆ	ಡಿಟೋ
11.	ತ್ಯಾಮಗೊಂಡ್ಲು	ಡಿಟೋ	24.	ಕಂಣೂರು	ಡಿಟೋ
12.	ಜಕ್ಕಸಂದ್ರ	ಡಿಟೋ	25.	ಏಕಾಸಿಪುರ	ದೊಡ್ಡಬಳ್ಳಾಪುರ.
13.	ಹೆಗ್ಗುಂದ	ಡಿಟೋ	26.	ಕನ್ನಮಂಗಲ	ದೇವನಹಳ್ಳಿ.

246

ತಾರೀಖು 25—26ನೆ ಜುಲೈ 1904.

ನಂ. 635—17-5—ಲೋ. ಜೋ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ಣ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾಲ್ಕಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ಣಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ಎಡಕನಹಳ್ಳಿ	...	ಗುಬ್ಬಿ	3. ಹೊಸೂರು	...	ತುಮಕೂರು.
2. ತಳಸಿಕಟ್ಟೆ	....	ಡಿಟೋ			

ತಾರೀಖು 26—27ನೆ ಜುಲೈ 1904.

ನಂ. 668—34-2—ಲೋ. ಜೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ಣ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾಲ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ಣಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ರಾಮನಹಳ್ಳಿ	...	ಚಿಕ್ಕಮಗಳೂರು	5. ಬಿಸಲೆಹಳ್ಳಿ	...	ಕಡೂರು.
2. ಹೊಸೂರು	...	ತರೀಕೆರೆ	6. ಹೊಸಹಳ್ಳಿ	..	ಡಿಟೋ
3. ಕೋಡಿಹಳ್ಳಿ	...	ಡಿಟೋ	7. ಹಳ್ಳಕಟ್ಟೆನಾಯಿಕನಹಳ್ಳಿ	..	ಡಿಟೋ
4. ಹಿರಿಕತ್ತೂರು	...	ಡಿಟೋ			

ತಾರೀಖು 26—27ನೆ ಜುಲೈ 1904.

ನಂ. 670—30-2—ಲೋ. ಜೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಾಗ್ಗೆ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಎರಡು ತಿಂಗಳುಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಶಿವಮೊಗ್ಗಾ ಡಿಸ್ಟ್ರಿಕ್ಟ.

ನಂ.	ತಾಲ್ಲೂಕು.		ಸ್ಥಳ.	ನಂ.	ತಾಲ್ಲೂಕು.		ಸ್ಥಳ.
1.	ಶಿವಮೊಗ್ಗ	..	ಶಿವಮೊಗ್ಗ ಟವರ್	25.	ಷಿಕಾರಿಪುರ	..	ಕೊರಟಗೆರೆ
2.	ಡಿಟೋ	...	ಮಂಡ್ಲಿ	26.	ಹೂನ್ನಾಳಿ	..	ಕುಂಬಳ್ನೇಲ್
3.	ಡಿಟೋ	..	ಮಾಯಿದೊಳಲ್	27.	ಡಿಟೋ	...	ಕೂಳಂಬಿ
4.	ಡಿಟೋ	..	ಹೊಳೆಹೊನ್ನೂರು	28.	ಡಿಟೋ	..	ನೀರಲಗುಂಡಿ
5.	ಡಿಟೋ	..	ಮತ್ತೂರು	29.	ಡಿಟೋ	..	ಸುರಹೊನ್ನೆ
6.	ಡಿಟೋ	..	ಹೊಸಹಳ್ಳಿ	30.	ಡಿಟೋ	..	ಹೊಸಹಳ್ಳಿ
7.	ಡಿಟೋ	..	ಹೊಳೆಲೂರು	31.	ಡಿಟೋ	...	ಹುಣಸಘಟ್ಟ
8.	ಡಿಟೋ	..	ಹರಿಗಿ	32.	ಚನ್ನಗಿರಿ	...	ಚಿರಡೋಣೆ
9.	ಡಿಟೋ	...	ಉರಗದೂರು	33.	ಡಿಟೋ	..	ಕಟ್ಟಲಗೆರೆ
10.	ಡಿಟೋ	..	ನಿಡಿಗಿ	34.	ಡಿಟೋ	..	ದಿಗ್ಗೇನಹಳ್ಳಿ
11.	ಡಿಟೋ	..	ಸೈದರಕ್ಲಹಳ್ಳಿ	35.	ಡಿಟೋ	....	ಮುದ್ದೇನಹಳ್ಳಿ
12.	ಡಿಟೋ	..	ಹರಕೆರೆ	36.	ಡಿಟೋ	...	ಇಟ್ಟಿಗಿ
13.	ಡಿಟೋ	....	ಮಂಗೋಟಿ	37.	ಡಿಟೋ	...	ಕರಿಗನೂರು
14.	ಡಿಟೋ	...	ಯಡೆಹಳ್ಳಿ	38.	ಡಿಟೋ	..	ಅಲೂರು
15.	ಡಿಟೋ	...	ಕೂಡಿ	39.	ಡಿಟೋ	..	ಕರೆಕಟ್ಟೆ
16.	ಡಿಟೋ	...	ಕಲ್ಲಿಹಾಳು	40.	ಡಿಟೋ	..	ಮಲ್ಲಾಪುರ
17.	ಡಿಟೋ	..	ಹೊಳಿಬಿನವಳ್ಳಿ	41.	ಡಿಟೋ	...	ಲಿಂಗದಹಳ್ಳಿ
18.	ಡಿಟೋ	..	ಇಟ್ಟಿಗೆಹಳ್ಳಿ	42.	ಡಿಟೋ	...	ಚಿಕ್ಕಕೋಗಲೂರು
19.	ಡಿಟೋ	..	ನವಲೆ	43.	ಡಿಟೋ	..	ಪಾಂಡವಗೆರೆ
20.	ಡಿಟೋ	...	ಸಂತೆಕಡೂರು	44.	ಡಿಟೋ	..	ಅಸ್ತಪ್ಪನಹಳ್ಳಿ
21.	ಕುಂಸಿ	..	ಆಯನೂರು	45.	ಡಿಟೋ	...	ಸೋಮಲಾಪುರ
22.	ಸೊರಬ	..	ಕುನ್ನೆತೆಪ್ಪ	46.	ಡಿಟೋ	...	ಚಿಕ್ಕಗಂಗೂರು
23.	ಡಿಟೋ	..	ಬೆಂಣೂರು	47.	ಸಾಗರ	...	ಸಾಗರ
24.	ಡಿಟೋ	..	ಪುರ				

ತಾರೀಖು 26—27ನೆ ಜುಲೈ 1904.

ನಂ. 672—35—2—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ನ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಕ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾ ಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ನಗಳ ಉದ್ದೇಶಗಳಿಗೋಸ್ಕರ ಚಿತ್ರ ದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಕಲ್ಕೆರೆ ..	ಹೊಳಲಕೆರೆ.	3. ಹುಲಿಕೆರೆ	... ಹೊಳಲಕೆರೆ.
2. ಪಾವೇನಹಳ್ಳಿ ..	ಡಿಟೋ	4. ಹೆಬ್ಬಾಳ	... ದಾವಣಗೆರೆ.

ತಾರೀಖು 29ನೆ ಜುಲೈ 1904.

ನಂ. 762—17—6—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ನ ಅನುಸರಿಸಿ 1898ನೆ ಫೆಬ್ರುವರಿ 10ನೆ ಮಾರ್ಕ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾ ಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ನಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳವು ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.
ಬೈಜನಹಳ್ಳಿ	ಗುಬ್ಬಿ.

ತಾರೀಖು 28ನೆ ಜುಲೈ 1904.

ನಂ. 221—(61—02—03)—ಜ್ಯು., ಡಿಸ್ಟ್ರಿಕ್ಟ್ ವ ಸೆಷ್ನ್ಸ್ ಜಡ್ಜ್ಸ್‌ಗಳ ಇದರಡೀ ಕಂಡ ಬಡ್ತಿಗಳು 1904ನೆ ಜುಲೈ ಗುರೆ ತಾರೀಖಿನಾರಭ್ಯ ಹುಕುಂ ಮಾಡಲ್ಪಟ್ಟಿರುತ್ತವೆ :—

1. ಮೆ॥ ಎಂ. ರಾಮಸ್ವಾಮಿ ಅಯ್ಯರ್, ಬಿ. ಎ., ಬಿ. ಎಲ್., ಯವರು, ಎರಡನೇ ಕ್ಲಾಸಿನಿಂದ ಮೊದಲನೇ ಕ್ಲಾಸಿಗೆ.
2. ,, ಎಸ್. ಆರ್. ಸುಬ್ರಾಯ ಅಯ್ಯರ್ ಯವರು, ಮೂರನೇ ಕ್ಲಾಸಿನಿಂದ ಎರಡನೇ ಕ್ಲಾಸಿಗೆ.

ತಾರೀಖು 29—30ನೆ ಜುಲೈ 1904.

ನಂ. 798—11—2—ಲೋ. ಬೋ., ಮೈಸೂರ ಸರ್ವಿಸ್ ರೆಗ್ಯುಲೇಷ್ನಗಳ 221ನೆ ಆರ್ಟಿಕಲ್ ಅನುಸರಿಸಿ ಸಬ್ ಅಸಿಸ್ಟೆಂಟ್ ಸರ್ಜ್ಜರಾದ ಮೆ॥ ಜೆ. ವಿ. ಮ್ಯಾಸ್ಕರ್ಹಾಸ್ ಯವರಿಗೆ 1904ನೆ ಮೇ 21ನೆ ತಾರೀಖಿನಾರಭ್ಯ 6 ದಿನಗಳ ತಲಬಿಲ್ಲದ ಎಕ್ಸ್ಟ್ರಾ ಆರ್ಡಿನೆರಿ ರಜಾ ಕೊಡಲ್ಪಟ್ಟಿತ್ತು.

ತಾರೀಖು 30ನೆ ಜುಲೈ 1904.

ನಂ. 806—22—2—ಲೋ. ಬೋ., ಸ್ 1902ನೆ ಇಸವಿಯ II ನೆ ನಂಬರ್ ಲೋಕಲ್ ಬೋರ್ಡುಗಳ ರೆಗ್ಯುಲೇಷ್ನ ಅನುಸಾರವಾಗಿ ಮಾಡಲ್ಪಟ್ಟ ರೂಲುಗಳ 6ನೆ ಪ್ಯಾರಾ ಅನುಸರಿಸಿ, ಬೆಂಗಳೂರ ಡಿಸ್ಟ್ರಿಕ್ಟಿನಲ್ಲಿರುವ ಯಲಹಂಕ, ಕೆಂಗೇರಿ ವ ಸೂಲಿಬೆಲೆ ಸಂಘದ ಪಂಚಾಯಿತಿಗಳನ್ನುಂಟಾಗಿರಲಿಕ್ಕೆ ಮೆಂಬರುಗಳಾಗಿ ಮೊಕರರ್ರಾಡಲ್ಪಟ್ಟ ದೊಡ್ಡ ಮನುಷ್ಯರುಗಳ ಇದರಡೀ ಕಂಡ ಪಟ್ಟಿಯು ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಘಾಯಿಷ್ಮಾಡಲ್ಪಟ್ಟಿರುತ್ತೆ :—

ಯಲಹಂಕ ಸಂಘ.

1.	ಬೆಂಗಳೂರ ತಾಲ್ಲೂಕಿನ ಅಮಲ್ದಾರ್ರು	.. ಅಧ್ಯಕ್ಷರು.
2.	ಮೆ॥ ಜ್ಞಾನಪ್ರಕಾಶಂ ಪಿಳ್ಳೈಯವರು, ಆಸ್ಪಿಟಲ್ ಅಸಿಸ್ಟೆಂಟರು	.. ಮೆಂಬರು.
3.	,, ಸುಬ್ರಾಯಸೆಟ್ಟರು	... ಡಿಟ್ಟೋ
4.	,, ರಂಗಯ್ಯಂಸೆಟ್ಟರು	.. ಡಿಟ್ಟೋ
5.	,, ನಾರಣಪ್ಪನವರು	... ಡಿಟ್ಟೋ
6.	,, ಫಕ್ರುಲ್ಲಾ ಜೇಗ್ ಯವರು	.. ಡಿಟ್ಟೋ

ಕೆಂಗೇರಿ ಸಂಘ.

1.	ಬೆಂಗಳೂರ ತಾಲ್ಲೂಕಿನ ಅಮಲ್ದಾರ್ರು	.. .. ಅಧ್ಯಕ್ಷರು.
2.	ಮೆ॥ ನಾರಪ್ಪನವರು ...	.. .. ಮೆಂಬರು.
3.	,, ಸಿದ್ದಪ್ಪನವರು ..	.... ಡಿಟ್ಟೋ
4.	,, ಅಬ್ದುಲ್‌ರಜಾಕ್ ಯವರು ..	.. .. ಡಿಟ್ಟೋ
5.	,, ವೀರಣ್ಣನವರು ..	... . ಡಿಟ್ಟೋ
6.	,, ಪಟೇಲ್ ನಂಜಪ್ಪನವರು	.. .. .. ಡಿಟ್ಟೋ

ಸೂಲಿಬೆಲೆ ಸಂಘ.

1.	ಹೊಸಕೋಟೆ ತಾಲ್ಲೂಕಿನ ಅಮಲ್‌ದಾರ್ರು	... ..	ಅಧ್ಯಕ್ಷರು.
2.	ಮೆ॥ ಹೈದರ್‌ಖಾನ್ ಯವರು, ಪಟೇಲರು	... .	ಮೆಂಬರು.
3.	,, ಎಲೆಮನೆ ನಂಜಪ್ಪನವರು	... .	ಡಿಟೋ
4.	,, ತೋಟದಪ್ಪನವರು	.. ...	ಡಿಟೋ
5.	,, ಚೆನ್ನಪ್ಪ ಉರಫ್ ನಂಜುಂಡಪ್ಪನವರು	.. .. ..	ಡಿಟೋ
6.	,, ಶಾಮಂಣನವರು, ಶಾನಭೋಗರು	.. .. ..	ಡಿಟೋ

ತಾರೀಖು 1ನೆ ಆಗಸ್ಟು 1904.

ನಂ. 258—1-4—ಜು., ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ ಕಡೂರಲ್ಲಿರುವ ಆಕ್ಟಿಂಗ್ ಎಕ್ಸ್ಟ್ರಾ ಅಸಿಸ್ಟೆಂಟ್ ಕಮೀಷನರ್ ವ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ॥ ಎ. ವೇದಾಂತದೇಸಿಗಂ ಅಯ್ಯಂಗಾರ್ರು ಮೊದಲನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 2ನೆ ಆಗಸ್ಟು 1904.

ನಂ. 843—17-2 ಮೆಡಿಕಲ್, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 221ನೆ ಆರ್ಟಿಕಲ್ ಅನುಸರಿಸಿ ಹಂಗಾಮಿ ಸಬ್ ಅಸಿಸ್ಟೆಂಟ್ ಸರ್ಜನ್‌ರಾದ ಮೆ॥ ಪಿ. ಮಾಧರ್ವನಾಯಿರ್ ಯವರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ಒಂದು ವರುಷ ತಲಬಿಲ್ಲದ ಎಕ್ಸ್ಟ್ರಾ ಆರ್ಡಿನೆರಿ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 2—3ನೆ ಆಗಸ್ಟು 1904.

ನಂ. 898—ಲೋ. ಬೋ. 91-02, ಮೃತಪಟ್ಟ ಮೆ॥ ಖಾಜಿ ಸೈಯದ್ ಅಲಿ ಸಾಹೇಬರಿಗೆ ಬದಲಾಗಿ ಮೆ॥ ಷೇಕ್ ಇಬ್ರಾಹಿಂ ಸಾಹೇಬರು ಕುಣಿಗಲ್ ಟವನ್ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 3ನೆ ಆಗಸ್ಟು 1904.

ನಂ. 914—10-2—ಮೆಡಿಕಲ್, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 221ನೆ ಆರ್ಟಿಕಲ್ ಅನುಸರಿಸಿ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ಮಾಡುತಲಿರುವ ಸಬ್ ಅಸಿಸ್ಟೆಂಟ್ ಸರ್ಜನ್‌ರಾದ ಮೆ॥ ಎ. ಕೋದಂಡಪಾಣಿ ಮೊದಲಿಯಾರ್ರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಾರಭ್ಯ ನಾಲ್ಕು ತಿಂಗಳ ತಲಬಿಲ್ಲದ ಎಕ್ಸ್ಟ್ರಾ ಆರ್ಡಿನೆರಿ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 3ನೆ ಆಗಸ್ಟು 1904.

ನಂ. 924—42-4—ಸ್ಯಾನಿಟೇಷನ್, ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನಿನ 2ನೆ ಸೆಷಕ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, 1898ನೆ ಫೆಬ್ರವರಿ 10ನೆ ಮರ್ಕುಂ 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ನಿಯಮಗಳಲ್ಲಿ ವಿಧಿಸಿರುವ ಅಜಮಾಯಿಷಿ ಪದ್ಧತಿಯನ್ನು ಮೈಸೂರು ಷಹರಿನಲ್ಲಿ 1904ನೆ ಆಗಸ್ಟು 10ನೆ ತಾರೀಖಿನಾರಭ್ಯ ಜಾರೀಲಿ ತರತಕ್ಕದ್ದೆಂದು ಅಪ್ಪಣೆ ಕೊಡುತ್ತಾರೆ.

2. ಸದರೀ ತಾರೀಖಿನಾರಭ್ಯ ಮೈಸೂರು ಷಹರಿನಲ್ಲಿರುವ ರೈಲ್ವೆ ಸ್ಟೇಷನು ಅಜಮಾಯಿಷಿ ಸ್ಟೇಷನ್ನಾಗಿರತಕ್ಕದ್ದೆಂದು ಪ್ರಸಿದ್ಧ ಪಡಿಸಲ್ಪಟ್ಟಿರುತ್ತೆ.

ತಾರೀಖು 3ನೆ ಆಗಸ್ಟು 1904.

ನಂ. 932—42-6—ಸ್ಯಾನಿಟೇಷನ್, ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನಿನ 2ನೆ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅರಮನೆಗೆ ಸೇರಿದ ಅಸಿಸ್ಟೆಂಟ್ ಸರ್ಜನ್‌ರನ್ನು ಹೆಲ್ತ್ ಆಫಿಸರಾಗಿ ಮೊಕರರ್ಮಾಡಿರುತ್ತಾರೆ ಮತ್ತು ಅವರಿಗೆ ಮೈಸೂರ ಅರಮನೆಯ ವಠಾರದಲ್ಲಿ ವಾಸಿಸುವ ಯಾ ಸದರೀ ವಠಾರಕ್ಕೆ ಬರುವ ಜನಗಳನ್ನು ಕುರ್ತು 1898ನೆ ಫೆಬ್ರವರಿ 10ನೆ ಮರ್ಕುಂ 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಯನುಸಾರವಾಗಿ ಕೊಡಲ್ಪಟ್ಟ ಸಿಟಿ ರೆಗ್ಯುಲೇಷನ್‌ಗಳ 11Aನೆ ರೆಗ್ಯುಲೇಷನ್ನಿಂದ ವಿಧಿಸಲ್ಪಟ್ಟ ಕೆಲಸಗಳನ್ನು ಚಲಾಯಿಸುವ ಬಗ್ಯೆ ಅಧಿಕಾರ ಕೊಟ್ಟಿರುತ್ತಾರೆ.

ತಾರೀಖು 3ನೆ ಆಗಸ್ಟು 1904.

ನಂ. 928—42-5—ಸ್ಯಾನಿಟೇಷನ್, ಸನ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನಿನ 2ನೆ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಸಿಸ್ಟೆಂಟ್ ಸರ್ಜನ್‌ರಾದ ಮೆ॥ ಟಿ. ವಿ. ಕುಪ್ಪಸಾಮಿ ಮೊದಲಿಯಾರ್ರನ್ನು ಮೈಸೂರ ಷಹರ್ ರೈಲ್ವೆ ಸ್ಟೇಷನ್ನಲ್ಲಿ ಅಜಮಾಯಿಷಿ ಮೆಡಿಕಲ್ ಆಫಿಸರಾಗಿ ಮೊಕರರ್ಮಾಡಿರುತ್ತಾರೆ. ಮೆ॥ ಕುಪ್ಪಸಾಮಿ ಮೊದಲಿಯಾರ್ರು ಮೈಸೂರ ಷಹರಿನ ಹೆಲ್ತ್ ಆಫಿಸರಾಗಿ ಸಹಾ ಇರತಕ್ಕದ್ದು.

ನಂ. ಆರ್. 4318, 1904ನೆಯ ಜೂನ್ 30—ಜುಲೈ 11ನೆಯ ತಾರೀಖು.

ಶೇಕದಾರಿ ಉದ್ಯೋಗವನ್ನು ಉನ್ನತ ಸ್ಥಿತಿಗೆ ತರುವುದಕ್ಕೋಸ್ಕರ ಶ್ರೀಮನ್ ಮಹಾರಾಜರವರ ಗವರ್ನಮೆಂಟಿನವರಿಂದ ಮಂಜೂರ್ಮಾಡಲ್ಪಟ್ಟಿರುವ ಕೆಳಗಿನ ನಿರ್ಣಾಯ ಸರ್ವ ಜನರ ತಿಳುವಳಿಕೆಯ ಬಸ್ಯೆ ಪ್ರಕಟಿಸಲ್ಪಟ್ಟಿದೆ:—

(1) 1904ನೆಯ ಜುಲೈ 1ನೆಯ ತಾರೀಖಿನಿಂದ, ಶೇಕದಾರರ್ಸಂಬಳವು 1ನೆಯ ತರಗತಿಗೆ 35 ರೂಪಾಯಿಯೂ, 2ನೆಯ ತರಗತಿಗೆ 30 ರೂಪಾಯಿಯೂ, 3ನೆಯ ತರಗತಿಗೆ 25 ರೂಪಾಯಿಯೂ, ಆಗಿರತಕ್ಕದ್ದು.

(2) ಶೇಕದಾರರ ಸಂಖ್ಯೆಯು 374 ಆಗಿರತಕ್ಕದ್ದು, ಮತ್ತು ಪ್ರತಿ ತರಗತಿಯಲ್ಲಿಯೂ ಅವರ ಸಂಖ್ಯೆಯು ಈ ಕೆಳಗಿನ ಪರಿಮಾಣಕ್ಕೆ ವಿರುದ್ಧವಾಗಿರತಕ್ಕದ್ದಲ್ಲ:—

ಒಟ್ಟು ಸಂಖ್ಯೆಯಲ್ಲಿ ಶೇಕಡಾ 20ರಷ್ಟು 1ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 35 ರೂಪಾಯಿನಂತೆ 75, ಒಟ್ಟು ಸಂಖ್ಯೆಯಲ್ಲಿ ಶೇಕಡಾ 30ರಷ್ಟು 2ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 30 ರೂಪಾಯಿನಂತೆ 112, ಒಟ್ಟು ಸಂಖ್ಯೆಯಲ್ಲಿ ಶೇಕಡಾ 50ರಷ್ಟು 3ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 25 ರೂಪಾಯಿನಂತೆ 187.

(3) ಶೇಕದಾರರಲ್ಲಿ ಪ್ರತಿ ಒಬ್ಬನಿಗೆ ಮೂಹೆಯೂನ 10 ರೂಪಾಯಿನಂತೆ ಕುದರೆಯ ಭತ್ಯವು ಸಲ್ಲುವುದು, ಮತ್ತು ನುಲೆ ನಾಡು ಭತ್ಯವು ಈಗ ಸಲ್ಲುತ್ತಾ ಇರುವ ಕಡೆಯಲ್ಲೆಲ್ಲಾ ಈಗಿನಂತೆ ಮುಂದೆಯೂ ಸಲ್ಲುವುದು.

(4) ಪ್ರತಿ ಶೇಕದಾರನು ಒಂದು ಸರಿಯಾದ ಸವಾರಿ ಕುದರೆ ತಟ್ಟುವನ್ನು ಇಡತಕ್ಕದ್ದು. ಮತ್ತು ತನ್ನ ಹೋಬಳಿಯಲ್ಲಿ ಸಂಚಾರ ಮಾಡುವದರಲ್ಲಿ ಪ್ರತಿ ತಿಂಗಳಲ್ಲಿಯೂ ಕನಿಷ್ಟಪಕ್ಷ 20 ದಿನಗಳಿಗೆ ಕಡಿಮೆ ಇಲ್ಲದೆ ಕಳೆಯಬೇಕು.

(5) ಈ ಉದ್ಯೋಗಕ್ಕೆ ಸೇರಿಸಿಕೊಳ್ಳುವುದಕ್ಕೆ ಈ ಕೆಳಗಿನ ಯೋಗ್ಯತೆಗಳು ಇರತಕ್ಕದ್ದು:—

(i) ಉಮೇದವಾರನು ಮೆಟ್ರಿಕ್ಯುಲೇಷನಿಗೆ ಕಡಮೆ ಇಲ್ಲದ ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು ಮತ್ತು ಈಗ ಉದ್ಯೋಗದಲ್ಲಿ ಇಲ್ಲದ ಮನುಷ್ಯರ ವಿಷಯದಲ್ಲಿ, ಅವರು 25 ವರ್ಷ ವಯಸ್ಸಿಗೆ ವಿರುದ್ಧವಾಗಿರಕೂಡದು;

(ii) ಡಿಸ್ಟ್ರಿಕ್ಟ್ ಮೆಡಿಕಲ್ (ವೈದ್ಯ) ಆಫಿಸರಿಗೆ ಕಡಮೆ ಇಲ್ಲದ ಹುದ್ದೆಯ ಮೆಡಿಕಲ್ ಆಫಿಸರಿಂದ ಕಾಯುತಃ ಅರ್ಹನಾಗಿದಾನೆಂದು ದೃಢೀಕರಿಸಲ್ಪಡಬೇಕು.

(6) ಉಮೇದವಾರರು ಈ ಕೆಳಗಿನ ವಿಷಯಗಳಲ್ಲಿ ಶೇಕದಾರಿ ಪರೀಕ್ಷೆ ಎಂದು ಕರೆಯಲ್ಪಡುವ ಒಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು:—

(ಎ) 1900ನೆಯ ನವಂಬರ್ 6ನೆಯ ತಾರೀಖಿನ ನಂ. 3766—ಆರ್. ಎಫ್. 108-92ನೆಯ ಗವರ್ನಮೆಂಟ್ ಇಸ್ತಿಹಾರ್ನಾಮೆಯಲ್ಲಿ ವಿಧಿಸಲ್ಪಟ್ಟಿರುವ ವಿಷಯಗಳು ಅವು ಯಾವವೆಂದರೆ—ಲ್ಯಾಂಡ್ ರೆವಿನ್ಯು ಕೋಡ್, ಅದಕ್ಕನುಸಾರವಾದ ನಿಬಂಧನೆಗಳು, ಮತ್ತು (ಹೊಸ) ರೆವಿನ್ಯು ಮಾನ್ಯುಯಲ್ ಎಂಬ ಪುಸ್ತಕದಲ್ಲಿ ಗೊತ್ತು ಮಾಡಲ್ಪಡುವ ಭಾಗಗಳು, ಮತ್ತು ಸರ್ವೆ ಮಾನ್ಯುಯಲ್ ಪುಸ್ತಕ, ಅಥವಾ ಆಗಿಂದಾಗ್ಯೆ ಪ್ರಕಟಿಸಲ್ಪಡುವ ಗವರ್ನಮೆಂಟಿನವರ ಶಾಶ್ವತವಾದ ಹುಕುಂಗಳ ಸಂಗ್ರಹದ ಇತರ ಯಾವದಾದರೂ ಒಂದು ಪುಸ್ತಕ.

(ಬಿ) ಸುಲಭವಾಗಿ ಕನ್ನಡವನ್ನು ಓದುವುದಕ್ಕು ಬರೆಯುವುದಕ್ಕೂ ಸಾಮರ್ಥ್ಯ.

(ಸಿ) ಹೊಲಗಳನ್ನು ಅಳೆಯುವುದಕ್ಕು ಮತ್ತು ಅವುಗಳ ನಕ್ಷೆ ಬರೆಯುವುದಕ್ಕೂ ಸಾಮರ್ಥ್ಯ.

(ಡಿ) ಕಟ್ಟಡಗಳಿಗೂ ನೀರಾವರಿಗೂ ಸಂಬಂಧಪಟ್ಟ ಸಣ್ಣ ಕೆಲಸಗಳಿಗೆ ಅಂದಾಜು ತಯಾರ್ಮಾಡುವುದಕ್ಕೂ ಕೆಲಸ ನಡೆಸುವುದಕ್ಕೂ ಸಾಮರ್ಥ್ಯ.

(ಇ) ಸವಾರಿ ಮಾಡುವುದಕ್ಕೆ ಸಾಮರ್ಥ್ಯ.

ಲೋಕಲ್ ಸರ್ವಿಸ್ (ಸ್ಥಳೀಯ ಉದ್ಯೋಗದ) ಪರೀಕ್ಷೆಯಲ್ಲಿ ಈ ಶೇಕದಾರಿ ಪರೀಕ್ಷೆಯು ಒಂದು ಶಾಖೆಯಾಗಿರತಕ್ಕದ್ದು.

(7) ಮೇಲ್ಕಂಡಂತೆ ಯೋಗ್ಯತೆಯನ್ನು ಹೊಂದುವ ಉಮೇದವಾರರು ಶೇಕದಾರಿಯ ಸ್ಥಾನಕ್ಕೆ ಅರ್ಹರಾಗಿರತಕ್ಕದ್ದು. ಖಾಲಿ ಬಿದ್ದಾಗ ಕಡೆಯ ತರಗತಿಗೆ ಸಾಮಾನ್ಯವಾಗಿ ಪೊದಲು ನೇಮಕ ಮಾಡಲ್ಪಡತಕ್ಕದ್ದು.

(8) ಹಾಗೆ ನೇಮಕ ಮಾಡಲ್ಪಟ್ಟ ಮನುಷ್ಯನು ನಿಜವಾಗಿ ಕೆಲಸದ ಮೇಲೆ ಇಡಲ್ಪಡುವುದಕ್ಕೆ ಮುಂಚೆ ಕಾರ್ಯತಃ ನರ್ವೆಯಲ್ಲಿ ತಯಾರ್ಮಾಡಲ್ಪಡುವುದು ಅವಶ್ಯವಾಗಿರುವುದರಿಂದ ಈ ಕೆಳಗಿನ ಬೋಧನ ಕ್ರಮವು ವಿಧಿಸಲ್ಪಟ್ಟಿದೆ:—

(1) ಹೊರಗೆ ಹೋಗಿ ಕೆಲಸ ಮಾಡುವ ಒಂದು ಕಾಲದ ವರೆಗೂ ಎಂದರೆ 8 ತಿಂಗಳು ಅಥವಾ ವಿಶೇಷ ಸಂದರ್ಭಗಳಲ್ಲಿ ಇನ್ನೂ ಕಡಮೆಯ ಕಾಲದ ವರೆಗೆ ಕಾರ್ಯತಃ ಬೋಧನವನ್ನು ಹೊಂದುವುದಕ್ಕಾಗಿ ಒಂದು ಅಳೆಯುವ ಸಿಬ್ಬಂದಿಗೆ ಅವನು ಲಗತ್ತುಮಾಡಲ್ಪಟ್ಟು ಇರುವನು.

(2) ಸಾಧಾರಣವಾದ ಸರಪಣಿ ಅಳತೆಯನ್ನೂ ಕ್ರಾಸ್ ಸ್ಟ್ಯಾಫ್ ಅಳತೆಯನ್ನು ಮಾಡುವುದಕ್ಕೆ ಯೋಗ್ಯತೆ ಉಳ್ಳವನಾಗಿ ಇದಾನೆಂದು ಮತ್ತು ಅಳತೆಯ ನಿಬಂಧನೆಗಳನ್ನು ತಿಳಿದುಕೊಂಡು ಇದಾನೆಂದೂ ಅವನು ಲಗತ್ತಾಗಿ ಇರುವ ಅಳತೆಯ ಸಿಬ್ಬಂದಿಯ ಅಧಿಕಾರದಲ್ಲಿ ಇರುವ ಆಫಿಸರಿಂದ ಬಂದು ಯೋಗ್ಯತಾ ಪತ್ರಿಕೆಯ (ಸರ್ಟಿಫಿಕೇಟು) ನ್ನು ಅವನ ಯೋಗ್ಯತೆಯ ನಿದರ್ಶನಕ್ಕಾಗಿ ಹೊಂದತಕ್ಕದ್ದು.

(3) ಬಹಳ ವಿಶೇಷ ಸಂದರ್ಭಗಳಲ್ಲಿ, ಉಮೇದವಾರನು ಅರ್ಹನಾಗಿ ಇದ್ದರೆ, 4 ತಿಂಗಳುಗಳಿಗೆ ಕಡಿಮೇ ಇಲ್ಲದಷ್ಟು ಕಾಲ ಅವನು ವಿದ್ಯಾಭ್ಯಾಸ ಮಾಡಿದಮೇಲೆ ಆಫಿಸರುಗಳು ಅವನಿಗೆ ಬಂದು ಸರ್ಟಿಫಿಕೇಟನ್ನು ಕೊಡಬಹುದು.

(4) ಅಳತೆಯ ಸಿಬ್ಬಂದಿಗಳಲ್ಲಿ ಕೇರಿಸಿಕೊಳ್ಳುವದಕ್ಕಾಗದಷ್ಟು ವಿದ್ಯಾಭ್ಯಾಸ ಮಾಡತಕ್ಕ ಕೇಕದಾರ್ರ ಸಂಖೆಯು ಹೆಚ್ಚಾಗಿರುಮಾಗ, ಅವರಲ್ಲಿ ಕೆಲವರನ್ನು ಡಿಸ್ಟ್ರಿಕ್ಟ್ ಸರ್ವೆಯರ್‌ಗಳ ಜೊತೆಗೆ ಕೇರಿಸಬಹುದು, ಅವರೂಕೂಡ ಅಳತೆಯ ಸಿಬ್ಬಂದಿಗಳ ಅಧಿಕಾರದಲ್ಲಿ ಇರುವ ಆಫಿಸರುಗಳಂತೆ ಸರ್ಟಿಫಿಕೇಟುಗಳನ್ನು ಕೊಡಬಹುದು, ಅಂತಹ ಸರ್ಟಿಫಿಕೇಟುಗಳನ್ನು ಅಂಗೀಕರಿಸಬಹುದು.

(9) ಮೂರನೆಯ ತರಗತಿಯಿಂದ ಎರಡನೆಯ ತರಗತಿಗೂ ಎರಡನೆಯ ತರಗತಿಯಿಂದ ಮೊದಲು ತರಗತಿಗೂ ಇಜಾಫೆಯು ಕೆಳಗಿನಂತೆ ಕ್ರಮಪಡಿಸಲ್ಪಡುವುದು :—

(i) ಪ್ರತಿ ತರಗತಿಯಲ್ಲಿಯೂ ಉತ್ತಮ ಸಂಖ್ಯೆಕ ಖಾಲಿಗಳು ಭರ್ತಿ ಆಗುವ ವರೆಗೂ ಮೇಲ್ಕಂಡಂತೆ ಯೋಗ್ಯತೆಯನ್ನು ಹೊಂದಿದ ಕೇಕದಾರನು ಬಂದು ತರಗತಿಯಲ್ಲಿ ಎರಡು ವರ್ಷಗಳು ಸಮರ್ಪಕನಾಗಿ ಕೆಲಸ ಮಾಡಿದ ತರುವಾಯ ಮೇಲಿನ ತರಗತಿಗೆ ಇಜಾಫೆಗೆ ಹಕ್ಕುಳ್ಳವನಾಗಿ ಇರುವನು ;

(ii) ಮೊದಲು ಎರಡನೆ ತರಗತಿಗಳಲ್ಲಿ ಉತ್ತಮ ಸಂಖ್ಯೆಕ ಖಾಲಿಗಳು ಈ ಪ್ರಕಾರ ಭರ್ತಿ ಮಾಡಲ್ಪಟ್ಟಾಗ ಆಗಿಂದಾಗ್ಗೆ ಸಂಭವಿಸುವ ಖಾಲಿಗಳಿಂದ ಇಜಾಫೆಗಳು ಕ್ರಮಪಡಿಸಲ್ಪಡುವುದಲ್ಲದೆ ಕೆಳಗಿನ ತರಗತಿಗಳಲ್ಲಿರುವ ಜನಗಳ ಪಾತ್ರತೆಗಳು, ಯೋಗ್ಯತೆಗಳು ಮತ್ತು ಕೆಲಸಗಳು ಇವುಗಳನ್ನು ಸರಿನೋಡಿ ನಿರ್ಣಯಿಸಲ್ಪಡುವುವು.

(10) ಇಲ್ಲಿ ವಿಧಿಸಲ್ಪಟ್ಟಿರುವಂತೆ ಯೋಗ್ಯತೆಯನ್ನು ಹೊಂದಿದ ಯಾವ ಕೇಕದಾರನು ಹೊಸ ತರಗತಿಗಳಲ್ಲಿ ಯಾವದರ ಸಂಬಳಕ್ಕೂ ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದರೆ ಹಳೆಯ ನಿಬಂಧನೆಗಳ ಮೇರೆ ಅವನಿಗೆ ಹಕ್ಕಿರುವ ಸಂಬಳವನ್ನು ಮಾತ್ರ ಹೊಂದತಕ್ಕದ್ದು.

(11) ಕೇಕದಾರರು ಈ ಕೆಳಗಿನ ಕೆಲಸಗಳನ್ನು ಮಾಡತಕ್ಕದ್ದು :—

(ಎ) ಆದಕ್ಕಾಗಿ ಪ್ರತ್ಯೇಕವಾದ ಶಿಬ್ಬಂದಿ ಇಲ್ಲದೆ ಇರುವಾಗ ಸಾಯರು ವಸೂಲಿ, ಮತ್ತು ಸಾಮರ್ ಕಾರ್ಕೂನಗಳನ್ನು ಇಟ್ಟು ಇರುವಾಗ ಅವರ ಕೆಲಸದ ಮೇಲ್ವಿಚಾರಣೆ.

(ಬಿ) ರೆವಿನ್ಯೂ ವಸೂಲಿಯ ಮತ್ತು ಆ ಸಂಬಂಧದಲ್ಲಿ ಗ್ರಾಮ ನೌಕರರ ಕೆಲಸದ ಮೇಲ್ವಿಚಾರಣೆ.

(ಸಿ) ತಗಾದೆ ನೋಟಿಸ್‌ಗಳನ್ನು ತಯಾರ್ಮಾಡುವುದು, ರವಾನಿಸುವುದು, ಮತ್ತು ಜಾರಿ ಮಾಡುವುದು ಇವುಗಳ ಮೇಲ್ವಿಚಾರಣೆ.

(ಡಿ) ಅಮಲ್ದಾರ್ರ ಹುಕುಂ ಮೇರೆ ಬಾಕಿದಾರ್ರ ಸ್ವತ್ತನ್ನು ಜಪ್ತಿ ಮಾಡುವುದು.

(ಇ) ಜಾರಿಯಲ್ಲಿರುವ ನಿಬಂಧನೆಗಳ ನಿಯಮಗಳ ಮೇರೆ ಸ್ವತ್ತಿನ ಹರಾಜುಗಳನ್ನು ನಡಸುವುದು.

(ಎಫ್) ಲ್ಯಾಂಡ್ ರೆವಿನ್ಯೂ ಕೋಡಿನ 146 ರಿಂದ 151ರ ವರಗಿನ ಪ್ರಕರಣಗಳ ಮೇರೆ ಲ್ಯಾಂಡ್ ರೆವಿನ್ಯೂವನ್ನು ಭದ್ರಪಡಿಸುವುದಕ್ಕಾಗಿ ಮುಂದಾಗಿ ಉಪಾಯಗಳನ್ನು ಮಾಡಬೇಕಾಗಿರುವಾಗ ರಿಪೋರ್ಟುಗಳನ್ನು ಕಳುಹಿಸುವುದು.

(ಜಿ) ಶಾನಭೋಗನ ಖಾನೇಷುಮಾರಿ, ಖಾತೆ, ಖಿರದಿ ಲೆಕ್ಕಗಳನ್ನು ಆಗಾಗ್ಗೆ ಪರೀಕ್ಷಿಸಿ ತಾಳೆ ನೋಡುವುದು ಮತ್ತು ಆ ಲೆಕ್ಕಗಳೂಡನೆ ರೈತರು ಕೊಟ್ಟ ಕಂದಾಯಕ್ಕಾಗಿ ಅವರಿಗೆ ಕೊಟ್ಟಿರುವ ರಶೀತಿಗಳನ್ನು ತಾಳೇ ನೋಡುವುದು.

(ಹೆಚ್) ಜನನ ಮರಣದ ಮತ್ತು ದನಗಳ ಮರಣದ ಲೆಕ್ಕಗಳನ್ನು ತೋರಿಸುವ ಪಟೇಲನ ರಿಜಿಸ್ಟರ್‌ಗಳನ್ನು ಆಗಾಗ್ಗೆ ಪರೀಕ್ಷಿಸುವುದು.

(ಐ) ಸಾಗುವಳಿ, ಮನೆ ಕಟ್ಟುವುದು, ವಗೈರೆಗಳ ಬಗ್ಗೆ ಜಮೀನ್ ದರಖಾಸ್ತುಗಳ ಮೇಲೆ ರಿಪೋರ್ಟು ಮಾಡುವುದು.

(ಜೆ) ಹುಕುಂ ಮೇರೆ ದರಖಾಸ್ತು ಜಮೀನ್‌ಗಳ ಮತ್ತು ಗವರ್ನಮೆಂಟ್ ಚಿಲ್ಲರೆ ರೆವಿನ್ಯೂ ಬಾಬುಗಳ ಹರಾಜು.

(ಕೆ) ಕಾಲಸ್ಥಿತಿ, ಮಳೆ, ಮತ್ತು ವಿಶೇಷವಾಗಿ ಕ್ಷಾಮ ನಿವಾರಣೆಯ ಕೋಡಿನ 10ನೆಯ ಪ್ರಕರಣಕ್ಕನುಸಾರವಾಗಿ ತನ್ನ ಹೋಬಳಿಯ ಸಾಮಾನ್ಯ ಸ್ಥಿತಿಗೆ ಸಂಬಂಧಪಟ್ಟ ಇತರ ವಿಷಯಗಳೂ ಇವುಗಳ ಮೇಲೆ ರಿಪೋರ್ಟು ಮಾಡುವುದು.

(ಎಲ್) ಸರ್ವೆ ನಂಬರುಗಳನ್ನು ಫೋಡಿ ಮಾಡುವುದು ಮತ್ತು ಫೋಡಿ ನಂಬರುಗಳ ನಕ್ಷೆ ಬರೆಯುವುದು.

(ಎಮ್) ಬಾವಿಗಳು ಮತ್ತು ಅವುಗಳ ಉತ್ಪತ್ತಿ, ಎಲ್ಲೆ ಬಾಂದಾರುಗಳ ಸ್ಥಿತಿ ಮತ್ತು ಸರ್ಕಾರದ ನೀರನ್ನು ಬಗರ ಹುಕುಂ ಉಪಯೋಗಿಸುವುದು, ಇವುಗಳನ್ನು ಕುರಿತು ಶಾನುಭೋಗನು ಪಹಣಿಯಲ್ಲಿ ಬರೆದಿರುವುದನ್ನು ಪರೀಕ್ಷಿಸುವುದು, ಪ್ರತಿವರ್ಷದಲ್ಲಿಯೂ ಪ್ರತಿ ಗ್ರಾಮದಲ್ಲಿ ಇರುವ ಸರ್ವೆ ನಂಬರುಗಳಲ್ಲಿ ಶೇಕಡಾ ೫ದಕ್ಕೆ ಕಡಮೆ ಇಲ್ಲದಂತೆ ಅಪ ಮಾಯಿಷಿ ಮಾಡುವುದು, ಮತ್ತು ಹಿಡುವಳಿಯಲ್ಲಿಲ್ಲದ ಸರ್ವೆ ನಂಬರುಗಳ ಬಾಂದುಗಳಿಗೆ ವಿಶೇಷವಾಗಿ ಅವಧಾನವನ್ನು ಕೊಡುವುದು.

(ಎನ್) ಪ್ರತಿ ಜಮೀನಿನ (ಫೀಲ್ಡ್) ಸರ್ವೆ ಬಾಂದುಗಳನ್ನು ಕ್ರಮವಾಗಿ ಕಾಪಾಡುವಂತೆ ಬಲಾತ್ಕಾರ ಪಡಿಸುವುದು.

(ಬ) ಗ್ರಾಮನಿರ್ಮಲೀಕರಣಕ್ಕೆ ಅವಧಾನವನ್ನು ಕೊಡುವುದು, ಮತ್ತು ಜನರ ದಾರಿಯ ಮೇಲೆ ಬುತ್ತಿಕೊಂಡು ಬರದ ಹಾಗೆ ನೋಡಿಕೊಳ್ಳುವುದು.

(ಪಿ) ಸೂಲುಮರಗಳ ಮತ್ತು ತೋಪುಗಳ ರಕ್ಷಣೆ.

(ಕ್ಯೂ) ಕೆರೆಗಳು, ನಾಲೆಗಳು, ಮತ್ತು ಸರ್ಕಾರಿ ಸಂಬಂಧ ಕಟ್ಟಡಗಳು ಇವುಗಳನ್ನು ಹೋಗಿ ನೋಡಿ ಹಾಗೆ ನೋಡಿದ್ದಕ್ಕೆ ರಿಪೋರ್ಟು ಮಾಡುವುದು, ಮತ್ತು ಜರೂರಿನ ಸಂದರ್ಭಗಳಲ್ಲಿ ಆಪತ್ಪ್ರತಿಕಾರಕ್ಕಾಗಿ ಏರ್ಪಾಡುಗಳನ್ನು ಮಾಡುವುದು.

(ಆರ್) ಕೆರೆಗಳನ್ನು ಕಾಲುವೆಗಳನ್ನು ಕಾಪಾಡುವುದಕ್ಕೆ ಸಾಲಿಯಾನ ಆಗತಕ್ಕ ಕಾಮಗಾರಿ.

(ಎಸ್) ತಕರಾರು ಬರುವ ಸಂದರ್ಭಗಳಲ್ಲಿಯೂ ಮತ್ತು ಅದಕ್ಕಾಗಿ ಪ್ರತ್ಯೇಕವಾದ ಏರ್ಪಾಡು ಇಲ್ಲದೆ ಇರುವಾಗಲೂ ಕೆರೆಗಳಿಂದಲೂ ನಾಲೆಗಳಿಂದಲೂ ಬರುವ ನೀರಿನ ಸರಿಯಾದ ಹಂಚಿಕೆಗೆ ವಿಷಯಕ್ಕೆ ಅವಧಾನವನ್ನು ಕೊಡುವುದು.

(ಟಿ) ಡಿಸ್ಟ್ರಿಕ್ಟು ಜಂಗಲುಗಳ ಮತ್ತು ಸಂದಲಿ ಮರಗಳ ರಕ್ಷಣೆ.

(ಯು) ಟಪಾಲು ಎತ್ತುಗಳ ಸರಬರಾಯಿ ಮತ್ತು ಅವಶ್ಯವಿದ್ದಾಗ ಆಫೀಸರುಗಳ ಮತ್ತು ಪ್ರಯಾಣಿಕರ ಅವಶ್ಯಕತೆಗಳಿಗೆ ಅವಧಾನವನ್ನು ಕೊಡುವುದು.

(ವಿ) ಕಡವಿನ ದೋಣಿಗಳು ಮತ್ತು ಹರಿಗೋಲುಗಳು ಭದ್ರವಾದ ಸ್ಥಿತಿಯಲ್ಲಿರುವುದನ್ನು ಕುರಿತು ಅಜವಾಯಿಷಿ ಮಾಡುವುದು ಮತ್ತು ಕಡವುಗಳ ವಿಷಯದಲ್ಲಿ ವಿಧಿಸಿರುವ ನಿಬಂಧನೆಗಳನ್ನು ಕ್ರಮವಾಗಿ ಆಚರಿಸುವಂತೆ ನೋಡಿಕೊಳ್ಳುವುದು.

(ಡಬ್ಲ್ಯು) ಸೈನ್ಯಗಳಿಗೆ ಸರಬರಾಯಿ.

(ಎಕ್ಸ್) ಗ್ರೇಟ್ ಟ್ರಿಗೋನಾ ಮೆಟ್ರಿಕಲ್ ಸರ್ವೆ ಸ್ಟೇಷ್ಗಳ ಅಜವಾಯಿಷಿ.

(ವೈ) ಕಿಡುಬು ಹಾಕುವವರು ಲೆವರ ಕೆಲಸವನ್ನು ಮಾಡುವುದಕ್ಕೆ ಸಹಾಯ ಮಾಡುವುದು.

(ಜಡ್) ಮುಜರಾಯಿ ಸತ್ರ ದೇವಾಲಯಗಳ ಅಜವಾಯಿಷಿ ಮತ್ತು.

(ಎಎ) ಮೇಲಿನ ಅಧಿಕಾರಿಗಳು ವಿಧಿಸುವ ಇತರ ಕೆಲಸಗಳು.

(12) ಹಳೆಯ ಏರ್ಪಾಡಿಗೆ ಬದಲಾಗಿ ಈ ಹೊಸ ಏರ್ಪಾಡನ್ನು ಜಾರಿಗೆ ತರುವ ಸಂದರ್ಭದಲ್ಲಿ, ಈಗಿರುವ ಶೇಕದಾರ್ರಿಗೆ ಬದಲಾಗಿ ಬೇರೆ ಜನಗಳನ್ನು ಕಾಲಕ್ರಮೇಣ ಇಡತಕ್ಕದ್ದು, ಮತ್ತು ಈ ನಿಬಂಧನೆಗಳ ಪ್ರಕಾರ ಯೋಗ್ಯತೆಯನ್ನು ಹೊಂದಿದ ಜನಗಳನ್ನು ಖಾಲಿ ಬಿದ್ದಹಾಗೆಲ್ಲಾ ನೇವಿಸತಕ್ಕದ್ದು.

ತಾರೀಖು 26ನೆ ಜುಲೈ 1904.

ನಂ. ರೆ. 608-42-2, ಅಮಲ್ದಾರ್ರುಗಳ ಇದರಡೀ ಕಂಡ ವರ್ಗಾವರ್ಗಿಗಳು ಮತ್ತು ನೇಮಣೂಕಿಗಳು ಹುಕ್ಕುಂ ಮಾಡಲ್ಪಟ್ಟಿರುತ್ತವೆ :—

(1) ನುಂಜರಾಬಾದ್ ತಾಲ್ಲೂಕಿನ ಅಮಲ್ದಾರ್ ಪ ಮೂರನೆ ಕ್ಲಾಸಿನ ಮ್ಯಾಜಿಸ್ಟ್ರೇಟರಾದ ಮೆ|| ಎಸ್. ರಾಮಸ್ವಾಮಯ್ಯಂಗಾರ್ರು ಅರಕಲಗೂಡು ತಾಲ್ಲೂಕಿಗೆ.

(2) ಹುಣಸೂರು ತಾಲ್ಲೂಕಿನ ಅಮಲ್ದಾರ್ ಪ ಎರಡನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾದ ಮೆ|| ವಿ. ಕಂಠೀರವಾಚಾರ್ರು, ನುಂಜರಾಬಾದ್ ತಾಲ್ಲೂಕಿಗೆ.

(3) ಈಚಿಗೆ ಯಳಂದೂರು ಜಹಗೀರಿನಿಂದ ವಾಪಸು ಬಂದ ಅಮಲ್ದಾರ್ ಪ ಮೂರನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾದ ಮೆ|| ಪಿ. ರಂಗರಾಯರು ಹುಣಸೂರ ತಾಲ್ಲೂಕಿಗೆ.

ತಾರೀಖು 28ನೆ ಜುಲೈ 1904.

ನಂ. ರೆ. 700-71-2, ಸಬ್ ಪ್ರೋಟೆಂ ಮೊದಲನೇ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಎಚ್. ಎಚ್. ಸ್ಪಾರ್ಕ್ಸ್ ಯು ವರಿಗೆ 1904ನೆ ಜೂನ್ ಆಖ್ಯೆರ ವರಿವಿಗೆ ಕೊಟ್ಟ ರಜಾಪನ್ನು ಅವರು ಉಪಯೋಗಿಸಿಕೊಂಡ ತಾರೀಖಿನಾರಭ್ಯ ಇದರಡೀ ಕಂಡ ಆಕ್ಟಿಂಗ್ ಬಡ್ತಿಗಳು ಮಂಜೂರ್ಮಾಡಲ್ಪಟ್ಟಿರುತ್ತವೆ :—

ಎರಡನೆ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಎಂ. ನಾರಾಯಣರಾಯರು ಮೊದಲನೇ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ಮೂರನೇ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಡಿ. ದೇವರಾಜೆ ಅರಸಿನವರು ಎರಡನೇ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ತಾರೀಖು 30ನೆ ಜೂನ್ 1904.

ನಂ. ರೆ. 4314 – ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ ೯ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಸಿಡ್ಲಘಟ್ಟದ ತಾಲ್ಲೂಕಿನಲ್ಲಿ ಚಿಂತಾಮಣಿಯಿಂದ ಚೇಳೂರಿಗೆ ರಸ್ತೆಯನ್ನು ಹಾಕುವ ಬಗ್ಗೆ ಬೇಕಾಗಿರುತ್ತವೆ. ಮತ್ತು ಸಿಡ್ಲಘಟ್ಟದ ತಾಲ್ಲೂಕಿನ ಚಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಪ್ಪಣೆ ಕೊಡಲ್ಪಟ್ಟಿರುತ್ತಾರೆ:

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರ್ರ ಹೆಸರು.	ಸರ್ವೆ ನಂ.	ಜಮೀನಿನ ವಿವರ.	ತೆಗದುಕೊಂಡ ಜಮೀನಿನ ವಿಸ್ತೀರ್ಣ ಎ.	ಗು.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ.	ಸಿಡ್ಲಘಟ್ಟ.	ಚಿಲಕಲನೇರ್ಪು.	ಕಂಚರ್ಲಹಳ್ಳಿ.	ನಾಗ ..	7	ಖುಷ್ಕಿ	0	3	ನಾಗ ಎಸ್. ನಂ. 7	ನಾಗ ಎಸ್. ನಂ. 7	ಖರಾಬ್ ಎಸ್. ನಂ. 18	ವೆಂಕಟಿಗ ಎಸ್. ನಂ. 6
				ಖದ್ರಪ್ಪ ..	2	ಡಿಟೋ	0	23	ಖದ್ರಪ್ಪ ಎಸ್. ನಂ. 2	ಖದ್ರಪ್ಪ ಎಸ್. ನಂ. 2	ರಸ್ತೆ ಎಸ್. ನಂ. 6	ರಸ್ತೆ ಎಸ್. ನಂ. 1
				ಎರ್ರಗ ..	1	ಡಿಟೋ	0	15	ವೆಂಕಟಿಗ ಎಸ್. ನಂ. 1	ವೆಂಕಟಿಗ ಎಸ್. ನಂ. 1	ಡಿಟೋ 2	ಡಿಟೋ 147
				ವೆಂಕಟಿಗ ...	138	ಡಿಟೋ	0	14	ವೆಂಕಟಿಗ ಎಸ್. ನಂ. 138	ವೆಂಕಟಿಗ ಎಸ್. ನಂ. 138	ಡಿಟೋ 140	ಡಿಟೋ 127
				ನರಸಿಗ .	127	ಡಿಟೋ	0	15	ನರಸಿಗ ಎಸ್. ನಂ. 127	ನರಸಿಗ ಎಸ್. ನಂ. 127	ಡಿಟೋ 138	ಡಿಟೋ
				ಸಿದ್ದಿರಾಮಯ್ಯ ..	127	ಡಿಟೋ	0	2	ಎಸ್. ರಾಮಯ್ಯ ಎಸ್. 127	ಎಸ್. ರಾಮಯ್ಯ ಎಸ್. ನಂ. 127	ಡಿಟೋ 127	ಡಿಟೋ
				ಸುಬ್ಬರಾಯ ..	127	ಡಿಟೋ	0	10	ಸುಬ್ಬರಾಯ ಎಸ್. ನಂ. 127	ಸುಬ್ಬರಾಯ ಎಸ್. ನಂ 127	ಡಿಟೋ	ಡಿಟೋ 126
				ವೆಂಕಟಿಗ ..	126	ಡಿಟೋ	0	7	ವೆಂಕಟಿಗ ಎಸ್. ನಂ. 126	ವೆಂಕಟಿಗ ಎಸ್. ನಂ. 126	ಡಿಟೋ	ಡಿಟೋ 124
				ವೆಂಕಟರಮಣ .	124	ಡಿಟೋ	0	8	ವೆಂಕಟರಮಣ ಎಸ್. ನಂ. 124	ವೆಂಕಟರಮಣ ಎಸ್. ನಂ. 124	ಡಿಟೋ 126	ಡಿಟೋ 122
				ನಂಜಿಗ ..	121	ಡಿಟೋ	2	21	ನಂಜಿಗ ಎಸ್. ನಂ. 121	ನಂಜಿಗ ಎಸ್. ನಂ. 121	ಡಿಟೋ 122	ಕೆರೆ ಏರಿ
				ವೆಂಕಟ ..	6	ಡಿಟೋ	0	26	ವೆಂಕಟ ಎಸ್. ನಂ. 6	ವೆಂಕಟ ಎಸ್. ನಂ. 6	ಡಿಟೋ 7	ರಸ್ತೆ ಎಸ್. ನಂ. 2
				ವೆಂಕಟಿಗ ಹಜಾಂ ..	140	ಡಿಟೋ	0	14	ವೆಂಕಟಿಗ ಎಸ್. ನಂ. 140	ವೆಂಕಟಿಗ ಎಸ್. ನಂ 140	ಡಿಟೋ 145	ಡಿಟೋ 133
				ಸುಬ್ಬ ...	122	ಡಿಟೋ	0	7	ನಂಜ ಎಸ್. ನಂ. 121	ಸುಬ್ಬ ಎಸ್. ನಂ. 122	ಡಿಟೋ 124	ಡಿಟೋ ನಂ. 121
				ನೌಕರಿ ಇನಾಂ ..	147	ಡಿಟೋ	0	18	ಗ್ರಾಮ ನಿವೇಶನ	ಎಸ್. ನಂ. 145	ಎಸ್. ನಂ. 1 ವ 2	ಎಸ್. ನಂ. 145
				ಜಾಮ್ಲಾ ..			6	23				
				ಎಂ. ಪೆದ್ದನ್ನ ..	2	ಖುಷ್ಕಿ	0	10				
				ಸುಬ್ಬಕ್ಕ	2	ಡಿಟೋ	0	8				
				ಚೌಡಯ್ಯ ..	2	ಡಿಟೋ	0	7	ರಾಮಂಣನ ಎಸ್. ನಂ. 1	ಚೌಡಪ್ಪನ ಎಸ್. ನಂ. 5	ಹಜಾಂ ಇನಾಂ ಮತ್ತು ಎಸ್. ನಂ. 10	ಗಲ್ಲಿ
				ವೆಂಕಟ್ರಮಣ ..	2	ಡಿಟೋ	0	8				

ಡಿಟೋ	ಡಿಟೋ	ಡಿಟೋ	ಚಿಲಕಲನೇರು	ವೆಂಕಟಸುಬ್ಬನ ಭೋಯಿ ...	292	ಡಿಟೋ	0	32	ಲಿಂಗಸೆಟ್ಟಿ ಇನಾಂ ಎಸ್. ನಂ. 296	ವೆಂಕಂಭಟ್ಟು ಎಸ್. ನಂ. 291	ಗಲ್ಲಿ	ಖರಾಬ್ 293
				ಬಿ. ಮುದ್ದುಗ ...	205	ಡಿಟೋ	0	35	ಎಸ್. ನಂ. 208	ಇನಾಂ 5 ಎಸ್. ನಂ. 204	ಖರಾಬ್ ಎಸ್. ನಂ. 283	ಎಸ್. ನಂ. 206
				ವೆಂಕಟಸುಬ್ಬ ...	206	ಡಿಟೋ	0	7	ಡಿಟೋ 207	ನಂ. 204	ಎಸ್. ನಂ. 205	ಡಿಟೋ 194
				ವೆಂಕಟಮ್ಮ ...	206	ಡಿಟೋ	0	7				
				ವಾಸುದೇವಭಟ್ಟ ...	58	ಡಿಟೋ	0	5	ಡಿಟೋ 55	ಎಸ್. ನಂ. 63	ಡಿಟೋ 63	ಡಿಟೋ 55 ವ 57
				ವೆಂಕಟಪ್ರಮ ಹಜಾಂ ...	10	ಡಿಟೋ	0	6	ಡಿಟೋ 1	ಡಿಟೋ 7	ಡಿಟೋ 69 ವ 11	ಡಿಟೋ 2
				ಲಿಂಗಸೆಟ್ಟಿ	294	ಡಿಟೋ	0	20	ಡಿಟೋ 295	ಡಿಟೋ 292	ಗಲ್ಲಿ	ಡಿಟೋ 293
				ಕೆ. ಬಸಪ್ಪ	295	ಡಿಟೋ	0	3	ಡಿಟೋ 296	ಡಿಟೋ 294	ಡಿಟೋ	ಡಿಟೋ
				ಅಕ್ಕಲಗ ಧೋಬಿ ...	204	ಡಿಟೋ	0	4	ಡಿಟೋ 205	ಡಿಟೋ 203	ಎಸ್. ನಂ. 283	ಕೆರೆ. ಎಸ್. ನಂ. 196
				ಹನುಮಂತರಾಯಪ್ಪ	114	ಡಿಟೋ	0	29	ಡಿಟೋ 63	ಡಿಟೋ 113	ಡಿಟೋ 63	ಎಸ್. ನಂ. 63
				ಈಶ್ವರದೇವರ ಇನಾಂ ...	283	ಡಿಟೋ	0	32	ಡಿಟೋ 226	ಡಿಟೋ 284	ಡಿಟೋ 282 ವ 293	ಡಿಟೋ 208, 205, 204 & 203
				ಆಂಜನೇಯಸ್ವಾಮಿ ಇನಾಂ ...	9	ಡಿಟೋ	0	28	ಗಲ್ಲಿ ಮತ್ತು ಎಸ್. ನಂ. 9ವ 11	ಬಂಜರ್ ಜಮೀನು	ಗಲ್ಲಿ	ಎಸ್. ನಂ. 7, 9 ವ 10
				(ಊರು ಮಾದಿಗ ಇನಾಂ) ...	57	ಡಿಟೋ	1	31	ಎಸ್. ನಂ. 55	ಎಸ್. ನಂ. 63	ಎಸ್. ನಂ. 68	ಗಲ್ಲಿ
				ಜುಮ್ಲಾ ...			7	32				
			ಮುನಿಚಿಳ್ಳಹಳ್ಳಿ	ಎಂ. ವೆಂಕಟಪ್ಪ ...	64	ತರಿ	0	25	ಡಿಟೋ 61	ನದಿ	ಡಿಟೋ 61	ಎಸ್. ನಂ. 62 ವ 63
			ಹೊಸಹುಡ್ಯ	ಬಿ. ದಾಸಿಗ ...	6	ಖುಷ್ಕಿ	0	21	ಡಿಟೋ 7 ವ 5	ಎಸ್. ನಂ. 5 ವ 91	ಡಿಟೋ 7	ಡಿಟೋ 5
				ಚಿಕ್ಕವೆಂಕಟ	5	ಡಿಟೋ	0	19	ಡಿಟೋ 6 ವ 15	ತೋಟಿ ಇನಾಂ	ಡಿಟೋ 91	ಡಿಟೋ 2, 18, 3ವ 4
				ಸರ್ಕಾರ ಬಂಜರ್ ...	91	ಡಿಟೋ	0	13	ಡಿಟೋ 6 ವ 7	ಎಸ್. ನಂ. 87 ವ 90	ಖಿದ್ದಲಹಳ್ಳಿ ಗ್ರಾಮದ ಎಲ್ಲೆ	ಡಿಟೋ 1, 5 ವ 92
				ಜುಮ್ಲಾ ...			1	13				
			ಬಿದ್ದಲಹಳ್ಳಿ	ಯರ್ರಣ ...	6	ಡಿಟೋ	0	31	ಕುಶಾವತಿ ಕಾಲವೆ	ಡಿಟೋ 52	ಗ್ರಾಮ ನಿವೇಶನ	ಡಿಟೋ 7
				ಲಕ್ಷ್ಮಿನರಸಿಂಹಭಟ್ಟ ...	7	ಡಿಟೋ	0	31	ಡಿಟೋ	ಡಿಟೋ 8	ಎಸ್. ನಂ. 52 ವ 16	ಡಿಟೋ 9
				ಲಿಂಗಸೆಟ್ಟಿ	9	ಡಿಟೋ	0	17	ಡಿಟೋ	ಎಸ್. ನಂ. 11 ವ 12	ಖರಾಬ್ ಎಸ್. ನಂ. 7 ವ 8	ಡಿಟೋ 91
				ಜುಮ್ಲಾ ...			1	39				

123

253

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಖಾತೆದಾರ್ರ ಹೆಸರು.	ಸರ್ವೆ ನಂ.	ಜಮೀನಿನ ವಿವರ.	ತಗದುಕೊಂಡ ಜಮೀನಿನ ವಿಸ್ತೀರ್ಣ ಎ.	ಗು	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಕೋಲಾರ.	ಸಿಡ್ಲಘಟ್ಟ.	ಚಿಲಕಲನೇರ್ಸು.	ಯಂಡಗಲಿ	ಕೆಂದಪ್ಪ ನಾರಣಪ್ಪ	90	ಖುಷ್ಕಿ	0	25	ಎಸ್. ನಂ. 91	ಎಸ್. ನಂ. 89	ಎಸ್. ನಂ 91	ಎಸ್. ನಂ. 93
				ಚಾವಿಡಪ್ಪ	93	ಡಿಟೋ	0	25	ಡಿಟೋ 91	ಡಿಟೋ 94	ಡಿಟೋ 90 ವ 91	ಡಿಟೋ 2 ವ 3
				ನಲ್ಲಪ್ಪ ಗೊಪ್ಪಪ್ಪ	3	ಡಿಟೋ	0	34	ಡಿಟೋ 91	ಡಿಟೋ 1	ಡಿಟೋ 93	ಡಿಟೋ 6
				ಸರ್ಕಾರ ಬಂಜರು	19	ಡಿಟೋ	0	34	ತೋಪು ಎಸ್. ನಂ. 5	ಡಿಟೋ 17	ಡಿಟೋ 6 ವ 18	ಪಾಪಾಗ್ನಿ ನದಿ
					6	ಡಿಟೋ	2	10	ಎಸ್. ನಂ. 4	ಎಸ್. ನಂ. 18 ವ ಗ್ರಾಮ ನಿವೇಶನ	ಡಿಟೋ 3	ಎಸ್. ನಂ. 19 ಮತ್ತು ನಲ್ಲಪ್ಪನ ಜಮೀನು
				ಜುಮ್ಮಾ ..			5	8				
			ಚೊಕ್ಕಂಡಹಳ್ಳಿ.	ನರಸಪ್ಪ	76	ಡಿಟೋ	0	14	ಡಿಟೋ 16 ವ ಬಂಜರು ಜಮೀನು	ಎಸ್. ನಂ. 1 ನರಸಪ್ಪನ ಖಾತೆ	ಡಿಟೋ 2 ಬಂಜರು ಜಮೀನು	ಎಸ್. ನಂ. 5 ವ 15 ನರಸಪ್ಪನ ಇನಾಮತಿ
				ಡಿಟೋ	15	ಡಿಟೋ	0	3	ಡಿಟೋ	ಗ್ರಾಮ ನಿವೇಶನ	ಕಾನಭೋಗ ನಡ್ಡಪ್ಪನ ಇನಾಂ ಮತ್ತು ಎಸ್. ನಂ. 1ವ 76	ಕೊನಗನ ಖಾತೆ ಎಸ್. ನಂ. 16
				ಜುಮ್ಮಾ ...			0	17				
				ರಾಮುಂಣ	55	ಡಿಟೋ	1	7	ಖರಾಬ್ ವ ಬೈರಗನ ಖಾತೆ ಎಸ್. ನಂ. 56	ಖರಾಬ್ ಎಸ್. ನಂ. 5	ಖರಾಬ್ ಎಸ್. ನಂ. 5	ಚೌಡಿಗನ ಎಸ್. ನಂ. 54
				ಚಾವಪ್ಪ	54	ಡಿಟೋ	0	22	ತೋಪು ಎಸ್. ನಂ. 57	ಖರಾಬ್ ಎಸ್. ನಂ. 53	ಎಸ್. ನಂ. 55 ರಾಮುಂಣನ ಖಾತೆ	ರಾಮುಂಣನ ಖಾತೆ ಎಸ್. ನಂ. 18
				ಸರ್ಕಾರ ಬಂಜರ್	17	ಡಿಟೋ	0	28	ಖರಾಬ್ ಎಸ್. ನಂ. 5	ರಾಮಯ್ಯನ ಜಮೀನು ಎಸ್. ನಂ. 18	ಖರಾಬ್ ಎಸ್. ನಂ. 5	ಖರಾಬ್ ಎಸ್. ನಂ. 5
				ಜುಮ್ಮಾ ..			2	17				
				ಒಟ್ಟು ಜುಮ್ಮಾ ..			26	14				

1233

ತಾರೀಖು 28ನೆ ಜುಲೈ 1904.

ನಂ. ರೆ. 697—31–10, ಮೈಸೂರು ಸರ್ವಿಸ್ ರೆಗ್ಯುಲೇಷ್ಗಳ 188ನೆ ಆರ್ಟಿಕಲ್ ಅನುಸರಿಸಿ ಹೊಸದುರ್ಗದ ತಾಲ್ಲೂಕಿನ ಆಮಲ್ದಾರ್ರಾದ ಮೆ|| ಕೆ. ಹನುಮಂತರಾಯರಿಗೆ 1904ನೆ ಜನವರಿ 7ನೆ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಲ್ಪಟ್ಟಿರುತ್ತೆ. ಸದರೀ ಯವರು ಮೇಲ್ಕಂಡ ರಜಾದಲ್ಲಿದ್ದ ಕಾಲದಲ್ಲಿ ಪರಿಹರದ ಡೆಪ್ಯುಟಿ ಅಮಲ್ದಾರ್ರಾದ ಮಹಮದ್ಬೀರ್ ಯವರು ಹೊಸದುರ್ಗದ ತಾಲ್ಲೂಕಿನ ಅಮಲ್ದಾರ್ರಾಗಿ ಬದಲಿ ಕೆಲಸ ನೋಡಿದರು. ದಾವಣಗೆರೆ ತಾಲ್ಲೂಕಿನ ಅಮಲ್ದಾರ್ರು, ತಮ್ಮ ಕೆಲಸದೊಂದಿಗೆ, ಹರಿಹರ ಸಬ್ ತಾಲ್ಲೂಕಿನ ಚಾರ್ಜ್ನಲ್ಲಿದ್ದರು.

ತಾರೀಖು 28ನೆ ಜುಲೈ 1904.

ನಂ. ರೆ. 704–71–3, ಮೆ|| ಎಚ್. ವಿ. ನಂಜುಂಡಯ್ಯನವರು ಮೈಸೂರ ಜೀಫ್ ಕೋರ್ಟ್ನ ಜಡ್ಜ್ರಾಗಿ ಮೊಕರರ್ರ್ಮಾಡಲ್ಪಟ್ಟಿರುವದ್ದರಿಂದ ಇದರಡೀ ಕಂಡ ಬಡ್ತಿಗಳು ಹುಕುಂ ಮಾಡಲ್ಪಟ್ಟಿರುತ್ತವೆ :—

ಸಬ್ ಪ್ರೋಟೆಂ ಎರಡನೇ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಕೆ. ಪಿ. ಪುಟ್ಟಣ್ಣ ಚೆಟ್ಟಿಯವರು ಸದರೀ ಕ್ಲಾಸಿನಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ಮೂರನೇ ಕ್ಲಾಸಿನ ಅಫೀಷ್ಯಿಯೇಟಿಂಗ್ ಡೆಪ್ಯುಟಿ ಕಮಿಷನರಾದ ಮೆ|| ಕೆ. ಎಸ್. ದೊರಸ್ವಾಮಿ ಅಯ್ಯರ್ ಯವರು ಮೂರನೇ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 28ನೆ ಜುಲೈ 1904.

ನಂ. ರೆ. 711–71–5, ಮೆ|| ಬಿ. ಕೆ. ವೆಂಕಟವರದಯ್ಯಂಗಾರ್ರು ಸೆಕ್ರಿಟರಿಯವರಾಗಿ ಮೊಕರರ್ರ್ಮಾಡಲ್ಪಟ್ಟಿರುವದ್ದರಿಂದ ಇದರಡೀ ಕಂಡ ಬಡ್ತಿಗಳು 1904ನೆ ಜುಲೈ ಗುರ್ರೀ ತಾರೀಖಿನಾರಭ್ಯ ಹುಕುಂ ಮಾಡಲ್ಪಟ್ಟಿರುತ್ತವೆ :—

ಸಬ್ ಪ್ರೋಟೆಂ ಮೊದಲನೆ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಎಚ್. ಎಚ್. ಸ್ಪಾರ್ಕ್ಸ್ ಯವರು ಸದರೀ ಕ್ಲಾಸಿನಲ್ಲಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ಎರಡನೇ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಎಂ. ನಾರಾಯಣರಾಯರು ಸಬ್ ಪ್ರೋಟೆಂ ಮೊದಲನೇ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿರತಕ್ಕದ್ದು.

ಮೂರನೇ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಡಿ. ದೇವರಾಜೆ ಅರಸಿನವರು ಸಬ್ ಪ್ರೋಟೆಂ ಎರಡನೇ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿರತಕ್ಕದ್ದು.

ಮೂರನೇ ಕ್ಲಾಸಿನ ಅಫೀಷಿಯೇಟಿಂಗ್ ಡೆಪ್ಯುಟಿ ಕಮಿಷನರಾದ ಮೆ|| ಎಂ. ಕಾಂತರಾಜೆ ಅರಸ್, ಬಿ. ಎ., ಯವರು ಸಬ್ ಪ್ರೋಟೆಂ ಸದರೀ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿರತಕ್ಕದ್ದು.

ತಾರೀಖು 28ನೆ ಜುಲೈ 1904.

ನಂ. ರೆ. 717–71–6, ಇದರಡೀ ಕಂಡ ಆಕ್ಟಿಂಗ್ ಬಡ್ತಿಗಳು 1904ನೆ ಜುಲೈ ಗುರ್ರೆ ತಾರೀಖಿನಾರಭ್ಯ ಮಂಜೂರ್ಮಾಡಲ್ಪಟ್ಟಿರುತ್ತವೆ :—

ಎರಡನೇ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಎಂ. ಎಸ್. ನಾರಾಯಣರಾಯರು ಮೊದಲನೇ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿ ಆಕ್ಟಿಂಗು ತರೀಕು ಕೆಲಸ ನೋಡತಕ್ಕದ್ದು.

ಮೂರನೇ ಕ್ಲಾಸಿನ ಡೆಪ್ಯುಟಿ ಕಮಿಷನರಾದ ಮೆ|| ಎಚ್. ರಾಮಾನುಜಯ್ಯಂಗಾರ್ರು ಎರಡನೇ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿ ಆಕ್ಟಿಂಗ್ ತರೀಕು ಕೆಲಸ ನೋಡತಕ್ಕದ್ದು.

ಮೆ|| ಪಿ. ಆರ್. ಡಬ್ಲ್ಯೂ. ವೆದರಾಲ್ ಯವರು ಸಬ್ ಪ್ರೋಟೆಂ ಮೂರನೇ ಕ್ಲಾಸಿನ ಡೆಪ್ಯುಟಿ ಕಮಿಷನರಾಗಿ ಅಫೀಷಿಯೇಟಿಂಗ್ ತರೀಕಿನಂತೆ ಇರತಕ್ಕದ್ದು.

ತಾರೀಖು 28ನೆ ಜುಲೈ 1904.

ನಂ. ರೆ. 725—13–2, ಮೈಸೂರು ಸರ್ವಿಸ್ ರೆಗ್ಯುಲೇಷ್ಗಳ 165 A. ನೇ ಆರ್ಟಿಕಲ್ ಅನುಸರಿಸಿ, ಫಾರೆಸ್ಟಿನ ಡೆಪ್ಯುಟಿ ಕನ್ಸರ್ವೇಟರಾದ ಮೆ|| ಎಂ. ವೆಂಕಟನಾರಣಪ್ಪನವರಿಗೆ 1904ನೆ ಮೇ 7ನೆ ಮಕ್ಕಂ 809—9210ನೆ ಮತ್ತು 1904ನೆ ಮೇ 31ನೆ ಮಕ್ಕಂ 896—10031ನೆ ನಂಬರ್ ಇಸ್ತಿಹಾರ್ನಾಮೆಗಳಲ್ಲಿ ಮಂಜೂರ್ಮಾಡಲ್ಪಟ್ಟಿದ್ದ 3 ತಿಂಗಳುಗಳ ಪ್ರಿವಿಲೇಜ್ ರಜಾದೊಂದಿಗೆ ಸೇರಿದ 6 ತಿಂಗಳುಗಳ ರಜಾ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಡಲ್ಪಟ್ಟಿರುತ್ತೆ.

ತಾರೀಖು 28ನೆ ಜುಲೈ 1904.

ನಂ. ರೆ. 745—192–2, ಹೊಳಲಕೆರೆ ತಾಲ್ಲೂಕಿನ ಷಿರಿಸ್ತೆದಾರ್ರಾದ ಕೆ. ರಾಮರಾಯರು 1903ನೇ ಜುಲೈ 4ನೆ ತಾರೀಖಿನಾರಭ್ಯ 1904ನೆ ಜನವರಿ 31ನೆ ತಾರೀಖಿನ ವರೆವಿಗೆ ಸದರೀ ತಾಲ್ಲೂಕಿನ ಅಮಲ್ದಾರ್ ವ ಮೂರನೇ ಕ್ಲಾಸ್ ಮಾಜಿಸ್ಟ್ರೇಟ್ರಾಗಿ ಆಕ್ಟಿಂಗ್ ತರೀಕು ಕೆಲಸ ನೋಡಿದರು.

256

ತಾರೀಖು 1ನೆ ಆಗಸ್ಟು 1904.

ನಂ. ರೆ. 801—19-1, ಸನ್ 1900ನೆ ಇಸವಿಯ XIನೆ ನಂಬರ್ ಮೈಸೂರ್ ಸೀಮೆಯ ಫಾರೆಸ್ಟು ರೆಗ್ಯುಲೇಷನ್ 4ನೆ ಸೆಕ್ಷನಿನ ವಿಧಿಗಳನುಸರಿಸಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಮೇಲ್ಕಂಡ ರೆಗ್ಯುಲೇಷನಿನ ವಿಧಿಗಳಂತೆ ಸ್ಟೇಟ್ ಫಾರೆಸ್ಟಾಗಿ ಏರ್ಪಡತಕ್ಕದ್ದೆಂದು ಯೋಚಿಸಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಬ್ಯಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಚೆಂಗಳೂರು.	ಮಾಗಡಿ.	4·29 ಚದರ ಮೈಲಿಗಳು.	ಅದರಂಗಿ ಫಾರೆಸ್ಟು.	ಸ್ಥಳ.—ಇದು ಅದರಂಗಿ ಗ್ರಾಮದ ಉತ್ತರಕ್ಕೆ ಇರುತ್ತದೆ. **ಚಕ್ಕುಬಂದಿ.** ಉತ್ತರಕ್ಕೆ.—ಎಲ್ಲೆ ಲೈನು ಶ್ರೀಗಿರಿಪುರದ ಸರ್ವೆ ನಂ. 157ರ ಈಶಾನ್ಯ ಮೂಲೆಯಿಂದ ಹೊರಟು ವೀರಸಾಗರದ ಸರ್ವೆ ನಂ. 12ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 12ರ ಪೂರ್ವ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಮತ್ತು ಸರ್ವೆ ನಂ. 13ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 13, 53, 47 ವ 64 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಸರ್ವೆ ನಂ. 48ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಕಂಬಾಳದ ಸರ್ವೆ ನಂ. 114ರ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರು ಮತ್ತು ಸರ್ವೆ ನಂ. 109, 110 ವ 111 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಖೈರ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 111ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಮೈಲಿನಹಳ್ಳಿಯ ಸರ್ವೆ ನಂ. 45ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 44ರ ವಾಯುವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ. ತರುವಾಯ ಭೈರಸಂದ್ರ ಗ್ರಾಮದ ಪಶ್ಚಿಮ ಎಲ್ಲೆಯ ಉದ್ದಕ್ಕೂ ಉಡುಕುಂಟೆ ಗ್ರಾಮದ ಸರ್ವೆ ನಂ. 119ರ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 119 ವ 109 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ವೀರಾಪುರದ ಸರ್ವೆ ನಂ. 19 ವ ಅದರಂಗಿಯ ಸರ್ವೆ ನಂ. 84 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 81ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಉತ್ತರ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 80ರ ಉತ್ತರ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 89ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 89 ವ 90 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 47ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋ

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಬ್ಯಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಬೆಂಗಳೂರು.	ಮಾಗಡಿ.	4·29 ಚದರ ಮೈಲಿಗಳು.	ಅದರಂಗಿ ಫಾರೆಸ್ಟು.	ಗುತ್ತದೆ. ಆಮೇಲೆ ಸರ್ವೆ ನಂ. 47, 48, 49, 120, 72, 73 ವ 74 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಅತ್ಯಂತ ಉತ್ತರ ಮೂಲೆಗೆ ಹೋಗುತ್ತದೆ. ತರುವಾಯ ಕಾಗಿಮಡುವಿನ ಪೂರ್ವ ವ ಉತ್ತರ ಎಲ್ಲೆಗಳ ಉದ್ದಕ್ಕೂ ಬೆಟ್ಟಹಳ್ಳಿಯ ಸರ್ವೆ ನಂ. 73ರ ಆಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಆಮೇಲೆ ಬೆಟ್ಟಹಳ್ಳಿಯ ಸರ್ವೆ ನಂ. 73 ವ 62 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 68ರ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಶ್ರೀಗಿರಿಪುರದ ಸರ್ವೆ ನಂ. 22ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ನಂಬರ್ ಮತ್ತು ಸರ್ವೆ ನಂ. 163, 139, 162, 138, 161, 26, 160 ವ 27 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 28ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 28, 29 ವ 157 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟ ಸ್ಥಳಕ್ಕೆ ಹೋಗುತ್ತದೆ.

2. ಮೇಲ್ಕಂಡ ಸೆಕ್ಷನಿನ (c) ಕ್ಲಾಜ್ ಅನುಸರಿಸಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, ಅಂತಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನಿನ ಮೇಲಾದರೂ ಅಥವಾ ಅಂತಾ ಜಮೀನಿನ ಯಾವ ಫಾರೆಸ್ಟು ಉತ್ಪತ್ತೀಗಾದರೂ ಯಾವ ಮನುಷ್ಯನಿಂದಾಗಲಿ ನಮೂದಾಗುವ ಅಥವಾ ಅವನ ಪಕ್ಷವಾಗಿ ಇರುವದಾಗಿ ಹೇಳಿಕೊಳ್ಳುವ ಯಾವ ಹಕ್ಕುಗಳ ಇರ.ವಿಕೆ, ಸ್ವಭಾವ ಮತ್ತು ವ್ಯಾಪ್ತಿಯನ್ನು ವಿಚಾರಿಸಿ ತಿರ್ಮಾನಿಸಲು ಮತ್ತು ಮೇಲ್ಕಂಡ ರೆಗ್ಯುಲೇಷನಿನ IIನೆ ಅಧ್ಯಾಯದಲ್ಲಿ ವಿಧಿಸಿರುವಂತೆ ಅಂತಾ ಸಂಗತಿಗಳ ವಿಚಾರವಾಗಿ ಅಮಲ್ ನಡಿಸಲು, ಎಕಸ್ಟ್ರಾ ಅಸಿಸ್ಟೆಂಟ್ ಕಮೀಷನರಾದ ಮೆ|| ಎ. ಆನಂದರಾಯರನ್ನು ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಾಗಿರಬೇಕೆಂದು ಮೊಕರರ್ಮಾಡಿರುತ್ತಾರಲ್ಲದೆ ವಿಚಾರಣೆಯಲ್ಲಿ ಸದರೀ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರಿಗೆ ಸಹಾಯ ಮಾಡಲು ತತ್ಕಾಲದ ಬೆಂಗಳೂರ ಡಿಸ್ಟ್ರಿಕ್ಟಿನ ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರರು ಸರ್ಕಾರದ ತರ್ಫಿನಲ್ಲಿ ಹಾಜರು ಇರಬೇಕೆಂತಲೂ ಆಜ್ಞಾಪಿಸಿರುತ್ತಾರೆ.

3. ಮತ್ತು ಸದರೀ ರೆಗ್ಯುಲೇಷನಿನ 15ನೆ ಸೆಕ್ಷನ್ನಿಂದ ತಮಗೆ ಇರುವ ಅಧಿಕಾರವನ್ನು ಅನುಸರಿಸಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, ಸದರೀ ರೆಗ್ಯುಲೇಷನಿನ 10, 11, 12, 13 ಅಥವಾ 14ನೆ ಸೆಕ್ಷನ್‌ಗಳಂತೆ ಫಾರೆಸ್ಟ್ ಸೆಟ್ಲಮೆಂಟ್ ಆಫಿಸರರು ಮಾಡಿದ ಹುಕುಂಗಳ ಮೇಲಣ ಅಪೀಲ್ಗಳನ್ನು ಹಿಡಿಯತಕ್ಕ ರೆವಿನ್ಯೂ ಇಲಾಖೆಯ ಆಫಿಸರಾಗಿರಬೇಕೆಂದು ತತ್ಕಾಲದ ಬೆಂಗಳೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರನ್ನು ಮೊಕರರ್ಮಾಡಿರುತ್ತಾರೆ.

ತಾರೀಖು 29ನೆ ಜುಲೈ 1904.

ನಂ. ರೆ. 765—24--2, ಕೋಲಾರ ಡಿಸ್ಟ್ರಿಕ್ಟಿನ ಫಾರೆಸ್ಟ್ ಡೆಪ್ಯುಟಿ ಕನ್‌ಸರ್‌ವೇಟರಾದ ಮೆ|| ಎಸ್. ಎ. ಬಾಪುರಾಯರಿಗೆ 1904ನೆ ಜೂನ್ 6ನೆ ಮರ್ಕುಂ 907—10136ನೆ ಮತ್ತು 1904ನೆ ಜುಲೈ 13ನೆ ಮರ್ಕುಂ ರೆ. 63—9--11ನೆ ನಂಬರ್ ಇಸ್ತಿಹಾರ್ನಾಮೆಗಳಲ್ಲಿ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಟ್ಟಿದ್ದ 2 ತಿಂಗಳುಗಳ ರಜಾ ಇನ್ನೂ 2 ವಾರಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 30ನೆ ಜುಲೈ 1904.

ನಂ. ರೆ. 786—284-7, ಷೆಡ್ಯೂಲ್ A. ಎರಡನೇ ಕ್ಲಾಸಿನ ಅಸಿಸ್ಟೆಂಟ್ ಕಮೀಷನರಾದ ಮೆ|| ಕೆ. ಕೃಷ್ಣ ಅಯ್ಯರ್ ಯವರು 1903ನೆ ಮೇ 25ನೆ ತಾರೀಖಿನಾರಭ್ಯ ಮೊದಲನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

D

ತಾರೀಖು 1ನೆ ಆಗಸ್ಟು 1904.

ನಂ. ಫೈ. 696—ಜ. ಫೈ. 42—04, ಮೈಸೂರ ಸರ್ವಿಸ್ ರೆಗ್ಯುಲೇರ್ಷಗಳ 218ನೆ ಆರ್ಟಿಕಲ್ ಅನುಸರಿಸಿ ಕರ್ಟ್ರೋಲ ರ)ವರ ಚೀಫ್ ಅಸಿಸ್ಟೆಂಟರಾದ ಮೆ|| ಟಿ. ವೈಯಾಪುರಿಚೆಟ್ಟಿ ಯವರಿಗೆ 1904ನೆ ಜುಲೈ 18ನೆ ಮರ್ಕುಂ ಫೈ. 320—ರೆ. ಫೈ. 142—96ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮಂಜೂರ್ಮಾಡಲ್ಪಟ್ಟಿದ್ದ 1 ತಿಂಗಳ ರಜಾದೊಂದಿಗೆ ಇನ್ನೂ 1 ತಿಂಗಳು ರಜಾ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಕೊಟ್ಟಿರುತ್ತೆ.

ತಾರೀಖು 1ನೆ ಆಗಸ್ಟು 1904.

ನಂ. ರೆ. 821—33-3, ರಾಯಿಬಹದೂರ್ ಮೆ|| ಎಂ. ಮುತ್ತಂಣನವರು ಮೈಸೂರ ಸೀಮೆಯ ಫಾರೆಸ್ಟು ಕನ್ಸರ್ವೇಟರವರ ಉದ್ಯೋಗದಲ್ಲಿ ಅಫೀಷಿಯೇಟಿಂಗ್ ತರೀಕು ಮೊಕರರ್ಮಾಡಲ್ಪಟ್ಟ 1901ನೆ ಡಿಸೆಂಬರ್ 23ನೆ ತಾರೀಖಿನಾರಭ್ಯ ಮೈಸೂರ ಸೀಮೆಯ ಫಾರೆಸ್ಟು ಕನ್ಸರ್ವೇಟರಾಗಿ ಕಾಯಂ ಮಾಡಲ್ಪಟ್ಟಿರುತ್ತಾರೆ.

ತಾರೀಖು 1ನೆ ಆಗಸ್ಟು 1904.

ನಂ. ರೆ. 827—46-2, ಮಾಲೂರು ತಾಲ್ಲೂಕಿನ ಅಮಲ್‌ದಾರ್ರಾದ ಮೆ|| ಸಿ. ಮಾಚಯ್ಯನವರು ರಜಾದಲ್ಲಿರುವ ಕಾಲದಲ್ಲಿ ಮಾಲೂರು ತಾಲ್ಲೂಕಿಗೆ ಹಂಗಾಮಿಯಾಗಿ ನೇಮಿಸಲ್ಪಟ್ಟಿದ್ದ ಅಮಲ್‌ದಾರ್ರಾದ ಮೆ|| ಅಬ್ದುಲ್‌ಜಲೀಲ್ ಯವರು ಬಾಗೇಪಲ್ಲಿ ತಾಲ್ಲೂಕಿಗೆ ನೇಮಿಸಲ್ಪಟ್ಟಿರುತ್ತಾರೆ.

ಅಮಲ್‌ದಾರ್ರಾದ ಮೆ|| ಸಿ. ಮಾಚಯ್ಯನವರಿಗೆ ಚಾರ್ಜ್ ವಪ್ಪಿಸಿದ ನಂತರ ಕೆಲಸಕ್ಕೆ ದಾಖಲಾಗತಕ್ಕದ್ದು.

ಹುಕುಂ ಬಮೋಜೇಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟರಿ.

ಪಬ್ಳಿಕ್ ವರ್ಕ್ಸ್.

ಇಸ್ತಿಹಾರ್ನಾಮಾ.

ತಾರೀಖು 30ನೆ ಜುಲೈ 1904.

ನಂ. 838—4513, ತುಮಕೂರು ಡಿವೀಜನಿಗೆ ಸೇರಿದ ಅಸಿಸ್ಟೆಂಟ್ ಇನ್‌ಜನಿಯರಾದ ಮೆ|| ಎಚ್. ಡಿ. ರೈಸ್ ಯವರಿಗೆ ಮಾಹೆ ಮಜಕೂರು ಗುರ್ರೆ ತಾರೀಖಿನಾರಭ್ಯ 16 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿತ್ತು.

ತಾರೀಖು 1ನೆ ಆಗಸ್ಟ್ 1904.

ನಂ. 847—4550, ಸನ್ 1904ನೆ ಜುಲೈ 26ನೆ ತಾರೀಖು ಮದರಾಸು ಫೋರ್ಟ್ ಸೆಂಟ್‌ಜಾರ್ಜ್ ಗೆಜೆಟ್ಟಿನ ಇದರಡೀ ಕಂಡ ಎಕ್‌ಸ್ಟ್ರಾಕ್ಸು ತಿಳುವಳಿಕೆ ಬಗ್ಯೆ ಪುನಃ ಫಾಯಿಷ್ಮಾಡಲ್ಪಟ್ಟಿರುತ್ತೆ :—

ಪಬ್ಳಿಕ್ ವರ್ಕ್ಸ್ ಇಲಾಖಾ.

ಬಡ್ತಿಗಳು.

ನಂ. 77, 19ನೆ ಜುಲೈ 1904, ಉದಕಮಂಡಲ.

ಇದರಡೀ ಕಂಡ ಬಡ್ತಿಗಳು 1904ನೆ ಮಾರ್ಚಿ 31ನೆ ತಾರೀಖಿನಾರಭ್ಯ ಹುಕುಂ ಮಾಡಲ್ಪಟ್ಟಿರುತ್ತವೆ :—

* * * *

ಮೆ|| ಜಾನ್ ಜೋಸಫ್ ವ್ಹೈಟ್ಲಿ ಯವರು, ಸೂಪರ್‌ನ್ಯೂಮೆರರಿ ಹಂಗಾಮಿ ಮೂರನೇ ಕ್ಲಾಸಿನ ಸೂಪರ್ಣಟೆಂಡಿಂಗ್ ಇಂಜನಿಯರ್‌ನಿಂದ ಸಬ್‌ಸ್ಟಾಂಟಿವ್ ಪ್ರೋಟೆಂ ಸೂಪರ್‌ನ್ಯೂಮೆರರಿ ಮೂರನೇ ಕ್ಲಾಸಿನ ಸೂಪರ್ಣಟೆಂಡಿಂಗ್ ಇಂಜನಿಯರಿಗೆ.

(ಸೈನ್‌ಡ್) ಡಬ್ಲ್ಯೂ. ಬಿ. ಡೀರ್ವಿಟನ್,
ಪಬ್ಳಿಕ್ ವರ್ಕ್ಸ್ ಇಲಾಖಾ ಗವರ್ನಮೆಂಟ್ ಸೆಕ್ರಿಟರಿ.

ತಾರೀಖು 2ನೆ ಆಗಸ್ಟು 1904.

ನಂ. 852—4580, ಮೈಸೂರು ಪಬ್ಳಿಕ್ ವರ್ಕ್ಸ್ ಇಲಾಖಾ ಇನ್‌ಜನಿಯರ್ ಸಿಬ್ಬಂದಿಯಲ್ಲಿ ಇದರಡೀ ಕಂಡ ಬಡ್ತಿಯು 1904ನೆ ಆಗಸ್ಟು ಗುರ್ರೆ ತಾರೀಖಿನಾರಭ್ಯ ಹುಕುಂ ಮಾಡಲ್ಪಟ್ಟಿರುತ್ತೆ :—

ಹೆಸರು.	ಹಾಲಿ ಕ್ಲಾಸು.	ಬಡ್ತಿ ಮಾಡಲ್ಪಟ್ಟ ಕ್ಲಾಸು.	ಬಡ್ತಿಯ ಸ್ವಭಾವ.	ಷರಾ.
ಮೆ|| ಎಫ್. ಸ್ಟೀಲ್ ಯವರು.	ಮೂರನೇ ಕ್ಲಾಸಿನ ಸೂಪರ್ ವೈಜರ್ ವ ಆನೊರರಿ ಅಸಿಸ್ಟೆಂಟ್ ಇನ್‌ಜನಿಯರು.	ಎರಡನೇ ಕ್ಲಾಸಿನ ಅಸಿಸ್ಟೆಂಟ್ ಇನ್‌ಜನಿಯರು.	ಕಾಯಂ.	ಸೂಪರ್‌ನ್ಯೂಮೆರರಿ.

ಹುಕುಂ ಬಮೋಜೇಬ್,
ಡಬ್ಲ್ಯೂ. ಮೆಕ್‌ಹರ್ಚೀನ್,
ಪಬ್ಳಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಸೆಕ್ರಿಟರಿ.

1232

ಜಿಯೋಲಾಜಿಕಲ್.

ಇಸ್ತಿಹಾರ್ನಾಮೆ.

ತಾರೀಖು 27ನೆ ಜುಲೈ 1904.

ನಂ. 45--ಎಸ್., ಮೈಸೂರು ಜಿಯೋಲಾಜಿಕಲ್ ಇಲಾಖೆಯ ಅಪ್ರೆಂಟಿಸ್ ಭೂರಚನಾ ಶಾಸ್ತ್ರಜ್ಞರಾದ ಮೆ॥ ಪಿ. ಸಂಪತ ಯ್ಯಂಗಾರ್, ಎಂ. ಎ., ಯವರು 1903ನೆ ಡಿಸೆಂಬರ್ 13ನೆ ತಾರೀಖಿನಾರಭ್ಯ ಮೂರನೇ ಕ್ಲಾಸ್ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರ ಗ್ರೇಡಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 29ನೆ ಜುಲೈ 1904.

ನಂ. 50—ಎಸ್., ಮೈಸೂರ ಸರ್ವಿಸ್ ರೆಗ್ಯುಲೇಷಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರು ಜಿಯೋಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ಮೆ॥ ಎಚ್. ಕೆ. ಸ್ಲೇಟರ್ ಯವರಿಗೆ 1904ನೆ ಜುಲೈ 5ನೆ ತಾರೀಖಿನಾರಭ್ಯ 1 ತಿಂಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 30ನೆ ಜುಲೈ 1904.

ನಂ. 56—ಎಸ್., ಮೈಸೂರ ಜಿಯೋಲಾಜಿಕಲ್ ಇಲಾಖೆಯ ರಿಜಿಸ್ಟ್ರಾರಾದ ಮೆ॥ ಬಿ. ಸುಬ್ಬರಾವ್, ಬಿ. ಎ., ಯವರಿಗೆ 1904ನೆ ಮೇ 25ನೆ ಮರ್ಕುಂ 736—ಎಸ್. ನೆ ನಂಬರ್ ಜಿಯೋಲಾಜಿಕಲ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಪ್ರಿವಿಲೇಜ್ ರಜಾಮೊಂದಿಗೆ 1904ನೆ ಜುಲೈ 18ನೆ ತಾರೀಖಿನಾರಭ್ಯ ಮೈಸೂರ ಸರ್ವಿಸ್ ರೆಗ್ಯುಲೇಷಗಳ 165 A. ನೆ ಆರ್ಟಿಕಲ್ ಅನುಸರಿಸಿ ಮೂರು ತಿಂಗಳುಗಳ ಫರ್ಲೋ ರಜಾ ಕೊಡಲ್ಪಟ್ಟಿರುತ್ತೆ.

2. ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ಮೆ॥ ಎ. ಟಿ. ಸೆಟ್ಟ್ಲೂರ್, ಎಲ್. ಸಿ. ಇ., ಯವರು ತಮ್ಮ ಕೆಲಸದೊಂದಿಗೆ ಮೆ॥ ಸುಬ್ಬರಾಯರು ಫರ್ಲೋ ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ರಿಜಿಸ್ಟ್ರಾರವರ ಜಾಲ್ತಿ ಕೆಲಸಗಳ ಚಾರ್ಜಿನಲ್ಲಿಯೇ ಇರತಕ್ಕದ್ದು.

ಹುಕುಂ ಬಮೋಜೀಬ್,
ಡಬ್ಲ್ಯೂ. ಎಫ್. ಸ್ಮೀತ್,
ಜಿಯೋಲಾಜಿಕಲ್ ಇಲಾಖೆಯ ಗವರ್ನಮೆಂಟ್ ಸೆಕ್ರಟರಿ.

260
1239

ಮೈಸೂರ ಗೆಜಿಟ್ಟು.

ಸಂ. 39.] ಸರ್ಕಾರದಿಂದ ಪ್ರಾಂಯಿಸ್ ಆದ್ದು. [ನಂ. 31.

ಬೆಂಗಳೂರು, ಗುರುವಾರ, ಆಗೆಸ್ಟು ತಾ|| 4, ಸೆ೯ 1904.

IIನೆ ಭಾಗ.

ಇಂಡ್ಯಾಗವರ್ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗ್ಯೆರೆಯಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್ನಾಮೆ.

ನಂ. I. ತಾರೀಖು 29ನೆ ಜುಲೈ 1904.

ಇನಾಂದಾರರ್ಗೆ ಇದರಿಂದ ತಿಳಿಯುಪಡಿಸುವದೇನಂದರೆ, ನಂಜನಗೂಡು ತಾಲ್ಲೂಕಿನಲ್ಲಿರತಕ್ಕ ಟಿಲ್ಲರೆ ಇನಾಂಗಳ ಬಾಬತು 156 ಫೈನಲ್ ಟೈಟಲ್ ಡೀಡ್‌ಯಾನೆ ಖಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯೂಟಿ ಕವಿಾಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವೆ.

2. ಸದರಿ ತಾಲ್ಲೂಕಿನ ಅಮಲ್‌ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದವ್ಕೇಲೆ ಅವುಗಳನ್ನ ತೆಗದುಕೊಳ್ಳುವ ಬಗ್ಯೆ ಸದರಿ ಇನಾಂದಾರರು ಐರ್ಜ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್‌ದಾರ್ರು ಅಂಥಾ ನೋಟೀಸುಗಳನ್ನು ದೇರ್ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾರೆ.

3. ಸದರಿ ಟಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲಿ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟ್ಯರು ತ್ತೆಂದು ಇದರ ದೆಕೆಯಿಂದ ಪ್ರಕಟಿಸಲ್ಪಟ್ಟು ಇರುತ್ತ.

ಜೆ. ಪಿ. ಗ್ರಾಂಟ್,
ಸೂಪರ್‌ಟೆಂಡೆಂಟ್ ಆಫ್ ಇನಾಂ ಸೆಟಲಿಮೆಂಟ್ಸ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷ್ಯ.

ತಾರೀಖು 20ನೆ ಜುಲೈ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯುಪಡಿಸುವದೇನಂದರೆ :—ಬೆಂಗಳೂರು ಡಿಸ್ಟ್ರಿಕ್ಟ್ ಕಾನಕಾನಹಳ್ಳಿ ಫಾರೆಸ್ಟ್ ರೇಂಜಿಗೆ ಕೇರಿದ ಬಿಳಿಕಲ್ ಮತ್ತು ಚಿಲಂದಾಡಿ ಸ್ಟೇಟ್ ಫಾರೆಸ್ಟ್ಟುಗಳಲ್ಲಿ ಇರುವ ಪಪ್ಪಳೀ ಚಕ್ಕೆ 1904–1905ನೆ ಸಾಲು ಬಾಬತು 1905ನೆ ಜೂನ್ ಆಖ್ಯೆರ್‌ವರಿವಿಗೆ ರೂಢಿಸಿಕೊಳ್ಳುವ ಹಕ್ಕನ್ನು 20—8—1904ನೆ ಮುಕ್ತಂನಲ್ಲಿ ಕಾನಕಾನಹಳ್ಳಿ ವೊಕ್ಕಾಂನಲ್ಲಿ ರೇಂಜ್ ಫಾರೆಸ್ಟ್ ಆಫಿಸರವರು ಬಹಿರಂಗವಾಗಿ ಹರಾಜು ಮಾಕುವರು. ಈ ಹರಾಜು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಮುಂಜಾರಾತಿಗೆ ಬಳಪಟ್ಟ್ಯರುತ್ತ.

1. ಚಡದರಖಾಸ್ತು ದಾರನು ಹರಾಜು ಖ್ಯೆಮಾದ ಕೂಡ್ಲೆ ಒಟ್ಟು ವೊಬಲಗಿನ ಪೈಕಿ ಕಾಲುಹಿಸ್ಸೆ ವೊಬಲಗನ್ನು ಪಾವತಿ ಮಾಡತಕ್ಕದ್ದು. ಈರೀತಿ ಮಾಡದೆ ತಪ್ಪಿದಲ್ಲಿ ದುಸರಾ ಹರಾಜು ಮಾಡಲ್ಪಡುವದಲ್ಲದೆ ಸರ್ಕಾರಕ್ಕೆ ಉಂಟಾಗುವ ನಷ್ಟಕ್ಕೆ ಪೂರು ದರಖಾಸ್ತುದಾರನನ್ನು ಗುರಿಮಾಡಲ್ಪಡುತ್ತೆ. ಆದರೆ ಫಾಯಿದೆ ವುಂಟಾದಲ್ಲಿ ಈತನು ಭಾಗಿಯಾಗುವದಿಲ್ಲ.

2. ದರಖಾಸ್ತುದಾರನಿಗೆ ದರಖಾಸ್ತು ಮಂಜೂರಾದ ಸಂಗತಿಯನ್ನು ತಿಳಿಸಿದ ಬಂದು ವಾರದೊಳಗಾಗಿ ಬಾಕಿ ಆಗುವ ಎಲ್ಲಾ ವೊಬಲಗನ್ನೂ ಪಾವತಿ ಮಾಡಬೇಕು. ಹಾಗೆ ಸದರೀ ಹಣವನ್ನು ಪಾವತಿ ಮಾಡದೇ ತಪ್ಪಿದಲ್ಲಿ ವೊದಲು ಕೊಟ್ಟ ಕಾಲು ಹಿಸ್ಸೆ ಹಣವನ್ನು ಸರ್ಕಾರಕ್ಕೆ ದಂಡವಾಗಿ ಕೇರಿಸಿಕೊಳ್ಳುವದಲ್ಲದೆ ಇನ್ನು ಬಾಕಿ ವುಳಿಯುವ ಹಣವನ್ನು ರೆವಿನ್ಯೂ ಕಂದಾಯದಂತೆ ವಸೂಲ ಮಾಡಲಾಗುತ್ತೆ. ಪೂರಾ ವೊಬಲಗು ಪಾವತಿ ಆದ ಕೂಡ್ಲೆ ಮಾಲು ರಿಪ್ಪ ಮಾಡಿಕೊಳ್ಳಲು ಲೈಸೆನ್ಸು ಕೊಡುತ್ತೆ.

3. ಕಂಟ್ರಾಕ್ಟುದಾರನಿಗೆ ಕೊಡೋಣಾಗುವ ಲೈಸೆನ್ಸಿನಲ್ಲಿ ನಮೂದಾಗುವ ವಾಯಿದೆ ಅಂದರ್‌ವಾರ್ ಸದರೀ ಚಕ್ಕೆಯನ್ನು ಸಾಗಿಸಿಕೊಂಡು ವಾಯಿದೆ ಅಂದರ್‌ವಾರ್ ಲೈಸೆನ್ಸು ವಾಪಸು ಮಾಡಬೇಕು.

4. ರೇಂಜ್ ಫಾರೆಸ್ಟ್ ಆಫಿಸರು ಯಾವದೊಂದು ಕಾರಣವನ್ನೂ ತಿಳಿಸದೇ ದರಖಾಸ್ತು ಮಂಜೂರ್ ಮಾಡುವದಕ್ಕೂ ತಿರಸ್ಕರಿಸುವದಕ್ಕೂ ಸ್ವತಂತ್ರರಾಗಿ ಇರುತ್ತಾರೆ.

5. ದರಖಾಸ್ತುದಾರನಾಗಲೀ ಅಥವಾ ಆತನಕಡೆ ಆಳುಗಳಾಗಲೀ ಜಿನಸಿ ಜಮಾವಣೀ ನೆಡದಮೇಲೆ ಯಾವ ಗಿಡವನ್ನೂ ನಾಶ ಮಾಡಕೂಡದು. ಮತ್ತು ಚಕ್ಕೆ ರೂಢಿಸುವದರಲ್ಲಿ ಬಳ್ಳಿಯ ತಾಯಿಬೇರುಗಳಿಗೆ ಜಾಯ ಆಗದಂತೆ ಪಕ್ಕದ ಬೇರುಗಳಿಂದ ಮಾತ್ರ ಚಕ್ಕೆ ಜಮಾಯಿಸಿಕೊಳ್ಳಬೇಕು.

6. ಸ್ಟೇಟ್ ಫಾರೆಸ್ಟಿಗೆ ದರಖಾಸ್ತುದಾರನ ಅಶ್ರದ್ಧೆಯಿಂದಲಾಗಲೀ ಅಥವಾ ಆತನ ಆಳುಗಳಿಂದಲಾಗಲೀ ಫಾರೆಸ್ಟಿಗೆ ಬೆಂಕಿ ಬಿತ್ತೆಂದು ಫಾರೆಸ್ಟು ಇಲಾಖೆಯವರಿಗೆ ತಿಳಿಯಬಂದಲ್ಲಿ ಆ ಕೃತ್ಯಕ್ಕೆ ದರಖಾಸ್ತುದಾರನನ್ನು ಗುರಿಪಡಿಸಲಾಗುತ್ತೆ. ಮತ್ತು ಕಂಟ್ರಾಕ್ಟುದಾರ ಅಥವಾ ಅವರ ಆಳುಗಳು ಅವರಿಗೆ ಕ್ಲುಪ್ತವಾಗಿ ಕೊಟ್ಟು ಇರುವ ಜಾಗಾದಲ್ಲಿ ಯಾವದಾದರೂ ಫಾರೆಸ್ಟು ತಕಶೀರ್ ನಡಸಿದಲ್ಲಿ ಅಂಥಾವುಗಳನ್ನು ಫಾರೆಸ್ಟು ರೂಲ್ಸು ಪ್ರಕಾರ ಕ್ರಮ ಜರಗಿಸಲಾಗುತ್ತೆ.

7. ದರಖಾಸ್ತುದಾರನೇ ಆಗಲೀ ಅಥವಾ ಆತನ ಕಡೆ ನೌಕರರೇ ಆಗಲೀ ಸೂರ್ಯೋದಯಾತ್ಪೂರ್ವ ಅಥವಾ ಸೂರ್ಯಾಸ್ತಮಯಾ ನಂತರ ಸ್ಟೇಟ್ ಫಾರೆಸ್ಟಿನಲ್ಲಿ ಪ್ರವೇಶಿಸಕೂಡದು.

8. ಮೇಲ್ಕಂಡ ಷರತ್ತುಗಳ ಪೈಕಿ ಯಾವ ಭಾಗದಲ್ಲಿಯಾದರೂ ಹರಾಜುದಾರನು ವಿರೋಧವಾಗಿ ನಡದದ್ದೇ ಆದರೆ ಖಾತರೀ ಬಗ್ಗೆ ಠೇವಣಿ ಇಟ್ಟ ಮೊಬಲಗು ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳುವದಲ್ಲದೆ ಬಾಬು ರೂಢಿಸಿಕೊಳ್ಳುವ ಹಕ್ಕು ಸಹಾ ರದ್ದು ಪಡಿಸಲಾಗುತ್ತೆ.

9. ಹರಾಜು ದರಖಾಸ್ತುದಾರನು ತನ್ನ ಕಂಟ್ರಾಕ್ಟು ಷರತ್ತುಗಳಿಗೆ ಬದ್ಧನಾಗಲು ಖಾತರೀ ಬಗ್ಗೆ ಶೇಕಡ 25 ರೂಪಾಯಿಗಳು ನಗದಾಗಿ ಠೇವಣಿ ಇಡಬೇಕು.

ಟಿ. ಅಬ್ದುಲ್ ಕರೀಂ,
ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರ್, ಬೆಂಗಳೂರು ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ ನಂಬರ್ 55.

ತಾರೀಖು 25ನೆ ಜುಲೈ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ:—ಕೋಲಾರ್ ಡಿಸ್ಟ್ರಿಕ್ಟಿನಲ್ಲಿ ಸರ್ಕಾರದ ಆಡಳಿತದಲ್ಲಿರುವ ಸ್ಟೇಟ್ ಫಾರೆಸ್ಟ್ ರಿಜರ್ವ್‌ಡ್ ಜಮೀನು ಮತ್ತು ಪ್ಲಾಟೇಷನ್‌ಗಳ ದೇಖೀಲು ಎಲ್ಲಾ ಜಮೀನುಗಳಲ್ಲಿಯೂ 1904—1905ನೆ ಸಾಲಿನಲ್ಲಿ ದೊರಿಯುವ ಈ ಕೆಳಗೆ ಕಂಡ ಪಸಾರೆ ಜಿನಸುಗಳನ್ನು ತಾಲ್ಲೂಕ್‌ವಾರ್, ಹೋಬಳಿವಾರ್, ಜಂಗಲ್‌ವಾರ್, ಅಥವಾ ಮತ್ಯಾವರೀತಿಯಲ್ಲಾದರೂ ಡಿಸ್ಟ್ರಿಕ್ಟು ಫಾರೆಸ್ಟಾಫಿಸರವರು ಅಥವಾ ಅವರಿಂದ ಗೊತ್ತು ಮಾಡಲ್ಪಡುವ ಆಫಿಸರು ಈ ಕೆಳಗೆ ಪಟ್ಟಿಯಲ್ಲಿ ನಮೂದಿರುವ ಸ್ಥಳಗಳಲ್ಲಿ ಆಯಾಯ ತಾರೀಖಿನಲ್ಲಿ ತಾಲ್ಲೂಕು ಅಮಲ್‌ದಾರ್ರವರು ಜೊತೆಯಲ್ಲಿ ಹರಾಜು ಮಾಡಿಸುತ್ತಾರೆ. ನಿಯಾಮಕವಾದ ದಿನವು ಹರಾಜು ಮಧ್ಯಾಹ್ನ 12 ಘಂಟೆಗೆ ಷುರು ಮಾಡಲ್ಪಡುವುದು:—

ನಂಬರು.	ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಮಾಡುವ ಸ್ಥಳ.
1	ಮಾಲೂರ್ ..	24ನೆ ಸೆಪ್ಟಂಬರ್ 1904.	ತಾಲ್ಲೂಕು ಕಚೇರಿ.
2	ಕೋಲಾರ್ ...	26 ಡಿಟೋ	
3	ಮುಳಬಾಗಲು	28 ಡಿಟೋ	
4	ಬವರಿಂಗ್‌ಪ್ಯಾಟೆ ..	30 ಡಿಟೋ	
5	ಶ್ರೀನಿವಾಸಪುರ ..	3ನೆ ಅಕ್ಟೋಬರ್ 1904.	
6	ಚಿಂತಾಮಣಿ ..	5 ಡಿಟೋ	
7	ಶಿಡ್ಲಘಟ್ಟ	7 ಡಿಟೋ	
8	ಚಿಕ್ಕಬಳ್ಳಾಪುರ	12 ಡಿಟೋ	
9	ಗೋರೀಬಿದನೂರು ...	14 ಡಿಟೋ	
10	ಗುಡಿಬಂಡೆ ಸಬ್ ತಾಲ್ಲೂಕು ...	28 ಡಿಟೋ	
11	ಬಾಗೇಪಲ್ಲಿ ..	31 ಡಿಟೋ	

ಪಸಾರೆ ದಿನಸುಗಳ ತಪಸೀಲು.

1. ಹುಣಸೇಹಣ್ಣು
2. ಹೊಂಗೇಕಾಯಿ
3. ಶೀಗೇಕಾಯಿ
4. ಗೋಂದು
5. ಜೇನುತುಪ್ಪ
6. ಜೇನುಮೇಣ
7. ಕಪಿಲಾರಂಗು
8. ಗೇರುಪಪ್ಪು
9. ಬ್ಯಾಲದಹಣ್ಣು
10. ಕಲ್ಲುಹುವ್ವು
11. ಮರಡೀ ಬೀಜ ಅಥವಾ ಚಾರುಪಪ್ಪು
12. ತಾರೇಕಾಯಿ
13. ಪೊಪ್ಲೀಚಕ್ಕೆ
14. ಅಳಲೇಕಾಯಿ

ಷರಾದಲ್ಲಿಲ್ಲದ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿ ದೊರಿಯಬಹುದಾದ 1—2—3ನೆ ನಂಬರು ದಿನಸುಗಳು ಅವಶ್ಯಕವಿದ್ದಲ್ಲಿ ಅಲಾಹಿದಾ ಹರಾಜು ಮಾಡಿಸಲ್ಪಡುವವು.

2. ಛಡ ಸವಾಲ್‌ದಾರನು ಹರಾಜು ಖೈದಾದ ಕೂಡ್ಲೆ ಹರಾಜು ವೊಬಲಗು ಪೈಕಿ ಕಾಲು ಹಿಸ್ಸೆಯನ್ನು ಪಾವತೀ ಮಾಡಬೇಕು. ತಪ್ಪಿದರೆ ಛಡ ಸವಾಲ್ದಾರನನ್ನು ನಷ್ಟಕ್ಕೆ ಗುರಿಮಾಡಿ ಬಾಬು ದುಸರಾ ಹರಾಜು ಮಾಡಿಸಲ್ಪಡುವದು. ದುಸರಾ ಹರಾಜಿನಲ್ಲಿ ಛಡೆ ಸವಾಲ್ ವೊಬಲಗು ಕವ್ಮಿಯಾಗಿದ್ದಲ್ಲಿ ಕವ್ಮಿಯಾಗುವ ವೊಬಲಗನ್ನು ಅವನಿಂದ ರೆವಿನ್ಯೂ ಬಾಕಿಯಂತೆ ಭೂವಿಸಿ ವಸೂಲ್ಮಾಡಲ್ಪಡುವದು. ಆದರೆ ದುಸರಾ ಹರಾಜಿನಲ್ಲಿ ಫಾಯಿದೆ ಉಂಟಾದ್ದಲ್ಲಿ ಅದಕ್ಕೆ ಅವನಿಗೆ ಯಾವ ಹಕ್ಕೂ ಇರುವದಿಲ್ಲ. ಹರಾಜು ಮುಂಜಾರಾದ ಸಂಗತಿಯನ್ನು ಛಡ ಸವಾಲ್ದಾರನಿಗೆ ತಿಳಿಯಪಡಿಸಿದ ಬಂದು ವಾರದೊಳಗಾಗಿ ಬಾಕಿ ಮುಕ್ತಾಲು ಹಿಸ್ಸೆ ವೊಬಲಗನ್ನು ಪಾವತಿ ಮಾಡತಕ್ಕದ್ದು. ಇದಕ್ಕೆ ತಪ್ಪಿದರೆ ವೊದಲು ತೇವಣಿ ಕಟ್ಟಿದ ಕಾಲು ಹಿಸ್ಸೆಯನ್ನು ಸರ್ಕಾರಕ್ಕೆ ದಂಡವಾಗಿ ಸೇರಿಸಿಕೊಂಡು ಬಾಬು ದುಸರಾ ಹರಾಜು ಮಾಡಲ್ಪಡುವದಲ್ಲದೆ ಛಡ ಸವಾಲ್ದಾರನಿಗೆ ಬಾಬಿನಲ್ಲಿ ಯಾವ ಹಕ್ಕೂ ಇರುವದಿಲ್ಲ. ಪೂರಾ ಹಣ ಪಾವತಿ ಮಾಡಿದ ನಂತರ ಹರಾಜು ವೇಳೆಯಲ್ಲಿ ತಿಳಿಸಲ್ಪಡುವ ಕೆಲವು ಷರತ್ತುಗಳನ್ನು ನಮೂದಿಸಿ ಛಡ ಸವಾಲ್ದಾರನು ಮುಚ್ಚಳಿಕೆ ಬರೆದು ಕೊಟ್ಟು ಹೊರ್ತು ಬಾಬನ್ನು ರೂಢಿಸಲು ಅವನಿಗೆ ಅಪ್ಪಣೆ ದೊರಿಯಲಾರದು. ಹರಾಜು ವೊಬಲಗಿನ ಮೇಲೆ ರೂಪಾಯಿ ಒಂದಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ ಪಾವತಿ ಮಾಡಬೇಕು.

3. ಈ ಹರಾಜು ಫಾರೆಸ್ಟು ಇಲಾಖೆಯಲ್ಲಿ ಡೆಪ್ಯೂಟಿ ಕಮಿಷನರ್ ಸಾಹೇಬರವರ ಮಂಜೂರಾತಿಗೆ ಒಳಪಟ್ಟು ಇರುತ್ತೆ.

4. ಹಿಡುವಳಿ ಜಮೀನಲ್ಲಿ ಸ್ವಂತ ತೋಪುಗಳಲ್ಲಿಯೂ ಇರುವ ಫಸಲ್ ಕಂಟ್ರಾಕ್ಟಿಗೆ ಸೇರಿದ್ದಲ್ಲ.

5. ಇನಾಂದಾರ್ರ ಹಕ್ಕಿನಲ್ಲಿ ಕಂಟ್ರಾಕ್ಟರು ಪ್ರವೇಶ ಮಾಡಕೂಡದು.

6. ಗ್ರಾಮ ಠಾಣಾಗಳಲ್ಲೂ, ಗ್ರಾಮ ತೋಪ್ರಗಳಿಲ್ಲೂ, ಸ್ಮಶಾನ ಜಾಗಾಗಳಲ್ಲಿಯೂ ಮತ್ತು ರಸ್ತೆ ಸಾಲು ಮರಗಳಲ್ಲಿಯೂ ಇರುವ ಫಸಲು ಈ ಹರಾಜಿಗೆ ಸೇರಿದ್ದಲ್ಲ ಅವು ಅಮಲ್ದಾರ್ರುಗಳಿಂದ ರೆವಿನ್ಯೂ ಇಲಾಖೆ ಬಗ್ಯಾಗಿ ಅಲಾಹಿದಾ ಹರಾಜು ಮಾಡಲ್ಪಡುವವು.

7. ಫಸಲನ್ನು ರೂಢಿಸುವ ನೆಪದಮೇಲೆ ಇಜಾರೆದಾರನು ಮರಗಳನ್ನು ನಾಶಪಡಿಸಕೂಡದು.

8. ಹರಾಜು ಮಾಡಲ್ಪಟ್ಟ ದಿನಸುಗಳ ವಿನಹಾ ಮತ್ಯಾವ ದಿನಸುಗಳಿನ್ನೂ ಇಜಾರೆದಾರನು ರೂಢಿಸಕೂಡದು.

9. 1905ನೆ ಜನವರಿ ಆಖ್ಯೆರೊಳಗಾಗಿ ಹದ್ದುಬಸ್ತು ಗೊತ್ತಾಗಿರುವ ಫಾರಸ್ಟುಗಳಲ್ಲಿನ ಮತ್ತು ಪ್ಲಾಂಟೇಷ್ಟಗಳಲ್ಲಿನ ಫಸಲನ್ನು ಸಾಗಿಸಿಕೊಂಡು ಹೋಗಬೇಕು. ಅವುಗಳು ಪಂಕಿ ತಡೆ ಬಗ್ಯಾಗಿ ಆ ತಾರೀಖು ಲಾಗಾಯಿತು ಬಂದ್ ಮಾಡಲ್ಪಡುವವು. ಇತರ ಕಡೆಯಲ್ಲಿನ ಫಸಲುಗಳನ್ನು 1905ನೆ ಜೂ ಆಖ್ಯೆರ ವರಿವಿಗೂ ಕಂಟ್ರಾಕ್ಟರು ರೂಢಿಸಿಕೊಳ್ಳಬಹುದು.

10. ಜಿನಸಿಗಳನ್ನು ರೂಢಿಸುವದಕ್ಕೆ ಆಗಲೀ ಅಥವಾ ಮತ್ಯಾವ ಸಬಬಿನಿಂದಲೇ ಆಗಲೀ ಫಾರಸ್ಟು ಮತ್ತು ಪ್ಲಾಂಟೇಷ್ಟಗಳಿಗೆ ಪಂಕಿ ಇಡಕೂಡದು.

11. ಹರಾಜಿನಲ್ಲಿ ಸಂಯಾದ ಸವಾಲ್ ಬಾರದಿದ್ದರೆ ಹರಾಜು ಮಾಡುವ ಆಫಿಸರು ಹರ್ಹಾಜನ್ನು ಖೈದು ಮಾಡುವದಕ್ಕಾಗಲಿ ಪ ಮುಂದೆ ಹರಾಜು ಮಾಡುವದಕ್ಕಾಗಲೀ ಸ್ವತಂತ್ರರಾಗಿರುತ್ತಾರೆ.

ಎಚ್. ಶ್ರೀನಿವಾಸರಾವ್,
ಡಿಸ್ಟ್ರಿಕ್ಟ ಫಾರೆಸ್ಟ್ ಆಫಿಸರ್, ಕೋಲಾರ ಡಿಸ್ಟ್ರಿಕ್ಟ್.

ನೋಟಿಫಿಕೇಷನ್, ತಾರೀಖು 22ನೆ ಜುಲೈ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಶಿವಮೊಗ್ಗ ಡಿಸ್ಟ್ರಿಕ್ಟಿನ ಹೊನ್ನಾಳಿ ಮತ್ತು ಶಿಕಾರಿಪುರ ತಾಲ್ಲೂಕುಗಳಲ್ಲಿ ಸ್ಟೇಟ್ ಫಾರೆಸ್ಟು ಮತ್ತು ಪ್ಲಾಂಟೇಷ್ಟ ವಿನಹ ಶಿವಮೊಗ್ಗ ಡಿಸ್ಟ್ರಿಕ್ಟಿನ ಸರಕಾರೀ ಜಮೀನುಗಳಲ್ಲಿ ದೊರೆಯುವ ತಂಗಡಿ ಮತ್ತು ಕಕ್ಕೆ ಚಕ್ಕೆಗಳನ್ನು 1904ನೆ ಸೆಪ್ಟಂಬರ ಗುರ್ರೆ ಲಾಗಾಯಿತು 1905ನೆ ಜೂ ಆಖ್ಯೆರ್ ವರಿಗೆ ಜವಾಯಿಸಿ ತೆಗದುಕೊಂಡು ಹೋಗತಕ್ಕ ಒಟ್ಟು ಸ್ವಾತಂತ್ರದ ಹಕ್ಕು ಬಹಿರಂಗವಾಗಿ ತಾಲ್ಲೂಕುವಾರು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಅಥವಾ ಡೆಪ್ಯೂಟಿ ಕವ್ಮಿಷರಿಂದ ನೇಮಿಸಲ್ಪಟ್ಟು ಇತರ ಆಫಿಸರಿಂದ 1904ನೆ ಇಸವಿ ಆಗಸ್ಟು ತಾರೀಖು 26ರಲ್ಲು ಶಿವಮೊಗ್ಗ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ಹರಾಜು ಮಾಡಲ್ಪಡುತ್ತದೆ.

ಹರಾಜು ತಾರೀಖಿನ ದಿವಸ ಮಧ್ಯಾಹ್ನ 2 ಘಂಟೆಗೆ ಹರಾಜು ಪುರು ಮಾಡಲ್ಪಡುವದು. ಅವಶ್ಯವಿದ್ದಲ್ಲಿ ಮಾರನೇ ದಿವಸ ಅದೇ ಹೊತ್ತಿಗೆ ಹರಾಜು ಕ್ರಮ ಜರಿಗಿಸಲ್ಪಟ್ಟೀತು.

ಯಾವ ಕಾರಣವನ್ನು ನಮೂದಿಸದೆ ಈ ಹರಾಜನ್ನು ಅಂಗೀಕರಿಸಲಿಕ್ಕೂ ತಿರಸ್ಕರಿಸಲಿಕ್ಕೂ ಡೆಪ್ಯೂಟಿ ಕವ್ಮಿಷ್ಟ ಸಾಹೇಬರವರು ಸ್ವತಂತ್ರರಾಗಿರುತ್ತಾರೆ.

ಹರಾಜು ಮಾಡತಕ್ಕವರು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ವೊಖ್ತ್ಯಾರಿ ಹೊಂದಿದ ಏಜಂಟರ ಮೂಲಕವಾಗಲಿ ಹಾಜರಾಗಿ ದರಖಾಸ್ತು ಮಾಡಬೇಕು. ಒಂದುನೂರು ರೂಪಾಯಿ ತೇವಣಿ ಇಟ್ಟು ಹೊರ್ತಾಗಿ ತನಗೋಸ್ಕರವೇಯಾಗಲಿ ಅಥವಾ ಎರಡನೆಯವರಿಗೋಸ್ಕರವಾಗಿಯೇ ಆಗಲಿ ದರಖಾಸ್ತು ಮಾಡಲು ಯಾವನೊಬ್ಬ ಮನುಷ್ಯನಿಗೆ ಅಪ್ಪಣೆ ಕೊಡಲು ಆಗಲಾರದು. ಹರಾಜು ಆದ ಕೂಡ್ಲೇನೆ ಮುಂಜೂರಾಗದೆ ಇರುವವರ ದರಖಾಸ್ತುದಾರರ ಡಿಪಾಜಿಟ್ ವೊಬಲಗು ಅವರಿಗೆ ವಾಪಸ್ ಮಾಡಲಾದೀತು. ಹರಾಜು ಮುಂಜೂರಾದ ಸಂಗತಿ ದರಖಾಸ್ತುದಾರನಿಗೆ ಆಗಲಿ ಯಾ ಅವರ ಏಜಂಟರಿಗೆಯಾಗಲಿ ತಿಳಿಸಿದ ತಾರೀಖು ಲಾಗಾಯಿತು ಮೂರು ದಿವಸಗಳೊಳಗಾಗಿ ಡಿಪಾಜಿಟ್ ಹಣ ಕೇರಿಸಿಕೊಂಡು ಒಟ್ಟು ಗೊತ್ತಾದ ವೊಬಲಗು ಪೈಕಿ ಎಂಟರಲ್ಲಿ ಬಂದು ಹಿಸ್ಸೆ ವೊಬಲಗನ್ನು

263

ಶಿವಮೊಗ್ಗ ಡಿಸ್ಟ್ರಿಕ್ಟು ಟ್ರೆಜರಿಯಲ್ಲಿ ಜಮಾ ಮಾಡಿಸಬೇಕು. ಅದರಂತೆ ಮಾಡಲು ತಪ್ಪಿದಲ್ಲಿ ಸದರಿ 100 ರೂಪಾಯಿ ಡಿಪಾಜಿಟ್ಟು ಮೊಬಲಗನ್ನು ಸರಕಾರಕ್ಕೆ ಸೇರಿಸಿಕೊಂಡು ಮೇಲ್ಕಂಡ ಹಕ್ಕನ್ನು ಹರಾಜು ಮಾಡಿಸುವ ಆಫಿಸರಿಂದ ತಪ್ಪಿಹೋದ ದರಖಾಸ್ತುದಾರನ್ನ ನಷ್ಟಕ್ಕೆ ಗುರಿಪಡಿಸಿ ಹರಾಜು ಮಾಡಲಾದೀತು. ಈ ಹಕ್ಕಿನಲ್ಲಿ ಏನಾದರೂ ಘಾಯಿದೆ ಬಂದರೆ ತಪ್ಪಿಹೋದ ದರಖಾಸ್ತುದಾರನಿಗೆ ಏನೂ ಹಕ್ಕು ಇರಲಾರದು.

ಈ ಕೆಳಗೆ ನಮೂದಿಸಿರುವ ಷರತ್ತುಗಳನುಸರಿಸಿ ನಡಿಯಲು ಬದ್ಧನಾಗಿರತಕ್ಕ ಬಗ್ಯೆ ಇಜಾರೆದಾರನು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರ ಹೆಸರಿನಲ್ಲಿ 200 ರೂಪಾಯಿ ಶಿಕ್ಯೂರಿಟಿ ಇಡಬೇಕಲ್ಲದೆ ಛಾಪಾಕಾಗದ್ದಲ್ಲಿ ಮುಚ್ಚಳಿಕೆಯನ್ನು ಬರೆದುಕೊಡಬೇಕು. ಹರಾಜು ಮಂಜೂರಾದ್ದು ದರಖಾಸ್ತುದಾರನಿಗೆ ಅಥವಾ ಏಜಂಟದಾರನಿಗೆ ತಿಳಿದ ತಾರೀಖು ಲಾಗಾಯಿತು 5 ದಿವಸಗಳೊಳಗಾಗಿ ಸದರಿ ಹಣ ಪಾವತಿ ಮಾಡಿ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದರೆ ಮೊದಲು ಇಟ್ಟ ಠೇವಣಿ 100 ರೂಪಾಯಿಯನ್ನು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದಲ್ಲದೆ ಸದರೀ ಹಕ್ಕುದಾರಿ ಪುನಹ ಹರಾಜು ಮಾಡಲ್ಪಡುವದು.

ಬಾಕಿಯಾಗುವ ಇಜಾರೆ ಮೊಬಲಗು ಮತ್ತು ಪೂರಾ ಮೊಬಲಗಿಗೆ ರೂಪಾಯಿ ಬಂದಕ್ಕೆ ಬಂದು ಆಣೆ ಮೇರಿಗೆ ಆಗುವ ಲೋಕಲ್ ಸೆಸ್ 1903ನೆ ಅಕ್ಟೋಬರು ಗುರ್ರೆ ಲಾಗಾಯಿತು ಈ ಕೆಳಗೆ ಕಾಣಿಸಲ್ಪಟ್ಟಿರುವ ಮೂರು ಕ್ವಾರಟರಲಿ ಖಿಸ್ತನಲ್ಲಿ ಕ್ರಮವಾಗಿ ಕೊಡಲ್ಪಡತಕ್ಕದ್ದು.

1904ನೆ ಅಕ್ಟೋಬರ್ ಗುರ್ರೆಯಲ್ಲಿ.
1905ನೆ ಜನವರಿ ಡಿಟೋ
1905ನೆ ಏಪ್ರೆಲ್ ಡಿಟೋ

ಯಾರಾದರೂ ಬಂದು ಖಿಸ್ತಿನ ಮೊಬಲಗು ಮೇಲೆ ಕಂಡ ವಾಯಿದೆ ಕೆಳಗೆ ಪಾವತಿ ಮಾಡದೆ ಇದ್ದಲ್ಲಿ ಇಜಾರೆಯನ್ನು ರದ್ದು ಮಾಡಿ ರಫ್ತಾಗದೆ ಬಾಕಿ ಇರತಕ್ಕ ಚಕ್ಕೆಯು ಜಪ್ತಿಮಾಡಲ್ಪಟ್ಟು ಚಕ್ಕೆಯ ಜಮಾವಣಿ ಮತ್ತು ರಫ್ತು ಸಹಾ ನಿಲ್ಲಿಸಲ್ಪಟ್ಟು ಇಜಾರೆ ಮೊಬಲಗು ಸಂಪೂರ್ಣವಾಗಿ ರೆವಿನ್ಯೂ ಡಿಮ್ಯಾಂಡ್ ತರೀಕಾಗಿ ವಸೂಲ್ಮಾಡಲ್ಪಡುವದು.

ಷರತ್ತುಗಳು.

1. ಬಂದು ವರುಷಕ್ಕೆ ಕಮ್ಮಿ ಇರುವ ಎಳ್ಳೇ ಬುಡಗಳಲ್ಲಿ ಚಕ್ಕೆ ತೆಗಿಯದಂತೆಯು ಕಡಿಯದಂತೆಯು ನೋಡಿಕೊಳ್ಳತಕ್ಕದ್ದು. ಚಕ್ಕೆ ತೆಗೆಯಲ್ಪಟ್ಟ ಗಿಡಗಳು ಹರಾಜುದಾರನದೆಯಾಗಿರುತ್ತೆ.

2. ಬೇರೆ ಬೇರೆ ಸ್ಥಳಗಳಲ್ಲಿ ಚಕ್ಕೆಗಳನ್ನು ಜಮಾಯಿಸಲು ನೇಮಿಸಲ್ಪಡುವ ಮೇಸ್ತ್ರಿ ಮತ್ತು ಷಿಕ್ಮಿ ಕಂಟ್ರಾಕ್ಟುದಾರ್ರುಗಳ ಹೆಸರುಗಳು ನಮೂದಿನಿಂದ ಬಂದು ಪಟ್ಟಿಯನ್ನು ಕೊಡಬೇಕು.

3. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರು ಕೊಡುವ ನಮೂನೆಯಂತೆ ಸಾಗಿಸಿದ ಚಕ್ಕೆಯ ಮೊತ್ತವನ್ನು ತೋರಿಸುವ ಲೆಕ್ಕವನ್ನು ಇಡತಕ್ಕದ್ದು. ಫಾರೆಸ್ಟು ರೇಂಜರ್ ಮತ್ತು ಅಮಲ್ದಾರ್ರು ಯಾ ಪೊಲೀಸು ಇನ್‌ಸ್ಪೆಕ್ಟರು ಯಾ ಇವರ ದರ್ಜೆಗೆ ಮೇಲು ಪಟ್ಟ ಇತರ ಆಫೀಸರ ಅಜಮಾಯಿಷಿಗೆ ಸದರೀ ಲೆಕ್ಕಗಳು ಬಳಪಟ್ಟದ್ದಾಗಿರುತ್ತವೆ.

4. ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರವರಿಂದ ಏರ್ಪಡಿಸುವ ಮೇರಿಗೆ ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಚಕ್ಕೆಗೆ ಪ್ಯಾಸು ಪಡಿಯತಕ್ಕದ್ದು.

5. ವಾಯಿದೆಯು ಪೂರೈಸಿದನಂತರ ಜಮಾಯಿಸಿಕೊಂಡು ಶಿವಮೊಗ್ಗ ಡಿಸ್ಟ್ರಿಕ್ಟಿನ ಗಡಿ ವಳಗಾಗಲಿ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರತಕ್ಕ ರೈಲ್ವೆ ಸ್ಟೇರ್ಷಗಳೊಳಗಾಗಲಿ ಬಾಕಿ ಇರತಕ್ಕ ಎಲ್ಲಾ ಚಕ್ಕೆ ಮೇಲಿನ ಹಕ್ಕನ್ನು ರದ್ದುಪಡಿಸತಕ್ಕದ್ದು.

6. ಮೇಲ್ಕಂಡ ಷರತ್ತಿನ ಮೇರಿಗೆ ನಡಿಯಲು ತಪ್ಪಿಹೋದಲ್ಲಿ ಇಜಾರೆ ರದ್ದು ಮಾಡುವದಲ್ಲದೆ ಅದುವರಿಗೂ ಜಮಾಯಿಸಿ ಹಾಜರು ಇಟ್ಟುಕೊಂಡಿರತಕ್ಕ ವಿಶಿಷ್ಟ ಚಕ್ಕೆಯನ್ನು ಸರಕಾರಕ್ಕೆ ಸೇರಿಸಲ್ಪಡುತ್ತೆ. ಡೆಪ್ಯುಟಿ ಕಮೀರ್ಷ ಸಾಹೇಬರವರು ನಿಷ್ಕರ್ಷಿಸುವ ಮೇರೆ ಇಜಾರೆದಾರನಿಂದ ವಸೂಲಾದ ಪೂರಾ ಮೊಬಲಗಾಗಲಿ ಅಥವಾ ಆ ಪೈಕಿ ಕೆಲವು ಮೊಬಲಗಾಗಲಿ ಸೇರಿಸಲ್ಪಡಲಾದೀತು. ಅಂಥಾ ತಪ್ಪಿದ ಕಾಲದಲ್ಲಿ ಇಜಾರೆದಾರನಿಂದ ಬಾಕಿ ಇರತಕ್ಕ ಮೊಬಲಗು ರೆವಿನ್ಯೂ ಕಂದಾಯದ ರೀತಿ ವಸೂಲ್ಮಾಡತಕ್ಕದ್ದು.

ಜೆ. ಮಾರ್ಟೈರೋ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಶಿವಮೊಗ್ಗ ಡಿಸ್ಟ್ರಿಕ್ಟು.

ಚಿಕ್ಕಮಗಳೂರು, ತಾರೀಖು 19ನೆ ಜುಲೈ 1904.

ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ಕಂಡ ತಾಲ್ಲೂಕ್‌ಗಳಲ್ಲಿ ಇರುವ (ಸ್ಟೇಟ್ ಫಾರೆಸ್ಟ್ ಮತ್ತು ಪ್ಲಾಂಟೇರ್ಷಗಳು ವಿನಃ) ಹಿಡುವಳೀಲಿಲ್ಲದ ಸರ್ಕಾರಿ ಜಮೀನುಗಳಲ್ಲಿ ಇರತಕ್ಕ ತಂಗಡೀ ಮತ್ತು ಕಕ್ಕೆ ಚಕ್ಕೆಯನ್ನು 1904ನೆ ಇಸವಿ ಜುಲೈ ಗುರ್ರೇ ಲಾಗಾಯಿತು 1905ನೆ ಇಸವಿ ಜೂನ್ 30ನೆ ತಾರೀಖು ವರಿಗೆ ಜಮಾಯಿಸಿ ತೆಗದುಕೊಂಡು ಹೋಗತಕ್ಕ ಸ್ವತಂತ್ರದ ಹಕ್ಕುದಾರಿಯು ಈ ಕೆಳಗೆ ವಿವರಿಸಿ ಇರುವ ತಾರೀಖುಗಳಲ್ಲಿ ಆಯಾಯ ತಾಲ್ಲೂಕ್ ಅಮಲ್ದಾರ್ರಿಂದ ರೇಂಜಾಫಿಸರಗಳೊಡನೆ ಹರಾಜು ಮಾಡಿಸಲ್ಪಡುತ್ತೆ :—

ತಾಲ್ಲೂಕ್ ಹೆಸರು.	ಹರಾಜು ತಾರೀಖು.	ಹರಾಜಾಗತಕ್ಕ ಸ್ಥಳ.
1. ಚಿಕ್ಕಮಗಳೂರು	8—8—04	ತಾಲ್ಲೂಕ್ ಕಛೇರೀಲಿ.
2. ಕಡೂರು	10—8—04	ಡಿಟೋ
3. ತರೀಕೆರೆ	12—8—04	ಡಿಟೋ

ಷರಾ—ಹರಾಜು ನಿಬಂಧನೆ ಮುಂತಾದ ತಪಸೀಲ್‌ಗಳನ್ನ ಈ ಬಗ್ಯೆ ಘಾಯಿಷ್ಮಾಡಿಸಿ ಇರುವ ಮೈಸೂರು ಗೆಜೆಟ್ IIನೆ ಭಾಗದ 28ನೆ ನಂಬರು 1904ನೆ ಇಸವಿ ಜುಲೈ ತಾರೀಖಿನ 427, 428ನೆ ಪೇಜುಗಳಲ್ಲಿನ ಇಸ್ತಿಹಾರ್ ಮೂಲಕ ತಿಳಿದುಕೊಳ್ಳಬಹುದು.

ಎ. ವೇದಾಂತದೇಸಿಗಂ ಅಯ್ಯಂಗಾರ್,
ಫಾರ್ ಡೆಪ್ಯುಟಿ ಕಮ್ಮಿಷನರ್, ಕಡೂರು ಡಿಸ್ಟ್ರಿಕ್ಟ್.

ಬೆಂಗಳೂರು ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ಕಂದಾಯದ ಬಾಕೀದಾರರಾದ ರಾಮಚಂದ್ರರಾವ್ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಬೆಂಗಳೂರು ಡಿಸ್ಟ್ರಿಕ್ಟು ಹೊಸಕೋಟೆ ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಆಗಸ್ಟು 29ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 11 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ 330—3—6 ರೂಪಾಯಿ ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನು ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನು ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.		ಆಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.		
					ರೂ. ಆ. ಪೈ.			ಎ.	ಗು.	ರೂ.	ಆ.	ಪೈ.	ರೂ.	ಆ.	ಪೈ.
ಹೊಸಕೋಟೆ.	ವಾಗಟ.	ಜೋಡಿ ಪರಮನಹಳ್ಳಿ.	ರಾಮಚಂದ್ರರಾವ್ ವಗೈರೆ 4 ಜನಗಳು.	..	..	ಪೂರಾಗ್ರಾಮ.	ಖುಷ್ಕಿ	372	39	669	10	0	329	3	6 ಜೋಡಿ
							ತರಿ	66	19	353	6	0	1	0	0 ಪ್ರೊಸೆಸ್ ಫೀ
							ಬಾಗಾಯತು	21	30	113	0	0			
							ಪರಂಪೋಕು	277	2	8	12	0	330	3	6
							ಜುಮ್ಲಾ ...	738	10	1144	12	0			

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಬಿ. ಜೆ. ಕುಮಾರಸಾಮಿ ನಾಯಿಕ್,
ಫಾರ್ ಡೆಪ್ಯುಟಿ ಕಮೀಷನರ್.

ಕೋಲಾರ ಡಿಸ್ಟ್ರಿಕ್ಟು.

ಸ್ಥಿರಸ್ವತ್ತಿನ ಹರಾಜು ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 27ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಜೋಡಿ ಬಡವಾಕಲಹಳ್ಳಿ ಗ್ರಾಮದ ರಾಮಪ್ಪ, ರಾಜಪ್ಪ ವಗ್ಗೈರೇರಿಂದ ಬರಬೇಕಾದ ಜವಿೂ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಬವರಿಂಗಪೇಟೆ ತಾಲ್ಲೂಕು ಕಚೇರಿಯಲ್ಲಿ 1904ನೆ ಇಸವಿ ಸೆಪ್ಟಂಬರ್ ವಾಹೆ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 266—15—4 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಕೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅಯ್ ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೆ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅವರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯಾದೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ವಿಜಂಟು ಯಾ ಮುಖ್ತಾರೀಕರಾಗಿ ಸವಾಲ್ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯೂಟಿ ಕಮಿಷನರವರಿಂದ ಮುಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯೂಟಿ ಕಮಿಷನರವರಿಂದ ಹರಾಜು ಮುಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನು ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಸ್ಟರ್ ಮಾಡಲ್ಪಟ್ಟು ಡೆಪ್ಯೂಟಿ ಕಮಿಷನರವರಿಂದ ಸೈ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯಾಗಲೀ ಯಾ ವಿಸ್ತೀರ್ಣದಲ್ಲಿಯಾಗಲೀ ಇರುವ ಸ್ಖಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯೂಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಹಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈನಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು. ಹೋಬ್ಳಿ. ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಎಂದಾಜು ಕಿಮ್ಮತ್ತು.	ಜವಿನು. ಸರ್ವೆ ನಂಬರ್ ಅಥವಾ ಹಿಸ್ಸಾನಂ ಹೆಸರು.	ಜವಿನು. ಸರ್ವೆ ನಂಬರ್ ಅಥವಾ ಹಿಸ್ಸಾನಂ ಹೆಸರು.	ಜವಿನು. ವಿಸ್ತೀರ್ಣ. ಎ. ಗು.	ಜವಿನು. ಅಕಾರ. ರೂ. ಆ. ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗ್ಗೈರೆ ಸಹಿತವಾದ ಬಾಕೀ ಮೊಬಲಗು. ರೂ. ಆ. ಪೈ.	
ಕೋಲಾರ ಪೇತನಂಗಲ ಜೋಡಿ ಬಡವಾಕಲಹಳ್ಳಿ	ರಾಮಪ್ಪ, ರಾಜಪ್ಪ ವಗ್ಗೈರೆರು			ಮಾಜಿ ಬೇರೀಜ			608 14 0	265 7 4	ಕೋಭಕೃತು
								1 8 0	ಪ್ರೊಸೆಸ್ ಫೀ
								266 15 4	

ಚಕ್ಕುಬಂದಿ.
ಪೂರ್ವಕ್ಕೆ —ಗೊಲ್ಲಹಳ್ಳಿ
ಪಶ್ಚಿಮಕ್ಕೆ —ಹುನಕುಂದ
ಉತ್ತರಕ್ಕೆ —ಪಿಚ್ಚಗುಂಟಹಳ್ಳಿಸರಹದ್ದು
ದಕ್ಷಿಣಕ್ಕೆ —ಹುನಕುಂದದ ಸರಹದ್ದು
(ಪೂರಾ ಗ್ರಾಮ)

* ಯಾ ಬಾಕಿ ಇರುವ ವಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

266

1245

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 27ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಖಾಯಂಗುತ್ತಾ ಪೀಲವರ ಗ್ರಾಮದ ಮುನಿರಾಮಯ್ಯ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಬವರಿಂಗ್‌ಪೇಟ್ ತಾಲ್ಲೂಕು ಕಛೇರಿಯಲ್ಲಿ 1904ನೆ ಸೆಪ್ಟಂಬರ್ ಮಾಹೆ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903-04ನೆ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 490—3-6 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರನ್ ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಪ್ಸೀಲು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕಿ, ತರೀ ಅಥವಾ ಬಾಗಾಯತು.	ಜಮೀನು. ವಿಸ್ತೀರ್ಣ.		ಜಮೀನು. ಅಕಾರ.			ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
					ರೂ. ಆ. ಪೈ.			ಎ.	ಗು.	ರೂ.	ಆ	ಪೈ.	ರೂ.	ಆ.	ಪೈ.	
ಬವರಿಂಗ್ ಪೇಟೆ	ಕ್ಯಾಸಂಬಳ್ಳಿ	ಖಾಯಂಗುತ್ತಾ ಪೀಲವರ	ಮುನಿರಾಮಯ್ಯ ವಗೈರೇರು				ಪರಂಪೋಕು	1046	20	30	12	0	489	3	6	ಶೋಭಕೃತು
							ಖುಷ್ಕಿ	586	20	471	10	0	1	0	0	ಪ್ರೊಸೆಸ್ ಫೀ
							ತರಿ	84	23	492	11	0				
							ಬಾಗಾಯತು	18	10	99	0	0	490	3	6	ಜುಮ್ಲಾ
							ಜುಮ್ಲಾ	1735	33	1094	1	0				

ಚಕ್ಕು ಬಂದಿ.

ಪೂರ್ವಕ್ಕೆ—ಕುಂಫಣಿ ಸೀಮೆಗೆ ಸೇರಿದ ಮಿಟ್ಟಹಳ್ಳಿ
ಪಶ್ಚಿಮಕ್ಕೆ— ಡಿಟೋ ಸೊಂಣೆ ಗವುಡನ ಹಳ್ಳಿ
ಉತ್ತರಕ್ಕೆ— ಡಿಟೋ ರಾಜಪೇಟೆ
ದಕ್ಷಿಣಕ್ಕೆ— ಡಿಟೋ ಸಂತೂರು ಸರಹದ್ದು
(ಪೂರಾ ಗ್ರಾಮ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 27ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಜೋಡಿ ಜಯಸಂದ್ರ ಗ್ರಾಮದ ಲಕ್ಷ್ಮೀನಾರಣಪ್ಪ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಸೆಪ್ಟಂಬರು ಮಾಹೆ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡ ದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903-04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 35—10—5 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಇದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ನೂನಿಂದ ವಿಧಿಸಲ್ಪಟ್ಟವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರ್ರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು. ರೂ.	ಆ.	ಪೈ.	
ಕೋಲಾರ	ಹೋಳೂರು	ಜೋಡಿ ಜಯಸಂದ್ರ	ಲಕ್ಷ್ಮೀನಾರಣಪ್ಪ ವಗೈರೇರು	..	...	...	ಪರಂಬೋಕು	16	12	56	8	0	34	2	5	ಶೋಭಕೃತು
							ಖುಷ್ಕಿ	161	16				1	8	0	ಪ್ರೊಸೆಸ್ ಫೀ
								177	28				35	10	5	

ಚಕ್ಕು ಬಂದಿ.

ಪೂರ್ವಕ್ಕೆ—ನುಕ್ಕನಹಳ್ಳಿ ಸರಹದ್ದು.
ಪಶ್ಚಿಮಕ್ಕೆ—ದೇವಂಡಹಳ್ಳಿ ಸರಹದ್ದು.
ಉತ್ತರಕ್ಕೆ—ಮಲ್ಲಸಂದ್ರ ಸರಹದ್ದು.
ದಕ್ಷಿಣಕ್ಕೆ—ಯಲವಾರ ಸರಹದ್ದು.
(ಪೂರಾ ಗ್ರಾಮ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

1242

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 27ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಜೋಡಿ ಹೋಳೂರು ಗ್ರಾಮದ ಶೀನಪ್ಪ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಕೋಲಾರ ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಸೆಪಟಂಬರು ಮಾಹೆ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಶೀಲ್ ಮೇರಿಗೆ ರೂಪಾಯಿ 600—12—3 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಏಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರ್ಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾರ್ನೂನಿಂದ ವಿಧಿಸಲ್ಪಟ್ಟವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಶೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಆ. ಪೈ.			ಎ. ಗು.	ರೂ. ಆ. ಪೈ.	ರೂ. ಆ. ಪೈ.
ಕೋಲಾರ	ಹೋಳೂರು	ಜೋಡಿ ಹೋಳೂರು	ಶೀನಪ್ಪ ವಗೈರೇರು	...	...	...	ಖುಷ್ಕಿ	871 36	1760 0 0	96 11 9 ಶುಭಕೃತು
							ತರಿ	2 24	13 0 0	503 0 6 ಶೋಭಕೃತು
							ಬಾಗಾಯತು	40 30	169 0 0	1 0 0 ಪ್ರೊಸೆಸ್ ಫೀ
								915 10	1942 0 0	600 12 3

ಚಕ್ಕುಬಂದಿ.

ಪೂರ್ವಕ್ಕೆ—ಮಾರೇನಹಳ್ಳಿ ಸರಹದ್ದು.
ಪಶ್ಚಿಮಕ್ಕೆ—ಜನ್ನಪ್ಪಲ್ಲಿ ಸರಹದ್ದು.
ಉತ್ತರಕ್ಕೆ—ಗಟ್ಟಿಹಳ್ಳಿ ಸರಹದ್ದು.
ದಕ್ಷಿಣಕ್ಕೆ—ಸೋಮಸಂದ್ರ ಸರಹದ್ದು.
(ಪೂರಾ ಗ್ರಾಮ)

ತಾರೀಖು 18ನೆ ಮಾಹೆ ಜುಲೈ 1904.

ಅಮಾನಿ ಭೈರಸಾಗರಕೆರೆ ಶಾನುಭಾಗ ಕೃಷ್ಣಪ್ಪನೆಂಬುವನು ಕೋಲಾರ ಡಿಸ್ಟ್ರಿಕ್ಟು ಗುಡಿಬಂಡೆ ಸಬ್ ತಾಲ್ಲೂಕು ಗುಡಿಬಂಡೆ ಹೋಬಳಿ ಬೇಚರಾಕ್ ಬೋಡೇನಹಳ್ಳಿ ಗ್ರಾಮದ ಈ ಕೆಳಗೆ ವಿವರಿಸಿರುವಂತೆ 63 ಎಕರೆ, 34 ಗುಂಟೆ ಜಮೀನಿಗೆ ಆಕಾರ 61—0—0 ರೂಪಾಯಿವುಳ್ಳ ಜಮೀನನ್ನ ಸ್ವಂತ ಲಾಗವಡಿನಿಂದ ಆಬಾದಿಗೆ ತಂದುಕೊಂಡು ಹತ್ತು ವರುಷಗಳಲ್ಲಿ ಪೂರಾ ಕಂಡಾಯ ಕೊಡುವ ಷರತ್ತಿನ ಮೇಲೆ ಕ್ರಯಕ್ಕೆ ಕೊಡಿಸಬೇಕೆಂದು ದರಖಾಸ್ತು ಮಾಡಿರುತ್ತಾನೆ. ಇದಕ್ಕಿಂತ ಕಮ್ಮಿ ಸಾಲುಗಳ ಕ್ರಯಕ್ಕೂ ಮತ್ತು ಸರಕಾರಕ್ಕೆ ಘಾಯಿದೆಕರವಾಗಿಯೂ ಮಾಡುವರ್ಯಾರಾದರೂ ಇದ್ದರೆ ಈ ನೋಟೀಸು ಪ್ರಸಿದ್ಧವಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಈ ಆಫೀಸಿಗೆ ದರಖಾಸ್ತುಗಳನ್ನ ಕೊಡಬಹುದು. ತಪ್ಪಿದರೆ ರೂಲ್ಸು ಅನುಸರಿಸಿ ವ್ಯವಸ್ಥೆ ಮಾಡಲ್ಪಡುತ್ತೆ.

ಸರ್ವೆ ನಂಬರು.	ಖುಷ್ಕಿ.					ತರಿ.					ಬಾಗಾಯತು.			ಜುಮ್ಲಾ.					ಗಿಡಗಳು ವಗೈರ.				ಪಂಚಾಯಿತರ ಅಂದಾಜು ಮೊಬಲಗು.		
	ಜಮೀನು.		ಆಕಾರ.			ಜಮೀನು.		ಆಕಾರ.			ಜಮೀನು.		ಆಕಾರ.	ಜಮೀನು.		ಆಕಾರ.			ಹುಂಗಿ.	ಹುಣಸೆ.	ಈಚಲುಗಿಡ ಬಂದು ಗಜದಮೇಲೆ ಇರುವದು.	ಈಚಲು ಸೊಸಿಗಳು ಬಂದು ಗಜದ ಮೇಲೆ ಇರುವದು.			
	ಎ.	ಗು.	ರೂ	ಆ.	ಪೈ.	ಎ.	ಗು.	ರೂ	ಆ.	ಪೈ	ಎ.	ಗು.	ರೂ	ಎ.	ಗು.	ರೂ	ಆ.	ಪೈ.					ರೂ.	ಆ.	ಪೈ.
1	22	0	19	4	0									22	0	19	0	0	32	...	4	62	4	0	0
*2	26	0	21	2	0									26	0	21	0	0	30	1	1	1	2	8	0
3	13	0	11	6	0	2	34	9	12	9				15	34	21	0	0	160	..	8	11	9	4	0
	61	0	51	12	0	2	34	9	12	9				63	34	61	0	0	222	1	13	74	15	12	0

* ಷರಾ.—ಅಂದಾಜಾ ನಾ ಲಾಯಖಾದ 100 ಕಲ್ಲುಗಳಿವೆ.

		ಎ.	ಗು.	
ನೋಟ್.—ಬಟ್ಟು ಜಮೀನು	...	78	35	
ಪೈಕಿ ವಜಾ ಖರಾಬು		15	1	
ಜಾತಾ ಬಾಕಿ	...	63	34	ಮೇಲ್ಕಂಡ ತಪಶೀಲ್ ಮೇರಿಗೆ.

ಇಸ್ತಿಹಾರ್ನಾಮೆ.

ತಾರೀಖು 15ನೆ ಜುಲೈ 1904ನೆ ಇಸವಿ.

ಕೋಲಾರ ತಾಲ್ಲೂಕಿಗೆ ಶೇರಿದ ಮಾರ್ಜೆನ್ನಲ್ಲಿ ನಮೂದಾಗಿ ಇರುವ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕೀ ಮೊಬಲಗಿಗೋಸ್ಕರ ತಾಲ್ಲೂಕು ಅಮಲ್‌ದಾರ್ರ ಕಛೇರಿಯಲ್ಲಿ 1904ನೆ ಇಸವಿ ಸೆಪ್ಟಂಬರು ಮಾಹೆ 5ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

1. ಖಾಯಂ ಗುತ್ತಾ ಕ್ಯಾಲನೂರು —ವೇಮಗಲ್ ಹೋಬಳಿ.
2. ಖಾಯಂ ಗುತ್ತಾ ಮಲ್ಲಸಂದ್ರ — ಹೋಳೂರು ಹೋಬಳಿ.
3. ಜೋಡಿ ರಾಮಸಂದ್ರ— ಕಸಬಾ ಹೋಬಳಿ.
4. ಜೋಡಿ ಕೊಂಡರಾಜನ ಹಳ್ಳಿ—ಕಸಬಾ ಹೋಬಳಿ.

(ಹೆಚ್ಚು ತಪಶೀಲ್ ಬಗ್ಯೆ 28-7-1904ನೆ ಮರ್ಕುಂ 30ನೆ ನಂ. ಮೈಸೂರ ಗೆಜೆಟಿನ 2ನೆ ಭಾಗದ 447-450ನೆ ನಂ. ಪೇಜು ನೋಡತಕ್ಕದ್ದು.

ಕೆ. ಪಿ. ಪುಟ್ಟಂಣ ಚೆಟ್ಟಿ, ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.

ನೋಟಿಸ್.

ತಾರೀಖು 25ನೆ ಜುಲೈ 1904ನೆ ಇಸವಿ, ಚಿಕ್ಕಮಗಳೂರು.

ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕಿನಲ್ಲಿರುವ ತಮ್ಮ ಸಬ್ಬನಹಳ್ಳಿ ಎಸ್ಟೇಟಿಗೆ ಕೆಲವು ಕಾಡು ದನಗಳ ಗುಂಪುಗಳು ಬಂದು ಕೆಡಕು ಮಾಡುತ್ತವೆ ಎಂತಲೂ ಅವುಗಳನ್ನು ಹಿಡಿದು ದೊಡ್ಡಿಗೆ ಕಳುಹಿಸುವುದಕ್ಕೆ ಅಸಾಧ್ಯವಾಗಿರುತ್ತೆಂತಲೂ ಸದರೀ ಎಸ್ಟೇಟಿನ ಮೆಸ್ಟರ್ ಆರ್ಥರ್ ನಿಕಾಲ್ಸನ್ ಸಾಹೇಬರವರು ಫಿರ್ಯಾದು ಮಾಡಿರುವುದರಿಂದಲೂ, ಸದರೀ ಜಾನುವಾರುಗಳ ಮಾಲೀಕರು ಈ ನೋಟೀಸಿನ ತಾರೀಖು ಲಾಗಾಯತು ಎರಡು ತಿಂಗಳೊಳಗೆ ಹಿಡಿದು ತೆಗೆದುಕೊಂಡು ಹೋಗಲು ತಪ್ಪಿದರೆ ಹಿಡಿಯುವುದಕ್ಕೆ ಸಾಧ್ಯವಿಲ್ಲದೆ ಇರುವ ಅಂಥಾ ದನಗಳನ್ನು ಕೊಂದುಹಾಕಲು ಸದರೀ ಮೆಸ್ಟರ್ ಆರ್ಥರ್ ನಿಕಾಲ್ಸನ್ ಸಾಹೇಬರವರಿಗೆ ಅಪ್ಪಣೆ ಕೊಡುತ್ತದೆ.

2. ಸದರೀ ಗುಂಪಿಗೆ ಶೇರಿದ ದನಗಳನ್ನು ಯಾರಾದರೂ ಹಿಡಿದು ಮೂಡಿಗೆರೆ ತಾಲ್ಲೂಕು ಕಛೇರಿಗೆ ತಂದು ಹಾಜರ್ಪಡಿಸಿದಲ್ಲಿ ಅಂಥಾವರಿಗೆ ದೊಡ್ಡ ರಾಸು ಬಂದಕ್ಕೆ 5 ರೂಪಾಯಿನಂತೆಯೂ ಇತರ ರಾಸು ಬಂದಕ್ಕೆ 2 ರೂಪಾಯಿನಂತೆಯೂ ಇನಾಂ ಕೊಡಲಾದೀತು, ತಿಳಿಯುವುದು.

ತಾರೀಖು 25ನೆ ಜುಲೈ 1904ನೆ ಇಸವಿ, ಚಿಕ್ಕಮಗಳೂರು.

ಕಡೂರು ಡಿಸ್ಟ್ರಿಕ್ಟು ಮೂಡಿಗೆರೆ ತಾಲ್ಲೂಕಿನಲ್ಲಿರುವ ಸೀಗಳ್ಳೀ ಕಾಫಿ ಎಸ್ಟೇಟಿಗೆ ಕೆಲವು ಕಾಡು ದನಗಳ ಗುಂಪುಗಳು ಬಂದು ಕೆಡಕು ಮಾಡುತ್ತವೆಯೆಂತಲೂ ಅವುಗಳನ್ನು ಹಿಡಿದು ದೊಡ್ಡಿಗೆ ಕಳುಹಿಸುವುದಕ್ಕೆ ಅಸಾಧ್ಯವಾಗಿರುತ್ತೆಂತಲೂ ಸದರೀ ಎಸ್ಟೇಟಿನ ಮೆಸ್ಟರ್ ಜೆ. ಜಿ. ಹ್ಯಾಮಿಲ್ಟನ್ ಸಾಹೇಬರು ಫಿರ್ಯಾದು ಮಾಡಿರುವುದರಿಂದಲೂ ಸದರೀ ಜಾನುವಾರುಗಳ ಮಾಲೀಕರು ಈ ನೋಟೀಸಿನ ತಾರೀಖು ಲಾಗಾಯತು ಎರಡು ತಿಂಗಳೊಳಗೆ ಹಿಡಿದು ತೆಗೆದುಕೊಂಡು ಹೋಗಲು ತಪ್ಪಿದರೆ, ಹಿಡಿಯುವುದಕ್ಕೆ ಸಾಧ್ಯವಿಲ್ಲದೇ ಇರುವಂಥಾ ದನಗಳನ್ನು ಕೊಂದುಹಾಕಲು ಸದರೀ ಮೆ॥ ಜೆ. ಜಿ. ಹ್ಯಾಮಿಲ್ಟನ್ ಸಾಹೇಬರವರಿಗೆ ಅಪ್ಪಣೆ ಕೊಡುತ್ತದೆ.

2. ಸದರೀ ಗುಂಪಿಗೆ ಶೇರಿದ ದನಗಳನ್ನು ಯಾರಾದರೂ ಹಿಡಿದು ಮೂಡಿಗೆರೆ ತಾಲ್ಲೂಕು ಕಚೇರಿಗೆ ತಂದು ಹಾಜರ್ಪಡಿಸಿದಲ್ಲಿ ಅಂಥಾವರಿಗೆ ದೊಡ್ಡ ರಾಸು ಬಂದಕ್ಕೆ 5 ರೂಪಾಯಿನಂತೆಯೂ ಇತರ ರಾಸು ಬಂದಕ್ಕೆ ಎರಡು ರೂಪಾಯಿನಂತೆಯೂ ಇನಾಂ ಕೊಡಲಾದೀತು, ತಿಳಿಯುವದು.

ಎಂ. ನಾರಾಯಣರಾವ್, ಡೆಪ್ಯುಟಿ ಕಮಿಷನರ್.

ಇಸ್ತಿಹಾರ್, ತಾರೀಖು 28ನೆ ಜುಲೈ 1904.

ಈ ಡಿಸ್ಟ್ರಿಕ್ಟಿನ ಸಬ್ ರಿಜಸ್ಟ್ರಿ ಆಫೀಸುಗಳಲ್ಲಿ ಈ ಕೆಳಗೆ ನಮೂದಿಸಿ ಇರುವ ದಸ್ತಾವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಬೇವಾರ್ಸಾಗಿ ನಿಂತಿವೆ. ಈ ಇಸ್ತಿಹಾರ್ ಘಾಯಿಷಾದ ಲಾಗಾಯಿತು ಒಂದು ತಿಂಗಳಿನೊಳಗಾಗಿ ಅವುಗಳನ್ನು ಸಂಬಂಧಪಟ್ಟವರು ಆಯಾ ಸಬ್ ರಿಜಸ್ಟ್ರಿ ಆಫೀಸುಗಳಲ್ಲಿ ವಾಪಸು ಪಡೆಯಬಹುದು. ಹಾಗೆ ತೆಗೆದುಕೊಳ್ಳುವುದಕ್ಕೆ ತಪ್ಪಿದರೆ ಮೈಸೂರು ರಿಜಸ್ಟ್ರೇಷನ್ ರಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ಸದರಿ ದಸ್ತಾವೇಜುಗಳನ್ನು ನಾಶಪಡಿಸುತ್ತೆಂದು ಇದರಿಂದ ತಿಳಿಯಪಡಿಸಿದೆ :—

ಜಂಜರ್ ನಂ.	ಸಬ್-ರಿಜಸ್ಟ್ರಿ ಆಫೀಸಿನ ಹೆಸರು.	ರಿಜಸ್ಟ್ರಿ ಬುಕ್ಕಿನ ನಂ.	ದಸ್ತಾವೇಜಿನ ನಂ.	ದಸ್ತಾವೇಜನ್ನು ಬರೆದ ತಾರೀಖು.	ರಿಜಸ್ಟ್ರಿದ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು ಮತ್ತು ವಿಳಾಸ.	ಬರಸಿಕೊಂಡವರ ಹೆಸರು ಮತ್ತು ವಿಳಾಸ.	ದಸ್ತಾವೇಜಿನ ಕಿಮ್ಮತು ಮತ್ತು ಸ್ವಭಾವ.
1	ಚಿಕ್ಕಮಗಳೂರು ...	I	700/1901—02	9—3—02	11—3—02	ಚಿಕ್ಕಮಗಳೂರು ಕೋಟೆಯಲ್ಲಿರುವ ಮಾವಿನಕೆರೆ ಕಲ್ಲಪ್ಪಶೆಟ್ರ ಹೆಂಡತಿ ರುದ್ರಮ್ಮ.	ಚಿಕ್ಕಮಗಳೂರು ಕೋಟೆಯಲ್ಲಿರುವ ಮಾವಿನಕೆರೆ ತೊಟ್ಟಿ ಪುಟ್ಟಪ್ಪಶೆಟ್ರ ಮಗ ಚಂದ್ರಪ್ಪ ಶೆಟ್ಟ.	400 ರೂಪಾಯಿನ ದಾನಪತ್ರ
2	ಡಿಟೋ ..	I	854/1901—02	28—4—02	28—4—02	ಕಾರೆಹಳ್ಳಿಯಲ್ಲಿರುವ ಹುಪ್ಪಾಡಿಗ ನಿರುವಾಣಯ್ಯನ ಮಗ ಶಿದ್ದಲಿಂಗಪ್ಪ.	ಬಾಳೆಹಳ್ಳಿಯಲ್ಲಿರುವ ಹಾಲೇನಹಳ್ಳಿ ತಿಮ್ಮಣ್ಣನ ಮಗ ವೆಂಕಟಪ್ಪ.	65 ರೂಪಾಯಿನ ಕ್ರಯ ಪತ್ರ
3	ಡಿಟೋ ..	I	892/1901—02	2—5—02	2—5—02	ಹಿರೆಮಾಗರವಳ್ಳಿಯಲ್ಲಿರುವ ತಿಮ್ಮಶೆಟ್ಟ ಹೆಂಡತಿ ಸಗನಿ	ಹಳಿಯೂರಲ್ಲಿರುವ ಸುಬ್ಬೇಗೌಡನ ಮಗ ದ್ಯಾವೇಗೌಡ.	20 ಡಿಟೋ
4	ಡಿಟೋ ...	I	893/1901—02	2—5—02	2—5—02	ಡಿಟೋ	ಹಳಿಯೂರು ತಮ್ಮಂಣಗೌಡರ ದ್ಯಾವೇಗೌಡರ ಮಗ ಶಿದ್ದೇಗೌಡ.	20 ಡಿಟೋ
5	ಡಿಟೋ ...	I	975/1901—02	22—5—02	22—5—02	ಚಿಕ್ಕಮಗಳೂರಲ್ಲಿರುವ ಪೂನಂ ಚಂದಜಿ ಮಗ ತ್ರಿಲೋಕಚಂದ್.	ಹೊಸಹಳ್ಳಿ ಪೇಟೆಯಲ್ಲಿರುವ ದಿರ್ವಾಸಾಬರ ಮಗ ದಾದೆಸಾಬ.	100 ರೂಪಾಯಿನ ಟ್ರಾನ್ಸ್‌ಫರ್ ಪತ್ರ
6	ಡಿಟೋ ...	I	1045/1901—02	5—3—02	11—6—02	ಹಾಂಧಿಯಲ್ಲಿರುವ ಹುರ್ಸೇಸಾಬರ ಮಗ ಅಬ್ದುಲ್‌ಗಫೂರ್‌ಸಾಬ್.	ಬಿಗ್ಗನಹಳ್ಳಿಯಲ್ಲಿರುವ ದಂಡಿನ ಇಮಾಂಸಾಬರ ಮಗ ಅಬ್ದುಲ್‌ರಜಾಕ್ ಸಾಬ.	100 ರೂಪಾಯಿನ ಕ್ರಯ ಪತ್ರ
7	ಡಿಟೋ ...	IV	67/1901—02	27—3—02	10—6—02	ಹಂಗರವಳ್ಳಿಯಲ್ಲಿರುವ ಹುಣಸಮಕ್ಕಿ ದ್ಯಾವಂಣನ ಮಗ ದೇವಶೆಟ್ಟ.	ಹಂಗರವಳ್ಳಿಯಲ್ಲಿರುವ ಅಂಣಯ್ಯನ ಮಗ ರಾಮಯ್ಯ.	30 ರೂಪಾಯಿನ ನೌಕರಿ ಕರಾರು
8	ತರಿಕೆರೆ ...	I	236/1901—02	8—2—02	11—2—02	ಚಿಕ್ಕಾತೂರಿನಲ್ಲಿರುವ ಕುಳವಾಡಿ ಅನುಮನ ಮಗ ಲಕ್ಕ.	ತರಿಕೆರೆಯಲ್ಲಿರುವ ಗಿರಿಯಂಣನ ಮಗ ಹನುಮಂಣ.	25 ರೂಪಾಯಿನ ಕ್ರಯ ಪತ್ರ
9	ಡಿಟೋ ..	I	451/1901—02	24—2—02	19—3—02	ಬಗ್ಗವಳ್ಳಿಯಲ್ಲಿರುವ ಜಮೀನ್ದಾರ್ರುನ ಡಿಗ ಗುರುರಾಯರು.	ಬಗ್ಗವಳ್ಳಿಯಲ್ಲಿರುವ ಕೋನೇರಿರಾಯರ ಮಕ್ಕಳು ಶಾಮಂಣ.	300 ಡಿಟೋ
10	ಡಿಟೋ ...	I	573/1901—02	24—6—02	25—6—02	ಗಡೀಹಳ್ಳಿ ಕಮ್ಮಾರ ಅರಿಯಂಣನ ಮಗ ಭೀಮಾಚಾರಿ.	ಲಕ್ಷ್ಮೀಸಾಗರದಲ್ಲಿರುವ ಕಮ್ಮಾರ ಭೀಮಣ್ಣನ ತಿಮ್ಮಯ್ಯ.	200 ಡಿಟೋ
11	ಮೂಡಗೆರೆ .	IV	23/1901—02	6—5—02	7—5—02	ಇಡಕಣಿಯಲ್ಲಿರುವ ಪಾಂಡ್ರಬೀರನ ಮಗ ದೇವು.	ಕೆಳಗೂರಲ್ಲಿರುವ ಶೇಷಯ್ಯನ ಮಗ ತಿರುವೆಂಗಡಯ್ಯ.	30 ರೂಪಾಯಿನ ನೌಕರಿ ಕರಾರು
12	ಶ್ರಿಂಗೇರಿ ...	I	85/1900—01	13—2—01	15—2—01	ಶ್ರಿಂಗೇರಿಗೆ ಸೇರಿದ ತಿರಕೊಡಲಲ್ಲಿರುವ ವಿಶ್ವೇಶ್ವರ ಭಟ್ಟರ ಮಗ ಸುಬ್ಬಾಭಟ್ಟರು.	ಶ್ರಿಂಗೇರಿಗೆ ಸೇರಿದ ಅನಿಗುಂದದಲ್ಲಿರುವ ಐಭಟ್ಟರ ಕೃಷ್ಣಭಟ್ಟರ ಮಗ ಸುಬ್ರಹ್ಮಣ್ಯಭಟ್ಟರು.	11½ ರೂಪಾಯಿನ ಖಾಯಂಗೇಣಿ
	ಡಿಟೋ ...	I	74/1901—02	10—4—02	11—4—02	ಶ್ರಿಂಗೇರಿಗೆ ಸೇರಿದ ತಾನುಗೋಡಲ್ಲಿರುವ ಫವತಿ ಶಿಂಗಪ್ಪಯ್ಯನ ಹೆಂಡತಿ ಶೇಷಮ್ಮ.	ಶ್ರಿಂಗೇರಿಯಲ್ಲಿರುವ ವಿಶ್ವೇಶ್ವರಭಟ್ಟರ ಮಗ ಕೃಷ್ಣಭಟ್ಟರು.	40 ರೂಪಾಯಿನ ಕ್ರಯ ಪತ್ರ

ಎಂ. ನಾರಾಯಣರಾವ್, ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

249

270

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸಃ 1904—1905ನೆ ಇಸವಿ ವಿ|| ಅರ್ಜೀ ನಂಬರು 13.

ಮೃತಪಟ್ಟ ಭಾಗವ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು, ಮೈಸೂರು ಶ್ರೀರಾಂಪೇಟೆಯಲ್ಲಿರುವ ಪಟ್ಟದಬೀದಿ ಭಾಗವತ ರಾಮೈಯ್ಯನವ ಹೆಂಡತಿ ಭಾಗವ್ಯನ ಮಗಳು ಲಕ್ಷ್ಮಿಕ್ರದೇವಮ್ಮ ಮೈನರ್, ಗಾರ್ಡಿಯರ್ ಗಂಡ ನರಸಿಹ್ಮಯ್ಯ, ಮೃತಪಟ್ಟ ಸದರೀ ಭಾಗವ್ಯನವರಿಗೆ ಮಗಳು ಆಗಬೇಕೆಂಬ ಹಕ್ಕು ದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಭಾಗವ್ಯನವರ ಜಿಂಟಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಭಾಗವ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸಃ 1904ನೆ ಇಸವಿ ಜುಲೈ ತಿಂಗಳು 27ನೆ ತಾರೀಖಿನಲ್ಲಿ ಕೋರ್ಟು ಮೊಹರು ನಿಶಿ ನಮ್ಮ ದಸ್ತಖತ್ತಿನಿಂದ ಕೊಡೋಣವಾಗಿದೆ.

ಸಃ 1903—1904ನೆ ಇಸವಿ ವಿ|| ಅರ್ಜೀ ನಂಬರ್ .580

ಮೃತಪಟ್ಟ ನನ್ನಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರು ಕಿಲ್ಲೆಯಲ್ಲಿರುವ ಪುರುಷೋತ್ತುಮ ಭಟ್ಟರ ಮೊಮ್ಮಗ ಪುರುಷೋತ್ತುಮ ವೆಂಕಟಸುಬ್ಬಾ ಶಾಸ್ತ್ರಿ, ಮೃತಪಟ್ಟ ಸದರೀ ನನ್ನಮ್ಮನವರಿಗೆ ಸೋದರ ಅಳಿಯ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ಸ್ಥಳದ ವಾಸಸ್ಥರಾಗಿ ಮೃತಪಟ್ಟ ನನ್ನಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸಃ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸಃ1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯುತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನನ್ನಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸಃ 1904ನೆ ಇಸವಿ ಜುಲೈ ತಿಂಗಳು 27ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತಿನಿಂದ ಕೊಡೋಣವಾಗಿದೆ.

ಟಿ. ಪರಮಶಿವ ಅಯ್ಯರ್,
ಸಬ್ ಜಡ್ಜ.

ಚಿಕ್ಕಮಗಳೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸಃ1904—1905ನೆ ಇಸವಿ ಅರ್ಜೀ ನಂಬರ್ 49.

ಮೃತಪಟ್ಟ ಪಟೇಲ್ ಮಾಸ್ತೀಗೌಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಆರದವಳ್ಳಿ ಗ್ರಾಮದಲ್ಲಿರುವ 1ನೆ ದೊಡ್ಡ ಪುಟ್ಟೇಗೌಡ, 2ನೆ ಸಂಣ ಚಿಕ್ಕೇಗೌಡ, ಮೃತಪಟ್ಟ ಪಟೇಲ ಮಾಸ್ತೀ ಗೌಡನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಆರದವಳ್ಳಿ ಗ್ರಾಮದಲ್ಲಿ ವಾಸಸ್ಥರಾಗಿ ಮೃತಪಟ್ಟ ಮಾಸ್ತಿಗೌಡನವರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸಃ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಾಸ್ತಿಗೌಡನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸಃ 1904ನೆ ಇಸವಿ ಜುಲೈ ತಿಂಗಳು 27ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತಿನಿಂದ ಕೊಡೋಣವಾಗಿದೆ.

ಎಂ. ಹಂಜಾಹುಸೇನ್,
ಸಬ್ ಜಡ್ಜ.

ಬೆಂಗಳೂರ್ ಗವರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ.

ಇ ತಾರೀಖು 1ನೆ ಆಗಸ್ಟು 1904.

1905ನೆ ಸಾಲಿನ ಲೋವರ್ ಸೆಕಂಡರೀ ಟೆಕ್ಸ್ಟ್ ಗದ್ಯಭಾಗವು ಈಗ ಮಾರಾಟಕ್ಕೆ ಸಿದ್ಧವಾಗಿರುತ್ತೆಂಬದಾಗಿ ಇದರಿಂದ ತಿಳಿಸಲ್ಪಟ್ಟಿದೆ. ಖರೀದಿ ಪ್ರತಿ ಬಂದಕ್ಕೆ ಅಣೆ $2\frac{1}{2}$ (ಎರಡುವರಾಹಗಳು.)

ಎಸ್. ಅಬ್ದುಲ್ ಹೈ,
ಕ್ಯೂರೇಟರ್.

272

1249+1251

ಮೈಸೂರ ಗೆಜೆಟ್.

ನಂ. 39] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 31.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 4, ಸನ್ 1904.

III ನ ಖಾಗ

ಮೈಸೂರು ಶ್ರೀಮನ್ ಮಹಾರಾಜರವರ ಗವರ್ನಮೆಂಟ್.

ಲೆಜಿಸ್ಲೆಟಿವು ಇಲಾಖೆ.

1904ನೆಯ ಇಸವಿಯ IVನೆಯ ನಂಬರ್ ರೆಗ್ಯುಲೇಷನ್.

(1904ನೆಯ ಏಪ್ರೆಲ್ 19ನೆಯ ತಾರೀಖಿನಲ್ಲಿ ನಿರ್ಣಯಿಸಲ್ಪಟ್ಟಿತು.)

1903ನೆಯ ಮೈಸೂರು ನಗರಾಭಿವೃದ್ಧಿಯ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವ ಒಂದು ರೆಗ್ಯುಲೇಷನ್.

1903ನೆಯ ಇಸವಿಯ ಮೈಸೂರು ನಗರಾಭಿವೃದ್ಧಿಯ ರೆಗ್ಯುಲೇಷನನ್ನು ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಶ್ರೀಮನ್ ಮಹಾರಾಜರವರು ಈ ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸುತ್ತಾರೆ :—

ಪೀಠಿಕೆ.

1903ನೆಯ ಇಸವಿಯ III ನೆಯ ರೆಗ್ಯುಲೇಷನಿನ 20ನೆಯ ಪ್ರಕರಣಕ್ಕೆ ತರುವಾಯ ಒಂದು ಹೊಸ ಪ್ರಕರಣವನ್ನು ಸೇರಿಸೋಣ.

1903ನೆಯ ಇಸವಿಯ ಮೈಸೂರು ನಗರಾಭಿವೃದ್ಧಿಯ ರೆಗ್ಯುಲೇಷನಿನ 20ನೆಯ ಪ್ರಕರಣಕ್ಕೆ ತರುವಾಯ ಕೆಳಗಿನ ಹೊಸ ಪ್ರಕರಣವು ಸೇರಿಸಲ್ಪಡತಕ್ಕದ್ದು ಅದು ಯಾವದೆಂದರೆ :—

ಜನಗಳು ಅಧಿಕವಾಗಿ ಸೇರುವುದನ್ನು ಕಡಮೆ ಮಾಡುವ ಅಧಿಕಾರ.

" 20. ಎ. (1) ಅಭಿವೃದ್ಧಿಯ ಏರ್ಪಾಡಿಗೆ ಒಳಪಟ್ಟ ಯಾವ ಪ್ರದೇಶದಲ್ಲಿಯಾದರೂ ಇರುವ ಕಟ್ಟಡಗಳಲ್ಲಿ ಜನಗಳು ಅಧಿಕವಾಗಿ ಸೇರುವುದನ್ನು ಕಡಮೆ ಮಾಡುವುದಕ್ಕೆ ಈ ಕೆಳಗೆ ವಿಧಿಸಿರುವ ಮೇರೆ ಬೋರ್ಡಿನವರು ಯಾವಾಗಲಾದರೂ ಕ್ರಮ ಜರಿಗಿಸಬಹುದು.

(2) ಒಂದು ಕಟ್ಟಡದ ಅಥವಾ ನೆರೆಯ ಯಾವದಾದರೂ ಕಟ್ಟಡದ ನಿವಾಸಿಗಳ ಆರೋಗ್ಯಕ್ಕೆ ಅಪಾಯಕರವಾಗಿ ಅಥವಾ ವಿರೋಧವಾಗಿರುವಷ್ಟು ಅಥವಾ ಆಗಬಹುದಾದಷ್ಟು ಒಂದು ಕಟ್ಟಡ ಒಳಭಾಗದಲ್ಲಿ ಜನರು ಅಧಿಕವಾಗಿ ಸೇರಿರುವುದಾಗಿ ಬೋರ್ಡಿನವರು ಎಣಿಸುವಾಗಲೆಲ್ಲಾ ಹಾಗೆ ಅಧಿಕವಾಗಿ ಜನರು ಸೇರುವುದನ್ನು ತಪ್ಪಿಸುವುದಕ್ಕಾಗಿ ಒಂದು ಹುಕುಮನ್ನು ಪಡೆಯುವುದಕ್ಕೋಸ್ಕರ ಒಂದು ಮೊದಲನೆಯ ತರಗತಿಯ ಮಾಜಿಸ್ಟ್ರೇಟರ ಮುಂದೆ ಬೋರ್ಡಿನವರು ಕ್ರಮ ನಡಿಸಬಹುದು.

(3) ಪಿರ್ಯಾದು ಮಾಡಲ್ಪಟ್ಟಂತೆ ಜನಗಳು ಅಧಿಕವಾಗಿ ಸೇರೋಣವು ರೋಗವನ್ನು ಅಥವಾ ರೋಗದ ಭಯವನ್ನು ಉಂಟುಮಾಡಬಹುದೆಂದು ಅಭಿಪ್ರಾಯಪಡುವ ಮತ್ತು ಬೋರ್ಡಿನವರಿಂದ ಅಥವಾ ಗವರ್ನಮೆಂಟಿನವರಿಂದ ಕ್ರಮವಾಗಿ ಅಧಿಕಾರ ಹೊಂದಿರುವ ಒಬ್ಬ ಮೆಡಿಕಲ್ (ವೈದ್ಯ) ಆಫಿಸರ ಸರ್ಟಿಫಿಕೇಟು ಹಾಜರ್ಮಾಡಿದಾಗ ಮತ್ತು ಅಂತಹ ಮಾಜಿಸ್ಟ್ರೇಟರಿಗೆ ಅವಶ್ಯ ತೋರುವ ಯಾವೆದಾದರೂ ಅಧಿಕವಾದ ವಿಚಾರಣೆಯ ತರುವಾಯ ಅಂತಹ ಮಾಜಿಸ್ಟ್ರೇಟರಿಗೆ ಅವಶ್ಯವಾಗಿ ತೋರುವಷ್ಟು ಮಟ್ಟಿಗೆ ಅಂತಹ ಕಟ್ಟಡದಲ್ಲಿ ಇಳುಕೊಂಡಿರುವವರ ಅಥವಾ ಬಕ್ಕಲುತನ ಮಾಡುವವರ ಅಥವಾ ವಾಸಮಾಡುವವರ ಸಂಖ್ಯೆಯನ್ನು ಆರುವಾರಗಳಿಗಿಂತ ಅಧಿಕವಾಗಿಲ್ಲದ ಅಥವಾ ಹತ್ತು ದಿನಗಳಿಗೆ ಕಡಮೆ ಇಲ್ಲದ ಸರಿಯಾವಷ್ಟು ಕಾಲದೊಳಗಾಗಿ ಕಡಮೆ ಮಾಡಬೇಕೆಂದು ಅಂತಹ ಕಟ್ಟಡದ ಮಾಲೀಕನನ್ನು ಅಂತಹ ಮಾಜಿಸ್ಟ್ರೇಟರು ಕೇಳಬಹುದು ಅಥವಾ ಅವರಿಗೆ ನ್ಯಾಯವಾಗಿಯೂ ಸರಿಯಾಗಿಯೂ ತೋರುವ ಮತ್ಯಾವ ಹುಕುಮನ್ನಾದರೂ ಮಾಡಬಹುದು.

(4) ಅಂತಹ ಕಟ್ಟಡವು ಬಳಬಾಡಿಗೆಗೆ ಕೊಡಲ್ಪಟ್ಟಿದ್ದರೆ ಇಳುಕೊಂಡಿರುವವರ, ಬಕ್ಕಲುತನ ಇರುವವರ ಅಥವಾ ನಿಜವಾಗಿ ವಾಸಮಾಡುವವರ ಧಣಿಯಾದ ಮೊದಲು ಬಾಡಿಗೆದಾರನೇ (3) ಉಪ ಪ್ರಕರಣದ ಉದ್ದೇಶಗಳಿಗಾಗಿ ಕಟ್ಟಡದ ಮಾಲೀಕನಾಗಿ ಭಾವಿಸಲ್ಪಡತಕ್ಕದ್ದು.

(5) (3) ನೆಯ ಉಪ ಪ್ರಕರಣದ ಮೇರೆ ತಗಾದೆ ಕೊಡಲ್ಪಟ್ಟಿರುವ ಯಾವ ಮಾಲೀಕನಾದರೂ ಅದರಿಂದ ವಿಧಿಸಲ್ಪಟ್ಟಿರುವ ಷರತ್ತುಗಳನ್ನು ನೆರವೇರಿಸುವ್ರದಕ್ಕೆ ಅವಶ್ಯನಾಗಿರುವಷ್ಟು ಅಂತಹ ಕಟ್ಟಡದಲ್ಲಿ ಇಳುಕೊಂಡಿರುವವರಿಗೆ, ಬಕ್ಕಲುತನ ಮಾಡುವವರಿಗೆ ಅಥವಾ ನಿಜವಾಗಿ ವಾಸಮಾಡುವವರಿಗೆ ತಗಾದೆ ನೋಟೀಸಿನಲ್ಲಿ ಕಂಡ ವಾಯಿದೆಯೊಳಗಾಗಿ ಅಂತಹ ಕಟ್ಟಡವನ್ನು ಖಾಲಿಮಾಡಬೇಕೆಂದು ಲಿಖಿತವಾದ ನೋಟೀಸನ್ನು ಕೊಡುವುದಕ್ಕೆ ಬದ್ಧನಾಗಿರತಕ್ಕದ್ದು, ಮತ್ತು ಅಂತಹ ನೋಟಿಸನ್ನು ಪಡೆಯುವ ಅಂತಹ ಇಳುಕೊಂಡಿರುವವರು, ಬಕ್ಕಲುತನ ಇರುವವರು ಅಥವಾ ನಿವಾಸಿಗಳು ಆ ಪ್ರಕಾರ ಮಾಡಲು ಬದ್ಧರಾಗಿರುತ್ತಾರೆ."

1903ನೆಯ ಇಸವಿಯ III ನೆಯ ರೆಗ್ಯುಲೇಷನಿನ 41ನೆಯ ಪ್ರಕರಣಕ್ಕೆ ತರುವಾಯ ಒಂದು ಹೊಸ ಪ್ರಕರಣವನ್ನು ಸೇರಿಸೋಣ.

2. ಮೇಲ್ಕಂಡ ರೆಗ್ಯುಲೇಷನಿನ 41ನೆಯ ಪ್ರಕರಣಕ್ಕೆ ತರುವಾಯ ಕೆಳಗಿನ ಹೊಸ ಪ್ರಕರಣವನ್ನು ಸೇರಿಸತಕ್ಕದ್ದು :—

'41. A. 20. A. ಪ್ರಕರಣದ (3) ನೆಯ ಉಪ ಪ್ರಕರಣದ ಮೇರೆ ಕೊಡೋಣಾದ ಯಾವದಾದರೂ ತಗಾದೆಯಲ್ಲಿ ನಮೂದಾಗುವ ತಾರೀಖಿಗೆ ತರುವಾಯ ಅಂತಹ ತಗಾದೆ ನೋಟೀಸಿಗೆ ವಿರೋಧವಾಗಿ ಯಾವೆದಾದರೂ ಕಟ್ಟಡದಲ್ಲಿ ಜನರು ಅಧಿಕವಾಗಿ ಸೇರುವುದಕ್ಕೆ ಅಪ್ಪಣೆ ಕೊಡುವ ಯಾವ ಕಟ್ಟಡದ ಯಾವ ಮಾಲೀಕನಾದರೂ ಮತ್ತು ಸದರಿ ಪ್ರಕರಣದ (5) ನೆಯ ಉಪ ಪ್ರಕರಣದ ಮೇರೆ ಕೊಡಲ್ಪಟ್ಟ ನೋಟೀಸು ಮೇರೆ ಅಂತಹ ಯಾವ ಕಟ್ಟಡವನ್ನು ಖಾಲಿ ಮಾಡುವುದಕ್ಕೆ ತಪ್ಪುವ ಯಾವ ಮನುಷ್ಯನಾದರೂ ಅಂತಹ ಜನಗಳು ಅಧಿಕವಾಗಿ ಸೇರುವುದು ಅಥವಾ ಹಾಗೆ ಖಾಲಿ ಮಾಡುವುದಕ್ಕೆ ತಪ್ಪುವುದು ನಡೆಯುವ ಅಂತಹ ತಗಾದೆ ನೋಟೀಸಿನಲ್ಲಿ ಕಂಡ ತಾರೀಖಿಗೆ ತರುವಾಯ ಪ್ರತಿ ದಿನಕ್ಕೂ ಹತ್ತು ರೂಪಾಯಿಗಳ ವರೆಗೂ ಜುರ್ಮಾನೆಯಿಂದ ಶಿಕ್ಷಿಸಲ್ಪಡತಕ್ಕದ್ದು."

ಜನರು ಅಧಿಕವಾಗಿ ಸೇರುವ ಹಾಗೆ ಮಾಡಿದ್ದಕ್ಕೆ ದಂಡನೆ ವಗೈರೆ.

274

1253

1904ನೆಯ ನಂಬರ್ .Vನೆಯ ರೆಗ್ಯುಲೇಷ್ಷ.

(1904ನೆಯ ಜೂ್ 22ನೆಯ ತಾರೀಖಿನಲ್ಲಿ ನಿರ್ಣಯಿಸಲ್ಪಟ್ಟಿತು.)

1901ನೆಯ Vನೆಯ ನಂಬರ್ ಮೈಸೂರು ಎಕ್ಸೈಸ್ ರೆಗ್ಯುಲೇಷನನ್ನು ಇನ್ನೂ ತಿದ್ದುಪಾಟು ಮಾಡುವುದಕ್ಕೆ ಬಂದು ರೆಗ್ಯುಲೇಷ್ಷ.

ಟೀಕೆ.

1901ನೆಯ ಮೈಸೂರು ಎಕ್ಸೈಸ್ ರೆಗ್ಯುಲೇಷನನ್ನು ಇನ್ನೂ ತಿದ್ದುಪಾಟು ಮಾಡುವುದು ಯುಕ್ತವಾಗಿರುವುದರಿಂದ ಶ್ರೀಮ್ ಮಹಾರಾಜರವರು ಕೆಳಗಿನಂತೆ ವಿಧಿಸಲು ಅಪ್ಪಣೆ ದಯಪಾಲಿಸುತ್ತಾರೆ :—

6 ಮತ್ತು 7ನೆಯ ಪ್ರಕರಣಗಳಿಗೆ ಬದಲಾಗಿ ಹೊಸ ಪ್ರಕರಣಗಳನ್ನು ಇಡುವುದು.

1901ನೆಯ ಮೈಸೂರು ಎಕ್ಸೈಸ್ ರೆಗ್ಯುಲೇಷನಿನ 6 ಮತ್ತು 7ನೆಯ ಪ್ರಕರಣಗಳಿಗೆ ಬದಲಾಗಿ ಕೆಳಗಿನವು ಇಡಲ್ಪಡತಕ್ಕದ್ದು, ಅವು ಯಾವವೆಂದರೆ :—

ಮದ್ಯದ ಅಥವಾ ಮತ್ತೇರಿಸತಕ್ಕ ಪದಾರ್ಥದ ಆವುದು.

"6 ಡೆಪ್ಯುಟಿ ಕವಿಾಷನರ ಅಪ್ಪಣೆಯಹೊರ್ತು ಮೈಸೂರಿಗೆ ಯಾವ ಮದ್ಯವಾಗಲಿ ಅಥವಾ ಮತ್ತೇರಿಸತಕ್ಕ ಪದಾರ್ಥವಾಗಲಿ ಆವುದು ಮಾಡತಕ್ಕದ್ದಲ್ಲ; ಮದ್ಯ, ಅಥವಾ ಮತ್ತೇರಿಸತಕ್ಕ ಪದಾರ್ಥಗಳು, ಅಥವಾ ಯಾವತರದ ಮದ್ಯ ಅಥವಾ ಮತ್ತೇರಿಸತಕ್ಕ ಪದಾರ್ಥಗಳಾಗಲಿ ಈ ರೆಗ್ಯುಲೇಷನಿನ ಪ್ರಕಾರ ಅವು ಗುರಿಯಾಗುವ ಹಾಸಲು ಏನಾದರೂ ಇದ್ದರೆ ಅದು ಪಾವತಿ ಆದಮೇಲೂ ಮತ್ತು ಡೆಪ್ಯುಟಿ ಕವಿಾಷನರಿಗೆ ಯುಕ್ತವೆಂದು ತೋರುವ ಇತರ ಬಡಂಬಡಿಕೆಗಳ ಪ್ರಕಾರವೂ ಆಮೆದು ಆಗಲು ಸರ್ಕಾರದವರ ಹುಕುಂಗಳಿಗೆ ಒಳಪಟ್ಟು ಡೆಪ್ಯುಟಿ ಕವಿಷನರು ಆಗಿಂದಾಗ್ಗೆ ಅಪ್ಪಣೆ ಕೊಡಬಹುದು, ಮತ್ತು ಅಂತಹ ಅಪ್ಪಣೆಯನ್ನು ತಳ್ಳುಪಡಿ ಮಾಡಬಹುದು."

ಮದ್ಯ ಅಥವಾ ಮತ್ತೇರಿಸತಕ್ಕ ಪದಾರ್ಥದ ರಫ್ತು.

"7 ಡೆಪ್ಯುಟಿ ಕವಿಾಷನರ ಅಪ್ಪಣೆಯ ಹೊರ್ತು ಯಾವ ಮದ್ಯ ಅಥವಾ ಮತ್ತೇರಿಸತಕ್ಕ ಪದಾರ್ಥವು ಮೈಸೂರಿನಿಂದ ರಫ್ತು ಮಾಡಲ್ಪಡತಕ್ಕದ್ದಲ್ಲ ; ಮದ್ಯ ಅಥವಾ ಮತ್ತೇರಿಸತಕ್ಕ ಪದಾರ್ಥಗಳು, ಅಥವಾ ಯಾವ ತರದ ಮದ್ಯ ಅಥವಾ ಮತ್ತೇರಿಸತಕ್ಕ ಪದಾರ್ಥಗಳಾಗಲಿ ಈ ರೆಗ್ಯುಲೇಷನಿನ ಪ್ರಕಾರ ಅವು ಗುರಿಯಾಗುವ ಹಾಸಲು ಏನಾದರೂ ಇದ್ದರೆ ಅದು ಪಾವತಿ ಆದಮೇಲೂ ಮತ್ತು ಡೆಪ್ಯುಟಿ ಕವಿಷನರಿಗೆ ಯುಕ್ತವೆಂದು ತೋರುವ ಇತರ ಬಡಂಬಡಿಕೆಗಳ ಪ್ರಕಾರವೂ ರಫ್ತಾಗಲು ಸರ್ಕಾರದವರ ಹುಕುಂಗಳಿಗೆ ಒಳಪಟ್ಟು ಡೆಪ್ಯುಟಿ ಕವಿಾಷನರು ಆಗಿಂದಾಗ್ಗೆ ಅಪ್ಪಣೆ ಕೊಡಬಹುದು, ಮತ್ತು ಅಂತಹ ಅಪ್ಪಣೆಯನ್ನು ತಳ್ಳುಪಡಿ ಮಾಡಬಹುದು."

ಪಿ. ಎ. ಕೃಷ್ಣಮೂರ್ತಿ,
ಮೈಸೂರು ದಿವಾ.

275

1255

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪಾಯಿಷ್ ಆದ್ದು. [ನಂ. 32.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 11, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಣಿಟೆಂಡೆಂಟರು, ಕನ್ಟ್ರೋಲರವರು, ಪಬ್ಲಿಕ್‌ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಣಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 25—26ನೆ ಜುಲೈ 1904.

ನಂ. 633—31-2—ಲೋ. ಬೋ., ಇದರಿಂದ ಸಮಸ್ತ ಜನಗಳ ತ್ರಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಬೆಂಗಳೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

	ಸ್ಥಳ.		ತಾಲ್ಲೂಕು.
1.	ಸಂಪೆಗೆಹಳ್ಳಿ	...	ಬೆಂಗಳೂರು.
2.	ಚಂದಾಪುರ	..	ಆನೆಕಲ್
3.	ಬಾನಹಳ್ಳಿ	..	ಡಿಟೋ
4.	ಮಾಯಸಂದ್ರ	..	ಡಿಟೋ
5.	ಇತ್ತಂಗೂರು	..	ಡಿಟೋ
6.	ಹಂದೇನಹಳ್ಳಿ	...	ಡಿಟೋ
7.	ನಂಜಾಪುರ	..	ಡಿಟೋ
8.	ಯೆಮರೆ	...	ಡಿಟೋ
9.	ಸರ್ಜಾಪುರ	..	ಡಿಟೋ
10.	ಹುಲ್ಲೇಗೌಡನಹಳ್ಳಿ	...	ನೆಲಮಂಗಲ.
11.	ತ್ಯಾಮಗೊಂಡ್ಲು	...	ಡಿಟೋ
12.	ಜಕ್ಕಸಂದ್ರ	..	ಡಿಟೋ
13.	ಹೆಗ್ಗುಂದ	..	ಡಿಟೋ
14.	ಹೊನ್ನಸಂದ್ರ		ನೆಲಮಂಗಲ.
15.	ಮೋಟಗಾನಹಳ್ಳಿ	...	ಮಾಗಡಿ.
16.	ಮೂಗಬಾಳ್	..	ಹೊಸಕೋಟೆ.
17.	ಕಾಡಗೋಡಿ	..	ಡಿಟೋ
18.	ಕಿಟ್ಟಗನೂರು	...	ಡಿಟೋ
19.	ನಿಡಘಟ್ಟ	...	ಡಿಟೋ
20.	ಜೋಡಿ ಮಾರಗೊಂಡಹಳ್ಳಿ	..	ಡಿಟೋ
21.	ಬಿಲಿಸಿವಲೆ	..	ಡಿಟೋ
22.	ಸೋಂಪುರ		ಡಿಟೋ
23.	ತಾವರೆಕೆರೆ	..	ಡಿಟೋ
24.	ಕಂಣೂರು	..	ಡಿಟೋ
25.	ಏಕಾಸಿಪುರ	..	ದೊಡ್ಡಬಳ್ಳಾಪುರ.
26.	ಕನ್ನಮಂಗಲ	..	ದೇವನಹಳ್ಳಿ.

276

ತಾರೀಖು 25--26ನೆ ಜುಲೈ 1904.

ನಂ. 635—17-5—ಲೋ. ಬೋ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ಣ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಚಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ಣಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ಎಡಕನಹಳ್ಳಿ	..	ಗುಬ್ಬಿ,	3. ಹೊಸೂರು	...	ತುಮಕೂರು.
2. ತಳಿಕಟ್ಟೆ	....	ಡಿಟೋ			

ತಾರೀಖು 26—27ನೆ ಜುಲೈ 1904.

ನಂ. 668—34-2—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ಣ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಚಂ 9383— ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ಣಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ರಾಮನಹಳ್ಳಿ	...	ಚಿಕ್ಕಮಗಳೂರು	5. ಬಿಸಲಹಳ್ಳಿ	...	ಕಡೂರು.
2. ಹೊಸೂರು	...	ತರೀಕೆರೆ	6. ಹೊಸಹಳ್ಳಿ	..	ಡಿಟೋ
3. ಕೋಡಿಹಳ್ಳಿ	...	ಡಿಟೋ	7. ಹಳ್ಳಿಕಟ್ಟೆನಾಯಿಕನಹಳ್ಳಿ	..	ಡಿಟೋ
4. ಹಿರಿಕತ್ತೂರು	...	ಡಿಟೋ			

ತಾರೀಖು 26—27ನೆ ಜುಲೈ 1904.

ನಂ. 670—30-2—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಎರಡು ತಿಂಗಳುಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ:—

ಶಿವಮೊಗ್ಗ ಡಿಸ್ಟ್ರಿಕ್ಟ್.

ನಂ.	ತಾಲ್ಲೂಕು.	ಸ್ಥಳ.	ನಂ.	ತಾಲ್ಲೂಕು.	ಸ್ಥಳ.
1.	ಶಿವಮೊಗ್ಗ	ಶಿವಮೊಗ್ಗ ಟವ್ನ್	25.	ಷಿಕಾರಿಪುರ	ಕೊರಟಗೆರೆ
2.	ಡಿಟೋ ...	ಮಂಡಿ	26.	ಹೊನ್ನಾಳಿ	ಕುಂಬಲ್ನೇಲ್
3.	ಡಿಟೋ ..	ಮಾಯಿದೊಳಲ್	27.	ಡಿಟೋ ...	ಕೂಳಂಬಿ
4.	ಡಿಟೋ ..	ಹೊಳೆಹೊನ್ನೂರು	28.	ಡಿಟೋ ..	ನಿರಲಗುಂಡಿ
5.	ಡಿಟೋ ..	ಮತ್ತೂರು	29.	ಡಿಟೋ ..	ಸುರಹೊನ್ನೆ
6.	ಡಿಟೋ .	ಹೊಸಹಳ್ಳಿ	30.	ಡಿಟೋ ..	ಹೊಸಹಳ್ಳಿ
7.	ಡಿಟೋ ..	ಹೊಳಲೂರು	31.	ಡಿಟೋ ...	ಹುಣಸೆಗಟ್ಟ
8.	ಡಿಟೋ	ಹರಿಗಿ	32.	ಚನ್ನಗಿರಿ ...	ಬೆರದೊಣೆ
9.	ಡಿಟೋ ...	ಉರಗದೂರು	33.	ಡಿಟೋ ..	ಕಟ್ಟಲಗೆರೆ
10.	ಡಿಟೋ ..	ನಿಡಿಗಿ	34.	ಡಿಟೋ .	ದಿಗ್ಗೇನಹಳ್ಳಿ
11.	ಡಿಟೋ ..	ಸೈದರಕಲ್ಲಹಳ್ಳಿ	35.	ಡಿಟೋ	ಮುದ್ದೇನಹಳ್ಳಿ
12.	ಡಿಟೋ ..	ಹರಕೆರೆ	36.	ಡಿಟೋ ...	ಉಟ್ಟಗಿ
13.	ಡಿಟೋ	ಮಂಗೋಟಿ	37.	ಡಿಟೋ ...	ಕರಿಗನೂರು
14.	ಡಿಟೋ ...	ಯಡೆಹಳ್ಳಿ	38.	ಡಿಟೋ ..	ಲಲೂರು
15.	ಡಿಟೋ ...	ಕೂಡಿ	39.	ಡಿಟೋ ..	ಕರೆಕಟ್ಟೆ
16.	ಡಿಟೋ ...	ಕಲ್ಲಿಹಾಳು	40.	ಡಿಟೋ ..	ಮಲ್ಲಾಪುರ
17.	ಡಿಟೋ .	ಹೊಳೆಬೆನವಳ್ಳಿ	41.	ಡಿಟೋ ...	ಲಿಂಗದಹಳ್ಳಿ
18.	ಡಿಟೋ ..	ಇಟ್ಟಿಗೆಹಳ್ಳಿ	42.	ಡಿಟೋ ...	ಚಿಕ್ಕಕೋಗಲೂರು
19.	ಡಿಟೋ ..	ನವಲೆ	43.	ಡಿಟೋ ..	ಪಾಂಡವಗೆರೆ
20.	ಡಿಟೋ ...	ಸಂತೆಕಡೂರು	44.	ಡಿಟೋ ...	ಅನ್ತಪ್ಪನಹಳ್ಳಿ
21.	ಹುಂಸಿ ..	ಅಯನೂರು	45.	ಡಿಟೋ ...	ಸೋವನಲಾಪುರ
22.	ಸೊರಬ ..	ಹುನ್ನೆತೆಪ್ಪ	46.	ಡಿಟೋ ..	ಚಿಕ್ಕಗಂಗೂರು
23.	ಡಿಟೋ ..	ಬೆಣ್ಣೂರು	47.	ಸಾಗರ ...	ಸಾಗರ
24.	ಡಿಟೋ ..	ಪುರ			

1257

ತಾರೀಖು 26—27ನೆ ಜುಲೈ 1904.

ನಂ. 672—35-2—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾ ಮೊಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ನ್‌ಗಳ ಉದ್ದೇಶಗಳಿಗೋಸ್ಕರ ಚಿತ್ರ ದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಕಲಕೆರೆ ..	ಹೊಳಲಕೆರೆ.	3. ಹುಲಿಕೆರೆ ...	ಹೊಳಲಕೆರೆ.
2. ಪಾವೇನಹಳ್ಳಿ ..	ಡಿಟೋ	4. ಹೆಬ್ಬಾಳ ...	ದಾವಣಗೆರೆ.

ತಾರೀಖು 29ನೆ ಜುಲೈ 1904.

ನಂ. 762—17-6—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾ ಮೊಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳವು ರೋಗ ತಗಲಿದ ಪ್ರದೇಶವಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.
ಬೈಚನಹಳ್ಳಿ	ಗುಬ್ಬಿ.

ತಾರೀಖು 4—5ನೆ ಆಗಸ್ಟ್ 1904.

ನಂ. 999-31-4—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷ್ನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾ ಮೊಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷ್ನ್‌ಗಳ ಉದ್ದೇಶಗಳಿಗೋಸ್ಕರ ಬಂಗಳೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಸೋಂಪುರ ...	ಆನೇಕಲ್.	5. ಕನ್ನಮಂಗಲ ..	ಹೊಸಕೋಟೆ.
2. ಜಿಗಣಿ ...	ಡಿಟೋ	6. ಹಿಂಡಿಗನಾಳ	ಡಿಟೋ
3. ಬಿಳಿಕೆರೆ ...	ಚನ್ನಪಟ್ಣ.	7. ಜೋಡಿ ವೀರ್ದಹಳ್ಳಿ ..	ದೊಡ್ಡಬಳ್ಳಾಪುರ
4. ಹೊಸಕೋಟೆ ...	ಹೊಸಕೋಟೆ.	8. ದೊಂಬರಹಳ್ಳಿ ..	ಡಿಟೋ

ತಾರೀಖು 4-5ನೆ ಆಗಸ್ಟ್ 1904.

ನಂ. 1013—34-4—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಿಂದಾಗ್ಗೆ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು ಎರಡು ತಿಂಗಳುಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ಕಡೂರು ಡಿಸ್ಟ್ರಿಕ್ಟು.

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಕುಲಾರದಹಳ್ಳಿ ...	ಚಿಕ್ಕಮಗಳೂರು.	11. ಬೀರೂರು ..	ಕಡೂರು.
2. ಕಟ್ಟೆತಿಮ್ಮನಹಳ್ಳಿ ...	ಡಿಟೋ	12. ಸಕ್ಕರಪಟ್ಣ ..	ಡಿಟೋ
3. ಕಳಸಾಪುರ ...	ಡಿಟೋ	13. ಸರಸ್ವತಿಪುರ ..	ಡಿಟೋ
4. ಮೂರ್ತಿಕೆರೆ ..	ಡಿಟೋ	14. ಯಗತಿ ...	ಡಿಟೋ
5. ಅತ್ತಿಗನಾಳ ...	ತರೀಕೆರೆ.	15. ಯಲ್ಲಂಬಲಸೆ ...	ಡಿಟೋ
6. ದಿಗ್ಗಾಪುರ ...	ಡಿಟೋ	16. ಕೋಡಿಹಳ್ಳಿ ..	ಡಿಟೋ
7. ಲಿಂಗದಹಳ್ಳಿ ..	ಡಿಟೋ	17. ಜನ್ನಾಪುರ ...	ಡಿಟೋ
8. ಯರದಹಂಕಲು ..	ಡಿಟೋ	18. ಬೀರುಮೂನಹಳ್ಳಿ ...	ಎಡಹಳ್ಳಿ ಸಬ್ ತಾ||
9. ಅತ್ತಿವೊಗೆ ..	ಡಿಟೋ	19. ಎಡಹಳ್ಳಿ ..	ಡಿಟೋ
10. ಮುಂದ್ರೆ ..	ಡಿಟೋ		

ತಾರೀಖು 3ನೆ ಆಗಸ್ಟ್ 1904.

ನಂ. 924—42-4—ಸ್ಯಾನಿಟೇರ್ಷ್, ಸ್ 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ IIನೆ ನಂಬರ್ ರೆಗ್ಯುಲೇಷನಿನ 2ನೆ ಸೆಷ್ಕನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀವರ್ಮ ಮಹಾರಾಜಾ ಸರ್ಕಾರದವರು, 1898ನೆ ಫೆಬ್ರವರಿ 10ನೆ ಮಾರ್ಕ್ಕಂ 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾ ಮೊಯೊಡನೆ ಕೊಡಲ್ಪಟ್ಟ ರೆಗ್ಯುಲೇಷ್ನ್‌ಗಳ ನಿಯಮಗಳಲ್ಲಿ ವಿಧಿಸಿರುವ ಅಜವಾಯಿಷಿ ಪದ್ಧತಿಯನ್ನು ಮೈಸೂರು ಪಹರಿನಲ್ಲಿ 1904ನೆ ಆಗಸ್ಟ್ 10ನೆ ತಾರೀಖಿನಾರಭ್ಯ ಜಾರೀಲಿ ತರತಕ್ಕದ್ದೆಂದು ಅಪ್ಪಣೆ ಕೊಡುತ್ತಾರೆ.

2. ಸದರೀ ತಾರೀಖಿನಾರಭ್ಯ ಮೈಸೂರು ಪಹರಿನಲ್ಲಿರುವ ರೈಲ್ವೆ ಸ್ಟೇಷನು ಅಜವಾಯಿಷಿ ಸ್ಟೇಷನ್ನಾಗಿರತಕ್ಕದ್ದೆಂದು ಪ್ರಸಿದ್ಧ ಪಡಿಸಲ್ಪಟ್ಟಿರುತ್ತೆ.

ನಂ. ಆರ್. 4318, 1904ನೆಯ ಜೂ 30—ಜುಲೈ 11ನೆಯ ತಾರೀಖು.

ಕೇಕದಾರಿ ಉದ್ಯೋಗವನ್ನು ಉನ್ನತ ಸ್ಥಿತಿಗೆ ತರುವುದಕ್ಕೋಸ್ಕರ ಶ್ರೀಮ್ಮ ಮಹಾರಾಜರವರ ಗವರ್ನ್ಮೆಂಟಿನವರಿಂದ ಮುಂ ಜಾರ್ಮಾಡಲ್ಪಟ್ಟಿರುವ ಕೆಳಗಿನ ವಿವರಾಡು ಸರ್ವ ಜನರ ತಿಳುವಳಿಕೆಯ ಬ್ಯೆ ಪ್ರಕಟಿಸಲ್ಪಟ್ಟಿದೆ :—

(1) 1904ನೆಯ ಜುಲೈ 1ನೆಯ ತಾರೀಖಿನಿಂದ, ಕೇಕದಾರರ ಸಂಬಳವು 1ನೆಯ ತರಗತಿಗೆ 35 ರೂಪಾಯಿ, 2ನೆಯ ತರಗತಿಗೆ 30 ರೂಪಾಯಿ, 3ನೆಯ ತರಗತಿಗೆ 25 ರೂಪಾಯಿ, ಆಗಿರತಕ್ಕದ್ದು.

(2) ಕೇಕದಾರರ ಸಂಖ್ಯೆಯು 374 ಆಗಿರತಕ್ಕದ್ದು, ಮತ್ತು ಪ್ರತಿ ತರಗತಿಯಲ್ಲಿಯೂ ಅವರ ಸಂಖ್ಯೆಯು ಈ ಕೆಳಗಿನ ಪರಿಮಾಣಕ್ಕೆ ವಿುರಿರತಕ್ಕದ್ದಲ್ಲ :—

ಒಟ್ಟು ಸಂಖ್ಯೆಯಲ್ಲಿ ನೇಕಡಾ 20ರಷ್ಟು 1ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 35 ರೂಪಾಯಿನಂತೆ 75, ಒಟ್ಟು ಸಂಖೆಯಲ್ಲಿ ನೇಕಡಾ 30ರಷ್ಟು 2ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 30 ರೂಪಾಯಿನಂತೆ 112, ಒಟ್ಟು ಸಂಖ್ಯೆಯಲ್ಲಿ ನೇಕಡಾ 50ರಷ್ಟು 3ನೆಯ ತರಗತಿಯಲ್ಲಿ ಅಂದರೆ ಪ್ರತಿ ಒಬ್ಬನಿಗೆ 25 ರೂಪಾಯಿನಂತೆ 187.

(3) ಕೇಕದಾರರಲ್ಲಿ ಪ್ರತಿ ಒಬ್ಬನಿಗೆ ಮೂಹೆಯಾನ 10 ರೂಪಾಯಿನಂತೆ ಕುದರೆಯ ಭತ್ಯವು ಸಲ್ಲುವುದು, ಮತ್ತು ಮಲೆನಾಡು ಭತ್ಯವು ಈಗ ಸಲ್ಲುತ್ತಾ ಇರುವ ಕಡೆಯಲ್ಲೆಲ್ಲಾ ಈಗಿನಂತೆ ಮುಂದೆಯೂ ಸಲ್ಲುವುದು.

(4) ಪ್ರತಿ ಕೇಕದಾರನು ಒಂದು ಸರಿಯಾದ ಸವಾರಿ ಕುದರೆ ತಟ್ಟುವನ್ನು ಇಡತಕ್ಕದ್ದು. ಮತ್ತು ತನ್ನ ಹೋಬಳಿಯಲ್ಲಿ ಸಂಚಾರ ಮಾಡುವದರಲ್ಲಿ ಪ್ರತಿ ತಿಂಗಳಲ್ಲಿಯೂ ಕನಿಷ್ಟಪಕ್ಷ 20 ದಿನಗಳಿಗೆ ಕಡಿವು ಇಲ್ಲದೆ ಕಳೆಯಬೇಕು.

(5) ಈ ಉದ್ಯೋಗಕ್ಕೆ ಸೇರಿಸಿಕೊಳ್ಳುವುದಕ್ಕೆ ಈ ಕೆಳಗಿನ ಯೋಗ್ಯತೆಗಳು ಇರತಕ್ಕದ್ದು :—

(i) ಉಮೇದವಾರನು ಮೆಟ್ರಿಕ್ಯುಲೇಷನಿಗೆ ಕಡಮೆ ಇಲ್ಲದ ಯೂನಿವರ್ಸಿಟಿ ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು ಮತ್ತು ಈಗ ಉದ್ಯೋಗದಲ್ಲಿ ಇಲ್ಲದ ಮನುಷ್ಯರ ವಿಷಯದಲ್ಲಿ, ಅವರು 25 ವರ್ಷ ವಯಸ್ಸಿಗೆ ವಿುರಿದವರಾಗಿರಕೂಡದು ;

(ii) ಡಿಸ್ಟ್ರಿಕ್ಟ್ ವೆುಡಿಕಲ್ (ವೈದ್ಯ) ಆಫಿಸರಿಂಗೆ ಕಡಮೆ ಇಲ್ಲದ ಹುದ್ದೆಯ ವೆುಡಿಕಲ್ ಆಫಿಸರಿಂದ ಕಾಯಂತಃ ಅರ್ಹನಾಗಿದಾನೆಂದು ದೃಢೀಕರಿಸಲ್ಪಡಬೇಕು.

(6) ಉಮೇದವಾರರು ಈ ಕೆಳಗಿನ ವಿಷಯಗಳಲ್ಲಿ ಕೇಕದಾರಿ ಪರೀಕ್ಷೆ ಎಂದು ಕರೆಯಲ್ಪಡುವ ಬಂದು ಪರೀಕ್ಷೆಯಲ್ಲಿ ತೇರ್ಗಡೆಯಾಗಿರತಕ್ಕದ್ದು :—

(ಎ) 1900ನೆಯ ನವಂಬರ್ 6ನೆಯ ತಾರೀಖಿನ ನಂ. 3766—ಆರ್. ಎಫ್. 108–92ನೆಯ ಗವರ್ನ್ಮೆಂಟ್ ಇಸ್ತಿಹಾರ್ನ್ಮೆಯಲ್ಲಿ ವಿಧಿಸಲ್ಪಟ್ಟಿರುವ ವಿಷಯಗಳು ಅವು ಯಾವವೆಂದರೆ—ಲ್ಯಾಂಡ್ ರೆವಿನ್ಯು ಕೋಡ್, ಅದಕ್ಕನುಸಾರವಾದ ನಿಬಂಧನೆಗಳು, ಮತ್ತು (ಹೊಸ) ರೆವಿನ್ಯು ವೂನ್ಯುಯಲ್ ಎಂಬ ಪುಸ್ತಕದಲ್ಲಿ ಗೊತ್ತು ಮಾಡಲ್ಪಡುವ ಭಾಗಗಳು, ಮತು ಸರ್ವೆ ವೂನ್ಯುಯಲ್ ಪುಸ್ತಕ, ಅಥವಾ ಆಗಿಂದಾಗ್ಯೆ ಪ್ರಕಟಿಸಲ್ಪಡುವ ಗವರ್ನ್ಮೆಂಟು ನವರ ಶಾಶ್ವತವಾದ ಹುಕುಂಗಳ ಸಂಗ್ರಹದ ಇತರ ಯಾವದಾದರೂ ಬಂದು ಪುಸ್ತಕ.

(ಬಿ) ಸುಲಭವಾಗಿ ಕನ್ನಡವನ್ನು ಓದುವುದಕ್ಕು ಓರೆಯುವುದಕ್ಕೂ ಸಾವುರ್ಥ್ಯ.

(ಸಿ) ಹೊಲಗಳನ್ನು ಅಳೆಯುವುದಕ್ಕು ಮತ್ತು ಅವುಗಳ ನಕ್ಷೆ ಬರೆಯುವುದಕ್ಕೂ ಸಾವುರ್ಥ್ಯ.

(ಡಿ) ಕಟ್ಟಡಗಳಿಗೂ ನೀರಾವರಿಗೂ ಸಂಬಂಧಪಟ್ಟ ಸಣ್ಣ ಕೆಲಸಗಳಿಗೆ ಅಂದಾಜು ತಯಾರ್ಮಾಡುವುದಕ್ಕೂ ಬಿಲ ನಡೆಸುವುದಕ್ಕೂ ಸಾವುರ್ಥ್ಯ.

(ಇ) ಸವಾರಿ ವೂಡುವುದಕ್ಕೆ ಸಾವುರ್ಥ್ಯ.

ಲೋಕಲ್ ಸರ್ವಿಸ್ (ಸ್ಥಳೀಯ ಉದ್ಯೋಗದ) ಪರೀಕ್ಷೆಯಲ್ಲಿ ಈ ಕೇಕದಾರಿ ಪರೀಕ್ಷೆಯು ಒಂದು ಶಾಖೆಯಾಗಿರತಕ್ಕದ್ದು.

(7) ವೋಲ್ಕಂಡಂತೆ ಯೋಗ್ಯತೆಯನ್ನು ಹೊಂದುವ ಉಮೇದವಾರರು ಕೇಕದಾರಿಯ ಸ್ಥಾನಕ್ಕೆ ಅರ್ಹರಾಗಿರತಕ್ಕದ್ದು. ಖಾಲಿ ಬಿದ್ದಾಗ ಕಡೆಯ ತರಗತಿಗೆ ಸಾವುನ್ಯವಾಗಿ ವೊದಲು ನೇವುಕ ವೂಡಲ್ಪಡತಕ್ಕದ್ದು.

(8) ಹಾಗೆ ನೇವುಕ ವೂಡಲ್ಪಟ್ಟ ವನುಷ್ಯನು ನಿಜವಾಗಿ ಕೆಲಸದ ವೇಲೆ ಇಡಲ್ಪಡುವುದಕ್ಕೆ ವುುಂಚೆ ತಾತ್ಕಾಲಿಕವಾಗಿ ಸರ್ವೆಯಲ್ಲಿ ತಯಾರ್ಮಾಡಲ್ಪಡುವುದು ಅವಶ್ಯವಾಗಿರುವುದರಿಂದ ಈ ಕೆಳಗಿನ ಬೋಧನೆ ಕ್ರಮವು ವಿಧಿಸಲ್ಪಟ್ಟಿದೆ :—

(1) ಹೊರಗೆ ಹೋಗಿ ಕೆಲಸ ವೂಡುವ ಬಂದು ಕಾಲದ ವರಗೂ ಎಂದರೆ 8 ತಿಂಗಳು ಅಥವಾ ವಿಶೇಷ ಸಂದರ್ಭಗಳಲ್ಲಿ ಇನ್ನೂ ಕಡವೆಯು ಕಾಲದ ವರಗೆ ಕಾರ್ಯತಃ ಬೋಧನವನ್ನು ಹೊಂದುವುದಕ್ಕಾಗಿ ಬಂದು ಅಳೆಯುವ ಸಿಬ್ಬಂದಿಗೆ ಅವನು ಲಗತ್ತುವೂಡಲ್ಪಟ್ಟು ಇರುವನು.

(2) ಸಾಧಾರಣವಾದ ಸರಪಣಿ ಅಳತೆಯನ್ನೂ ಕ್ರಾಸ್ ಸ್ಟ್ಯಾಫ್ ಅಳತೆಯನ್ನು ವೂಡುವುದಕ್ಕೆ ಯೋಗ್ಯತೆ ಉಳ್ಳವನಾಗಿ ಇದಾನೆಂದು ಮತ್ತು ಅಳತೆಯ ನಿಬಂಧನೆಗಳನ್ನು ತಿಳದುಕೊಂಡು ಇದಾನೆಂದೂ ಅವನು ಲಗತ್ತಾಗಿ ಇರುವ ಅಳತೆಯ ಸಿಬ್ಬಂದಿಯ ಅಧಿಕಾರದಲ್ಲಿ ಇರುವ ಆಫಿಸರಿಂದ ಬಂದು ಯೋಗ್ಯತಾ ಪತ್ರಿಕೆಯ (ಸರ್ಟಿಫಿಕೇಟು) ನ್ನು ಅವನ ಯೋಗ್ಯತೆಯ ನಿದರ್ಶನಕ್ಕಾಗಿ ಹೊಂದತಕ್ಕದ್ದು.

1259

(3) ಬಹಳ ವಿಶೇಷ ಸಂದರ್ಭಗಳಲ್ಲಿ, ಉಮೇದವಾರನು ಅರ್ಹನಾಗಿ ಇದ್ದರೆ, 4 ತಿಂಗಳುಗಳಿಗೆ ಕಡಿಮೇ ಇಲ್ಲದಷ್ಟು ಕಾಲ ಅವನು ವಿದ್ಯಾಭ್ಯಾಸ ಮಾಡಿದಮೇಲೆ ಆಫಿಸರುಗಳು ಅವನಿಗೆ ಒಂದು ಸರ್ಟಿಫಿಕೇಟನ್ನು ಕೊಡಬಹುದು.

(4) ಅಳತೆಯ ಸಿಬ್ಬಂದಿಗಳಲ್ಲಿ ಶೇರಿಸಿಕೊಳ್ಳುವದಕ್ಕಾಗದಷ್ಟು ವಿದ್ಯಾಭ್ಯಾಸ ಮಾಡತಕ್ಕ ಶೇಕದಾರ್ರ ಸಂಖೆಯು ಹೆಚ್ಚಾಗಿರುವಾಗ, ಅವರಲ್ಲಿ ಕೆಲವರನ್ನು ಡಿಸ್ಟ್ರಿಕ್ಟು ಸರ್ವೆಯರ್‌ಗಳ ಜೊತೆಗೆ ಶೇರಿಸಬಹುದು, ಅವರೂಕೂಡ ಅಳತೆಯ ಶಿಬ್ಬಂದಿಗಳ ಅಧಿಕಾರದಲ್ಲಿ ಇರುವ ಆಫಿಸರುಗಳಂತೆ ಸರ್ಟಿಫಿಕೇಟುಗಳನ್ನು ಕೊಡಬಹುದು, ಅಂತಹ ಸರ್ಟಿಫಿಕೇಟುಗಳನ್ನು ಅಂಗೀಕರಿಸಬಹುದು.

(9) ಮೂರನೆಯ ತರಗತಿಯಿಂದ ಎರಡನೆಯ ತರಗತಿಗೂ ಎರಡನೆಯ ತರಗತಿಯಿಂದ ಮೊದಲು ತರಗತಿಗೂ ಇಜಾಫೆಯು ಕೆಳಗಿನಂತೆ ಕ್ರಮಪಡಿಸಲ್ಪಡುವುದು :—

(i) ಪ್ರತಿ ತರಗತಿಯಲ್ಲಿಯೂ ಉತ್ತಮ ಸಂಖ್ಯಕ ಖಾಲಿಗಳು ಭರ್ತಿ ಆಗುವ ವರೆಗೂ ಮೇಲ್ಕಂಡಂತೆ ಯೋಗ್ಯತೆಯನ್ನು ಹೊಂದಿದ ಶೇಕದಾರನು ಒಂದು ತರಗತಿಯಲ್ಲಿ ಎರಡು ವರ್ಷಗಳು ಸಮರ್ಥನಾಗಿ ಕೆಲಸ ಮಾಡಿದ ತರುವಾಯ ಮೇಲಿನ ತರಗತಿಗೆ ಇಜಾಫೆಗೆ ಹಕ್ಕುಳ್ಳವನಾಗಿ ಇರುವನು ;

(ii) ಮೊದಲು ಎರಡನೆ ತರಗತಿಗಳಲ್ಲಿ ಉತ್ತಮ ಸಂಖ್ಯಕ ಖಾಲಿಗಳು ಈ ಪ್ರಕಾರ ಭರ್ತಿ ಮಾಡಲ್ಪಟ್ಟಾಗ ಆಗಿಂದಾಗ್ಗೆ ಸಂಭವಿಸುವ ಖಾಲಿಗಳಿಂದ ಇಜಾಫೆಗಳು ಕ್ರಮ ಪಡಿಸಲ್ಪಡುವುದಲ್ಲದೆ ಕೆಳಗಿನ ತರಗತಿಗಳಲ್ಲಿರುವ ಜನಗಳ ಪಾತ್ರತೆಗಳು, ಯೋಗ್ಯತೆಗಳು ಮತ್ತು ಕೆಲಸಗಳು ಇವುಗಳನ್ನು ಸರಿನೋಡಿ ನಿಶ್ಚೈಸಲ್ಪಡುವುವು.

(10) ಇಲ್ಲಿ ವಿಧಿಸಲ್ಪಟ್ಟಿರುವಂತೆ ಯೋಗ್ಯತೆಯನ್ನು ಹೊಂದದ ಯಾವ ಶೇಕದಾರನು ಹೊಸ ತರಗತಿಗಳಲ್ಲಿ ಯಾವದರ ಸಂಬಳಕ್ಕೂ ಹಕ್ಕುಳ್ಳವನಾಗಿರತಕ್ಕದ್ದಲ್ಲ. ಆದರೆ ಹಳೆಯ ನಿಬಂಧನೆಗಳ ಮೇರೆ ಅವನಿಗೆ ಹಕ್ಕಿರುವ ಸಂಬಳವನ್ನು ಮಾತ್ರ ಹೊಂದತಕ್ಕದ್ದು.

(11) ಶೇಕದಾರರು ಈ ಕೆಳಗಿನ ಕೆಲಸಗಳನ್ನು ಮಾಡತಕ್ಕದ್ದು :—

(ಎ) ಅದಕ್ಕಾಗಿ ಪ್ರತ್ಯೇಕವಾದ ಶಿಬ್ಬಂದಿ ಇಲ್ಲದೆ ಇರುವಾಗ ಸಾಯರು ವಸೂಲಿ, ಮತ್ತು ಸಾಯರ್ ಕಾರ್ಕುಗಳನ್ನು ಇಟ್ಟು ಇರುವಾಗ ಅವರ ಕೆಲಸದ ಮೇಲ್ವಿಚಾರಣೆ.

(ಬಿ) ರೆವಿನ್ಯೂ ವಸೂಲಿಯ ಮತ್ತು ಆ ಸಂಬಂಧದಲ್ಲಿ ಗ್ರಾಮ ನೌಕರರ ಕೆಲಸದ ಮೇಲ್ವಿಚಾರಣೆ.

(ಸಿ) ತಗಾದೆ ನೋಟಿಸಿಗಳನ್ನು ತಯಾರ್ಮಾಡುವುದು, ರವಾನಿಸುವುದು, ಮತ್ತು ಜಾರಿ ಮಾಡುವುದು ಇವುಗಳ ಮೇಲ್ವಿಚಾರಣೆ.

(ಡಿ) ಅಮಲ್ದಾರ್ರ ಹುಕುಂ ಮೇರೆ ಬಾಕಿದಾರ್ರ ಸ್ವತ್ತನ್ನು ಜಫ್ತಿ ಮಾಡುವುದು.

(ಇ) ಜಾರಿಯಲ್ಲಿರುವ ನಿಬಂಧನೆಗಳ ನಿಯಮಗಳ ಮೇರೆ ಸ್ವತ್ತಿನ ಹರಾಜುಗಳನ್ನು ನಡೆಸುವುದು.

(ಎಫ್) ಲ್ಯಾಂಡ್ ರೆವಿನ್ಯೂ ಕೋಡಿನ 146 ರಿಂದ 151ರ ವರೆಗಿನ ಪ್ರಕರಣಗಳ ಮೇರೆ ಲ್ಯಾಂಡ್ ರೆವಿನ್ಯೂವನ್ನು ಭದ್ರಪಡಿಸುವುದಕ್ಕಾಗಿ ಮುಂದಾಗಿ ಉಪಾಯಗಳನ್ನು ಮಾಡಬೇಕಾಗಿರುವಾಗ ರಿಪೋರ್ಟುಗಳನ್ನು ಕಳುಹಿಸುವುದು.

(ಜಿ) ಶಾನಭೋಗನ ಖಾನೇಷುಮಾರಿ, ಖಾತೆ, ಖಿರದಿ ಲೆಕ್ಕಗಳನ್ನು ಆಗಾಗ್ಗೆ ಪರೀಕ್ಷಿಸಿ ತಾಳೆ ನೋಡುವುದು ಮತ್ತು ಆ ಲೆಕ್ಕಗಳೊಡನೆ ರೈತರು ಕೊಟ್ಟ ಕಂದಾಯಕ್ಕಾಗಿ ಅವರಿಗೆ ಕೊಟ್ಟಿರುವ ರಶೀತಿಗಳನ್ನು ತಾಳೇ ನೋಡುವುದು.

(ಹೆಚ್) ಜನನ ಮರಣದ ಮತ್ತು ದನಗಳ ಮರಣದ ಲೆಕ್ಕಗಳನ್ನು ತೋರಿಸುವ ಪಟೇಲನ ರಿಜಿಸ್ಟರ್‌ಗಳನ್ನು ಆಗಾಗ್ಗೆ ಪರೀಕ್ಷಿಸುವುದು.

(ಐ) ಸಾಗುವಳಿ, ಮನೆ ಕಟ್ಟುವುದು, ವಗೈರೆಗಳ ಬಗ್ಗೆ ಜಮೀನ್ ದರಖಾಸ್ತುಗಳ ಮೇಲೆ ರಿಪೋರ್ಟು ಮಾಡುವುದು.

(ಜೆ) ಹುಕುಂ ಮೇರೆ ದರಖಾಸ್ತು ಜಮೀನ್‌ಗಳ ಮತ್ತು ಗವರ್ನಮೆಂಟ್ ಚಿಲ್ಲರೆ ರೆವಿನ್ಯೂ ಬಾಬುಗಳ ಹರಾಜು.

(ಕೆ) ಕಾಲಸ್ಥಿತಿ, ಮಳೆ, ಮತ್ತು ವಿಶೇಷವಾಗಿ ಕ್ಷಾಮ ನಿವಾರಣೆಯ ಕೋಡಿನ 10ನೆಯ ಪ್ರಕರಣಕ್ಕನುಸಾರವಾಗಿ ತನ್ನ ಹೋಬಳಿಯ ಸಾಮಾನ್ಯ ಸ್ಥಿತಿಗೆ ಸಂಬಂಧಪಟ್ಟ ಇತರ ವಿಷಯಗಳೂ ಇವುಗಳ ಮೇಲೆ ರಿಪೋರ್ಟು ಮಾಡುವುದು.

(ಎಲ್) ಸರ್ವೆ ನಂಬರುಗಳನ್ನು ಫೋಡ್ ಮಾಡುವುದು ಮತ್ತು ಫೋಡ್ ನಂಬರುಗಳ ನಕ್ಷೆ ಬರೆಯುವುದು.

(ಎಮ್) ಬೆಳೆಗಳು ಮತ್ತು ಅವುಗಳ ಉತ್ಪತ್ತಿ, ಎಲ್ಲೆ ಬಾಂದುಗಳ ಸ್ಥಿತಿ ಮತ್ತು ಸರ್ಕಾರದ ನೀರನ್ನು ಬಗರ್ ಹುಕುಂ ಉಪಯೋಗಿಸುವುದು, ಇವುಗಳನ್ನು ಕುರಿತು ಶಾನುಭೋಗನು ಪಹಣಿಯಲ್ಲಿ ಬರೆದಿರುವುದನ್ನು ಪರೀಕ್ಷಿಸುವುದು, ಪ್ರತಿವರ್ಷದಲ್ಲಿಯೂ ಪ್ರತಿ ಗ್ರಾಮದಲ್ಲಿ ಇರುವ ಸರ್ವೆ ನಂಬರುಗಳಲ್ಲಿ ಶೇಕಡಾ 5ದಕ್ಕೆ ಕಡಮೆ ಇಲ್ಲದಂತೆ ಅಜಮಾಯಿಷಿ ಮಾಡುವುದು, ಮತ್ತು ಹಿಡುವಳಿಯಲ್ಲಿಲ್ಲದ ಸರ್ವೆ ನಂಬರುಗಳ ಬಾಂದುಗಳಿಗೆ ವಿಶೇಷವಾಗಿ ಅವಧಾನವನ್ನು ಕೊಡುವುದು.

(ಎನ್) ಪ್ರತಿ ಜಮೀನಿನ (ಫೀಲ್ಡ್) ಸರ್ವೆ ಬಾಂದುಗಳನ್ನು ಕ್ರಮವಾಗಿ ಕಾಪಾಡುವಂತೆ ಬಲಾತ್ಕಾರ ಪಡಿಸುವುದು.

278

(ಟ) ಗ್ರಾಮನಿರ್ಮಲೀಕರಣಕ್ಕೆ ಅವಧಾನವನ್ನು ಕೊಡುವುದು, ಮತ್ತು ಜನರ ದಾರಿಯ ಮೇಲೆ ಬತ್ತಿಕೊಂಡು ಬರದ ಹಾಗೆ ನೋಡಿಕೊಳ್ಳುವುದು.

(ಪಿ) ಸಾಲುಮರಗಳ ಮತ್ತು ತೋಪುಗಳ ರಕ್ಷಣೆ.

(ಕ್ಯೂ) ಕೆರೆಗಳು, ನಾಲೆಗಳು, ಮತ್ತು ಸರ್ಕಾರಿ ಸಂಬಂಧ ಕಟ್ಟಡಗಳು ಇವುಗಳನ್ನು ಹೋಗಿ ನೋಡಿ ಹಾಗೆ ನೋಡಿದ್ದಕ್ಕೆ ರಿಪೋರ್ಟು ಮಾಡುವುದು, ಮತ್ತು ಜರೂರಿನ ಸಂದರ್ಭಗಳಲ್ಲಿ ಆಪತ್ನಿವಾರಣೆಗಾಗಿ ಏರ್ಪಾಡುಗಳನ್ನು ಮಾಡುವುದು.

(ಆರ್) ಕೆರೆಗಳನ್ನು ಕಾಲುವೆಗಳನ್ನು ಕಾಪಾಡುವುದಕ್ಕೆ ಸಾಲಿಯಾನ ಆಗತಕ್ಕ ಕಾವುಗಾರಿ.

(ಎಸ್) ತಕರಾರು ಬರುವ ಸಂದರ್ಭಗಳಲ್ಲಿಯೂ ಮತ್ತು ಅದಕ್ಕಾಗಿ ಪ್ರತ್ಯೇಕವಾದ ಏರ್ಪಾಡು ಇಲ್ಲದೆ ಇರುವಾಗಲೂ ಕೆರೆಗಳಿಂದಲೂ ನಾಲೆಗಳಿಂದಲೂ ಬರುವ ನೀರಿನ ಸರಿಯಾದ ಹಂಚಿಕೆ ವಿಷಯಕ್ಕೆ ಅವಧಾನವನ್ನು ಕೊಡುವುದು.

(ಟಿ) ಡಿಸ್ಟ್ರಿಕ್ಟು ಜಂಗಲುಗಳ ಮತ್ತು ಸಂದಲಿ ಮರಗಳ ರಕ್ಷಣೆ.

(ಯು) ಟಪಾಲು ಎತ್ತುಗಳ ಸರಬರಾಯಿ ಮತ್ತು ಅವಶ್ಯವಿದ್ದಾಗ ಆಫಿಸರುಗಳ ಮತ್ತು ಪ್ರಯಾಣಿಕರ ಅವಶ್ಯಕತೆಗಳಿಗೆ ಅವಧಾನವನ್ನು ಕೊಡುವುದು.

(ವಿ) ಕಡವಿನ ದೋಣಿಗಳು ಮತ್ತು ಹರಿಗೋಲುಗಳು ಭದ್ರವಾದ ಸ್ಥಿತಿಯಲ್ಲಿರುವುದನ್ನು ಕುರಿತು ಅಜಮಾಯಿಷಿ ಮಾಡುವುದು ಮತ್ತು ಕಡವುಗಳ ವಿಷಯದಲ್ಲಿ ವಿಧಿಸಿರುವ ನಿಬಂಧನೆಗಳನ್ನು ಕ್ರಮವಾಗಿ ಆಚರಿಸುವಂತೆ ನೋಡಿಕೊಳ್ಳುವುದು.

(ಡಬ್ಲ್ಯು) ಸೈನ್ಯಗಳಿಗೆ ಸರಬರಾಯಿ.

(ಎಕ್ಸ್) ಗ್ರೇಟ್ ಟ್ರಿಗೋನಾ ಮೆಟ್ರಿಕತ್ ಸರ್ವೆ ಸ್ಟೇಷ್ಗಳ ಅಜಮಾಯಿಷಿ.

(ವೈ) ಶಿಡುಬು ಹಾಕುವವರು ಅವರ ಕೆಲಸವನ್ನು ಮಾಡುವುದಕ್ಕೆ ಸಹಾಯ ಮಾಡುವುದು.

(ಜಡ್) ಮುಜರಾಯಿ ಸತ್ರ ದೇವಾಲಯಗಳ ಅಜಮಾಯಿಷಿ ಮತ್ತು.

(ಎಎ) ಮೇಲಿನ ಅಧಿಕಾರಿಗಳು ವಿಧಿಸುವ ಇತರ ಕೆಲಸಗಳು.

(12) ಹಳೆಯ ಏರ್ಪಾಡಿಗೆ ಬದಲಾಗಿ ಈ ಹೊಸ ಏರ್ಪಾಡನ್ನು ಜಾರಿಗೆ ತರುವ ಸಂದರ್ಭದಲ್ಲಿ, ಈಗಿರುವ ಶೇಕದಾರ್ರಿಗೆ ಬದಲಾಗಿ ಜೇರೆ ಜನಗಳನ್ನು ಕಾಲಕ್ರಮೇಣ ಇಡತಕ್ಕದ್ದು, ಮತ್ತು ಈ ನಿಬಂಧನೆಗಳ ಪ್ರಕಾರ ಯೋಗ್ಯತೆಯನ್ನು ಹೊಂದಿದ ಜನಗಳನ್ನು ಖಾಲಿ ಬಿದ್ದಹಾಗೆಲ್ಲಾ ನೇಮಿಸತಕ್ಕದ್ದು.

ತಾರೀಖು 2—3ನೆ ಆಗಸ್ಟು 1904.

ನಂ. 908—32-2—ಲೋ. ಬೋ., ಲೋಕಲ್ ಬೋರ್ಡುಗಳ ರಗ್ಯುಲೇಷನ್ ಅನುಸಾರವಾಗಿ ಮಾಡಲ್ಪಟ್ಟ ಮತ್ತು 1903ನೆ ಸೆಪ್ಟಂಬರ್ 9ನೆ ಮಾರ್ಕಂ 30—ಲೆಜಿಸ್. 4—03ನೆ ನಂಬರ್ ಇಸ್ತಿಹಾರ್ನಾಮೆಯೊಡನೆ ಘೋಷಿಸಿದ ರೂಲುಗಳ 6ನೆ ಪ್ಯಾರಾ ಅನುಸಂಧಿ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು, 1904ನೆ ಜುಲೈ ಗುರ್ರೆ ತಾರೀಖಿನಾರಭ್ಯ ಕಡೂರ ಡಿಸ್ಟ್ರಿಕ್ಟಿನಲ್ಲಿರುವ ಅಜ್ಜಂಪುರ ವ ನಕ್ರೆಪಟ್ಣಗಳ ಸಂಘಗಳ ಪಂಚಾಯಿತಿಗಳಾಗಿ ಇದರಡೀ ಕಂಡ ಮೆಂಬರುಗಳನ್ನು ಮೊಕರರ್ರಾಡುವದಲ್ಲದೆ ಮತ್ತೊಂದು ಹುಕುಂ ಕೊಡುವ ಪರಿಯಂತ ಸದರೀ ಸಂಘಗಳ ಅಧ್ಯಕ್ಷರ ಕೆಲಸಗಳನ್ನು ಆಯಾ ತಾಲ್ಲೂಕುಗಳ ಅಮಲ್ದಾರ್ರುಗಳು ನೋಡತಕ್ಕದ್ದೆಂದು ಅಪ್ಪಣೆ ಕೊಡುತ್ತಾರೆ:—

ಅಜ್ಜಂಪುರ ಸಂಘ.

1.	ತರೀಕೆರೆ ತಾಲ್ಲೂಕಿನ ಅಮಲ್ದಾರರು	ಅಧ್ಯಕ್ಷರು.
2.	ಅಸ್ಸಿಟಲ್ ಅಸಿಸ್ಟೆಂಟರು	ಮೆಂಬರು.
3.	ಹೋಬಳಿಯ ಷೇಕದಾರ್ರು	ಡಿಟೋ
4.	ತಾಲ್ಲೂಕು ಬ್ರಾಂಚ್ ಸ್ಕೂಲಿನ ಹೆಡ್ ವ್ಯಾಸ್ಟ್ರರು....	ಡಿಟೋ
5.	ಮೆ|| ವೆಂಕಟಕೃಷ್ಣಯ್ಯನವರು, ಶಾನುಭೋಗರು	ಡಿಟೋ
6.	,, ಖಾಜಿ ಅಬ್ದುಲ್ ರಜಾಕ್ ಯವರು, ಜವಿರ್ಣದಾರ್ರು	ಡಿಟೋ
7.	,, ಭಂಗಿ ಬಸೆಟ್ಟಯವರು, ಜವಿರ್ಣದಾರ್ರು	ಡಿಟೋ
8.	,, ಬಿ. ಪುಟ್ಟಯ್ಯನವರು, ಜವಿರ್ಣದಾರ್ರು	ಡಿಟೋ
9.	,, ಎಸ್. ಸಿದ್ದಪ್ಪನವರು, ಸಾಹುಕಾರ್ರು	ಡಿಟೋ
10.	,, ನಾಡಿಗ ಗುರುರಾಯರು	

ಸಕ್ರೆಪಟ್ಣ ಸಂಘ.

1.	ಕಡೂರು ತಾಲ್ಲೂಕಿನ ಅಮಲ್‌ದಾರ್ರು	ಅಧ್ಯಕ್ಷರು.
2.	ಅಸ್ಪಿಟಲ್ ಅಸಿಸ್ಟೆಂಟರು	ಮೆಂಬರು.
3.	ಹೋಬಳಿಯ ಷೇಕದಾರ್ರು	ಡಿಟೋ
4.	ತಾಲ್ಲೂಕು ಬ್ರಾಂಚ್ ಸ್ಕೂಲಿನ ಹೆಡ್ ಮ್ಯಾಸ್ಟರು	ಡಿಟೋ
5.	ಮೆ|| ಜಿ. ಶ್ರೀನಿವಾಸರಾಯರು, ಜಮೀನ್‌ದಾರ್ರು	ಡಿಟೋ
6.	,, ರಂಗಂಣನವರು, ಜಮೀನ್‌ದಾರ್ರು	ಡಿಟೋ
7.	,, ಮಲ್ಲೇಶಯ್ಯನವರು, ಪಟೇಲರು	ಡಿಟೋ
8.	,, ರಾಮಸ್ವಾಮಯ್ಯಂಗಾರ್ರು, ಜಮೀನ್‌ದಾರ್ರು	ಡಿಟೋ
9.	,, ಕೆ. ರಾಮಂಣನವರು, ಕಂಟ್ರಾಕ್ಟುದಾರ್ರು	ಡಿಟೋ
10.	,, ರೇವಂಣಸೆಟ್ಟರು, ವರ್ತಕರು	ಡಿಟೋ
11.	,, ಬೋರನಾಯಿಕರು, ಜಮೀನ್‌ದಾರ್ರು	ಡಿಟೋ

ತಾರೀಖು 3—4ನೆ ಆಗಸ್ಟು 1904.

ನಂ. 992-56-2—ಕ್ಯು., ಖಾಯಿಲೆ ಸಬಬ್ ಬೋರ್ಡಿನಲ್ಲಿ ಕೆಲಸ ನೋಡಲಿಕ್ಕೆ ಅಶಕ್ತರಾದ ಮೆ|| ಶೇಷಾಚಾರ್ರಿಗೆ ಬದಲಾಗಿ ಮೆ|| ಶಾಮಾಚಾರ್ರು ಹೊಸದುರ್ಗದ ಮ್ಯೂನಿಸಿಪಲ್ ಬೋರ್ಡಿನ ಮೆಂಬರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 4ನೆ ಆಗಸ್ಟು 1904.

ನಂ. 290-6-2—ಜು., ಹೊಳೇ ನರಸೀಪುರದ ಮುನ್‌ಸೀಫರಾದ ಮೆ|| ಎಂ. ಎಲ್. ಶ್ರೀಕಂಠೇಶಗೌಡರಿಗೆ 1904ನೆ ಜುಲೈ 15ನೆ ಮರ್ಕುಂ 107-6-04-05—ಜು. ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 15 ದಿನಗಳ ಪ್ರಿವಿಲೇಜ್ ರಜಾವನ್ನು ಅವರು ಅದೇ ತಿಂಗಳು 6ನೆ ತಾರೀಖಿನ ಮಧ್ಯಾಹ್ನಾತ್ಪರ ಉಪಯೋಗಿಸಿಕೊಂಡು ಅದೇ ತಿಂಗಳು 18ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವಂದರೆ ನಾಲ್ಕು ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 6ನೆ ಆಗಸ್ಟು 1904.

ನಂ. 298-7-2-ಜು., ಮೂರನೇ ಕ್ಲಾಸಿನ ಮುನ್‌ಸೀಫರಾದ ಮೆ|| ಎನ್. ಟಿ. ಗೋಪಾಲಯ್ಯಂಗಾರ್, ಬಿ. ಎ.; ಎಲ್. ಎಲ್. ಬಿ., ಯವರು 1904ನೆ ಜುಲೈ ಗುರ್ರೆ ತಾರೀಖಿನಾರಭ್ಯ ಸೂಪರ್‌ನ್ಯೂಮರೆರಿ ಮುನ್‌ಸೀಫರ ಎರಡನೇ ಕ್ಲಾಸಿಗೆ ಬಡ್ತಿ ಮಾಡಲ್ಪಟ್ಟಿರುತ್ತಾರೆ.

ತಾರೀಖು 6—8ನೆ ಆಗಸ್ಟು 1904.

ನಂ. 1091-10-5—ಎಜ್ಯು., ಸ್ಕೂಲ್ ಫೀಸ್‌ಗಳ ಪರಿಷ್ಕರಿಸಲ್ಪಟ್ಟ ದರಗಳನ್ನು ವಿಧಿಸುವ 1904ನೆ ಜನವರಿ 6ನೆ ಮರ್ಕುಂ ಜ. 3356ನೆ ನಂಬರ್ ಗವರ್ನಮೆಂಟಿನ ಇಸ್ತಿಹಾರ್ನಾಮೆಯನುಸಾರವಾಗಿ, ಸಂಸ್ಥಾನದ ಇದರಡೀ ಕಂಡ ಯಾವ ಪಾಠಶಾಲೆಗಳಲ್ಲಿ ಓದುವ ಬಾಜೂದಲ್ಲಿ ನಮೂದಿಸಲ್ಪಟ್ಟ ಕೀಳ್ಪಟ್ಟ ಜಾತಿಯವರ ವಿಸಿಷ್ಟ ವಿದ್ಯಾರ್ಥಿಗಳು 1904ನೆ ಜುಲೈ ಗುರ್ರೇ ತಾರೀಖಿನಾರಭ್ಯ 2 ವರುಷಗಳ ವರಿವಿಗೆ ಸ್ಕೂಲ್ ಫೀಸ್‌ಗಳು ಕೊಡೋಣದರಿಂದ ಮನ್ನಾ ಮಾಡಲ್ಪಟ್ಟಿರುತ್ತಾರೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ:—

ಹೊಲೆಯರು.	ಕೊರಚರು.
ಮಾದಿಗರು.	ಕೊರಮರು ವ
ಲಂಬಾಣೀರು.	ನಾಯಿಂದರು.

(1) ತಾಲ್ಲೂಕು ಸ್ಕೂಲ್‌ಗಳು (ವರ್ನಾಕ್ಯುಲರ್).
(2) ತಾಲ್ಲೂಕು ಬ್ರಾಂಚ್ ಸ್ಕೂಲ್‌ಗಳು.
(3) ಗ್ರಾಮ ಸ್ಕೂಲ್‌ಗಳು.

ತಾರೀಖು 4ನೆ ಆಗಸ್ಟ್ 1904.

ನಂ. ರೆ. 926-92-32, ಸನ್ 1904ನೆ ಮೇ 12ನೆ ಮರ್ಕುಂ ರೆ. 3407-9-ರೆ. ಫೈ. 92-1897ನೆ ನಂಬರ್ ಇಸ್ತಿಹಾರ್ನಾಮೆಯನ್ನು ಬದಲಾಯಿಸೋಣದರಲ್ಲಿ ಇದರಡೀ ಕಂಡ ಏರ್ಪಾಡುಗಳು, ಹಾಸನ ತಾಲ್ಲೂಕಿನ ಅಮಲ್‌ದಾರ್ರಾದ ಮೆ|| ಎಂ. ಲಕ್ಷ್ಮಣ ಶಾಸ್ತ್ರಿಯವರು ರಜಾದಲ್ಲಿದ್ದ ಕಾಲದಲ್ಲಿ ಕೆಲಸ ನಡಿಸಲಿಕ್ಕೆ ಮಾಡಲ್ಪಟ್ಟಿದ್ದವು:—

(1) ಆಲೂರು ಸಬ್ ತಾಲ್ಲೂಕಿನ ಡೆಪ್ಯುಟಿ ಅಮಲ್‌ದಾರ್ರಾದ ಎನ್. ಮೊಹದೀನ್ ಷೆರೀಫರು ಹಾಸನ ತಾಲ್ಲೂಕಿನ ಅಮಲ್‌ದಾರ್ರಾಗಿ ಬದಲೀ ಕೆಲಸ ನೋಡಿದರು.

(2) ಹಾಸನ ಡೆಪ್ಯುಟಿ ಕಮೀಷನರವರ ಆಫೀಸಿನ ಇಂಗ್ಲಿಷ್ ಹೆಡ್‌ಕ್ಲಾರ್ಕರಾದ ಎನ್. ಚಕ್ರಪಾಣಿ ಅಯ್ಯಂಗಾರ್, ಬಿ. ಎ., ಬಿ. ಎಲ್., ಯವರು ಆಲೂರಿನ ಡೆಪ್ಯುಟಿ ಅಮಲ್‌ದಾರ್ರಾಗಿ ಬದಲೀ ಕೆಲಸ ನೋಡಿದರು.

ತಾರೀಖು 25ನೆ ಜುಲೈ 1904.

ನಂ. ರೆ. 551—54-5, ಸನ್ 1900ನೆ ಇಸವಿಯ XIನೆ ನಂಬರ್ ಮೈಸೂರ ಫಾರೆಸ್ಟು ರೆಗ್ಯುಲೇಷನ್ 30ನೆ ಸೆಕ್ಷನಿನ ನಿಯಮವನುಸರಿಸಿ ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಪ್ರಸಿದ್ಧಪಡಿಸುವದೇನಂದರೆ, 1896ನೆ ಜೂನ್ 18ನೆ ತಾರೀಖು ಮೈಸೂರು ಗೆಜೆಟ್ಟಿನ Iನೆ ಭಾಗದ 187ನೆ ಪುಟದಲ್ಲಿ ಫಾಯಿಷಾದ 1896ನೆ ಮೇ 29ನೆ ಮರ್ಕುಂ 10407—ಫಾ. ಫೈ. 153—95ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಜೂನ್‌ಸಂದ್ರ ಪ್ಲಾಂಟೇಷನಿನ ಭಾಗವಾಗಿ ಪ್ರಸಿದ್ಧಪಡಿಸಲ್ಪಟ್ಟ ಮತ್ತು 1901ನೆ ಜನವರಿ 31ನೆ ತಾರೀಖು ಮೈಸೂರ ಗೆಜೆಟ್ಟಿನ Iನೆ ಭಾಗದ 56ನೆ ಪುಟದಲ್ಲಿ ಫಾಯಿಷಾದ 1901ನೆ ಜನವರಿ 7ನೆ ಮರ್ಕುಂ 422—ಫಾ. ಫೈ. 15—1900ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕುರ್ತು ಹೇಳುವ ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ನಮೂದಿಸಲ್ಪಟ್ಟ ಗಡಾ ಹಚ್ಚದ ಪ್ರದೇಶಗಳು ರೆವಿನ್ಯೂ ಇಲಾಖೆಗೆ ಒಪ್ಪಿಸಲ್ಪಟ್ಟ 1903ನೆ ಅಕ್ಟೋಬರ್ 30ನೆ ತಾರೀಖಿನಾರಭ್ಯ ಸದರೀ ಪ್ಲಾಂಟೇಷನಿನ ಭಾಗವಾಗಿರತಕ್ಕದ್ದು ಮನ್ನಾ ಮಾಡಿರುತ್ತೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಫಾರೆಸ್ಟಿನಿಂದ ವಿನಾಯಿಸಲ್ಪಟ್ಟ ಸ್ಟೇಟ್ ಫಾರೆಸ್ಟಿನ ಹೆಸರು.	ಸುಮಾರು ವಿಸ್ತೀರ್ಣ. ಎಕರೆಗಳು.	ಚಕ್ಕುಬಂದಿ.
ಬೆಂಗಳೂರು.	ದೊಡ್ಡಬಳ್ಳಾಪುರ.	ಜೂನ್‌ಸಂದ್ರ ಪ್ಲಾಂಟೇಷನ್.	ಎಕರೆ. 119 ಗುಂಟೆ. 29	ಜೂನ್‌ಸಂದ್ರ ಗ್ರಾಮದ ಸರ್ವೆ ನಂ. 35, 51, 50, 47 ವ 46 ಇವುಗಳನ್ನುಂಟಾಗಿರುತ್ತೆ. ಉತ್ತರಕ್ಕೆ.—ಎಲ್ಲೆ ಕಂದಕವು ಮಧುರೆಯ ಎಲ್ಲೆ ಬಾಂದುಗಳಿಂದ ಸೀರಸಂದ್ರದ ಸರ್ವೆ ನಂ. 46ರ ಬಾಂದುಗಳಿಗೆ ಜೂನ್‌ಸಂದ್ರದ ಸರ್ವೆ ನಂ. 36, 44 ವ 45 ಇವುಗಳ ದಕ್ಷಿಣ ಪಾರ್ಶ್ವಗಳ ಅಂಚಿನಲ್ಲಿಯೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಸೀರಸಂದ್ರದ ಸರ್ವೆ ನಂ. 46 ವ 24 ಇವುಗಳ ಪಶ್ಚಿಮ ಪಾರ್ಶ್ವಗಳಲ್ಲಿ ಸೀರಸಂದ್ರದ ಸರ್ವೆ ನಂ. 24ರ ನೈರುತ್ಯ ಬಾಂದುಗಳಿಗೆ ಹೋಗುತ್ತದೆ. ದಕ್ಷಿಣಕ್ಕೆ.—ಆಮೇಲೆ ಜೂನ್‌ಸಂದ್ರದ ಸರ್ವೆ ನಂ. 48, 49, 53, 52 ವ 34 ಇವುಗಳ ಉತ್ತರ ಪಾರ್ಶ್ವಗಳಲ್ಲಿ ಮಧುರೆಯ ಸರ್ವೆ ನಂ. 60ರ ಬಾಂದುಗಳಿಗೆ ಹೋಗುತ್ತದೆ. ಪಶ್ಚಿಮಕ್ಕೆ.—ತರುವಾಯ ಮಧುರೆಯ ಸರ್ವೆ ನಂ. 59ರ ಪೂರ್ವ ಪಾರ್ಶ್ವದಲ್ಲಿ ಹೊರಟ ಸ್ಥಳಕ್ಕೆ ಹೋಗುತ್ತದೆ.

ತಾರೀಖು 5ನೆ ಆಗಸ್ಟು 1904.

ನಂ. ರೆ. 959-48-3, ಸನ್ 1904ನೆ ಜೂನ್ 30ನೆ ಮರ್ಕುಂ ರೆ. 4215-16—ರೆ. ಫೈ. 51-96-97ನೆ ನಂಬರ್ ಗವರ್ನ್ ಮೆಂಟಿನ ಪ್ರೊಸಿಡಿಂಗ್ಸಿನಲ್ಲಿ ಪುನಃ ಕೊಡಲ್ಪಟ್ಟ ಅಸಿಸ್ಟೆಂಟ್ ಕಮೀಷನರಾದ ಮೆ|| ಬಿ. ಕೃಷ್ಣರಾಯರಿಗೆ 1903ನೆ ಡಿಸೆಂಬರ್ 23ನೆ ಮರ್ಕುಂ ರೆ. 1815—ರೆ. ಫೈ. 51-96ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 1 ತಿಂಗಳ ಪ್ರಿವಿಲೇಜ್ ರಜಾ ಇನ್ನೂ 1 ತಿಂಗಳು 16 ದಿನಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

ತಾರೀಖು 5ನೆ ಆಗಸ್ಟು 1904.

ನಂ. ರೆ. 962-73-2, ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೂಡಗೆರೆ ತಾಲ್ಲೂಕಿನ ಅಮಲ್‌ದಾರ್ರಾದ ಮೆ|| ಅಬ್ದುಲ್ ಹಕೀಂ ಯವರಿಗೆ 1904ನೆ ಜೂನ್ 16ನೆ ಮರ್ಕುಂ 3681—ರೆ. ಫೈ. 35—1901-02ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 1 ತಿಂಗಳ ಪ್ರಿವಿಲೇಜ್ ರಜಾ ಇನ್ನೂ 2 ತಿಂಗಳು ಜಾಸ್ತಿ ಮಾಡಲ್ಪಟ್ಟಿರುತ್ತೆ.

2. ಮೇಲ್ಕಂಡ ಇಸ್ತಿರ್ನಾಮೆಯಲ್ಲಿ ಮೊದಲನೇ ಮಂಜೂರ್ಮಾಡಲ್ಪಟ್ಟಿದ್ದ ಏರ್ಪಾಡುಗಳಂತೆಯೆ, ಸದರೀ ಅಮಲ್‌ದಾರ್ರು ರಜಾದಲ್ಲಿರುವ ಕಾಲದಲ್ಲಿ ಯಾ ಮತ್ತೊಂದು ಹುಕುಂ ಕೊಡುವ ಪರಿಯಂತ, ಇರತಕ್ಕದ್ದು.

287

263

ತಾರೀಖು 6ನೆ ಆಗಸ್ಟು 1904.

ನಂ. ರೆ. 1021-102-3, ಸ್1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಪರಿವಾರದವರು ಮನೆಗಳನ್ನು ಕಟ್ಟುವ ಬಗ್ಯೆ ಬೇಕಾಗಿರುತ್ತದೆ. ಮತ್ತು ತಾಲ್ಲೂಕಿನ ಜಾಲ್ಜವನಲ್ಲಿರುವ ಅಸಿಸ್ಟೆಂಟ್ ಕಮೀಷನರವರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂಬ್ರ.	ಗ್ರಾಮದ ಹೆಸರು.	ಖಾತೇದಾರರ ಹೆಸರು.	ಸರ್ವೆ ನಂ.		ಆಕಾರ.			ತೆಗೆದುಕೊಳ್ಳ ಬೇಕಾಗಿರುವ ಜಮೀನು.		ಹಕ್ಕು ಬಂದಿ.			
			ನಂಬ್ರ.	ಗಡ್ಡೆ.				ಎಕರೆ	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
	ಕಂಚಿದಾಸನಹಳ್ಳಿಯ ಸುಕ್ಷೇತ್ರದ ಪಟೇಲಿಕೆ ಮತ್ತು ಕುಲಕರ್ಣಿಕೆ ಇನಾಮು.	ಪಟೇಲಿ ಕಾಳಪ್ಪನವರು.											
		ಕುಲಕರ್ಣಿ ಪುಟ್ಟಯ್ಯನವರು.											
		ಪುಟ್ಟಯ್ಯನವರ್ಡಿ	ಸರ್ವೆ ನಂ. 2 ಮುಷ್ಟಿ		ಎ. 3	ಗು. 21	ರೂ. 3	ಆ. 8	ಪೈ. 0				
										ಪೂರ್ವದಾಸನಹಳ್ಳಿಯ ಹಿಡುವಳಿಯ ಸರ್ವೆ ನಂ. 5				
										ಪಶ್ಚಿಮ ಕಟ್ಟಿಕ್ಯಾದಂಪಾ ಕಾವಲಿನಲ್ಲಿರುವ ಸರ್ವೆ ನಂ. 1				
										ಉತ್ತರ ಪಟ್ಟಣಾಸಿಯ ಹಿಡುವಳಿಯ ಸರ್ವೆ ನಂ. 14 ಮತ್ತು ಪೇಟೆಯಾಸನಹಳ್ಳಿಯ ಹಿಡುವಳಿಯ ಸರ್ವೆ ನಂ. 15 (ಇನಾಂ)				
										ದಕ್ಷಿಣ.			
										ಸುಂಕದಕಟ್ಟೆಯಿಂದ ಕಾಳಪ್ಪನವರ ಹಿಡುವಳಿಯ ಸರ್ವೆ ನಂ. 3 ಕ್ಕೆ ಹೋಗುವ ದಾರಿ.			

ತಾರೀಖು 6ನೆ ಆಗಸ್ಟು 1904.

ನಂ. ರೆ. 1079—117-3, ಸ್1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಕುಣಿಗಲ್ ತಾಲ್ಲೂಕಿನ ಪಲ್ಲರಾಯನಹಳ್ಳಿಯಲ್ಲಿ ಮನೆಗಳನ್ನು ಕಟ್ಟುವಬಗ್ಯೆ ಬೇಕಾಗಿರುತ್ತದೆ. ಮತ್ತು ತುಮಕೂರ ಡಿಸ್ಟ್ರಿಕ್ಟಿನ ಎರಡನೇ ಜನರಲ್ ಅಸಿಸ್ಟೆಂಟ್ ಕಮೀಷನರಾದ ಮೆ|| ಏ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂಬ್ರ.	ಗ್ರಾಮದ ಹೆಸರು.	ಖಾತೇದಾರರ ಹೆಸರು.	ಸರ್ವೆ ನಂ.		ಆಕಾರ.			ತೆಗೆದುಕೊಳ್ಳ ಬೇಕಾಗಿರುವ ಜಮೀನು.			ಹಕ್ಕು ಬಂದಿ.			
			ನಂಬ್ರ.	ಗಡ್ಡೆ.				ಎಕರೆ	ಆಕಾರ.		ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	ಪಲ್ಲರಾಯನಹಳ್ಳಿ	ಪಟೇಲ ನಂಜೇಗೌಡ	ಮುಷ್ಟಿ 5/1	2	ಎ. 3	ಗು. 12	ರೂ. 0	ಎ. 1	ಗು. 9	ರೂ. 0 13	ಆ. 8	ಸರ್ವೆ ನಂ. 8ರ ಪೈಕಿ ಪೋಲಿ 2 ಗುಂ 32 ಭಾಗ.	ಸರ್ವೆ ನಂ. 7.	ಸರ್ವೆ ನಂ. 8ರ ಪೈಕಿ ಪೋಲಿ 12 ಭಾಗ.	ಸರ್ವೆ ನಂ. 8ರ ಪೈಕಿ ಪೋಲಿ 33 ಭಾಗ.

0

ತಾರೀಖು 8ನೆ ಆಗಸ್ಟು 1904.

ನಂ. ರೆ. 1072—128—3, ಸ್ಟ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀರ್ಷ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ತುಮಕೂರು ಡಿಸ್ಟ್ರಿಕ್ಟು ಚಿಕ್ಕನಾಯಿಕನಹಳ್ಳಿ ತಾಲ್ಲೂಕಿನಲ್ಲಿರುವ ಮಲಗೆಹಳ್ಳಿ ಗ್ರಾಮವನ್ನು ಬಡಾಯಿಸುವ ಬಗ್ಯೆ ಬೇಕಾಗಿರುತ್ತದೆ. ಮತ್ತು ಎರಡನೇ ಜನರಲ್ ಅಸಿಸ್ಟೆಂಟ್ ಕಮೀಷನರಾದ ಮೆ॥ ಪಿ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು.	ತಾಲ್ಲೂಕು.	ಗ್ರಾಮ.	ಖಾತೇದಾರ್ರ ಹೆಸರು.	ಜಮೀನಿನ ವಿವರ.						ಬೇಕಾಗಿರುವ ವಿಸ್ತೀರ್ಣ.					ಚಕ್ಕುಬಂದಿ.			
				ವಿಸ್ತೀರ್ಣ.			ಆಕಾರ.			ವಿಸ್ತೀರ್ಣ.		ಆಕಾರ.			ಉತ್ತರ.	ಪೂರ್ವ.	ದಕ್ಷಿಣ.	ಪಶ್ಚಿಮ.
				ನಂ.	ಎ.	ಗು.	ರೂ.	ಆ.	ಪೈ.	ಎ.	ಗು.	ರೂ.	ಆ.	ಪೈ.				
ತುಮಕೂರು	ಚಿಕ್ಕನಾಯಿಕನಹಳ್ಳಿ	ಮಲಗೆಹಳ್ಳಿ	ದೊಡ್ಡೆಗೌಡ ಬಿನ್ ಬೋರೆಗೌಡ	6/2	3	29	3	0	0	3	29	3	0	0	ನವಲೆ ಗ್ರಾಮಕ್ಕೆ ಹೋಗುವ ಹಾದಿ	ಹುಲಿಯಾರ್ ರಸ್ತೆ ಮತ್ತು ಸರ್ವೆ ನಂ. 6/1	ಸರ್ವೆ ನಂ. 8	ಹಾಲಿ ಇರುವ ಮಲಗೆಹಳ್ಳಿಯ ಗ್ರಾಮನಿವೇಶನ

ತಾರೀಖು 8ನೆ ಆಗಸ್ಟು 1904.

ನಂ. ರೆ. 1077—101—3, ಸ್ಟ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀರ್ಷ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನು ಸರ್ಕಾರ ಕೆಲಸಕ್ಕೆ ಅಂದರೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿರುವ ಕಾರುಬರಹಳ್ಳಿ ಗ್ರಾಮದಲ್ಲಿ ಸ್ಮಶಾನಭೂಮಿಗೋಸ್ಕರ ಬೇಕಾಗಿರುತ್ತದೆ. ಮತ್ತು ತುಮಕೂರ ಡಿಸ್ಟ್ರಿಕ್ಟಿನ ಎರಡನೇ ಜನರಲ್ ಅಸಿಸ್ಟೆಂಟ್ ಕಮೀಷನರಾದ ಮೆ॥ ಪಿ. ಶ್ರೀನಿವಾಸರಾಯರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಗ್ರಾಮದ ಹೆಸರು.	ಖಾತೇದಾರ್ರ ಹೆಸರು.	ಸರ್ವೆ ನಂ.		ಆಕಾರ.	ತೆಗದುಕೊಳ್ಳಬೇಕಾಗಿರುವ ಜಮೀನು.		ಚಕ್ಕುಬಂದಿ.			
		ನಂ.	ವಿವರ.		ಎಕರೆ.	ಆಕಾರ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ಎ. ಗು.	ರೂ. ಆ. ಪೈ.	ಎ. ಗು.	ರೂ. ಆ. ಪೈ.				
ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಕಾರುಬರಹಳ್ಳಿಯ ಗ್ರಾಮ.	ಲಿಂಗಂಣ ಬಿನ್ ನಿರ್ವಾಣಿ.	14/1	2 35	3—0—0	0 36	1 0 0	ಎನ್. ನಂ. 14/1 ಫೋಡ್ ನಿರ್ವಾಣಿಯ ಜಮೀನ	ಸಾಲಿತ್ರಮ್ಮನ ಜಮೀನಿನ ಎನ್. ನಂ. 14.	ಮೂಡ್ಲಯ್ಯನ ಜಮೀನಿನ ಎನ್. ನಂ. 13.	ದೊಡ್ಡಮ್ಮನ ಜಮೀನಿನ ಎನ್. ನಂ. 14.

1265

ತಾರೀಖು 8ನೆ ಆಗಸ್ಟು 1904.

ನಂ. ರೆ. 1088-59-2, ಅರಕಲಗೂಡು ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ಎಂ. ರಂಗನಾಥರಾಯರಿಗೆ 1904ನೆ ಮೇ 25ನೆ ಮರ್ಕುಂ ರೆ. 3613—ರೆ. ಫೈ. 103-96ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ $2\frac{1}{2}$ ತಿಂಗಳುಗಳ ಪ್ರಿವಿಲೇಜ್ ರಜಾದೊಂದಿಗೆ ಮೈಸೂರ ಸರ್ವಿಸ್ ರೆಗ್ಯುಲೇರ್ಷಗಳ 165 A., ಕ್ಲಾಜ್ (ii)ನೆ ಆರ್ಟಿಕಲ್ ಅನುಸರಿಸಿ, $3\frac{1}{2}$ ತಿಂಗಳುಗಳ ಸ್ವಂತ ಕೆಲಸಗಳ ಮೇಲಣ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ವ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.

ಮುಜರೈ.

ಇಸ್ತಿಹಾರ್ನಾಮಾ.

ತಾರೀಖು 3-4ನೆ ಆಗಸ್ಟ್ 1904.

ನಂ. 599, ದಕ್ಷಿಣ ಕನ್ನಡ ಡಿಸ್ಟ್ರಿಕ್ಟು ಉಪ್ಪನಂಗಡಿ ತಾಲ್ಲೂಕಿನ ಸುಬ್ರಹ್ಮಣ್ಯದಲ್ಲಿರುವ ಶ್ರೀ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ದೇವಸ್ಥಾನದಲ್ಲಿ ಸ್ಥಾಪಿಸಲ್ಪಟ್ಟ ಮೈಸೂರ ಗವರ್ನಮೆಂಟಿನ ಧರ್ಮಗಳ ಕೆಲಸಗಳನ್ನು ಸ್ಥಳದಲ್ಲಿ ನಡೆಸಲಿಕ್ಕೆ ಮ॥ ರಾ॥ ರಾ॥ ಬಾಗಲೋಡಿ ಭೋಜರಾಯರು ಧರ್ಮದರ್ಶಿಯರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಸೆಕ್ರಿಟೆರಿ.

284

1267

ಮೈಸೂರ ಗೆಜಿಟ್ಟು.

ಸಂ. 39.] ಸರ್ಕಾರದಿಂದ ಘೋಷಣೆ ಆದ್ದು. [ನಂ. 32.

ಬೆಂಗಳೂರು, ಗುರುವಾರ, ಆಗಸ್ಟು ತಾ|| 11, ಸ್ಯ 1904.

IIನೆ ಭಾಗ.

ಇಂಡ್ಯೆಗವರ್ನ್‌ಮೆಂಟ್, ರೆಸಿಡೆಂಟರು, ಚೀಫ ಜಡ್ಜೀರು ವಗ್ಯೆರೆರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಇನಾಂ ಇಲಾಖಾ.

ಇಸ್ತಿಹಾರ್‌ನಾಮೆ.

ನಂ. I. ತಾರೀಖು 29ನೆ ಜುಲೈ 1904.

ಇನಾಂದಾರರಿಗೆ ಇದರಿಂದ ತಿಳಿಯುಪಡಿಸುವದೇನಂದರೆ, ನಂಜನಗೂಡು ತಾಲ್ಲೂಕಿನಲ್ಲಿರತಕ್ಕ ಟಿಲ್ಲರೆ ಇನಾಂಗಳ ಬಾಬತು 156 ಫೈನಲ್ ಟೈಟಲ್ ಡೀಡ್‌ಯಾನೆ ಖಾಯಂ ಪಟ್ಟೆಗಳು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕವಿಾಷನರವರ ಬಳಿಗೆ ಬಟವಾಡೆ ಬಗ್ಯೆ ಈ ತಾರೀಖಿನಲ್ಲಿ ಕಳುಹಿಸಲ್ಪಟ್ಟವೆ.

2. ಸದರಿ ತಾಲ್ಲೂಕಿನ ಅಮಲ್ದಾರ್ರಿಂದ ಪ್ರತ್ಯೇಕ ಪ್ರತ್ಯೇಕ ನೋಟೀಸುಗಳು ಬಂದಮೇಲೆ ಅವ್ರಗಳನ್ನ ತಗದುಕೊಳ್ಳುವ ಬಗ್ಯೆ ಸದರಿ ಇನಾಂದಾರರು ಐಜರ್ ಪ್ರಕಾರ ಹಾಜರಾಗತಕ್ಕದ್ದು. ಸದರಿ ತಾಲ್ಲೂಕಿನ ಅಮಲ್ದಾರ್ರು ಅಂಥಾ ನೋಟೀಸುಗಳನ್ನು ದೇರ ಮಾಡದೆ ಕೊಡತಕ್ಕದ್ದೆಂದು ಇದರಿಂದ ನಿಯಮಿಸಲ್ಪಟ್ಟು ಇರುತ್ತಾ.

3. ಸದರಿ ಟಿಲ್ಲರೆ ಇನಾಂಗಳ ಬಗ್ಯೆ ಈ ಆಫೀಸಿನಿಂದ ಮೊದಲೆ ಕೊಡಲ್ಪಟ್ಟ ಹಂಗಾಮಿ ಪಟ್ಟೆಗಳು ರದ್ದು ಮಾಡಲ್ಪಟ್ಟವು ತ್ತೆಂದು ಇದರ ದೆಕೆಯಿಂದ ಪ್ರಕಟಿಸಲ್ಪಟ್ಟು ಇರುತ್ತೆ.

ಜೆ. ಪಿ. ಗ್ರಾಂಟ್,
ಸೂಪರಿಂಟೆಂಡೆಂಟ್ ಆಫ್ ಇನಾಂ ಸೆಟಲ್‌ಮೆಂಟ್ಸ್.

ಫಾರೆಸ್ಟ್ ಇಲಾಖಾ.

ಇಸ್ತಿಹಾರ್ ನಾಮೆ.

ತಾರೀಖು 8ನೆ ಆಗಸ್ಟು 1904.

ಅದರಂಗಿ ಫಾರೆಸ್ಟು.

ಸನ್ 1900ನೆ ಇಸವಿಯ XIನೆ ನಂಬರ್ ಫಾರೆಸ್ಟು ರೆಗ್ಯುಲೇಷನ್ 5ನೆ ಸೆಕ್ಷನ್ ಪ್ರಕಾರ ಪ್ರಸಿದ್ಧಪಡಿಸುವದೇನಂದರೆ,— 4ನೆ ಸೆಕ್ಷನ್ ಪ್ರಕಾರ ಇದರಡೀ ಕಂಡ ಷೆಡ್ಯೂಲಿನಲ್ಲಿ ಗೌರ್ನಮೆಂಟಿನಿಂದ ವಿವರಿಸಲ್ಪಟ್ಟ ಚಕ್ಕುಬಂದಿಯುಳ್ಳ ಪ್ರದೇಶವು ಸ್ಟೇಟ್ ಫಾರೆಸ್ಟು ಮಾಡಿರುವದಾಗಿ ನಂಬರು ರೆ. 801-19-1 ತಾರೀಖು 4—8—0,ನೆ ಗೆಜೆಟ್ಟಿನಲ್ಲಿ ಫಾಯಿಷ್ಮಾಡಲ್ಪಟ್ಟಿರುತ್ತೆ :—

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಬೆಂಗಳೂರು.	ಮಾಗಡಿ.	4·29 ಚದರ ಮೈಲಿಗಳು.	ಅದರಂಗಿ ಫಾರೆಸ್ಟು.	ಸ್ಥಳ.—ಇದು ಅದರಂಗಿ ಗ್ರಾಮದ ಉತ್ತರಕ್ಕೆ ಇರುತ್ತದೆ. **ಚಕ್ಕುಬಂದಿ.** ಉತ್ತರಕ್ಕೆ.—ಎಲ್ಲೆ ಲೈನು ಶ್ರೀಗಿರಿಪುರದ ಸರ್ವೆ ನಂ. 157ರ ಈಶಾನ್ಯ ಮೂಲೆಯಿಂದ ಹೊರಟು ವೀರಸಾಗರದ ಸರ್ವೆ ನಂ. 12ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 12ರ ಪೂರ್ವ ವ ದಕ್ಷಿಣ ಪಾರ್ಶ್ವಗಳ ಉದ್ದಕ್ಕೂ ಮತ್ತು ಸರ್ವೆ ನಂ. 13ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 13, 53, 47 ವ 64 ಇವುಗಳ ದಕ್ಷಿಣ ಪಾರ್ಶ್ವಗಳ ಉದ್ದಕೂ ಆಖೈರ ನಂಬರಿನ ಆಗ್ನೇಯ ಮೂಲೆಗೆ ಹೋಗುತ್ತದೆ. ಪೂರ್ವಕ್ಕೆ.—ತರುವಾಯ ಸರ್ವೆ ನಂ. 48ರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಕಂಬಾಳದ ಸರ್ವೆ ನಂ. 114ರ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರು ಮತ್ತು ಸರ್ವೆ ನಂ. 109, 110 ವ 111 ಇವುಗಳ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಆಖೈರ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 111ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಮೈಲಿನಹಳ್ಳಿಯ ಸರ್ವೆ ನಂ. 45ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದರ ಪೂರ್ವ ಪಾರ್ಶ್ವದ ಉದ್ದಕ್ಕೂ ಸರ್ವೆ ನಂ. 44ರ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಅದರ ಪಶ್ಚಿಮ ಪಾರ್ಶ್ವದ ಉದ್ದಕ್ಕೂ ಅದರ ನೈರುತ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಅದರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಅತ್ಯಂತ ದಕ್ಷಿಣ ಮೂಲೆಗೆ ಹೋಗುತ್ತದೆ. ತರುವಾಯ ಭೈರಸಂದ್ರ ಗ್ರಾಮದ ಪಶ್ಚಿಮ ಎಲ್ಲೆಯ ಉದ್ದಕ್ಕೂ ಉಡುಕುಂಟೆ ಗ್ರಾಮದ ಸರ್ವೆ ನಂ. 119ರ ವಾಯವ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 119 ವ 109 ಇವುಗಳ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ನೈರುತ್ಯ ಮೂಲೆಗೆ ಹೋಗುತ್ತದೆ. ದಕ್ಷಿಣಕ್ಕೆ.—ತರುವಾಯ ವೀರಾಪುರದ ಸರ್ವೆ ನಂ. 19 ವ ಅದರಂಗಿಯ ಸರ್ವೆ ನಂ. 84 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಅದೇ ಗ್ರಾಮದ ಸರ್ವೆ ನಂ. 81ರ ಆಗ್ನೇಯ ಮೂಲೆಗೆ ಹೋಗುತ್ತದೆ. ಆಮೇಲೆ ಅದೇ ನಂಬರಿನ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಉತ್ತರ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 80ರ ಉತ್ತರ ವ ಪಶ್ಚಿಮ ಪಾರ್ಶ್ವಗಳ ಉದ್ದಕ್ಕೂ ಸರ್ವೆ ನಂ. 89ರ ಈಶಾನ್ಯ ಮೂಲೆಗೆ ಹೋಗುತ್ತದೆ. ಆಮೇಲೆ ಸರ್ವೆ ನಂ. 89 ವ 90 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ವಾಯವ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 47ರ ಪೂರ್ವ ಪಾರ್ಶ್ವದ ಉದ್ದಕ್ಕೂ ಅದರ ಈಶಾನ್ಯ ಮೂಲೆಗೆ ಹೋ

1269

ಷೆಡ್ಯೂಲ್.

ಡಿಸ್ಟ್ರಿಕ್ಟು.	ತಾಲ್ಲೂಕು.	ವಿಸ್ತೀರ್ಣ.	ಬ್ಲಾಕಿನ ಹೆಸರು.	ಸ್ಥಳ ವ ಚಕ್ಕುಬಂದಿ.
ಬೆಂಗಳೂರು.	ಸಾಗರ.	4·29 ಚದರ ಮೈಲಿಗಳು.	ಅದರಂಗ ಫಾರೆಸ್ಟು.	ಗುತ್ತದೆ. ಅಮೇಲೆ ಸರ್ವೆ ನಂ. 47, 48, 49, 110, 72, 73 ವ 74 ಇವುಗಳ ಉತ್ತರ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಅತ್ಯಂತ ಉತ್ತರ ಮೂಲೆಗೆ ಹೋಗುತ್ತದೆ. ತರುವಾಯ ಕಾಗಿಮಡುವಿನ ಪೂರ್ವ ಉತ್ತರ ಎಲ್ಲೆಗಳ ಉದ್ದಕ್ಕೂ ಬಿಟ್ಟಹಳ್ಳಿಯ ಸರ್ವೆ ನಂ. 72ರ ಆಗ್ನೇಯ ಮೂಲೆಗೆ ಹೋಗುತ್ತದೆ. ಪಶ್ಚಿಮಕ್ಕೆ.—ಅಮೇಲೆ ಬಿಟ್ಟಹಳ್ಳಿಯ ಸರ್ವೆ ನಂ. 73 ವ 62 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 6ರ ದಕ್ಷಿಣ ವ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಅವರ ಈಶಾನ್ಯ ಮೂಲೆಗೆ ಹೋಗುತ್ತದೆ. ಅಮೇಲೆ ಶ್ರೀಗಿರಿ ಪುರದ ಸರ್ವೆ ನಂ 22ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಅದೇ ನಂಬರ್ ಮತ್ತು ಸರ್ವೆ ನಂ. 163, 134, 162, 138, 161, 26, 160 ವ 27 ಇವುಗಳ ಪೂರ್ವ ಪಾರ್ಶ್ವಗಳ ಉದ್ದಕ್ಕೂ ಆಖೈರ ಸರ್ವೆ ನಂಬರಿನ ಈಶಾನ್ಯ ಮೂಲೆಗೆ ಹೋಗುತ್ತದೆ. ಅಮೇಲೆ ಸರ್ವೆ ನಂ. 28ರ ದಕ್ಷಿಣ ಪಾರ್ಶ್ವದ ಉದ್ದಕ್ಕೂ ಅದರ ಆಗ್ನೇಯ ಮೂಲೆಗೆ ಹೋಗುತ್ತದೆ. ತರುವಾಯ ಸರ್ವೆ ನಂ. 28, 124 ವ 157 ಇವುಗಳ ಪೂರ್ವ ಪಾರ್ಶ್ವದ ಉದ್ದಕ್ಕೂ ಹೊರಟು ಸ್ಥಳಕ್ಕೆ ಹೋಗುತ್ತದೆ.

2. ಸದರಿ ಜಂಗಲಿಯನ್ನು ಸ್ಟೇಟು ಫಾರೆಸ್ಟು ಮಾಡುವದಕ್ಕೆ ಮುಂಚೆ ಇಸ್ತಿಹಾರ್ನಾವೆ ಪ್ರಸಿದ್ಧಪಡಿಸಿದ ತಾರೀಖಿಗೂ ಮತ್ತು ಪ್ರಸಿದ್ಧಪತ್ರಿಕೆ ಫಾಯಿಷ್ ಆಗುವದಕ್ಕೂ ಮಧ್ಯಕಾಲದಲ್ಲಿ ಸದರಿ ಇಸ್ತಿಹಾರ್ನಾಮಾದಲ್ಲಿ ನಮೂಬಿಸಿರುವ ಜಮೀನುಗಳ ಮೇಲೆ, ಅಥವಾ ಜಮೀನಿನಲ್ಲಿ ವಾರಸೀ ಹಕ್ಕಿನಿಂದಲಾಗಲಿ ಅಥವಾ ಸರ್ಕಾರದಿಂದ ಅಥವಾ ಸದರೀ ಪ್ರಸಿದ್ಧಪತ್ರಿಕೆ ಫಾಯಿಷ್ಮಾಡಿದಾಗ ಇಂಥಾ ಹಕ್ಕುಗಳನ್ನುಂಟುಮಾಡುವದಕ್ಕೆ ಅಧಿಕಾರವನ್ನು ಪಡಿಸಿದ ಮನುಷ್ಯನಿಂದಲಾಗಲಿ ಬಂದ ಹಕ್ಕುಗಳ ವಿನಹಾ ಇತರ ಯಾವ ತರಹಾವಾದ ಹಕ್ಕು ಬಾಧ್ಯತೆಗಳೂ ಹುಟ್ಟಲಾರವು. ಸದರೀ ಜಮೀನಿನಲ್ಲಿ ಹೊಸ ಮನೆಯನ್ನು ಕಟ್ಟಕೂಡದು, ಪ್ಲಾಂಟೇಷನ್ ಮಾಡಕೂಡದು, ಸಾಗುವಳೀಗೋಸ್ಕರವಾಗಲೀ, ಇನ್ನ್ಯಾವದಕ್ಕೋಸ್ಕರವಾಗಲೀ ಹೊಸದಾಗಿ ಕತರಾವಣೆ ಮಾಡಕೂಡದು. ರೆಗ್ಯುಲೇಷನ್ನಿನಲ್ಲಿ ವಿಧಾಯಕವಾದ ಪ್ರಕಾರವಲ್ಲದೆ ವ್ಯಾಪಾರ ಅಥವಾ ಸಾಮಾನು ತಯಾರೀಗೋಸ್ಕರ ಗಿಡಗಳ್ಯಾವದನ್ನೂ ಕಡಿಯಲಾಗದು. ಸದರಿ ಜಮೀನಿನಲ್ಲಿ ಮುಂಚಿತವಾಗಿ ಸರ್ಕಾರದಿಂದ ಅಪ್ಪಣೆ ಪಡೆಯದೇನೆ ಇಂಥಾ ಜಮೀನು ವಿಷಯದಲ್ಲಿ ಹಿಡುವಳೀ ಹಕ್ಕನ್ನುಂಟುಮಾಡಕೂಡದು. ಮತ್ತು ಅಂಥಾ ಅಪ್ಪಣೇ ಇಲ್ಲದೆ ಕೊಟ್ಟ ಹಿಡುವಳೀ ಹಕ್ಕು ಅಸಿದ್ಧವಾಗಿರುವದು.

3. ಸದರೀ ಜಮೀನು ಸ್ಟೇಟು ಫಾರೆಸ್ಟು ಮಾಡಿದತರುವಾಯ, ಅದರಲ್ಲಿ,

(a) ಅತಿಕ್ರಮಪ್ರವೇಶ, ದನಕರವನ್ನು ಮೇಯಿಸುವದು, ದನಗಳನ್ನು ಸ್ಟೇಟು ಫಾರೆಸ್ಟಿನಲ್ಲಿ ಹೋಗಲು ಆಸ್ಪದ ಕೊಡುವದು.

(b) ಯಾವ ಗಿಡವನ್ನಾದರೂ ಕಡಿಯುವದು ಅಥವಾ ಯಾವ ಪ್ರಕಾರದಮುಟ್ಟನ್ನು ಕತರಾಯಿಸುವದು ಅಥವಾ ಎಳೆಯುವದರಲ್ಲಿ ಅಸಡ್ಡೆಯಿಂದ ಯಾವ ನಷ್ಟವನ್ನಾದರೂ ಉಂಟುಮಾಡುವದು ಅಥವಾ ಯಾವ ಗಿಡದ್ದಾದರೂ, ಯಾವ ಪೊದೇದಾದರೂ ಚಕ್ಕೆ ಅಥವಾ ಎಲೆಗಳನ್ನು ಕಿತ್ತುಹಾಕುವದು.

(c) ನೀರಿಗೆ ವಿಷ ಹಾಕುವದು ನೀರಿನಲ್ಲಿ ಡೈನಾಮೈಟು ಸುಡುವದು, ಅಥವಾ ಸರ್ಕಾರದಿಂದ ಆಗಿರುವ ಯಾವದಾದರೂ ನಿಬಂಧನೆಗಳಿಗೆ ವಿರೋಧವಾಗಿ ಬೇಟೆ ಆಡುವದು, ಬಂದೂಕಿನಿಂದ ಸುಡುವದು, ಮೀನು ಹಿಡಿಯುವದು, ಅಥವಾ ಬೋನುಗಳನ್ನು ಬಲೆಗಳನ್ನು ಹಾಕುವದು, ಇವುಗಳಿಲ್ಲಾ ಜರ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪುತಗಳಾಗಿವೆ. ಮತ್ತು ಸದರೀ ಸ್ಟೇಟು ಫಾರೆಸ್ಟಿನಲ್ಲಿ ಇದರಹೀ ಕೆಂಡ ಕೆಲಸಗಳನ್ನು ಮಾಡುವವರು ಅರು ತಿಂಗಳು ಸಜಾ, ಅಥವಾ 500 ರೂಪಾಯಿಗಳು ಜರ್ಮಾನೆಯಿಂದ ಶಿಕ್ಷಿಸತಕ್ಕ ತಪ್ಪುತಸ್ಥರಾಗಿರುತ್ತಾರೆ.

(d) 6ನೆ ಪ್ರಕರಣದಿಂದ ನಿರೋಧಿಸಿರುವ ಯಾವದಾದರೂ ಹೊಸ ಜಂಗಲ್ ಕತರಾವಣೆ.

(b) ಜಂಗಲಿಗೆ ಬೆಂಕಿ ಹಚ್ಚುವದು ಅಥವಾ ಸರ್ಕಾರದ ನಿಬಂಧನೆಗಳಿಗೆ ವಿರೋಧವಾಗಿ ಅಂಥಾ ಸ್ಟೇಟು ಫಾರೆಸ್ಟಿಗೆ ಬಾಧಕ ಉಂಟಾಗುವ ಹಾಗೆ ಬೆಂಕಿಯನ್ನು ಉರಿಸುವದು, ಅಥವಾ ಅಂಥಾ ಉಂಟುಮಾಡಿದ ಉರಿಯನ್ನು ಆರಿಸದೇ ಇರುವದು.

(c) ಈ ಬಗ್ಗ್ಯಾಗಿ ಕ್ರಮವಾಗಿ ಅಧಿಕಾರ ಹೊಂದಿದ ಫಾರೆಸ್ಟು ಆಫಿಸರು ಆಗಿಂದಾಗ್ಗೆ ಪ್ರಕಟಿಸುವ ನಿಬಂಧನೆಗಳಿಗೆ ವಿರೋಧವಾಗಿ ವಿಧಿತವಾದ ಕಾಲ ಮತ್ತು ಕ್ರಮಗಳಲ್ಲದೆ, ಬೆಂಕಿಯನ್ನು ಹಚ್ಚುವದು, ಇಡುವದು, ಮತ್ತು ತೆಗದುಕೊಂಡು ಹೋಗುವದು.

(d) ಯಾವ ಗಿಡವನ್ನಾಗಲಿ ಕಡಿಯುವದು (ಕತರಾಯಿಸುವದು) ಅದರ ಮಧ್ಯೆ ಸುತ್ತಲೂ ಘಾಯ ಮಾಡುವದು, ಗುರ್ತು ಹಾಕುವದು, ಸವರುವದು, ತೂತು ಹಾಕುವದು, ಬೆಂಕಿಯಿಂದ ಅಥವಾ ಅನ್ಯಥಾ ಹಾನಿಗೊಳಿಸುವದು.

(e) ಬಂಡೆಯಿಂದ ಕಲ್ಲು ತೆಗೆಯುವದು, ಸುಂಣ ಅಥವಾ ಇದ್ದಲು ಸುಡುವದು, ಅಥವಾ ಯಾವ ಫಾರೆಸ್ಟು ಉತ್ಪತ್ತಿಯನ್ನಾದರೂ ಜಮಾಯಿಸುವದು, ಯಾವದಾದರೂ ಸಾಮಾನು ತಯಾರೀ ಕೆಲಸಕ್ಕೆ ವಳಪಡಿಸುವದು ಅಥವಾ ಸಾಗಿಸುವದು.

(f) ಸಾಗುವಳೀಗಾಗಲಿ ಅಥವಾ ಇನ್ನ್ಯಾವ ಕೆಲಸಕ್ಕಾಗಲೀ ಯಾವ ಜಮೀನನ್ನಾಗಲೀ ಹಸನ ಮಾಡುವದು ಅಥವಾ ಉತ್ತುವದು.

4. ಈ ಪ್ರಶಿದ್ಧಪತ್ರಿಕೆ ಘಾಯಿಷಾಗುವ ತಾರೀಖು ಲಾಗಾಯಿತು ಮೂರುತಿಂಗಳೊಳಗಾಗಿ ಅಂಥಾ ಸರಹದ್ದಿನೊಳಗಿರುವ ಯಾವ ಜಮೀನಿನಲ್ಲಿ ಅಥವಾ ಜಮೀನುಮೇಲಾದರೂ ಅಥವಾ ಅಂಥಾ ಜಮೀನಿನ ಫಾರೆಸ್ಟು ಉತ್ಪತ್ತಿಗಾಗಲೀ ಯಾರಿಗಾದರೂ ಹಕ್ಕು ಇಧೆ ಅಥವಾ ಉಂಟು ಎಂತ ಹೇಳುವದು ಅಂಥಾ ಪ್ರತಿ ಒಂದು ಹಕ್ಕಿನ ಸ್ವಭಾವವನ್ನು ಹಕ್ಕು ಎಷ್ಟರ ಮಟ್ಟಿಗೆ ಇಧೆ ಯನ್ನತಕ್ಕಂಥಾ ವ್ಯಾಪ್ತಿಯನ್ನು ನಮೂದು ಮಾಡಿ ಬರಹಮೂಲಕವಾಗಲೀ ಅಥವಾ ರೂಬರೂಬಾಗಲೀ ತಿಳಿಯಪಡಿಸಬೇಕಲ್ಲದೆ ಹಕ್ಕುದಾರೀಗೆ ಬಲೀಯವಾದ ದಸ್ತಾವೇಜುಗಳನ್ನು ಯಾ ಇತರ ರುಜುವಾತನ್ನು ಹಾಜರ್‌ಮಾಡಬೇಕು.

ಅ. ಆನಂದರಾವ್,
ಫಾರೆಸ್ಟು ಸೆಟಲ್‌ಮೆಂಟ್ ಆಫಿಸರು.

ನೋಟಿಸ್.

ತಾರೀಖು 6ನೆ ಆಗಸ್ಟು 1904.

1904ನೆ ಇಸವಿ ಆಗಸ್ಟು 4ನೆ ತಾರೀಖಿನ ಮೈಸೂರು ಗೆಜೆಟ್ಟಿನ 2ನೆ ಭಾಗದ 459ನೆ ಪರ್ಣನಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟು 1904—05ನೆ ಸಾಲಿನ ತಂಗಡಿ ಮತ್ತು ಕಕ್ಕೆ ಚಕ್ಕೆ ಹರಾಜು ವಿಚಾರ ನೋಟಿಫಿಕೇಷನ್ ಘಾಯಿಷ್ ಮಾಡಿರುವ ವಿಷಯ ಎಲ್ಲಾ ಜನಗಳು ತಿಳಿಯತಕ್ಕದ್ದು.

ನೋಟಿಫಿಕೇಷನ್, ತಾರೀಖು 6ನೆ ಆಗಸ್ಟು 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—ಇದರಡಿ ಕಂಡ ತಾರೀಖುಗಳಲ್ಲಿ ಮತ್ತು ಸ್ಥಳಗಳಲ್ಲಿ ಶಿವಮೊಗ್ಗಾ ಡಿಸ್ಟ್ರಿಕ್ಟು ಡಿಪೋಗಳ ಬಾಬತು ಚವುಬೀನೆ ಸಾಮಾನು ಡಿಸ್ಟ್ರಿಕ್ಟು ಫಾರೆಸ್ಟ್ ಆಫಿಸರಿಂದಲಾಗಲಿ ಅಥವಾ ಡಿಸ್ಟ್ರಿಕ್ಟು ಆಫಿಸರಿಂದ ನೇಮಿಸಲ್ಪಡುವ ಇತರ ಆಫಿಸರಿಂದಲಾಗಲಿ ಬಹಿರಂಗವಾಗಿ ಹರಾಜು ಮಾಡಲ್ಪಡುತ್ತೆ :—

ನಂಬರು.	ಡಿಪೋ ಹೆಸರು.	ಹರಾಜು ತಾರೀಖು.	ಸಾಗುವಾನಿ ನಾಟಾ.		ಮನ್ನಾಜಾತಿ ನಾಟಾ.		ಕಾಡಜಾತಿ ನಾಟಾ.		ಸಾಗವಾನಿ ಬೆಲಗು.		ಜಂಗಲಿ ಬೆಲಗು.		ಹೆಬ್ಬಿದರು.	ಕಿರಿಬಿದರು.	ಬೇವಾರ್ಸು.	ಪರಾ.
			ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.	ಅದದು.	ಸಲೆ ಅಡಿ.				
1	ಶಿವಮೊಗ್ಗಾ ..	2—9—1904	37	974¼	24	632	12	257¾	...	..	18	35	64	510	6	ಸ್ವಲ್ಪಹೆಚ್ಚು ಕಡಮೆ
2	ಆಯಿನೂರು ..	4—9—1904	...	...	112	2845¾	9	145	226	2298½	...	...	608	...	...	
3	ಉಂಬಳಿ ಬೈಲು	6—9—1904	27	758	104	3424½	20	651½	..	..	..	...	...	...	...	

ಹರಾಜು ಷರತ್ತು :—15—3—1895ನೆ ಮರ್ಕುಂ ನಂಬರು 15229—R. F. 155-92ನೆ ಗವರ್ನಮೆಂಟ್ ನೋಟಿಫಿಕೇಷನ್ ಮೇರಿಗೆ.

ಜೆ. ಮಾರ್ಟೈರೊ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ, ಶಿವಮೊಗ್ಗ.

ತಂಗಡಿಚಕ್ಕೆ — ಇಸ್ತಿಹಾರು, ತಾರೀಖು 2ನೆ ಆಗಸ್ಟು 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಚಿತ್ರದುರ್ಗದ ಡಿಸ್ಟ್ರಿಕ್ಟಿಗೆ ಶೇರಿದ ಈ ಕೆಳಗೆ ವಿವರಿಸಿರುವ ತಾಲ್ಲೂಕುಗಳಲ್ಲಿನ ಮುತ್ತು ಸ್ಟೇಟ್ ಫಾರೆಸ್ಟುಗಳಲ್ಲಿನ ತಂಗಡಿ ಚಕ್ಕೆಯನ್ನು ಈ ಕೆಳಗೆ ತಪಶೀಲು ನಮೂದು ಮಾಡಿರುವ ಕಾಲಗಳಲ್ಲಿ ರೂಢಿಸಿ ಜಮಾಯಿಸತಕ್ಕ ಹಕ್ಕನ್ನು ಪಡಿಯಲು 1904ನೆ ಇಸವಿ ಆಗಸ್ಟು ತಾರೀಖು 15ರ ವರಿಗೆ ಚಿತ್ರದುರ್ಗದ ಡಿಸ್ಟ್ರಿಕ್ಟು ಫಾರೆಸ್ಟು ಆಫೀಸಿನಲ್ಲಿ ದರಖಾಸ್ತುಗಳು ತೆಗೆದುಕೊಳ್ಳಲ್ಪಡುವದು :—

ನಂಬರು.	ತಾಲ್ಲೂಕು ಅಥವಾ ಸ್ಟೇಟ್ ಫಾರೆಸ್ಟು.	ಜಮಾಯಿಸತಕ್ಕ ಕಾಲ.	ಪರಾ.
1	ಹೊಳಲ್ಕೆರೆ ತಾಲ್ಲೂಕು	1904ನೆ ಸೆಪ್ಟಂಬರ್ ತಾರೀಖು 1ರ ಲಾಗಾಯಿತು 1905ನೆ ಜೂನ್ ಆಖೈರಿ ವರಿಗೆ.	ಇನಾಂ, ಜೋಡಿ, ಕಾಯಂಗುತ್ತಾ, ಸ್ವಮಾನ್ಯ ಕಂದಾಯ ಮತ್ತು ಹಿಡುವಳ್ಳಿಯಲ್ಲಿರುವ ಇತರ ಜಮೀನುಗಳಲ್ಲಿನ ಫಸಲು ಈ ಹರಾಜಿಗೆ ಶೇರುವದಿಲ್ಲ.
2	ದಾವಣಗೆರೆ ಡಿಟೋ		
3	ಹೊಳಕಾಲ್ಮುರು ಡಿಟೋ		
4	ಜೋಗಿಮಟ್ಟಿ ಸ್ಟೇಟ್ ಫಾರೆಸ್ಟು		
5	ನೀರಥಡಿ ಡಿಟೋ ...		

(2) ತಾಲ್ಲೂಕು ಅಥವಾ ಫಾರೆಸ್ಟು ಹೆಸರು ಮತ್ತು ದರಖಾಸ್ತು ಮೊಹಲ್ಲಾಟ್ಟು ವೊಬಲಗು ಸಹಾ ದರಖಾಸ್ತುಗಳಲ್ಲಿ ನಮೂದಿಸಬೇಕು.

(3) ಪ್ರತಿ ಒಂದು ದರಖಾಸ್ತಿನೊಡನೆ (100) ರೂಪಾಯಿನ ಕರೆನ್ಸಿ ನೋಟ್ ಠೇವಣಿ ಬಗ್ಗೆ ಕಳುಹಿಸಬೇಕು. ತಪ್ಪಿದಲ್ಲಿ ದರಖಾಸ್ತುಗಳು ಪರಿಶೀಲಿಸಲ್ಪಡುವವು. ದರಖಾಸ್ತುಗಳು ರಿಜಿಸ್ಟರಿ ಮತ್ತು ಇನ್‌ಷೂರ್ ಮಾಡಿ ಲಿಫಾಫೀ ಮೇಲೆ "ತಂಗಡಿ ಚಕ್ಕೆಯ ದರಖಾಸ್ತು" ಎಂದು ಬರದು ಚಿತ್ರದುರ್ಗ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ವಿಳಾಸಕ್ಕೆ ರವಾನಿಸಬೇಕು.

(4) ದರಖಾಸ್ತುಗಳ ಮಂಜೂರಾತಿಯು ಡೆಪ್ಯುಟಿ ಕಮಿಷನರ್ ಸಾಹೇಬರವರಿಗೆ ಕೂಡಿರುತ್ತೆ. ಜಾಸ್ತಿ ದರದ ಯಾವ ದರಖಾಸ್ತನ್ನೇ ಆಗಲಿ ಅಂಗೀಕರಿಸುವದಕ್ಕೆ ಡೆಪ್ಯುಟಿ ಕಮಿಷನರ್ ಸಾಹೇಬರವರು ಬದ್ಧರಾಗಿರುವದಿಲ್ಲ ಮತ್ತು ಯಾವ ಕಾರಣವನ್ನು ನಮೂದಿಸದೇನೆ ಯಾವ ದರಖಾಸ್ತನ್ನು ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

(5) ಚಿತ್ರದುರ್ಗ ಡಿಸ್ಟ್ರಿಕ್ಟ್ ಆಫೀಸಿನಲ್ಲಿ 1904ನೆ ಇಸವಿ ಆಗಸ್ಟು 15ನೆ ತಾರೀಖು ದಿವಿ 2 ಘಂಟೆಗೆ ಸರಿಯಾಗಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಮತ್ತು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಥವಾ ಇವರಿಂದ ನಿಯಮಿಸಲ್ಪಟ್ಟ ಅಸಿಸ್ಟೆಂಟ್ ಕಮಿಷನರ್ ಸಾಹೇಬರವರು ಸೇರಿ ಹಾಜರಿರುವ ದರಖಾಸ್ತುದಾರರ ರೂಬರೂಬ್ ದರಖಾಸ್ತುಗಳನ್ನು ಒಡಿಯುವರು.

(6) ದರಖಾಸ್ತು ಮಂಜೂರಾತಿ ಸಂಗತಿಯನ್ನು ಸದರೀ ದರಖಾಸ್ತುದಾರನಿಗೆ ಕೂಡ್ಲೆ ತಿಳಿಸಲ್ಪಡುತ್ತೆ. ಇತರ ದರಖಾಸ್ತುದಾರರ ವೊಬಲಗನ್ನು ಕೂಡ್ಲೆ ವಾಪಸ್ ಮಾಡಲ್ಪಡುವದು.

(7) ದರಖಾಸ್ತು ಮಂಜೂರಾದ ಸಂಗತಿ ದರಖಾಸ್ತುದಾರನಿಗೆ ತಿಳಿಸಿದ 3 ದಿನಗಳ ಒಳಗಾಗಿ ದರಖಾಸ್ತು ವೊಬಲಗು ಪೈಕಿ ವೊದಲು ಠೇವಣಿ ವೊಬಲಗು ಶೇರಿ ಅರ್ಧ ಭಾಗವನ್ನು ಮತ್ತು ಇದರಮೇಲೆ ರೂಪಾಯಿ 1ಕ್ಕೆ ಬಂದಾಣೆಯಂತೆ ಆಗುವ ಲೋಕಲ್ ಸೆಸ್ ಸಹಿತ ಆಯಾಯ ತಾಲ್ಲೂಕು ಖಜಾನೆಗೆ ಪ್ರವಾನೀ ಮಾಡಬೇಕು ಮತ್ತು ಈ 3 ದಿವಸಗಳಲ್ಲಿ ಈ ಇಸ್ತಿಹಾರಿನಲ್ಲಿ ಕಂಡ ಷರತ್ತುಗಳಂತೆ ನಡದುಕೊಳ್ಳುತ್ತೇವೆಂಬ ಬಗ್ಗೆ ಮುಚ್ಚಳಿಕೆ ಬರದುಕೊಡಬೇಕು. ಇದಕ್ಕೆ ತಪ್ಪಿದಲ್ಲಿ ದರಖಾಸ್ತನ್ನ ರದ್ದು ಮಾಡಿ ಠೇವಣಿ ವೊಬಲಗನ್ನು ಸರ್ಕಾರಕ್ಕೆ ಪಂಡವಾಗಿ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬನ್ನು ದುಸರಾ ಹರಾಜು ಮಾಡಿಸಲ್ಪಡುವದು.

(8) ಈ ರೀತಿ ದುಸರಾ ಹರಾಜು ಮಾಡಿಸುವದ್ದರಿಂದ ವುಂಟಾಗುವ ಫಾಯಿದೆಗೆ ವೊದಲಿನ ದರಖಾಸ್ತುದಾರನಿಗೆ ಯಾವ ಹಕ್ಕೂ ಇರುವದಿಲ್ಲಾ. ಆದರೆ ಇದರಿಂದ ಉಂಟಾಗುವ ನಷ್ಟಕ್ಕೆ ಇವನು ಜವಾಬ್ದಾರನಾಗಿರಬೇಕು. ಈ ವೊಬಲಗು ರೆವಿನ್ಯೂ ಬಾಕಿಯಂತೆ ವಸೂಲ್ಮಾಡಲ್ಪಡುವದು.

(9) ದರಖಾಸ್ತುದಾರರು ತಮಿಗಾಗಿ ದರಖಾಸ್ತು ಮಾಡುತ್ತಾರೋ ಅಥವಾ ಇತರರಿಗೋಸ್ಕರವಾಗಿಯೋ ಎಂಬುವದನ್ನು ದರಖಾಸ್ತಿನಲ್ಲಿ ನಮೂದಿಸಬೇಕು. ದರಖಾಸ್ತು ಅಂಗೀಕರಿಸಿದ ನಂತರ ಇಜಾರೆ ಹಕ್ಕನ್ನು ಇತರರಿಗೆ ವರ್ಗ ಮಾಡಿಕೊಡಲು ಇಷ್ಟ ಪಟ್ಟಲ್ಲಿ ಅದಕ್ಕಾಗಿ ಡೆಪ್ಯುಟಿ ಕಮಿಷನರ್ ಸಾಹೇಬರವರ ಮಂಜೂರಾತಿಯನ್ನ ಪಡಿಯಬೇಕು. ವರ್ಗ ರಾಜೀನಾಮೆಯನ್ನು ಅಂಗೀಕರಿಸುವದಕ್ಕೆ ಮುಂಚೆ ಇಜಾರೆ ವೊಬಲಗಿನ ಮೇಲೆ ಹೆಚ್ಚಾಗಿ ಕೆಲವು ತೀರ್ವೆಯನ್ನ ವಸೂಲ್ಮಾಡಲು ಡೆಪ್ಯುಟಿ ಕಮಿಷನರ್ ಸಾಹೇಬರವರು ಅಧಿಕಾರವುಳ್ಳವರಾಗಿರುತ್ತಾರೆ.

(10) ಇಜಾರೆದಾರನು ಗುತ್ತಾ ವೊಬಲಗಿನ ಬಾಕಿಯನ್ನು ಮತ್ತು ಅದರಮೇಲೆ ಆಗುವ ಲೋಕಲ್ ಸೆಸ್ ಸಹಾ ಸಮವಾದ ಮೂರು ಖಿಸ್ತುಗಳಲ್ಲಿ ಮುಂಗಡವಾಗಿ ಈ ಕೆಳಗೆ ಕಂಡ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು ಮತ್ತು ಮೇಲ್ಕಂಡ ಹಣವನ್ನು ಕ್ರಮವಾಗಿ ಪಾವತಿ ಮಾಡತಕ್ಕ ಬಗ್ಗೆ ಸರಿಯಾದ ಖಾತರಿಯು ಕೊಡಬೇಕು. ಯಾವ ಖಿಸ್ತನ್ನಾಗಲೀ ಮೇಲ್ಕಂಡಂತೆ ಪಾವತಿ ಮಾಡಲು ತಪ್ಪಿದರೆ ಚಕ್ಕೆಗಳ ಜವಾಬಣಿ ಮತ್ತು ರವಾನೆ ತಡಿಯಲ್ಪಡುತ್ತಲ್ಲದೆ ಇಜಾರೆ ವೊಬಲಗಿನ ಬಾಕಿ ಯಾವತ್ತನ್ನು ರೆವಿನ್ಯೂ ಕಂದಾಯದಂತೆ ವಸೂಲ್ಮಾಡಲಾಗುತ್ತೆ. ಮತ್ತು ಇಜಾರೆಯನ್ನು ರದ್ದು ಮಾಡಲಾದೀತು.

1ನೆ ಖಿಸ್ತು	... ..	31ನೆ ಅಕ್ಟೋಬರು 1904.
2ನೆ ಖಿಸ್ತು	... ..	31ನೆ ಜನವರಿ 1905.
3ನೆ ಖಿಸ್ತು	... ..	30ನೆ ಏಪ್ರಿಲ್ 1905.

ಇತರ ಷರತ್ತುಗಳು.

(I) ಇಜಾರೆದಾರನ ನೌಕರನೇ ಆಗಲಿ ಅಥವಾ ಪಿಕ್ಕಿ ಕಂಟ್ರಾಕ್ಟರೇ ಆಗಲಿ ಎರಡು ವರುಷಗಳೊಳಗಿನ ಎಳೇ ಗಿಡಗಳನ್ನು ಕಡಿಯುದಂತೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕು.

(II) ಪಕ್ಕ ಜವಾವಣಿ ನಡೆಯುವ ಆಯಾಯ ಪ್ರದೇಶದಲ್ಲಿ ಕಂಟ್ರಾಕ್ಟರು ಇಟ್ಟುಕೊಳ್ಳುವ ಮೇಸ್ತ್ರಿಗಳ ಮತ್ತು ಪಿಕ್ಕಿ ಕಂಟ್ರಾಕ್ಟರುಗಳ ಹೆಸರು ನಮೂದಿನಿಂದ ಒಂದು ತಖ್ತೆಯನ್ನು ಕೊಡಬೇಕು.

(III) ಇಜಾರೆ ಕೆಲಸವನ್ನು ಕಂಟ್ರಾಕ್ಟರೇ ಮಾಡಬೇಕು. ಮತ್ತು ಡೆಪ್ಯೂಟಿ ಕವಿಾಷನರ ಸಾಹೇಬರವರ ಅಪ್ಪಣೆ ಇಲ್ಲದೆ ಇತರರಿಗೆ ಇಜಾರೆದನ್ನು ವರ್ಗವಾಡಿ ಕೊಡಕೂಡದು.

(IV) ತೊಗಟೆ ತೆಗದನಂತರ ಉಳಿಯುವ ಆ ಸಂಬಂಧವಾದ ವಿಸಿಷ್ಟ ಸಾಮಿಯೂ ಇಜಾರೆದಾರನಿಗೆ ಸೇರಿದ್ದಾಗಿರುತ್ತೆ.

(V) ಇಜಾರೆ ಮೇರಿಗೆ ರಸ್ತು ಮಾಡಲ್ಪಡುವ ಪಕ್ಕ್ಯ ಪ್ರಮಾಣ ವಗೈರೆ ತಪಶೀಲು ಕಾಣುವ ಲಿಖಿತಗಳನ್ನು ಇಜಾರೆದಾರನು ಇಡತಕ್ಕದ್ದು. ಅಂಥಾ ಲೆಖ್ಕವನ್ನು ಡೆಪ್ಯೂಟಿ ಕವಿಾಷನರ ಸಾಹೇಬರವರಾಗಲಿ ಅಥವಾ ಡಿಸ್ಟ್ರಿಕ್ಟ ಫಾರೆಸ್ಟ್ಟ ಆಫಿಸರವರಾಗಲಿ ಅವರಿಂದ ನೇಮಕವಾದ ಇತರ ಆಫಿಸರೇ ಆಗಲಿ ತನಿಖೆ ಮಾಡಿದಾಗ ಅವುಗಳನ್ನು ಹಾಜರ್ಮಾಡತಕ್ಕದ್ದು.

(VI) ಸಾಗಿಸಿಕೊಂಡು ಹೋಗುವ ಪ್ರತಿಯೊಂದು ಗಾಡಿ ಬೋಜಾ ಪಕ್ಕ್ಯಗೂ ಡಿಸ್ಟ್ರಿಕ್ಟ ಫಾರೆಸ್ಟ್ಟ ಆಫಿಸರವಲಿಂದ ನಿಯಾಮಕ ಮಾಡಲ್ಪಡುವ ರೀತಿಯಲ್ಲಿ ಇಜಾರೆದಾರನು ಪಾಸ್ಸು ಕೊಡತಕ್ಕದ್ದು.

(VII) ಕಂಟ್ರಾಕ್ಟರಿಂದಲೇ ಆಗಲಿ ಅಥವಾ ಆತನ ಜನಗಳಿಂದಲೇ ಆಗಲಿ ಸ್ಟೇಟ್ಟ ಫಾರೆಸ್ಟ್ಟ ಮತ್ತು ಪ್ರೊಟೆಕ್ಷರ್ಡ ಗಳಲ್ಲಿ ಬೆಂಕಿ ಬಾಧೆಯುಂಟಾದರೆ ಅದಕ್ಕೆ ಕಂಟ್ರಾಕ್ಟರು ಜವಾಬ್ದಾರನಾಗಿರಬೇಕಲ್ಲದೆ; ಬೆಂಕೀ ಬೀಳುವದರಿಂದ ಬೆಲೇ ಬಾಳುವ ಫಾರೆಸ್ಟ್ಟಗೇ ಆಗಲಿ ಅಥವಾ ಬೆಳೆಗಳಿಗೇ ಆಗಲಿ ಉಂಟಾಗುವ ನಷ್ಟವನ್ನು ಕಟ್ಟಿಕೊಡಬೇಕು.

(VIII) 1905ನೆ ಇಲ್ವೆ ಮಾಹೆ 15ನೆ ತಾರೀಖಿನೊಳಗಾಗಿ ಇಜಾರೆ ವಾಯಿದೆಯಲ್ಲಿ ಕಡದು ಜವಾವಣೇ ಮಾಡಿ ದಾಸ್ತಾವು ಮಾಡಿರುವ ಎಲ್ಲಾ ಪಕ್ಕ್ಯವನ್ನು ಚಿತ್ರದುರ್ಗ ಡಿಸ್ಟ್ರಿಕ್ಟ್ಟ ಸರಹದ್ದಿನ ಹೊರಗೆ ರಸ್ತು ಮಾಡಿಕೊಳ್ಳತಕ್ಕದ್ದು.

(IX) ಮೇಲೆ ನಮೂದಾಗುವ ಷರತ್ತುಗಳ ಪೈಕಿ ಯಾವದಾದರೂ ಒಂದು ಷರತ್ತಿಗೆ ಇಜಾರದಾರನು ತಪ್ಪಿದಲ್ಲಿ ಇಜಾರೆ ಹಕ್ಕು ರದ್ದು ಮಾಡಲ್ಪಡಬಹುದಲ್ಲದೆ ಅದುವರಿಗೂ ಜವಾಯಿಸಿರುವ ವಿಶಿಷ್ಟ ಪಕ್ಕ್ಯವನ್ನೂ ಸರ್ಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡಬಹುದು. ಅಲ್ಲದೆ ಡೆಪ್ಯೂಟಿ ಕವಿಾಷನರ ಸಾಹೇಬರು (1,000) ರೂಪಾಯಿವರಿಗೂ ಜುರ್ಮಾನೆದನ್ನು ಸಹಾ ವಿಧಿಸಬಹುದು.

ಕೆ. ಶಾಮಯ್ಯಂಗಾರ್,
ಡಿಸ್ಟ್ರಿಕ್ಟ ಫಾರೆಸ್ಟ್ಟ ಆಫಿಸರ್, ಚಿತ್ರದುರ್ಗ.

ಬೆಂಗಳೂರ ಡಿಸ್ಟ್ರಿಕ್ಟ್ಟ.

ಪ್ರಸಿದ್ಧಪತ್ರಿಕೆ.

ಹೊಸಕೋಟೆ ತಾಲ್ಲೂಕು ವಾಗಟ ಹೋಬಳಿ ಜೋಡಿ ಪರಮನಹಳ್ಳಿ ಗ್ರಾಮವು ಕಂದಾಯದ ಬಾಕಿಗೋಸ್ಕರ ಹೊಸಕೋಟೆ ತಾಲ್ಲೂಕು ಕಛೇರಿಯಲ್ಲಿ 1904ನೆ ಆಗಸ್ಟು 29ನೆ ಪೂರ್ವಾನ್ಹ 11 ಘಂಟೆಗೆ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತ

ಹರಾಜು ಸ್ವತ್ತಿನ ತಪಶೀಲ್ ಮತ್ತು ಹರಾಜ್ ಷರತ್ತುಗಳು 1904ನೆ ಆಗಸ್ಟು ಮಾಹೆಯ 4ನೆ ಮುಕ್ತಂ ಮೈಸೂರು ಗೆಜೆಟ್ಟಿನ ಎರಡನೆ ಭಾಗದ 461ನೆ ಪುಟದಲ್ಲಿ ಪ್ರಯಿಷಾಗಿರುತ್ತೆ.

ಬಿ. ಜೆ. ಕುಮಾರಸಾಮಿ ನಾಯಿಕ್,
ಫಾರ್ ಡೆಪ್ಯೂಟಿ ಕವಿಾಷನರ್.

ಕೋಲಾರ ಡಿಸ್ಟ್ರಿಕ್ಟ್ಟ.

ಇಸ್ತಿಹಾರ್ನಾಮೆ.

ತಾರೀಖು 15ನೆ ಜುಲೈ 1904ನೆ ಇಸವಿ.

ಕೋಲಾರ ತಾಲ್ಲೂಕಿಗೆ ಸೇರಿದ ಮಾರ್ಜಿನ್ನಲ್ಲಿ, ನಮೂದಾಗಿ ಇರುವ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕೀ ಪೊಬಲಗಿಗೋಸ್ಕರ ತಾಲ್ಲೂಕು ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಸೆಪ್ಟಂಬರು ಮಾಹೆ 5ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟಿ ಇದೆ.

1. ಖಾಯಂ ಗುತ್ತಾ ಕ್ಯಾಲನೂರು —ವೇಮಗಲ್ ಹೋಬಳಿ.
2. ಖಾಯಂ ಗುತ್ತಾ ಮಲ್ಲಸಂದ್ರ —ಹೋಳೂರು ಹೋಬಳಿ.
3. ಜೋಡಿ ರಾಮಸಂದ್ರ—ಕಸಬಾ ಹೋಬಳಿ.
4. ಜೋಡಿ ಕೊಂಡರಾಜನ ಹಳ್ಳಿ—ಕಸಬಾ ಹೋಬಳಿ.

(ಹೆಚ್ಚಿನ ತಪಶೀಲ್ ಬಗ್ಯೆ 28-7-1904ನೆ ಮುಕ್ತಂ 30ನೆ ನಂ. ಮೈಸೂರ ಗೆಜೆಟಿನ 2ನೆ ಭಾಗದ 447-450ನೆ ನಂ. ಪೇಜು ನೋಡತಕ್ಕದ್ದು.

288

1273

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಶ್ತಿಹಾರ್ ಪ್ರಸಿದ್ಧ ಪತ್ರಿಕೆ.

ತಾರೀಖು 30ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಜೋಡಿ ಕೃಷ್ಣಾಪುರ ಗ್ರಾಮ ಕಾಳಭಟ್ಟರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಛೇರಿಯಲ್ಲಿ 1904ನೆ ಸೆಪ್ಟಂಬರ್ ಮಾಹೆ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕಕಾಲದಂ ಚಡಂ ಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1902-03—1903-04ನೆ ಸಾಲ್ ವರಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 63—9—8 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳೆದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜ್‌ದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಹ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲಿ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲಿ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮ್ಮಿಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮ್ಮಿಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯಿತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ಮಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು:—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಕಟ್ಟಡಗಳು. ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಜಮೀನು. ಖುಷ್ಕೀ, ತರೀ ಅಥವಾ ಬಾಗಾಯಿತು.	ಜಮೀನು. ವಿಸ್ತೀರ್ಣ.	ಜಮೀನು. ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.
					ರೂ. ಆ. ಪೈ.			ಎ. ಗು.	ರೂ. ಆ. ಪೈ.	ರೂ. ಆ. ಪೈ.	
ಮಾಲೂರು	ನರಸಾಪುರ	ಜೋಡಿ ಕೃಷ್ಣಾಪುರ	ಕಾಳಭಟ್ಟ	...			ಪರಂಪೋಕು	40 21	212 0 0	62 9 8	ಶುಭಕೃತು, ಶೋಭಕೃತು
							ಖುಷ್ಕಿ	76 35			
							ತರಿ	19 24	ಜೋಡಿ	1 0 0	ಪ್ರೊಸೆಸ್ ಫೀ
							ಬಾಗಾಯಿತು	16 30			
							ಜುಮ್ಲಾ	153 30	54 0 0	63 9 8	ಜುಮ್ಲಾ

ಚಕ್ಕುಬಂದಿ.

ಪೂರ್ವಕ್ಕೆ — ನರಸಾಪುರ ಸರಹದ್ದು
ಪಶ್ಚಿಮಕ್ಕೆ — ವುದ್ದಪ್ಪನ ಹಳ್ಳಿ ಸರಹದ್ದು
ಉತ್ತರಕ್ಕೆ — ಬೆಳೂರು ಸರಹದ್ದು
ದಕ್ಷಿಣಕ್ಕೆ — ಯಂಡ್ರಿಕಾಯಿಪುರ ಸರಹದ್ದು
(ಕಾಳಭಟ್ಟರ ಬಾಬತು ಕಾಲುಹಿಸ್ಸೆ ಗ್ರಾಮ ಮಾತ್ರ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಗೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾ[illegible]ಖು 30ನೆ ಜುಲೈ 1904.

1. ಕಂದಾಯದ ಬಾಕಿದಾರರಾದ ಜಹಗೀರ್ [illegible]ವನಹಳ್ಳಿ ಗ್ರಾಮದ ದೇವೀಶಿಂಗ್ ವಗೈರೇರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡಿ ನಮೂದಿಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಸೆಪ್ಟಂಬರ್ ಮಾಹೆ 15ನೆ ತಾರೀಖಿನ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—1904ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 44—4—0 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜು ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತಿ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕಿ ಮೊಬಲಗು ಪಾವತಿ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕೆ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕೆಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕೀಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟಕೂಡ್ಲೆ, ಹರಾಜುದಾರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಬಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನಮೆಂಟಿನವರು ಜವಾಬ್ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮೀಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನ ಮೇಲೆ ಕರ್ನೂನಿಂದ ವಿಧಿಸಲ್ಪಟ್ಟವಾಯಿದೆಯಲ್ಲಿ ಗವರ್ನಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ಸ್ವತ್ತಿನ ತಪ್ಸೀಲ್.

ಕಟ್ಟಡಗಳು.				ಜಮೀನು.												ಸರ್ಕಾರಕ್ಕೆ ಬರಬೇಕಾದ ನೋಟಿಸಿ ಫೀ ವಗೈರೆ ಸಹಿತವಾದ ಬಾಕಿ ಮೊಬಲಗು.
ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ನಂಬರ್ ಅಥವಾ ಜಮೀನಿನ ಹೆಸರು	ಖುಷ್ಕಿ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.			ಆಕಾರ.									
	ರೂ. ಆ. ಪೈ.			ಖಂ.	ಕೂ.	ಪ.	ರೂ.	ಆ.	ಪೈ.	ರೂ.	ಆ.	ಪೈ.				
			ಖುಷ್ಕಿ	32	5	13¼				43	4	0	ಶೋಭಕೃತು			
			ತರಿ ..	14	0	½				1	0	0	ಪ್ರೊಸೆಸ್ ಫೀ			
			ಪರಂಪೋಕು.				500	0	0							
...	...	...	ಖುಷ್ಕಿ ...	83	4	6	ಜೋಡಿ			44	4	0				
			ತರಿ ...	0	3	5¾	62	0	0							
				129	13	9½										

ಚಕ್ಕು ಬಂದಿ.

ಪೂರ್ವಕ್ಕೆ—ಶಿವಾರಪಟ್ಟ.
ಪಶ್ಚಿಮಕ್ಕೆ—ಪುರ-ಯರ್ರಪ್ಪನಹಳ್ಳಿ.
ಉತ್ತರಕ್ಕೆ—ಜಕ್ಕಸಂದ್ರ-ಮಿಂಡಹಳ್ಳಿ.
ದಕ್ಷಿಣಕ್ಕೆ—ಕಣವೇಹಳ್ಳಿ.
(ಪೂರಾಗ್ರಾಮ)

* ಯಾ ಬಾಕಿ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ಸ್ಥಿರಸ್ವತ್ತಿನ ಹರಾಜ್ ಬಗ್ಯೆ ಕೊಡಲ್ಪಟ್ಟ ಇಸ್ತಿಹಾರ್ ವ ಪ್ರಸಿದ್ಧಪತ್ರಿಕೆ.

ತಾರೀಖು 30ನೆ ಜುಲೈ 1904.

1. ಕಂದಾಯದ ಬಾಕೀದಾರರಾದ ಜೋಡಿ ಯಂಡ್ರಿಕಾಯಿಪುರ ಗ್ರಾಮದ ಕಾಳಭಟ್ಟರಿಂದ ಬರಬೇಕಾದ ಜಮೀನ್ ಕಂದಾಯದ ಬಾಕೀಗಾಗಿ ಇದರಡೀ ನಮೂದಾಗುವ ಸ್ಥಿರಸ್ವತ್ತು ಕೋಲಾರ ಡಿಸ್ಟ್ರಿಕ್ಟು ಮಾಲೂರು ತಾಲ್ಲೂಕು ಕಛೇರಿಯಲ್ಲಿ 1904ನೆ ಇಸವಿ ಸೆಪ್ಟಂಬರ್ ಮಾಹೆ 15ನೆ ತಾರೀಖಿನಲ್ಲಿ ಬಹಿರಂಗವಾದ ಹರಾಜು ಮಾಡಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

ಹರಾಜು ದಿವಿ 12 ಘಂಟೆಗೆ ಉಪಕ್ರಮಿಸಲ್ಪಡುತ್ತೆ. ಸ್ವತ್ತು ಏಕದಂ ಚಡದರಖಾಸ್ತುದಾರನ ಹೆಸರಿಗೆ ನಿಲ್ಲಿಸಲ್ಪಡುತ್ತೆ.

2. ಸದರೀ ಸ್ವತ್ತಿಗಾಗಿ ಹರಾಜುದಾರನು 1903—04ನೆ ಸಾಲಿಗೆ ಪೂರ್ತಿಯಾಗಿ * ಪಾವತಿ ಮಾಡಬೇಕಾದ ಕಂದಾಯದ ಮೊಬಲಗು ಇದರಡಿ ಕಾಣಿಸಿರುವ ತಖ್ತೆಯಲ್ಲಿ ನಮೂದಿಸಿರುವ ತಪ್ಸೀಲ್ ಮೇರಿಗೆ ರೂಪಾಯಿ 12—12—6 ಆಗಿರುತ್ತೆ.

3. ಹರಾಜು ಕಾಲದಲ್ಲಿ ಹರಾಜ್‌ದಾರನು ಹರಾಜ್ ಮೊಬಲಗಿನ ಶೇಕಡಾ 25 ರೂಪಾಯಿಗಳನ್ನ ಡಿಪಾಜಿಟ್ಟು ಹಾಜರ್ಮಾಡಬೇಕಾಗಿರುತ್ತೆ. ಅದು ಜಾತಾ ಹರಾಜು ಬಾಬತು ಬಾಕೀ ಮೊಬಲಗು ಹರಾಜ್ ತಾರೀಖು ಲಾಗಾಯಿತು 15 ದಿವಸಗಳಲ್ಲಿ ಪಾವತೀ ಮಾಡಲ್ಪಡದೇ ಹೋದಲ್ಲಿ ಮೇಲೆ ಹೇಳಿದ ಡಿಪಾಜಿಟ್ಟು ಮೊಬಲಗನ್ನ ಹಾಜರ್ಮಾಡಿದವನು ಕಳದುಕೊಳ್ಳಲು ಗುರಿಯಾಗುತ್ತಾನೆ.

4. ಅಂಥಾ ಡಿಪಾಜಿಟ್ಟು ಮೊಬಲಗು ಹಾಜರ್ಮಾಡಲ್ಪಡದೆ ಯಾ ಹರಾಜು ಬಾಬತು ಬಾಕೀ ಮೊಬಲಗು ಪಾವತೀ ಮಾಡಲ್ಪಡದೇ ಹೋದಾಗ್ಯೆ ಸದರೀ ಸ್ವತ್ತು ಮೊದಲು ಹರಾಜುದಾರನ ಖರ್ಚಿನಿಂದಲೂ ಮತ್ತು ಅವನಿಗೆ ಅದರಿಂದ ಉಂಟಾಗಬಹುದಾದ ನಷ್ಟಕ್ಕೆ ಗುರಿಪಡಿಸಿಯೂ ಪುನಃ ಹರಾಜು ಮಾಡಲ್ಪಡುತ್ತೆ.

5. ಹರಾಜಿನಲ್ಲಿ ಸವಾಲ್ ಮಾಡತಕ್ಕ ಜನಗಳು ಖುದ್ದು ತಮ್ಮ ಸ್ವಂತಕ್ಕೋಸ್ಕರ ಸವಾಲ್ ಮಾಡುತ್ತಾರೆಯೇ ಯಾ ಏಜಂಟು ಯಾ ಮುತಾಲೀಕರಾಗಿ ಸವಾಲ್ ಮಾಡುತ್ತಾರೆಯೇ ಎಂಬ ಅಂಶವನ್ನ ತಿಳಿಸಬೇಕಂತಲೂ, ಇತರರಿಗೋಸ್ಕರ ಮುತಾಲೀಕರಾಗಿ ಸವಾಲ್ ಮಾಡುವ ಸಂದರ್ಭದಲ್ಲಿ ಅಂಥಾ ತಮ್ಮ ಯಜಮಾನರಿಂದ ಸಹಿ ಮಾಡಲ್ಪಟ್ಟ ಲಿಖಿತವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡುವಂತೆಯೂ ಕೇಳಲ್ಪಡಬಹುದು. ಅದನ್ನ ಅವರು ಹಾಜರ್ಮಾಡದೆ ಹೋದಲ್ಲಿ ಅವರ ಸವಾಲುಗಳು ತಿರಸ್ಕರಿಸಲ್ಪಡಬಹುದು.

6. ಹರಾಜಿನಲ್ಲಿ ಸ್ವತ್ತು ಯಾರ ಹೆಸರಿಗಾದರೂ ನಿಲ್ಲಿಸಲ್ಪಡುವದಕ್ಕೆ ಮುಂಚಿತವಾಗಿ, ಬಾಕೀದಾರನಾಗಲೀ ಆತನ ತರಫಿನವನಾಗಿ ಪ್ರವರ್ತಿಸುವ ಯಾ ಸದರೀ ಸ್ವತ್ತಿನಲ್ಲಿ ಬಾಧ್ಯತೆ ಇರುತ್ತೆಂದು ಹೇಳುವ ಯಾವ ಇತರ ಮನುಷ್ಯನೇ ಆಗಲೀ ಬಾಕಿಯಲ್ಲಿ ಬಂದಿರುವ ಪೂರಾ ಕಂದಾಯದ ಹಣವನ್ನೂ, ಬಡ್ಡಿ ಮತ್ತು ಇತರ ಖರ್ಚುಗಳ ಸಮೇತ ಹಾಜರ್ಮಾಡುವ ಪಕ್ಷಕ್ಕೆ ಹರಾಜು ನಿಲ್ಲಿಸಲ್ಪಡುತ್ತೆ.

7. ಹರಾಜು ಡೆಪ್ಯುಟಿ ಕಮೀಷನರವರಿಂದ ಮಂಜೂರ್ಮಾಡಲ್ಪಡುವ ತನಕ ಸ್ವತ್ತಿನ ಹರಾಜು ಪೂರ್ತಿಯಾಗುವದಿಲ್ಲ.

8. ಹರಾಜಿನಲ್ಲಿ ತೆಗದುಕೊಂಡವರು ಹರಾಜ್ ಮೊಬಲಗನ್ನ ಪೂರ್ತಿಯಾಗಿ ಪಾವತಿ ಮಾಡಿದ ಮೇಲೆ ಡೆಪ್ಯುಟಿ ಕಮೀಷನರವರಿಂದ ಹರಾಜು ಮಂಜೂರ್ಮಾಡಲ್ಪಟ್ಟ ಕೂಡ್ಲೆ, ಹರಾಜುದಾರ್ರು ಸದರೀ ಸ್ವತ್ತಿನ ಸ್ವಾಧೀನವನ್ನ ಹೊಂದುವರು. ಮತ್ತು ಸದರೀ ಸ್ವತ್ತು ಹರಾಜುದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು ಡೆಪ್ಯುಟಿ ಕಮೀಷನರವರಿಂದ ಸೈನ್ ಮೊಹರ್ ಮಾಡಲ್ಪಟ್ಟ ಒಂದು ಹರಾಜ್ ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ಸ್ವತ್ತಿನ ವಿವರಣೆಯಲ್ಲಿಯೂ ಯಾ ವಿಸ್ತೀರ್ಣದಲ್ಲಿಯೂ ಇರುವ ಸ್ಕಾಲಿತ್ಯಗಳಿಗೆ ಗವರ್ನ್‌ಮೆಂಟಿನವರು ಜವಾಬ್‌ದಾರ್ರಲ್ಲವೆಂಬ ಅಂಶವನ್ನ ಸ್ಪಷ್ಟವಾಗಿ ತಿಳಿದಿರತಕ್ಕದ್ದು.

9. ಹರಾಜಿನಿಂದ ತಮಿಗೆ ನಷ್ಟ ಉಂಟಾಯಿತೆಂದು ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿವಸಗಳಲ್ಲಿ ಡೆಪ್ಯುಟಿ ಕಮ್ಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಮತ್ತು ಅವರ ಹುಕುಮಿನಮೇಲೆ ಕಾನೂನಿನಿಂದ ವಿಧಿಸಲ್ಪಟ್ಟ ವಾಯಿದೆಯಲ್ಲಿ ಗವರ್ನ್‌ಮೆಂಟಿನವರಿಗೆ ಅಪ್ಪೀಲ್ ಮಾಡಿಕೊಳ್ಳುವದಕ್ಕೂ ಸ್ವತಂತ್ರರಾಗಿರುತ್ತಾರೆ. ಸ್ವತ್ತಿನ ವಿಕ್ರಯವು ಅಂಥಾ ಅಪ್ಪೀಲಿನಲ್ಲಿ ಆಗುವ ಫೈಸಲ್ ಹುಕುಮಿಗೆ ಬದ್ಧವಾಗಿರತಕ್ಕದ್ದು :—

ತಾಲ್ಲೂಕು.	ಹೋಬಳಿ.	ಗ್ರಾಮ.	ಬಾಕೀದಾರರ ಹೆಸರು.	ಸ್ವತ್ತಿನ ತಪ್ಸೀಲ್. ಕಟ್ಟಡಗಳು. ಕಟ್ಟಡದ ಹೆಸರು.	ಅಂದಾಜಾ ಕಿಮ್ಮತು.	ಜಮೀನು. ನಂಬರ್ ಅಥವಾ ಜಮೀನಿನ ಹೆಸರು.	ಖುಷ್ಕೀ, ತರೀ ಅಥವಾ ಬಾಗಾಯತು.	ವಿಸ್ತೀರ್ಣ.	ಆಕಾರ.	ಸರ್ಕಾರಕ್ಕೆ ಬರಬೇಕಾದ ನೋಟಿಸ್ ಫೀ ವಗೈರೆ ಸಹಿತವಾದ ಬಾಕೀ ಮೊಬಲಗು.			
					ರೂ. ಆ. ಪೈ.			ಖ. ಕೊ. ಪ.	ರೂ. ಆ. ಪೈ.	ರೂ.	ಆ.	ಪೈ.	
ಮಾಲೂರು.	ನರಸಾಪುರ.	ಜೋಡಿ ಯಂಡ್ರಿಕಾಯಿಪುರ.	ಕಾಳಭಟ್ಟ.				ಖುಷ್ಕಿ ...	1 17 12	25 0 0	11	12	6	ಪ್ರವ, ಶುಭಕೃತು, ಶೋಭಕೃತು.
							ಪರಂಪೋಕು	4 4 1					
									ಜೋಡಿ				
					....	..		6 1 13	16 0 0	1	0	0	ಪ್ರೊಸೆಸ್ ಫೀ.
										12	12	6	

ಚಕ್ಕು ಬಂದಿ.

ಪೂರ್ವಕ್ಕೆ — ಅಚ್ಚಟ್ಟನಹಳ್ಳಿ ಸರಹದ್ದು.
ಪಶ್ಚಿಮಕ್ಕೆ — ಕರಡಿಬಂಡೆ ಹೊಸಹಳ್ಳಿ ಸರಹದ್ದು.
ಉತ್ತರಕ್ಕೆ — ಕ್ರಿಷ್ಣಾಪುರದ ಸರಹದ್ದು.
ದಕ್ಷಿಣಕ್ಕೆ — ಕರಡಿಬಂಡೆ ಹೊಸಹಳ್ಳಿ.
(ಕಾಳಭಟ್ಟರ ಬಾಬತು ಕಾಲುಹಿಸ್ಸೆ ಗ್ರಾಮ ಮಾತ್ರ)

* ಯಾ ಬಾಕೀ ಇರುವ ಮಟ್ಟಿಗೆ ಸಂದರ್ಭಾನುಸಾರ ನಮೂದಿಸತಕ್ಕದ್ದು.

ತಾರೀಖು 18ನೆ ಮಾಹೆ ಜುಲೈ 1904.

ಅಮಾನಿ ಭೈರಸಾಗರಕೆರೆ ಶಾನುಭಾಗ ಕೃಷ್ಣಪ್ಪನೆಂಬುವನು ಕೋಲಾರ ಡಿಸ್ಟ್ರಿಕ್ಟು ಗುಡಿಬಂಡೆ ಸಬ್ ತಾಲ್ಲೂಕು ಗುಡಿಬಂಡೆ ಹೋಬಳಿ ಕೀಚರಾಕ್ ಬೋಡೇನಹಳ್ಳಿ ಗ್ರಾಮದ ಈ ಕೆಳಗೆ ವಿವರಿಸಿರುವಂತೆ 63 ಎಕರೆ, 34 ಗುಂಟೆ ಜಮೀನಿಗೆ ಆಕಾರ 61—0—0 ರೂಪಾಯಿವುಳ್ಳ ಜಮೀನನ್ನ ಸ್ವಂತ ಲಾಗವಡಿನಿಂದ ಆಬಾದಿಗೆ ತಂದುಕೊಂಡು ಹತ್ತು ವರುಷಗಳಲ್ಲಿ ಪೂರಾ ಕಂಡಾಯ ಕೊಡುವ ಷರತ್ತಿನ ಮೇಲೆ ಕ್ರಯಕ್ಕೆ ಕೊಡಿಸಬೇಕೆಂದು ದರಖಾಸ್ತು ಮಾಡಿರುತ್ತಾನೆ. ಇದಕ್ಕಿಂತ ಕಮ್ಮಿ ಸಾಲುಗಳ ಶ್ರಯಕ್ಕೂ ಮತ್ತು ಸರಕಾರಕ್ಕೆ ಫಾಯಿದೆಕರವಾಗಿಯೂ ಮಾಡುವರ್ಯಾರಾದರೂ ಇದ್ದರೆ ಈ ನೋಟೀಸು ಪ್ರಸಿದ್ಧವಾದ ತಾರೀಖು ಲಾಗಾಯತು ಮೂರು ತಿಂಗಳೊಳಗಾಗಿ ಈ ಆಫೀಸಿಗೆ ದರಖಾಸ್ತುಗಳನ್ನ ಕೊಡಬಹುದು. ತಪ್ಪಿದರೆ ರೂಲ್ಸು ಅನುಸರಿಸಿ ವ್ಯವಸ್ಥೆ ಮಾಡಲ್ಪಡುತ್ತೆ.

ಸರ್ವೆ ನಂಬರು.	ಖುಷ್ಕಿ. ಜಮೀನು.	ಖುಷ್ಕಿ. ಆಕಾರ.	ತರಿ. ಜಮೀನು.	ತರಿ. ಆಕಾರ.	ಬಾಗಾಯತು. ಜಮೀನು.	ಬಾಗಾಯತು. ಆಕಾರ.	ಜುಮ್ಲಾ. ಜಮೀನು.	ಜುಮ್ಲಾ. ಆಕಾರ.	ಗಿಡಗಳು ವಗೈರ. ಹುಂಗಿ.	ಹುಣಸೆ.	ಈಚಲುಗಿಡ ಬಂದು ಗಜದಮೇಲೆ ಇರುವದು.	ಈಚಲು ಸೊಸಿಗಳು ಬಂದು ಗಜದವಳಿಗೆ ಇರುವದು.	ಪಂಚಾಯಿತರ ಅಂದಾಜು ಮೊಬಲಗು.
	ಎ. ಗು.	ರೂ ಆ. ಪೈ.	ಎ. ಗು.	ರೂ ಆ. ಪೈ.	ಎ. ಗು.	ರೂ	ಎ. ಗು.	ರೂ ಆ. ಪೈ.					ರೂ ಆ. ಪೈ.
1	22 0	19 4 0	...	...	...	...	22 0	19 0 0	32	...	4	62	4 0 0
*2	26 0	21 2 0	...	...	...	...	26 0	21 0 0	30	1	1	1	2 8 0
3	13 0	11 6 0	2 34	9 12 9	...	...	15 34	21 0 0	160	..	8	11	9 4 0
..	61 0	51 12 0	2 34	9 12 9	...	...	63 34	61 0 0	222	1	13	74	15 12 0

* ಷರಾ.—ಅಂದಾಜು ನಾ ಲಾಯಖಾದ 100 ಕಲ್ಲುಗಳಿವೆ.

		ಎ.	ಗು.	
ನೋಟೀ.—ಬಟ್ಟು ಜಮೀನು	...	78	35	
ಪೈಕಿ ವಜಾ ಖರಾಬು	.	15	1	
ಜಾತಾ ಬಾಕಿ	...	63	34	ಮೇಲ್ಕಂಡ ತಪಶೀಲ್ ಮೇರಿಗೆ.

ತಾರೀಖು 27ನೆ ಜುಲೈ 1904ನೆ ಇಸವಿ.

ಮಾಜ್ಞೆನನ್ನಲ್ಲಿ ನಮೂದು ಮಾಡಿ ಇರತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕೀ ಮೊಬಲಗಿಗೋಸ್ಕರವಾಗಿ, ಆ ಯಾಯ ತಾಲ್ಲೂಕು ಅಮಲ್ ದಾರ್ರ ಕಛೇರಿಯಲ್ಲಿ 1904ನೆ ಇಸವಿ ಸೆಪ್ಟಂಬರ್ ಮಾಹೆ 15ನೆ ತಾರೀಖಿನ ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇಧೆ.

1. ಬಾಯಂಗುತ್ತಾ ಪೀಲವರ ಗ್ರಾಮ—ಕ್ಯಾಸಂಬಳ್ಳಿ ಹೋಬಳಿ—ಬವರಿಂಗ್‌ಪೇಟೆ ತಾಲ್ಲೂಕು.
2. ಜೋಡಿ ಬಡಮಾಕಲಹಳ್ಳಿ—ಕತಮಂಗಲ ಹೋಬಳಿ ಡಿಟೋ
3. ಜೋಡಿ ಜಯಸಂದ್ರ—ಹೋಳೂರು ಹೋಬಳಿ—ಕೋಲಾರ ತಾಲ್ಲೂಕು.
4. ಜೋಡಿ ಹೋಳೂರು ಡಿಟೋ ಡಿಟೋ

(ಹೆಚ್ಚು ತಪಶೀಲ್ ಬಗ್ಯೆ 1904ನೆ ಮರ್ಕುಂ 31ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 462—465ನೆ ನಂಬರ್ ವೇಜು ನೋಡತಕ್ಕದ್ದು.)

ಕೆ. ಪಿ. ಪುಟ್ಟಂಣ ಚೆಟ್ಟಿ,
ಡೆಪ್ಯುಟಿ ಕಮೀಷನರ್.

ತುಮಕೂರು ಡಿಸ್ಟ್ರಿಕ್ಟು.

ತಾರೀಖು 3ನೆ ಆಗಸ್ಟು 1904.

ತುಮಕೂರು ತಾಲ್ಲೂಕು ಮಾವತ್ತೂರು ಕೆರೆ ಕೆಳಗೆ ಹಿಡುವಳಿಯಲ್ಲಿ ಅಥವಾ ಫಡದಲ್ಲಿ ಇರುವ ಖುಷ್ಕಿ ಜಮೀನುಗಳನ್ನ ಆ ಕೆರೆಯ ನೀರಿನಿಂದ ತರಿ ಸಾಗುವಳಿ ಮಾಡಲು ಅಪೇಕ್ಷಿಸುವ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

ಎಕರೆ 1ಕ್ಕೆ 20 ರೂಪಾಯಿಗಳ ಕಂಟ್ರಿಬ್ಯೂಷನ್ ಮೊಬಲಗನ್ನ ನಾಲ್ಕು ಖಿಸ್ತುಗಳಲ್ಲಿ ವಸೂಲು ಮಾಡುವ ರಿಯಾಯತಿಯು, ಸಾಲಿ ಮಾಜಿಯೂರು ಡಿಸೆಂಬರು 31ನೆ ತಾರೀಖಿನೊಳಗಾಗಿ ದರಖಾಸ್ತು ಮಾಡುವಂಥಾವರ ವಿಷಯದಲ್ಲಿ ಮಾತ್ರ ಅನ್ವಯಿಸುವದು.

ಕೆ. ದೊರಸಾಮಿ ಅಯ್ಯರ್,
ಡೆಪ್ಯುಟಿ ಕಮೀಷನರ್.

277

ಬೆಂಗಳೂರು ಡಿವೀಜ್ಯ ಡಿಸ್ಟ್ರಿಕ್ಟು ಜಡ್ಜ್ರವರ ಕೋರ್ಟ್ನಲ್ಲಿ.

ಸ್ಯ 1904–1905ನೆ ಇಸವಿ ಅರ್ಜೀ ನಂಬರ್ 20.

ವ್ಯತಪಟ್ಟ ಲಕ್ಷ್ಮೀನಾರಾಯಣ ಪಂಡಿತರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ರಾಮಂಜಿನ ಪಾಟೆಯಲ್ಲಿರುವ ಲಕ್ಷ್ಮಣರಾಯರು, ವ್ಯತಪಟ್ಟ ಸದರೀ ಲಕ್ಷ್ಮೀನಾರಾಯಣ ಪಂಡಿತರಿಗೆ ವತ್ತು ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಬೆಂಗಳೂರಿನಲ್ಲಿ ವಾಸಸ್ಥರಾಗಿ ವ್ಯತಪಟ್ಟ ಲಕ್ಷ್ಮೀನಾರಾಯಣ ಪಂಡಿತರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಲಕ್ಷ್ಮಣರಾಯರ ಅರ್ಜಿಯನ್ನು ಸ್ಯ 1904ನೆ ಇಸವಿ ಸಪ್ಟಂಬರು ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ಲಕ್ಷ್ಮೀನಾರಾಯಣ ಪಂಡಿತರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟ್ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ಯ 1904—1905ನೆ ಇಸವಿ ಅರ್ಜೀ ನಂಬರ್ 21.

ವ್ಯತಪಟ್ಟ ಸಂಕಪ್ಪನಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಧರ್ಮವಾರದಲ್ಲಿರುವ 1ನೆ ನಾಮಜಿ, 2ನೆ ಲಕ್ಷ್ಮಪ್ಪ ಮೈನರ್, ಗಾರ್ಡಿಯರ್ ವೆಂಕಪ್ಪನೆಂಬುವರು, ವ್ಯತಪಟ್ಟ ಸದರೀ ಸಂಕಪ್ಪನೆಂಬುವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಧರ್ಮವಾರದಲ್ಲಿ ವಾಸಸ್ಥರಾಗಿ ವ್ಯತಪಟ್ಟ ಸಂಕಪ್ಪನೆಂಬುವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ಯ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್ಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ನಾಮಜಿ, 2ನೆ ಲಕ್ಷ್ಮಪ್ಪ ಮೈನರ್, ಗಾರ್ಡಿಯರ್ ವೆಂಕಪ್ಪನವರ ಅರ್ಜಿಯನ್ನು ಸ್ಯ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ಸಂಕಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1904ನೆ ಇಸವಿ ಆಗಸ್ಟು ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ಯ 1904—1905ನೆ ಇಸವಿ ಅರ್ಜೀ ನಂಬರು 29.

ವ್ಯತಪಟ್ಟ ಕೆ. ಗಿರೀಶ್ವರೈಯ್ಯನೆಂಬುವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಬೆಂಗಳೂರು ನಗರ್ತಪೇಟೇಲಿರುವ ವಿಶಾಲಾಕ್ಷಮ್ಮನವರು, ವ್ಯತಪಟ್ಟ ಸದರೀ ಕೆ. ಗಿರೀಶ್ವರೈಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಟಣದಲ್ಲಿ ವಾಸಸ್ಥರಾಗಿ ವ್ಯತಪಟ್ಟ ಕೆ. ಗಿರೀಶ್ವರೈಯ್ಯನವರ ಜಿಂದಿಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷ್ಯ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟ್ಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ವಿಶಾಲಾಕ್ಷಮ್ಮನವರ ಅರ್ಜಿಯನ್ನು 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 6ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ಕೆ. ಗಿರೀಶ್ವರೈಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟ್ನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1904ನೆ ಇಸವಿ ಆಗಸ್ಟು ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರು ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಅಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟ್ನಲ್ಲಿ.

ಸ್ಯ 1904—1905ನೆ ಇಸವಿ ಮಿ॥ ಅರ್ಜೀ ನಂಬರ್ 4.

ಅರ್ಜೀದಾರ್ರು ನಂಜನಗೂಡು ತಾಲ್ಲೂಕು ರಾಮಪುರದ ಹೋಬಳಿ ಯಜಗಳ್ಳಿ ಗ್ರಾಮದಲ್ಲಿರುವ ಹೊನ್ನೈಯ್ಯನ ಮಗ ದೊಡ್ಡಯ್ಯ, ಮೈನರಾದ ಯಜಗಳ್ಳಿ ಸ್ಥಳದ ಹೊನ್ನೈಯ್ಯನ ಹೆಂಡತಿ ದೇವಿಮು ಆಸ್ತೀ ವಿಷಯದಲ್ಲಿ —

ಸದರೀ ಮೈನರಾದ ದೇವಿ ಎಂಬವಳಿಗೆ ಗಾರ್ಡಿಯರ್ ಆಗಬೇಕೆಂಬ ಹಕ್ಕಿನ ಮೇಲೆ ಯಜಗಳ್ಳಿ ಸ್ಥಳದ ದೊಡ್ಡಯ್ಯನು ಸದರೀ ಮೈನರ್ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸ್ಯ 1904ನೆ ಇಸವಿ ಆಗಸ್ಟು ತಾರೀಖು 31ರಲ್ಲು ಮೊಕರರು ಹಾಜರಿ ಇರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸ್ಯ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

293

ಸನ್ 1904—05ನೆ ಇಸವಿ ಮಿ॥ ಅರ್ಜೀ ನಂಬರ್ 8.

ಅರ್ಜೀದಾರ್ರು ಮೈಸೂರು ಇಟ್ಟಿಕೆಗೂಡಿನಲ್ಲಿ ಇರುವ ಮೈನರ್ ಬೋರಲಿಂಗೈಯ್ಯನ ತಾಯಿ 1ನೆ ತಿಮ್ಮಮ್ಮ, ಮೈಸೂರು ಇಟ್ಟಿಕೆ ಗೂಡಿನಲ್ಲಿರುವ 2ನೆ ಜೋಗಿ ಬೋರಂಣ, ಮೈನರಾದ ಮೈಸೂರು ಸ್ಥಳದ ಚಿಕ್ಕ ಬೋರಂಣನ ಮಗ ಬೋರಲಿಂಗೈಯ್ಯನ ಆಸ್ತೀ ವಿಷಯದಲ್ಲಿ—

ಸದರೀ ಮೈನರಾದ ಬೋರಲಿಂಗೈಯ್ಯನಿಗೆ ತಾಯಿ ಆಗಬೇಕೆಂಬ ಹಕ್ಕಿನ ಮೇಲೆ ಮೈಸೂರು ಸ್ಥಳದ ತಿಮ್ಮಮ್ಮ ಜೋಗಿ ಬೋರಂಣ ಇವರು ಸದರೀ ಮೈನರಿನ ಆಸ್ತಿ ಕಾಪಾಡುವದಕ್ಕೆ ಸರ್ಟಿಫಿಕೇಟ್ ಬಗ್ಯೆ ಅರ್ಜೀ ಕೊಟ್ಟು ಇರುತ್ತಾರೆ. ಸದರೀ ಅರ್ಜಿ ಹಿಯರಿಂಗ್ ಬಗ್ಯೆ ಸನ್ 1904ನೆ ಇಸವಿ ಆಗಸ್ಟು ತಾರೀಖು 26ರಲ್ಲು ಮೊಕರರು ಮಾಡಿಯಿರುವದಾಗಿ ಇದರಿಂದ ನೋಟಿಸ್ ಕೊಡಲಾಗಿಧೆ.

ಸನ್ 1904ನೆ ಇಸವಿ ಆಗಸ್ಟು ತಿಂಗಳು 1ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಂ. ರಾಮಸ್ವಾಮಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸಬ್ ಜಡ್ಜರವರ ಕೋರ್ಟಿನಲ್ಲಿ.

ಸನ್ 1904—1905ನೆ ಇಸವಿ ಅರ್ಜೀ ನಂಬರ್ 27.

ಮೃತಪಟ್ಟ ದೇವರಯ್ಯ ಉರುಫ್ ಬೆಟ್ಟಯ್ಯನವರ ಆಸ್ತೀ ವಿಷಯದಲ್ಲಿ —

ಅರ್ಜೀದಾರ್ರು ಶ್ರೀರಂಗಪಟ್ಣ ತಾಲ್ಲೂಕು ಅರಕೆರೆಯಲ್ಲಿರುವ ದೇವರಯ್ಯ ಉರುಫ್ ಬೆಟ್ಟಯ್ಯ ಪವತಿ, ವಾರಸ್‌ದಾರ್ ಮಗ ಸುಬ್ರಾಯ ಉರುಫ್ ಗುಂಡಪ್ಪ, ಮೈ॥ ಗಾ॥ ಚಲುವಯ್ಯ ಉರುಫ್ ಮರಿಯಪ್ಪ, ಮೃತಪಟ್ಟ ಸದರೀ ದೇವರಯ್ಯ ಉರುಫ್ ಬೆಟ್ಟಯ್ಯನವರಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಶ್ರೀರಂಗಪಟ್ಣ ತಾಲ್ಲೂಕು ಅರಕೆರೆಯಲ್ಲಿ ವಾಸಸ್ಥರಾಗಿ ಮೃತಪಟ್ಟ ದೇವರಯ್ಯ ಉರುಫ್ ಬೆಟ್ಟಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ದೇವರಯ್ಯ ಉರುಫ್ ಬೆಟ್ಟಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1904—1905ನೆ ಇಸವಿ ಅರ್ಜೀ ನಂಬರ್ 43.

ಮೃತಪಟ್ಟ ಸುಂದರಮ್ಮನವರ ಆಸ್ತೀ ವಿಷಯದಲ್ಲಿ —

ಅರ್ಜೀದಾರರು ಮೈಸೂರು ರಮಾವಿಳಾಸ ಅಗ್ರಹಾರದಲ್ಲಿರುವ ಅಡ್ವೋಕೇಟ್ ವಿ. ರಾಘವಾಚಾರ್ರು, ಮೃತಪಟ್ಟ ಸದರೀ ಸುಂದರಮ್ಮನವರಿಗೆ ಗಂಡ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಸುಂದರಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಂದರಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

1904—1905ನೆ ಇಸವಿ ಅರ್ಜೀ ನಂ. 45.

ಮೃತಪಟ್ಟ ಸಾವಿತ್ರಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮಳವಳ್ಳಿ ತಾ॥ ಕೊಳಗೆರೆ ಗ್ರಾಮದಲ್ಲಿರುವ ಮೇಲಿನಹಟ್ಟಿ ಹೊನ್ನೆಗೌಡನ ಮಗ ಶಿದ್ದೆಗೌಡ ಉರುಫ್ ಗಾಣಗುದಿಗೆಗೌಡ ಮೃತಪಟ್ಟ ಸದರೀ ಸಾವಿತ್ರಮ್ಮನವರಿಗೆ ಹಕ್ಕುದಾರ ಆಗಬೇಕೆಂಬ ಹಕ್ಕುದಾರಿಯ ಮೇಲೆ ಮೇಲುಕೋಟೆಬಳಿ ಇರುವ ಕದಲಗೆರೆ ವಾಸಸ್ಥರಾಗಿ ಮೃತಪಟ್ಟ ಸಾವಿತ್ರಮ್ಮನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟು ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟು ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಸಾವಿತ್ರಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿಧೆ.

ಸನ್ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸ್ 1904—1905ನೆ ಇಸವಿ ಅರ್ಜಿ ನಂಬರ್ 49.

ಮೃತಪಟ್ಟ ಸೂರಭಟ್ಟ ಮತ್ತು ಪದ್ಮಾವತಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಚಾಮರಾಜನಗರದ ತಾಲ್ಲೂಕು ಕಸಬಾ ಚಾಮರಾಜನಗರದಲ್ಲಿರುವ ಮೃತ ಸೂರಭಟ್ಟರ ಹೆಣ್ಣು ಮಕ್ಕಳು ಜ್ವಾಲಮ್ಮ ಮತ್ತು ಗುಣವತಮ್ಮ ಮೈನರ್, ಗಾರ್ಡಿಯನ್ ಚಂದ್ರಭಟ್ಟ, ಮೃತಪಟ್ಟ ಸದರೀ ಸೂರಭಟ್ಟರು ಮತ್ತು ಪದ್ಮಾವತಮ್ಮನವರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರಿಯ ಮೇಲೆ ಚಾಮರಾಜನಗರದಲ್ಲಿ ವಾಸಸ್ಥರಾಗಿ ಮೃತಪಟ್ಟ ಸೂರಭಟ್ಟರು ಮತ್ತು ಪದ್ಮಾವತಮ್ಮನವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆದುನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸೂರಭಟ್ಟರು ಮತ್ತು ಪದ್ಮಾವತಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1904—1905ನೆ ಇಸವಿ ಅರ್ಜೀ ನಂಬರ್ 50.

ಮೃತಪಟ್ಟ ಕರೂರು ಕೃಷ್ಣಭಟ್ಟರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಮೈಸೂರುನಲ್ಲಿರುವ ನಾಮಾ ಸುಬ್ಬಾಯಭಟ್ಟರು ವೈ|| ಗಾ|| ಜನಕತಂದೆ ನಾಮಾ ಆದಿನಾರಾಯಣ ಭಟ್ಟರು, ಮೃತಪಟ್ಟ ಸದರೀ ಕರೂರು ಕೃಷ್ಣಭಟ್ಟರಿಗೆ ಪೊಮ್ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಕರೂರು ಕೃಷ್ಣಭಟ್ಟರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರೂರು ಕೃಷ್ಣಭಟ್ಟರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1904—1905ನೆ ಇಸವಿ ಅರ್ಜೀ ನಂಬರ್ 51.

ಮೃತಪಟ್ಟ ಕಂಟ್ರಾಕ್ಟುದಾರ್ ಕೃಷ್ಣಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರು ಹೆಗ್ಗಡದೇವನಕೋಟೆ ತಾಲ್ಲೂಕು ಅಂತರಸಂತೆ ಹೋಬಳಿ ಯಂತಹಳ್ಳಿ ಹೊಸೂರುನಲ್ಲರುವ ಪುಟ್ಟನಾದವ್ಮನ್ನು, ಮೃತಪಟ್ಟ ಸದರೀ ಕಂಟ್ರಾಕ್ಟುದಾರ್ ಕೃಷ್ಣಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಯಂತಹಳ್ಳಿ ಹೊಸೂರು ವಾಸಸ್ಥರಾಗಿ ಮೃತಪಟ್ಟ ಕಂಟ್ರಾಕ್ಟುದಾರ್ ಕೃಷ್ಣಯ್ಯನವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 27ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕಂಟ್ರಾಕ್ಟುದಾರ್ ಕೃಷ್ಣಯ್ಯನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1904—1905ನೆ ಇಸವಿ ಅರ್ಜೀ ನಂಬರ್ 54.

ಮೃತಪಟ್ಟ ಮಾದಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮೈಸೂರು ತಾಲ್ಲೂಕು ಶಿಂಧವಳ್ಳಿ ಹೋಬಳಿ ಬಂಣಾಪುರದಲ್ಲಿರುವ ಶಿದ್ದಯ್ಯನ ಮಲ್ಲಯ್ಯನ ಮಗ ಮಾದಯ್ಯ, ಮೃತಪಟ್ಟ ಸದರೀ ಮಾದಮ್ಮನವರಿಗೆ ದಾಯಾದಿ ಆಗಬೇಕೆಂಬ ಹಕ್ಕುದಾರಿ ಮೇಲೆ ಶಿಂಧುವಳ್ಳಿ ಹೋಬಳಿ ಬಂಣಾಪುರದ ವಾಸಸ್ಥರಾಗಿ ಮೃತಪಟ್ಟ ಮಾದಮ್ಮನವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಾದಮ್ಮನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸ್ 1903—1904ನೆ ಇಸವಿ ಅರ್ಜೀ ನಂಬರ್ 514.

ಮೃತಪಟ್ಟ ಮಾದಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮುಳವಳ್ಳಿ ತಾಲ್ಲೂಕು ಹಲಗೂರು ಕಸಬಾದಲ್ಲಿರುವ ಗುರುಮಲ್ಲಯ್ಯನ ಮಲ್ಲಪ್ಪನ ಮಗ ಪವತಿಯಾದ ಮಾದಪ್ಪನ ಹೆಂಡತಿ ಚಿಕ್ಕಬಸಮ್ಮ, ಮೃತಪಟ್ಟ ಸದರೀ ಮಾದಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮುಳವಳ್ಳಿ ತಾಲ್ಲೂಕು ಹಲಗೂರು ವಾಸಸ್ಥರಾಗಿ ಮೃತಪಟ್ಟ ಮಾದಪ್ಪನವರ ಜೀಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷ್ಯನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮಾದಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ಸ್ 1904ನೆ ಇಸವಿ ಆಗಸ್ಟು ತಿಂಗಳು 2ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಟಿ. ಪರಮಶಿವ ಅಯ್ಯರ್, ಸಬ್ ಜಡ್ಜ್.

ಸಾಗರ ಸಬ್ ಡಿವೀಜನ್ ಮುನ್‌ಸೀಫ್ ಕೋರ್ಟಿನಲ್ಲಿ.

ಅರ್ಜಿದಾರ್ ದಿವಾಳಿಯಾದ ಡಿಕ್ರಿದೇಣೇದಾರ್ ಈಳಿ ಅಂಣಪ್ಪನ ವಿಷಯದಲ್ಲಿ—
ಸನ್ 1903-04ನೆ ಇಸವಿ ದಿವಾಳಿ ವ್ಯಾಜ್ಯದ ಮಿ॥ ನಂ. 421.

ಹುಕುಂ.

ಮೇಲ್ಕಂಡ ಅರ್ಜಿದಾರ್ ಅಂಣಪ್ಪನು ಖುಲಾಸೆ ಮಾಡಿಸಬೇಕೆಂದು ಬರದುಕೊಂಡ ಅರ್ಜಿಯ ಅಂಶವು ವೆಂ ನರಸಪ್ಪೈಯ್ಯ, ಎಸ್‌ಕ್ವಯರ್, B. A., B. L., ಮುನಶೀಫರವರ ರೂಬರೂ ದಿವಾಳಿ ಅಂದರೆ ಅರ್ಜಿದಾರ ಸಮಕ್ಷಮದಲ್ಲಿಯೂ ಮತ್ತು ಈ ಕೆಳಗ ನಮೂದಾದ ಐಜನ್ ದಿವಾಳಿಯಾದವರ ಲೇಣೇದಾರರಾದ 1ನೆ ಎದರ ಅರ್ಜಿದಾರ ನೋಟಿಸ್ ಖುದ್ದು ಜಾರಿ, 2ನೆ ಎದರ ಅರ್ಜೀದಾರರ ನೋಟಿಸ್ ಸದರೀ ಯವರ ಮಗನ ಮೇಲೆ ಜಾರಿ, 3ನೆ ಎದರ ಅರ್ಜಿದಾರರ ನೋಟಿಸ್ ಮನೆ ಮೇಲೆ ಜಾರಿ, 4—6—9ನೆ ಎದರ ಅರ್ಜಿದಾರರ ನೋಟಿಸ್ ಖುದ್ದು ಜಾರಿ, 5ನೆ ಎದರ ಅರ್ಜಿದಾರನ ನೋಟಿಸ್ ಮನೆ ಮೇಲೆ ಜಾರಿ, 8ನೆ ಎದರ ಅರ್ಜಿದಾರನ ನೋಟಿಸ್ ಸದರೀಯವನ ತಮ್ಮನ ಮೇಲೆ ಜಾರಿ, 1ನೆ ಎದರ ಅರ್ಜಿದಾರನ ಪರ ಪ್ಲೀ॥ ಮೆ॥ H. ಶ್ಯಾಮರಾವ್ ಹಾಜರು, 8ನೆ ಎದರ ಅರ್ಜಿದಾರನ ಪರ ಪ್ಲೀ॥ ಮೆ॥ T. ಕ್ರಿಷ್ಟರಾವ್, ಹಾಜರು-ನಂತರ ಗೈರಹಾಜರು, 9ನೆ ಎದರ ಅರ್ಜಿದಾರ ಖುದ್ದು ಹಾಜರು-ನಂತರ ಗೈರ್‌ಹಾಜರು, 1ನೆ ಎದರ ಅರ್ಜಿದಾರನ ಪರ ಪ್ಲೀ॥ ಮೆ॥ H. ಶ್ಯಾಮರಾಯರ ಎದುರಿಗೂ ಸಹ ದರ್ಯಾಫ್ತಿ ಮಾಡಲ್ಪಟ್ಟಿತು. ಇದರಡೀಲಿ ನಮೂದಿಸಲ್ಪಟ್ಟ ಲೇಣೇದಾರರಿಗೆ ಈ ದರ್ಯಾಫ್ತಿ (2—3—4—5—6—7—8—9) ನೆ ಎದರ ಅರ್ಜೀದಾರರು ನೋಟಿಸ್ ಜಾರಿಯಾಗಿದ್ದುನ್ನು ಅವರು ಖುದ್ದಾಗಿಯಾಗಲಿ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, 1ನೆ ಎದರ ಅರ್ಜಿದಾರನ ಪರ ಪ್ಲೀ॥ ಮೆ॥ H. ಶ್ಯಾಮರಾಯರು ಇನ್‌ಸ್ಟ್ರಕ್ಷನ್ ಇಲ್ಲವಾಗಿ ರಿಪೋರ್ಟು ಮಾಡಿದ್ದರಿಂದಲೂ ಬಾಕಿ 2—3—4—5—6—7—8—9ನೆ ಎದರ ಅರ್ಜಿದಾರರು ಗೈರಹಾಜರಾದ್ದರಿಂದಲೂ ಅರ್ಜಿದಾರ ಈಳಿ ಅಂಣಪ್ಪ ಎಂಬುವನನ್ನು ಶಿವಿಲ್ ಪ್ರೊಸಿಡ್ಯೂರ್ ಕೋಡಿನ 351ನೆ ಸೆಕ್‌ಷನ್ ಮೇರಿಗೆ ಇನ್‌ಸಾಲ್‌ವೆಂಟ್‌ಯಂತಾ ಡಿಕ್ಲೇರ್ ಮಾಡಿರುವಂತೆ ಆರ್‌ಡರ್ ಆಗಿರುತ್ತೆ.

ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಬಹು ಸಂಖ್ಯಾತವಾದ ಜನರು ಅವರ ಹೆಸರುಗಳಿಗೆ ಎದುರಾಗಿ ದಾಖಲಾಗಿರುವ ಸಾಲದ ಮೊಬಲಗುಗಳಿಗೆ ಲೇಣೇದಾರರೆಂದು ರುಜು ಮಾಡಿಧಾರೆಂದು ಇದರಿಂದ ನಿಶ್ಚಯಿಸಿ ತೀರ್ಮಾನ ಮಾಡಲ್ಪಟ್ಟಿರುತ್ತದೆ.

ನಂಬರು.	ಲೇಣೇದಾರರ ಹೆಸರು.	ವಾಸಸ್ಥಳ.	ಮೊಬಲಗು ಅಂದರೆ ಸಾಲವೆಂದು ರುಜು ಆದ್ದು.	ಸಾಲಗಳ ಸ್ವಭಾವ ಪ್ರತಿಫಲ ಮತ್ತು (ಏನಾದರು) ಈಡು.
1	ಯಾಗ್ಯಯ್ಯನ ಭರಮಯ್ಯ ಬಿನ್ ರಂಗಪ್ಪ.	ಸಾಗರ ವಾಶಿ ..	34—0—0	ಸಾಗರ ಮುನಶೀಫ್ ಕೋರ್ಟು ಸ್ಮಾಲ್‌ಕಾಜ್ ನಂಬರ್ 591—1902-03ನೆ ಡಿಕ್ರಿ ಮೊಬಲಗು.
2	ಹೊಸಬಾಳೆ ನಾರಣಪ್ಪ ಬಿನ್ ಸುಬ್ಬರಾವ್.	ಸಾಗರ ತಾಲ್ಲೂಕು ಕೆಳದಿ ಮಾಗಣಿ ಮೆಳವರಿಗೆ ವಾಶಿ.	300—0—0	ಸಾಗರ ಮುನಶೀಫ್ ಕೋರ್ಟು ಅಸಲ್ ನಂಬರ್ 166—1902-03ನೆ ಡಿಕ್ರಿ ಮೊಬಲಗು.
3	ನಾರಣಪ್ಪ ಬಿನ್ ಶಂಕರಪ್ಪ ಮೈನರ್, ಗಾರ್ಡಿಯನ್ ತಾಯಿ ಕಾಶವ್ವ.	ಸಾಗರ ತಾಲ್ಲೂಕು ಕೆಳದಿ ವಾಶಿ.	28—0—0	ಸಾಗರ ಮುನಶೀಫ್ ಕೋರ್ಟು ಸ್ಮಾಲ್‌ಕಾಜ್ ನಂಬರ್ 56—1902-03ನೆ ಡಿಕ್ರಿ ಮೊಬಲಗು.
4	ಹೊಸಮನೆ ಕ್ರಿಷ್ಟಪ್ಪ ..	ಸಾಗರ ತಾಲ್ಲೂಕು ಕೆಳದಿ ಮಾಗಣಿ ಹಂದಿಗೋಡು ವಾಶಿ.	300—0—0	ಸ್ಥಿರಸೊತ್ತು ದೀಡಿನ ರಿಜಿಸ್ಟರ್ ಪತ್ರದ ಸಮ್ಮಂಧ ಅಸಲ್ 300 ರೂಪಾಯಿ ಬಡ್ಡಿ ಕೂಡ.
5	ಸಂಕಟಗೆರೆ ಶೇಷಪ್ಪ ...	ಸಾಗರ ತಾಲ್ಲೂಕು ಕೆಳದಿ ಮಾಗಣಿ ಈಳಿ ವಾಶಿ.	100—0—0	ಸ್ಥಿರಸೊತ್ತು ದೀಡ ಪತ್ರದ ಸಮ್ಮಂಧ ಮೊಬಲಗು.
6	ಬಿಡ್ಡಯ್ಯನ ತಿಮ್ಮಯ್ಯ ...	ಸಾಗರ ತಾಲ್ಲೂಕು ಕೆಳದಿ ಮಾಗಣಿ ಹಂದಿಗೋಡು ವಾಶಿ.	60—0—0	ಸಾಗರ ಮುನಶೀಫ್ ಕೋರ್ಟು ಅಸಲ್ ನಂಬರ್ 53—1902-03ನೆ ಡಿಕ್ರಿ ಮೊಬಲಗು.
7	ಪುರಾಣೀಕ ರಾಮಭಟ್ಟ ಬಿನ್ ನರಸಿಹ್ಮಭಟ್ಟ.	ಸಾಗರ ತಾಲ್ಲೂಕು ಕೆಳದಿ ಮಾಗಣಿ ಮಡಸೂರು ವಾಶಿ.	160—0—0	ಭಾಪಾ ಪತ್ರದ ಸಮ್ಮಂಧ ಅಸಲ್ 160 ರೂಪಾಯಿ ಇದರ ಬಡ್ಡಿ ಸಹ.
8	ಪುರಾಣೀಕ ನರಸಿಹ್ಮಭಟ್ಟ ಬಿನ್ ಶಂಕರಭಟ್ಟ.	ಸಾಗರ ತಾಲ್ಲೂಕು ಕೆಳದಿ ಮಾಗಣಿ ಮಡಸೂರು ವಾಶಿ.	100—0—0	ಭಾಪಾ ಪತ್ರದ ಸಮ್ಮಂಧ ವಸೂಲ್ ಕೊಟ್ಟ 50 ರೂಪಾಯಿ ಜಾತಾ ಅಸಲ್ 100 ರೂಪಾಯಿ ಇದರ ಬಡ್ಡಿ ಸಹ
9	ತಿಮ್ಮಯ್ಯ ಬಿನ್ ತಿಮ್ಮಯ್ಯ	ಸಾಗರ ತಾಲ್ಲೂಕು ಕೆಳದಿ ಮಾಗಣಿ ಲಿಂಗದಹಳ್ಳಿ ವಾಶಿ.	350—0—0	ಸಾಗರ ಮುನಶೀಫ್ ಕೋರ್ಟು ಅಸಲ್ ನಂಬರ್ 238—1902-03ನೆ ಡಿಕ್ರಿ ಮೊಬಲಗು.
		ಜುಮ್ಲಾ .	1,432—0—0	

ಸನ್ 1904ನೆ ಇಸವಿ ಜುಲೈ ತಾರೀಖು 22ರಲ್ಲು ಕೋರ್ಟು ಮೊಹರ್ ನಮ್ಮ ದಸ್ತಖತ್ತಿನ ಕೊಡಲ್ಪಟ್ಟಿಧೆ.

ಎಂ. ನರಸಪ್ಪಯ್ಯ, ಮುನಶೀಫ್.

ಬೆಂಗಳೂರ್ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್.

ಬ ತಾರೀಖು 1ನೆ ಆಗಸ್ಟು 1904.

1905ನೆ ಸಾಲಿನ ಲೋವರ್ ಸೆಕಂಡರೀ ಟೆಕ್ಸ್‌ಟ್ ಗದ್ಯಭಾಗವು ಈಗ ಮಾರಾಟಕ್ಕೆ ಸಿದ್ಧವಾಗಿರುತ್ತೆಂಬದಾಗಿ ಇದರಿಂದ ತಿಳಿಸಲ್ಪಟ್ಟಿಧೆ. ಖರೀದಿ ಪ್ರತಿ ಬಂದಕ್ಕೆ ಆಣೆ $2\frac{1}{2}$ (ಎರಡುವರಾಣೆಗಳು.)

ಎಸ್. ಅಬ್ದುಲ್ ಹೈ, ಕ್ಯೂರೇಟರ್.

Mysore Government Central Press, Bangalore.—1904.

296

1281

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 33.

ಬೆಂಗಳೂರು, ಗುರುವಾರ, ಆಗಸ್ಟು ತಾ॥ 18, ಸನ್ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಣಿಟೆಂಡೆಂಟರು, ಕನ್‌ಟ್ರೋಲರವರು, ಪಬ್ಲಿಕ್‌ವರ್ಕ್ಸ್ ಆಫಿಸರ್‌ಗಳು, ಫಾರೆಸ್ಟು, ರೆಜಿಸ್ಟ್ರೇಷನ್ ವ ಎಡ್ಯುಕೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್‌ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ-ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್ ಸೂಪರ್ಣಿಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಿಸ್‌ಗಳು.

3ನೆ ಭಾಗ—ಲೆಜಿಸ್‌ಲೇಟಿವ್ ರೆಗ್ಯುಲೇಷನ್‌ಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ-ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 26—27ನೆ ಜುಲೈ 1904.

ನಂ. 668—34-2—ಲೋ. ಬೋ., ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
(b) ಉದ್ದೇಶಿಸಿರುವ ಕಟ್ಟಡದ ನೇರವು ಯ ಮುಂಭಾಗವು, ಸದರಿ ಕಟ್ಟಡವು ಎದುರು ನೋಡುವ ಬೀದಿ ಅಥವಾ ರಸ್ತೆಯ ಪಾರ್ಶ್ವಭಾಗದ ಚರಂಡಿಗಾಗಲಿ, ಪಕ್ಕದ ಚರಂಡಿ ಇಲ್ಲದಿದ್ದಲ್ಲಿ ಅಂಥಾ ಬೀದಿ ಅಥವಾ ರಸ್ತೆಯ ಮಧ್ಯರೇಖೆಗೆ ಆಗಲಿ ಯಾವ ಸ್ಥಾನದಲ್ಲಿ ನಿಲ್ಲುತ್ತದೋ ಅದನ್ನು ಸಹಾ ಮೇಲ್ಕಂಡ ಪ್ಲಿಂತ್‌ಸ್ಯಾನೆ ನಕ್ಷೆಗಳು ವ ಸೆಕ್ಷನ್‌ಸ್‌ಯಾನೆ ನವೂನೆಗಳು ತೋರಿಸತಕ್ಕದ್ದು.

(4) ಅಂಥಾ ಪ್ರತಿಯೊಬ್ಬ ಮನುಷ್ಯನು ಚೇರ್‌ಮೆರ್‌ರಿಂದ ಖಾಯಿಷ್ ಮಾಡಲ್ಪಟ್ಟಾಗ, ಮೇಲ್ಕಂಡ ನೋಟೀಸಿನ ಸಂಗಡ, ಕಟ್ಟುವದಕ್ಕೆ ಉದ್ದೇಶಿಸಿರುವ ಕೆಲಸವನ್ನು ಕುರಿತೂನೂ, ಮತ್ತು ತಳಾದಿಗಳಿಗೂ, ಗೋಡೆಗಳಿಗೂ, ವ ಜಾವಣಿಗಳಿಗೂ ಉಪಯೋಗಿಸತಕ್ಕ ಸಾಮಾನುಗಳನ್ನು ಕುರಿತೂನೂ, ತಪ್ಸೀಲ್ ವಿವರಣೆಗಳನ್ನು ಕಳುಹಿಸಿಕೊಡತಕ್ಕದ್ದು.

3. ಈ ನಿಬಂಧನೆಗಳ ಯ ಅವುಗಳ ಅವಶ್ಯಕತೆಗಳ ಸಂಬಂಧವಾದ ಯಾವದಾದರು ವಿಷಯದ ಸರಿಯಾದ ಅಭಿಪ್ರಾಯ ಯ ಅರ್ಥದ ವಿಚಾರವಾಗಿ ಯಾವ ಮನುಷ್ಯನಿಗಾದರು ತೊಡಕು ಯ ಸಂದೇಹವೇನಾದರೂ ಇದ್ದರೆ, ಅಂಥಾವನು ಯಾವದಾದರು ಕಟ್ಟಡವನ್ನು ಕಟ್ಟುವದಕ್ಕಾಗಲಿ ಅಥವಾ ಪುನಶ್ಚ ಕಟ್ಟುವದಕ್ಕಾಗಲಿ ತನ್ನ ಉದ್ದೇಶವನ್ನು ಕುರಿತು ಲಿಖಿತಮೂಲಕ ನೋಟೀಸನ್ನು ಕೊಡುವದಕ್ಕೆ ಮುಂಚಿತವಾಗಿ, ಚೇರ್‌ಮೆರ್‌ಗೆ ದರಖಾಸ್ತು ಮಾಡಿಕೊಳ್ಳಬಹುದು. ಅಂಥಾ ದರಖಾಸ್ತು ತಲುಪಲು, ಚೇರ್‌ಮೆರ್‌ರು ಸದರಿ ಮನುಷ್ಯನಿಗೆ ಆಯಾ ಸಂದರ್ಭಗಳಲ್ಲಿ ಅವಶ್ಯಕವಾಗಿರುವ ತಿಳುವಳಿಕೆಯನ್ನು ಕೊಡತಕ್ಕದ್ದು.

4. ಮೂಳೆ ಮುಂತಾದ ವಸ್ತುಗಳಿಂದಲಾಗಲಿ, ಸತ್ತ ಮೃಗಗಳ ಶವಗಳಿಂದಲಾಗಲೀ, ಅಥವಾ ಕಚರ ಯ ಉಪದ್ರಕರವಾದ ಇತರ ವಸ್ತುವಿನಿಂದಲಾಗಲೀ ತುಂಬಲ್ಪಟ್ಟಿರುವ ಅಥವಾ ಸದರಿ ವಸ್ತುಗಳನ್ನು ಕೂಡಿಹಾಕತಕ್ಕ ಸ್ಥಳವಾಗಿ ಉಪಯೋಗಿಸಲ್ಪಟ್ಟಿರುವ ಯಾವ ಸ್ಥಳದ ಮೇಲೂ, ಹೊಸ ಕಟ್ಟಡವನ್ನು ಕಟ್ಟತಕ್ಕ ಮನುಷ್ಯನು ಅಂಥಾ ವಸ್ತುಗಳು ಚೇರ್‌ಮೆರ್‌ರ ತೃಪ್ತಿಕರವಾಗಿ, ಸರಿಯಾಗಿ ತೆಗದುಹಾಕಲ್ಪಟ್ಟಿಹೊರ್ತು, ಅಥವಾ ಸದರಿ ವಸ್ತುಗಳು ದುರ್ಗುಣರಹಿತವಾಗಿವೆಯೆಂದು ಅವರು ಅಭಿಪ್ರಾಯಪಟ್ಟಿಹೊರ್ತು, ಯಾವ ಹೊಸ ತಳಾದಿಯನ್ನು ಹಾಕತಕ್ಕದ್ದಲ್ಲವು.

ಕಚರಾವನ್ನು ಹೊಸ ತಳಾದಿಗಳಿಂದ ಆಚೆಗೆ ಸಾಗಿಸತಕ್ಕದ್ದು.

374

1369

5. ಮ್ಯುನಿಸಿಪಲ್ ರೆಗ್ಯುಲೇಷನ್ನಿನ 115, 116 ಮತ್ತು 148ನೆ ಪ್ರಕರಣಗಳ ಅರ್ಥದನುಸಾರವಾಗಿ ಕಟ್ಟಡಗಳನ್ನು ಕಟ್ಟುವ ಪ್ರತಿಯೊಬ್ಬ ಮನುಷ್ಯನು, ಕಟ್ಟಡದ ತಳಾದಿ ಯಾವದನ್ನಾದರೂ ತುಂಬಲು ಉಪಕ್ರಮಿಸುವದಕ್ಕೆ ಮುಂದಾಗಿ, ಅಂಥಾ ತಳಾದಿಯನ್ನು ಅಂಥಾ ಮನುಷ್ಯನು ತುಂಬಲು ಉಪಕ್ರಮಿಸುವ ತೇದಿಯನ್ನು ನಮೂದಿಸಿ ಬರಹ ಮೂಲಕ ನೋಟೀಸನ್ನು ಜೇರ್ವೆರ್ಗೆ, ಅವರ ಆಫೀಸಿನಲ್ಲಿ ಪಾವತಿ ಮಾಡತಕ್ಕದ್ದು ಯ ಕಳುಹಿಸತಕ್ಕದ್ದು. ಅಥವಾ ಪಾವತಿಯಾಗುವಂತೆ ಯ ಕಳುಹಿಸುವಂತೆ ಮಾಡತಕ್ಕದ್ದು.

ಕಟ್ಟಡಗಳನ್ನು ಕಟ್ಟುವದಕ್ಕೆ ಉದ್ದೇಶಿಸುವ ಜನರಿಂದ ಕೆಲವು ನೋಟೀಸುಗಳು ಕೊಡಲ್ಪಡಬೇಕಾದ ವಿಷಯ.

ತಳಾದಿಗಳನ್ನು ಮುಚ್ಚುವದರ ವಿಷಯವಾಗಿನೋಟೀಸು.

6. ವಾಸಕ್ಕಾಗಿ ಹೊಸಕಟ್ಟಡವನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು ಸುತ್ತಲಿರುವ ಭೂಮಿಯ ಸಾಮಾನ್ಯ ಮಟ್ಟದ ಮೇಲೆ $1\frac{1}{4}$ ಅಡಿಗೆ ಕಡಿಮೆ ಇಲ್ಲದಂತೆಯೂ, ಮತ್ತು ಪಾರ್ಶ್ವ ಭಾಗದ ಚರಂಡಿಯ ಮೇಲ್ಭಾಗವನ್ನು ಮಿಾರಿ $1\frac{1}{2}$ ಅಡಿಯಪ್ಪ ಇರುವಂತೆಯೂ, ಪ್ಲಿಂತ್‌ಯಾನೆ ಗದ್ದಿಗೆ ಕಲ್ಲನ್ನು ಇಟ್ಟು ಸದರಿ ಕಟ್ಟಡವನ್ನು ಕಟ್ಟಿಸತಕ್ಕದ್ದು.

ಪ್ಲಿಂತ್‌ಯಾನೆ ಗದ್ದಿಗೆಕಲ್ಲಿನ ಮಟ್ಟ.

7. ಹಿಂದಿನ ಪ್ರಕರಣಗಳ ನಿಬಂಧನೆಗಳನ್ನನುಸರಿಸಿ, ಜೇರ್ವೆರ್ಗೆ ಯಾವದಾದರೂ ಪ್ಲಿಂತ್‌ಯಾನೆ ನಕ್ಷೆಯ ಇತರ ದಸ್ತಾವೇಜನ್ನು ಬದಗಿಸಬೇಕೆಂದು ಖಾಯಿಷ್ಮಾಡಲ್ಪಡುವ ಪ್ರತಿಯೊಬ್ಬ ಮನುಷ್ಯನು, ತಾನು ಬದಗಿಸಬೇಕೆಂದು ಅನುಜ್ಞಾಪನ ಪಟ್ಟಂಥ ಪ್ರತಿಗಳೊಂದು ಪ್ಲಿಂತ್‌ಯಾನೆ ನಕ್ಷೆ ಅಥವಾ ಇತರ ದಸ್ತಾವೇಜಿನ ನಕಲುಗಳ ದ್ವಿಪ್ರತಿಗಳನ್ನು ಬದಗಿಸತಕ್ಕದ್ದು. ಅಂಥಾ ಪ್ಲಿಂತ್‌ಯಾನೆ ನಕ್ಷೆ ಯ ಇತರ ದಸ್ತಾವೇಜುಗಳ ದ್ವಿಪ್ರತಿಗಳ ಪೈಕಿ, ಜೇರ್ವೆರ್ಗಿಂದ ಸದರಿ ಪ್ಲಿಂತ್‌ಯಾನೆ ನಕ್ಷೆಯು ಮಂಜೂರಾಗಿರುವದನ್ನು, ಇಲ್ಲದಿರುವದನ್ನು ಸೂಚಿಸುವಂತೆ, ಒಂದು ಪ್ರತಿಯು ಅವರಿಂದ ದಸ್ಕತ್ ಮಾಡಲ್ಪಟ್ಟು ಸದರಿ ಮನುಷ್ಯನಿಗೆ ವಾಪಸು ಮಾಡಲ್ಪಡತಕ್ಕದ್ದು. ಕಟ್ಟಡದ ಅಂದಾಜಿನ ಬೆಲೆಮೇಲಿ ಶೇಕಡ $\frac{1}{4}$ರ ಮೇರಿಗೆ ಪಾವತಿಯಾದಲ್ಲಿ, ಬೋರ್ಡಿನ ಸರ್ವೆಯರ್ ಯಾನೆ ಮೋಜಣಿದಾರನ್ನು, ಅವಶ್ಯಕವಾದ ಮೋಜನಿಗಳನ್ನು ಮಟ್ಟಗಳನ್ನು ತೆಗೆಯುವಂತೆ ಆಜ್ಞಾಪಿಸಲ್ಪಡುವನು.

ಕಟ್ಟಡದ ಪ್ಲಿಂತ್‌ಯಾನೆ ನಕ್ಷೆಯ ಇತರ ದಸ್ತಾವೇಜನ್ನು ಬದಗಿಸಬೇಕೆಂದು ಖಾಯಿಷ್ಮಾಡಲ್ಪಡುವ ಪ್ರತಿಯೊಬ್ಬ ಮನುಷ್ಯನು.

8. ಯಾವ ಹೊಸಕಟ್ಟಡದ ರಸ್ತೆಕಡೆಯ ಗೋಡೆ ಪಾಯವು ಪಾರ್ಶ್ವಭಾಗದ ಚರಂಡಿಯಿಂದ $1\frac{1}{2}$ ಅಡಿಯಪ್ಪ ಬಿಡದಿರುವದೋ, ಅಂಥಾ ಹೊಸಕಟ್ಟಡವು ಯಾವ ಮನುಷ್ಯನಿಂದಲೂ ಕಟ್ಟಲ್ಪಡಕೂಡದು. ಅಂಥಾ ಕಟ್ಟಡದ ಪ್ರತಿಯೊಂದು ಗೋಡೆಯು, ಮತ್ತು ಕೆಳಗಿನ ನೆಲದ ಪ್ರತಿಯೊಂದು ಕಂಭವು ಯಾ ಕಂಭಗಳು ಗಟ್ಟಿಯಾದ ನೆಲದಮೇಲೆಯಾದರೂ, ಸಾಕಾದಷ್ಟು ಮಂದವುಳ್ಳ ಕಾಂಕ್ರೀಟ್‌ಯಾನೆ ವಜ್ರಗಾರೆ ಮೇಲೆಯಾದರೂ, ಅಥವಾ ತಳಾದಿಯುಂತಿರುವ ಯಾವದಾದರೂ ಬಲವಾದ ಸಾಕಾದ ಕೆಳಕಟ್ಟೆಯ ಮೇಲೆಯಾದರೂ ನಿಲ್ಲತಕ್ಕದ್ದು. ಅಲ್ಲದೆ, ಬೇಕಾದ ಸಂದರ್ಭಗಳಲ್ಲಿ ಪಾಯಗಳಿಗೆ ಫೂಟಿಂಗ್ಸ್‌ಯಾನೆ ನೆಲೆಗಳು ಇಡಲ್ಪಡತಕ್ಕದ್ದು.

ಗೋಡೆಗಳ ಪಾಯಗಳು.

9. ಹೊಸ ವಾಸದ ಮನೆಯನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ವಾಸದ ಮನೆಯನ್ನು, ವಾಸಮಾಡುವದಕ್ಕೆ ಉದ್ದೇಶಿಸಲ್ಪಟ್ಟಿರುವ ಅದರ ಪ್ರತಿಯೊಂದು ಕೊಠಡಿಯ ಎಲ್ಲಾಭಾಗವು, ಯ ಕನಿಷ್ಠಪಕ್ಷ ಒಂದು ಪಕ್ಕವು ಹೊರಗಿನ ಬೈಲು ಪ್ರದೇಶಕ್ಕೆ ಬಿತ್ತಿಕೊಂಡಿರುವ ಹೊರಪಾರ್ಶ್ವದ ಗೋಡೆಯಾಗಿ ಇರತಕ್ಕದ್ದಾಗಿಯಾದರೂ, ಅಥವಾ ಬಳಗಿನ ಖಾಲಿ ಜಾಗಾಕ್ಕೆ ಬಿತ್ತಿಕೊಂಡಿರುವ ಎಲ್ಲಾ ಕೊಠಡಿಗಳ ಒಟ್ಟು ನೆಲವಿಸ್ತೀರ್ಣದ ದಶಾಂಶಕ್ಕೆ ಕಡಿಮೆ ಇಲ್ಲದಷ್ಟು ವಿಸ್ತಾರವನ್ನುಳ್ಳದ್ದಾಗಿಯೂ, ಯಾವ ವಿಕ್ಕಿನಲ್ಲೂ ಅಡ್ಡಳತೆ 6 ಅಡಿಗಳಿಗೆ ಕಡಿಮೆ ಇಲ್ಲದಂತೆಯೂ, ಇರುವ ಬಳಿ ಅಂಗಣಕ್ಕೆ ಬಿತ್ತಿಕೊಂಡಿರುವಂಥಾದ್ದಾಗಿಯಾದರೂ, ಇರುವಂತೆ ಕಟ್ಟತಕ್ಕದ್ದು.

ವಾಸದ ಮನೆಗಳ ಸುತ್ತ ಇರಬೇಕಾದ ಬೈಲು ಪ್ರದೇಶಗಳು.

10. ಅಂಥವನು ಹೊರಪಾರ್ಶ್ವದ ಕನಿಷ್ಠಪಕ್ಷ ಎರಡು ಗೋಡೆಗಳಿಗೂ ಮತ್ತು ಮಾಲೀಕನ ವಠಾರದ ಹದ್ದುಗಡಿಗೂ ಮಧ್ಯೆ, ಅಂಥ ಗೋಡೆಗಳಲ್ಲಿ ಯಾವದಾದರು ಒಂದು ಅಡ್ಡಗಲದಲ್ಲಿ 15 ಅಡಿಗಿಂತಲೂ ಕಡಿಮೆಯಾಗಿರದಿರುವ ಬೀದಿಗೆ ಅಭಿಮುಖವಾಗಿ ಇದ್ದಹೊರ್ತು, ಅಂಥ ಗೋಡೆಯು ಉದ್ದಕ್ಕೂ ವಿಸ್ತರಿಸತಕ್ಕ, ಅಥವಾ ಕನಿಷ್ಠಪಕ್ಷ 6 ಅಡಿ ಅಡ್ಡಗಲವುಳ್ಳ ಖಾಲಿ ಜಾಗವನ್ನು ಬಿಡತಕ್ಕದ್ದು. ಈ ಉಪನಿಬಂಧನೆಯಿಂದ ನಿರ್ದೇಶಿಸಲ್ಪಡುವ ಪ್ರತಿಯೊಂದು ಬಳಿ ಅಂಗಣವನ್ನು, ಅಂಥವನು ಕಲ್ಪಿಸಿ, ಯಾವ ಕಟ್ಟಡಗಳೂ ಅವರಲ್ಲಿರದಂತೆಯೂ ಮತ್ತು ಅಂತರಿಕ್ಷಕ್ಕೆ ತೆರೆಯಲ್ಪಟ್ಟಿರುವಂತೆಯೂ ಅದನ್ನು ಇಡಿಸತಕ್ಕದ್ದು. ಮತ್ತು ಕಪೋತ, ಚಾವಣಿ ಯ ಗಾಳಿವರೆ, ಇವು ಯಾವದೂನೂ ಮೇಲ್ಕಂಡ ಖಾಲಿ ಜಾಗದ ಯಾವ ಕಡೆಯಲ್ಲೂ ಒಂದು ಅಡಿ 6 ಅಂಗುಲಗಳಿಗಿಂತ ಮಿಾರಿ ಮುಂದಕ್ಕೆ ಉಬ್ಬಿಕೊಂಡಾದರೂ ಅಥವಾ ಮೇಲಿನಿಂದ ಬೊಗ್ಗಿಕೊಂಡಾದರೂ ಇರಕೂಡದು. ಆದರೆ, ಈ ಕೂಡಿಸತಕ್ಕ ಹಾದಿಗಳು ಒಂದು, ಯ ಎರಡು ಪಕ್ಕಗಳಲ್ಲಿ ಖಾಲಿ ಬಿಡಲ್ಪಟ್ಟದ್ದಲ್ಲಿ, ಅಂಥಾ ಯಾವ ಹಾದಿಗಳನ್ನು ಜೇರ್ವೆರ್ರು ಅವಶ್ಯಕವೆಂದು ಎಣಿಸುವರೊ ಅಂಥವುಗಳು ಇಡಲ್ಪಡಬಹುದು.

11. ಬಡಾವಣೆಗಳಲ್ಲಿ, 30 ಅಡಿ ಅಗಲ 50 ಅಡಿ ಉದ್ದಕ್ಕೆ ಕೆಡಿಮೆಯಾದ ಜಾಗಾಗಳ ಮೇಲೆ, ಯಾವ ಕಟ್ಟಡವೂ ಕಟ್ಟಲ್ಪಡಲಾಗದು.

12. ಅಂಥ ಕಟ್ಟಡದಲ್ಲಿ ವಾಸಕ್ಕೆಂದು ಉದ್ದೇಶಿಸಿರುವ ಪ್ರತಿಯೊಂದು ಕೊಠಡಿಯನ್ನು ಅಂಥವನು ಅದರ ಮಾಳಿಗೆಯಲ್ಲಿನ ಒಂದು ಕೊಠಡಿವಿನಹ, ನೆಲದಿಂದ ಅಟ್ಟದವರಿಗೆ ಪ್ರತಿಭಾಗವು ಕನಿಷ್ಠಪಕ್ಷ 8 ಅಡಿ ಎತ್ತರವಾಗಿರುವಂತೆ ಕಟ್ಟತಕ್ಕದ್ದು.

ಕೊಠಡಿಗಳ ಉನ್ನತ.

13. ಅಂಥ ಕಟ್ಟಡದ ಅಂಥ ಮಾಳಿಗೆಯಲ್ಲಿನ ಪ್ರತಿಯೊಂದು ಕೊಠಡಿಯನ್ನು, ಅಂಥವನು ಸದರಿ ಕೊಠಡಿಯು ತಳವರ ಸೆಯಿಂದ ಅಟ್ಟುದವರಿಗೆ ಕನಿಷ್ಠಪಕ್ಷ ಸರಾಸರಿ 7 ಅಡಿ ಎತ್ತರವನ್ನು ಉಳ್ಳದ್ದಾಗಿರುವಂತೆ ಕಟ್ಟುತಕ್ಕದ್ದು.

14. ಕಟ್ಟಡಗಳ ಸೂರುಗಳು, ಕಿಟಕಿಗಳ ಕವಷೇಡಿಯಾನೆ ಬಿಸಲು ಮರೆಗಳು, ಮಾಳಿಗೆಯ ನೀರನ್ನು ಹಾಯಿಸುವ ದೋ ಣಿಗಳು, ಮನೆಯ ಅಂಚಿನಲ್ಲಿರುವ ರಸ್ತೆಯ ಪಾರ್ಶ್ವಭಾಗದ ಚರಂಡಿಯನ್ನು ಅತಿಕ್ರಮಿಸಿ ಮುಂದಕ್ಕೆ ಬರಕೂಡದು.

15. ರಸ್ತೆಯಿಂದ ಪ್ಲಿಂತ್‌ಯಾನೆ ಗರ್ಡಿಗೆ ಕಲ್ಲಿನ ಮೇಲಕ್ಕೆ ಹೋಗತಕ್ಕ ಮೆಟ್ಲುಗಳು ರಸ್ತೆಯ ಪಾರ್ಶ್ವಭಾಗದ ಚರಂ ಡಿಯ ಹೊರಗಡೆಯ ಅಂಚನ್ನು ಬಿಟ್ಟು ಮುಂದಕ್ಕೆ ಬರತಕ್ಕದ್ದಲ್ಲವು.

16. ರಸ್ತೆಯ ಪಾರ್ಶ್ವಭಾಗದ ಚರಂಡಿಯ ಹೊರಅಂಚಿನಿಂದಾಚೆಗೆ ಹಂಗಾಮಿಯಾದ ಯು ಖಾಯಂ ಆದ ಕವಷೇಡ್‌ಯಾನೆ ಬಿಸಲು ಮರೆಗಳ್ವಾವದೂ ಅಂಗಡಿಗಳಿಗೆ ಹಾಕಲ್ಪಡಕೂಡದು.

ಕೊಠಡಿಗಳ ನೆಲ ವಿಸ್ತೀರ್ಣ.

17. ಚಾವಣಿ ವರಿಗೂ ಎತ್ತಲ್ಪಡರಿರುವ ಬಂದು ವಿಭಾಗದ ಗೋಡೆ ಮುಟಾಂತರವಾಗಿಯಾಗಲೀ, ಅಥವಾ ಸಂಸರ್ಗವ ನ್ನು ಸುತರಾಂ ತಡೆಯುವದಕ್ಕಾಗದಿರುವಂಥ ಯಾವ ವಿಧದಿಂದಾಗಲೀ, ಬಂದು ಕೊಠಡಿಯಿಂದ ಮತ್ತೊಂದು ಕೊಠಡಿಗೆ ಮಾರ್ಗವಿರ್ಪ ವಿಸಣಾ, ಪ್ರತಿಯೊಂದು ಕೊಠ ಡಿಯನ್ನು, ಬಂದೊಂದು 80 ಚದರಡಿಗೆ ಕಡಿವೆ ಇಲ್ಲದ ನೆಲ ವಿಸ್ತೀರ್ಣಉಳ್ಳ ದ್ದಾಗಿ ಕಟ್ಟುತಕ್ಕದ್ದು.

ಕೊಠಡಿಗಳ ಗಾಳಿ ಚಲನೆ.

18. ಅಂಥವನು, ಅಂಥ ಪ್ರತಿಯೊಂದು ಕೊಠಡಿಯನ್ನು, ನೇರವಾಗಿ ಹೊರಗಡೆಯ ಗಾಳಿಗೆ ತೆರೆಯತಕ್ಕ ಮತ್ತು ತಳವ ರಿನ ಪ್ರದೇಶದ ವಿಸ್ತೀರ್ಣದಲ್ಲಿ ವಟ್ಟಿಗೆ ದಶಾಂಶಕ್ಕೆ ಕಡಿವೆ ಇಲ್ಲದವ್ಯ ಮಿಲ್ಲಾ ಇರ ತಕ್ಕ ಕಿಟಕಿಗಳದ್ವಾರಗಳ ಮುಟಾಂತರ, ಸದರಿ ಕೊಠಡಿಗೆ ಗಾಳಿಯು ಬೀಸುತ್ತಿರು ವಂತೆ, ಕಟ್ಟುತಕ್ಕದ್ದು.

ವಕಾರಗಳನ್ನು ಕಾಪಾಡಿಕೊಂಡು ಬರು ವಿಕೆ.

19. ಪ್ರತಿಯೊಬ್ಬ ಮನೆ ಎಜಮಾನನು ತಾನು ಒಕ್ಕಲಿರುವ ಮನೆಯನ್ನು ಮತ್ತು ಅದಕ್ಕೆ ಲಗತ್ತಾದ ಜಮೀನುಗಳ ನ್ನು ಕಾಪಾಡಿಕೊಂಡು ಬರಲಿಕ್ಕೆ ಬದ್ಧನಾಗಿರುತ್ತಾನೆ. ಮನೆ ವ ಅದಕ್ಕೆ ಕೇರಿದ ಜಮೀನುಗಳ ಮಟ್ಟದ ನೀರುವಾಟಕ್ಕೆ ಅನುಗತವಾಗಿ ಪರಿಯುವ ಅತ್ಯಂತ ಸಮೀಪದಲ್ಲಿರತಕ್ಕ ಬೀದಿಯ ಚರಂಡಿಗೆ ಮಳಿಗೆಯ ನೀರು ವ ಬಚ್ಚಲು ರೊಚ್ಚು ಸಾಗಿ ಬೀಳುವಂತೆ, ಸದರಿ ಮನೆ ವ ಮನೆಯ ಮೈದಾನದ ನೀರು ಹರಿದು ಹೋಗುವದಕ್ಕೋಸ್ಕರ ಜೇರ್ವೆರಿಂದ ನಿಯಮಿಸಲ್ಪಡುವ ನಿರ್ಣಯದ ಮೇರಿಗೆ ಇರತಕ್ಕ ಬಂದು ಅನುಕೂಲವಾದ ಚರಂಡಿಯನ್ನು ಉಂಟುಮಾಡ್ದಾಗಿ, ದರೋಬಸ್ತು ವಕಾರಗಳು ಇರತಕ್ಕದ್ದು. ಮನೆಯ ಮಾಲೀಕನು ಅವಶ್ಯಕವಾದ ಚರಂಡಿ ಯ ಚರಂಡಿಗಳನ್ನು ಕಟ್ಟುತಕ್ಕ ಬಗ್ಗೆ ಜೇರ್ವೆರಿಂದ ಕೊಡಲ್ಪಡುವ ನೋಟೀಸ್ ತನಿಗೆ ಜಾರಿಯಾದ ತಾರೀಖು ಲಾಗಾಯಿತು 30 ದಿವಸಗಳ ಬಳಿಗಾಗಿ ಅಂಥ ಚರಂಡಿಗಳನ್ನು ಒದಗಿಸುವದಕ್ಕೂ ವ ಕಟ್ಟುವದಕ್ಕೂ ಬದ್ಧನಾಗಿರುತ್ತಾನೆ. ತಪ್ಪಿದಲ್ಲಿ, ನಷ್ಟಕ್ಕೂ ಲಾಗವಡಿಗೂ, ಮಾಲೀಕನನ್ನು ಗುರಿಪಡಿಸಿ, ಅವಶ್ಯಕವಾದ ಚರಂಡಿ ಯ ಚರಂಡಿಗಳನ್ನು ಕಟ್ಟುವದಕ್ಕೆ ಅಪ್ಪಣೆ ಮಾಡಲು ಬೋರ್ಡಿನವರು ಅರ್ಹರಾಗಿರುವರು.

ಗುಡುಸಲುಗಳು, ಜೋಪಡಿಗಳು ಯ ಸಾಲ್ಕಟ್ಟಡಗಳು.

20. ಮನುಷ್ಯರ ವಾಸಕ್ಕಾಗಿಯಾದರೂ ಯ ಲಾಯಗಳಿಗಾದರೂ ಯ ಬೇರೆ ಯಾವಕೆಲಸಗಳಿಗಾದರೂ ಉಪಯೋಗಿಸ ಲ್ಪಡಬೇಕೆಂದಿರುವ ಗುಡಸಲುಗಳು ಯ ಜೋಪಡಿಗಳು ಅಥವಾ ಗುಡಸಲುಗಳ ಯ ಜೋಪಡಿಗಳ ಸಾಲುಗಳು ಯ ಗುಂಪುಗಳು, ಇವುಗಳನ್ನು ಕಟ್ಟುತಕ್ಕ ಪ್ರತಿ ಯೊಬ್ಬ ಮನುಷ್ಯನು, ಅಂಥವುಗಳನ್ನು, ಜೇರ್ವೆರು ಅಪೇಕ್ಷಿಸಿದಲ್ಲಿ, ಅವುಗಳು ಕ್ರಮವಾದ ಶ್ರೇಣಿಗಳಾಗಿರುವಂತೆಯೂ ;

1) ಅಂಥ ಪ್ರತಿ ಎರಡು ಶ್ರೇಣಿಗಳ ಮುಂಗಡೆಯೂ, ಮಧ್ಯದಲ್ಲಿಯೂ, ಗಾಳಿ ಬೀಸುವದಕ್ಕೂ ಮತ್ತು ಕಜರಾ ಎತ್ತುವದು ಸುಲಭವಾಗುವದಕ್ಕೂ ಎಷ್ಟು ಅಗಲವಿರಬೇಕೆಂದು ಜೇರ್ವೆರು ಅಪ್ಪಣೆ ಮಾಡುತ್ತಾರೋ ಅಷ್ಟು ಅಗಲವುಳ್ಳಂಥ ಧಾರಾಳವಾದ ದಾರಿ ಯ ಮಾರ್ಗವನ್ನು ಉಂಟುಮಾಡ್ದಾಗಿಯೂ ;

(2) ಜೇರ್ವೆರು ಅಪೇಕ್ಷಿಸುವಂಥ ವ ಅಪೇಕ್ಷಿಸುವಷ್ಟು ಪಾಯಿಖಾನೆಗಳು, ಕಕ್ಕಸುಗಳು ಯ ಪಿಷಾಬ್‌ಖಾನೆಗಳು ಮತ್ತು ಬಚ್ಚಲು ನೀರು ಹರಿದು ಹೋಗಲಿಕ್ಕೆ ಅಧಾರಗಳು, ಇವುಗಳನ್ನು ಉಂಟುಮಾದದ್ದಾಗಿಯೂ ;

ಪಾಯಿಖಾನೆಗಳನ್ನು ಕಟ್ಟುತಕ್ಕ ವಿಷಯ

(3) ನೀರು ಹರಿದು ಹೋಗುವ ಅನುಕೂಲಕ್ಕೆ ಸಾಕಾದಷ್ಟು ಮಟ್ಟದಲ್ಲಿರುವಂಥಾದ್ದಾಗಿಯೂ ; ಕಟ್ಟುತಕ್ಕದ್ದು.

ಪಾಯಿಖಾನೆಯು ವಸತಿ.

21. ಬಂದು ಹೊಸಕಟ್ಟಡವನ್ನು ಕಟ್ಟುತಕ್ಕ ಮನುಷ್ಯನು ಅಂಥ ಕಟ್ಟ ಡ ಸಂಬಂಧವಾಗಿ, ಆಯಾ ಸಂದರ್ಭದಲ್ಲಿ ಜೇರ್ವೆರಿಂದ ನಿರ್ಧರಿಸಲ್ಪಟ್ಟು, ಅವಶ್ಯ ಕವಾಗಿರುವಷ್ಟು ಪಾಯಿಖಾನೆ ಯ ಪಾಯಿಖಾನೆಗಳನ್ನು ಕಟ್ಟುತಕ್ಕದ್ದು.

ಪಾಯಿಖಾನೆಗಳ ಜಾಗ.

22. ಬಂದು ಕಟ್ಟಡದ ಸಂಬಂಧವಾಗಿಯಾಗಲಿ, ಅಥವಾ ಸಂಬಂಧವಿಲ್ಲದೆ ಯಾಗಲಿ, ಹೊಸ ಪಾಯಿಖಾನೆಯನ್ನು ಕಟ್ಟುತಕ್ಕ ಮನುಷ್ಯನು, ಅಂಥ ಪಾಯಿಖಾ ನೆಯನ್ನು ಜೇರ್ವೆರಿಂದ ಮಂಜೂರ್ಮಾಡಲ್ಪಡುವ ಜಾಗ ಯಾ ಸ್ಥಳದಲ್ಲಿಯೇ ಕಟ್ಟು ತಕ್ಕದ್ದು.

23. ಒಂದು ಕಟ್ಟಡದ ಸಂಬಂಧವಾಗಿ, ಯಾವ ಮನುಷ್ಯನು ಪಾಯಿಖಾನೆಯನ್ನು ಕಟ್ಟುವನೋ ಅಂಥವನು ಜೇರ್ವರ್ಕರ ಬರಹವ್ಯೂಲಕವಾದ ಅಪ್ಪಣೆ ಇಲ್ಲದೆ, ಯಾವದಾದರೂ ಭೂವಿಗೆ, ಬುಗ್ಗೆಗೆ, ಕೆರೆಗೆ ಅಥವಾ ಕುಡಿಯುವದಕ್ಕಾಗಲಿ, ಯಾ ಗೃಹಕೃತ್ಯದ ಕೆಲಸಗಳಿಗಾಗಲಿ, ಯಾ ಮನುಷ್ಯನ ಉಪಯೋಗಕ್ಕೆ ತಯಾರಾಗುತಕ್ಕ ಪಾನಗಳಿಗಾಗಲಿ ಮನುಷ್ಯನಿಂದ ಉಪಯೋಗಿಸಲ್ಪಡುವ ಯಾ ಉಪಯೋಗಿಸಲ್ಪಡಬಹುದಾದ ನೀರಿನ ಕಾಲುವೆ 20 ಅಡಿ ಘಾಸಲೆಯೊಳಗಾದರೂ, ಅಥವಾ ಅಂಥ ನೀರನ್ನು ಕೆಡಿಸಲು ಆಸ್ಪದವನ್ನು ಉಂಟುಮಾಡುವಂಥ ಬೇರೆ ಯಾವ ಸ್ಥಳದಲ್ಲಿ ಯಾದರೂ, ಅಂಥ ಪಾಯಿಖಾನೆಯನ್ನು ಕಟ್ಟಕೂಡದು.

ನೀರಿನ ಸರಬರಾಯಿನ ಎಡೆಗೆ ಪಾಯಿಖಾನೆಗಳು ಸವಿಾಪದಲ್ಲಿರುವಿಕೆ.

24. ಒಂದು ಕಟ್ಟಡದ ಸಂಬಂಧವಾಗಿ ಕಕ್ಕಸನ್ನು ಕಟ್ಟುತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ಕಕ್ಕಸನ್ನು ಅದರ ಪ್ರವೇಶದ ಕಡೆ ವಿನಹ ಪ್ರತಿಯೊಂದು ಕಡೆಯೆಲ್ಲೂ, ಅಡ್ಡಗಲದಲ್ಲಿ 3 ಅಡಿಗೆ ಕಡಿಮೆ ಇಲ್ಲದೆ, ಮತ್ತು ಅಂತರಿಕ್ಷಕ್ಕೆ ತೆರೆಯಲ್ಪಟ್ಟು; ಬಾಲಿ ಸ್ಥಳವು ಬಿಟ್ಟಿರುವಂತೆ ಕಟ್ಟುತಕ್ಕದ್ದು. ಅಂಥ ಪ್ರವೇಶದ ಕಡೆ, ಅಂಥ ಕಕ್ಕಸಿನೊಳಗೆ ಹೋಗುವ ಗ್ಯಾಲರಿ ಯಾನೆ ಅಂತರ್ದ್ವಾರ ಯಾ ಮಾರ್ಗವು, ಅಗಲದಲ್ಲಿ 2 ಅಡಿಗೆ ಕಡಿಮೆ ಇಲ್ಲದಂತೆಯೂ, ಮತ್ತು ಉಭಯ ಪಾರ್ಶ್ವದಲ್ಲೂ ಹೊರಗಡೆಯ ಗಾಳಿಗೆ ತೆರೆಯಲ್ಪಟ್ಟದ್ದಾಗಿಯೂ, ಇರತಕ್ಕದ್ದು.

ಕಕ್ಕಸುಗಳ ನುತ್ತಲು ಇರಬೇಕಾದ ಬೈಲು ಪ್ರದೇಶ.

25. ಒಂದು ಕಟ್ಟಡದ ಸಂಬಂಧವಾಗಿ ಕಕ್ಕಸನ್ನು ಕಟ್ಟುತಕ್ಕ ಪ್ರತಿಯೊಬ್ಬ ಮನುಷ್ಯನು ಜೇರ್ವರ್ಕರಿಗೆ ಸವಾಧಾನವಾಗುವಂತೆ ಗಾಳಿ ಜಲನೆಗೆ ಸಾಕಾದಷ್ಟು ದ್ವಾರ ಯಾ ದ್ವಾರಗಳನ್ನು ಅಂಥ ಕಕ್ಕಸಿಗೆ ಇಡತಕ್ಕದ್ದು. ಅಂಥ ದ್ವಾರ ಯಾ ದ್ವಾರಗಳು, ಮೇಲ್ಛಾಗಕ್ಕೆ ಸಾಧ್ಯವಾದ ಮಟ್ಟಿಗೂ ಸವಿಾಪದಲ್ಲಿರುವದಾಗಿಯೂ, ಮತ್ತು ನೇರವಾಗಿ ಹೊರಗಿನ ಗಾಳಿಯ ಸಂಪರ್ಕವನ್ನು ಉಂಟಾದ್ದಾಗಿಯೂ, ಇರತಕ್ಕದ್ದು.

ಕಕ್ಕಸುಗಳ ಗಾಳಿಯ ಜಲನೆ.

26. ಯಾವ ಮನುಷ್ಯನಾದರೂ ಹಳೆ ಯಾ ಹೊಸ ಕಕ್ಕಸಿನ ಮೇಲ್ಗಡೆ ಮತ್ತೊಂದು ಕಕ್ಕಸು ಯಾ ಸ್ನಾನದ ಸ್ಥಳ ಯಾ ಬಚ್ಚಲುಮನೆ, ಇವುಗಳನ್ನು ವಿನಹಾ ಯಾವ ಕೋಡಿಯನ್ನು ಯಾ ಕಟ್ಟಣವನ್ನು ಕಟ್ಟಕೂಡದು.

ಕಕ್ಕಸಿನ ಮೇಲೆ ಯಾವ ಕೊಠಡಿಯು ಕಟ್ಟಲ್ಪಡಕೂಡದು.

27. ಒಂದು ಮನೆಯ ಆವರಣದೊಳಗೆ ಮತ್ತು ಅದರ ಸವಿಾಪದಲ್ಲಿ ಇರತಕ್ಕ ಗಲೀಜಾದ ಪಾಯಿಖಾನೆ ಗುಂಡಿಗಳು ವ ರೊಚ್ಚೆ ಗುಂಡಿಗಳು, ವಿಶೇಷ ಸಂದರ್ಭ ಯಾ ಸಂದರ್ಭಗಳಲ್ಲಿ ವಾಯಿದೆಯನ್ನು ಬತಾಯಿಸತಕ್ಕದ್ದು ಅವಶ್ಯಕವೆಂದು ಜೇರ್ವರ್ಕರು ಎಣಿಸಿದ ಹೊತ್ತು, ಸದರಿ ಜೇರ್ವರ್ಕರಿಂದ ಆ ಬಗ್ಯೆ ಕೊಡಲ್ಪಡುವ ನೋಟೀಸಿನ ಎರಡು ದಿನಗಳೊಳಗಾಗಿ, ಪಾಕ ಮಾಡಲ್ಪಟ್ಟು ಮುಚ್ಚಲ್ಪಡತಕ್ಕದ್ದು.

ಪಾಯಿಖಾನೆ ವ ಗೊಬ್ಬರದ ಗುಂಡಿಗಳನ್ನು ಪಾಕೀಜು ಮಾಡುವಿಕೆ.

28. ಕಟ್ಟಿದ ಕಾವುಗಾರಿ ನಡಿಯುತ್ತಿರುವಾಗಾಗಲೀ, ಅಥವಾ ಕಟ್ಟಡವು ಪೂರೈಸಿದ ಮೇಲಾಗಲೀ ಯಾವ ದಾದರು ಯುಕ್ತವಾದ ಕಾಲದಲ್ಲಿ, ಜೇರ್ವರ್ಕರಿಂದ; ಅಂಥಾ ಕಟ್ಟಿದ ಕಟ್ಟುವಿಕೆಯು ಹೊಸ ಕಟ್ಟಡಗಳಿಗೆ ಸಂಬಂಧಿಸುವ ಯಾವದಾದರೂ ಉಪನಿಬಂಧನೆಗೆ ವಿರೋಧವಾಗಿರಬದುದಾದಂಥ ವಿಷಯವನ್ನು ನವೂದು ಮಾಡಿರುವದಾಗಿಯೂ, ಮತ್ತು ನವೂದು ಮಾಡಲ್ಪಡುವ ಯುಕ್ತವಾದ ಒಂದು ಗಡವಿನಲ್ಲಿ ಯಾವದಾದರೂ ಮಾಡಿರುವದನ್ನು ಯಾ ಬಿಟ್ಟಿರುವದನ್ನೂ, ಸದರಿ ಉಪನಿಬಂಧನೆಗೆ ಅನುಗುಣವಾಗಿ ಸರಿಪಡಿಸುವಂತೆ ನಿಯಮಿಸುವದಾಗಿಯೂ, ಇರುವ ನೋಟೀಸನ್ನು ಯಾವ ಮನುಷ್ಯನು ಹೊಂದುತ್ತಾನೆಯೋ, ಅಂಥ ಮನುಷ್ಯನು, ಅಂಥ ಪ್ರತಿಯೊಂದು ಸಂದರ್ಭದಲ್ಲೂ, ಸದರಿ ನಿಯಮಾವಳಿಗಳು ಅಂಥ ಕಟ್ಟಿದ ಕಟ್ಟುವಿಕೆಯು ಅಂಥ ಯಾವದಾದರು ಉಪನಿಬಂಧನೆಗೆ ವಿರುದ್ಧವಾಗಿರಬಹುದಾದ ಅಂಕಗಳಿಗೆ ಎಷ್ಟರಮಟ್ಟಿಗೆ ಸಂಬಂಧಿಸುತ್ತವೋ, ಅಷ್ಟರ ಮಟ್ಟಿಗೆ, ಅಂಥ ನೋಟೀಸಿನಲ್ಲಿ ನವೂದಾದ ವಾಯಿದೆಯೊಳಗಾಗಿ, ಅದರಲ್ಲಿನ ನಿಯಾವುಕಗಳಿಂದೊಂದರ ಮೇರಿಗೂ, ನಡೆದುಕೊಳ್ಳತಕ್ಕದ್ದು.

ಉಪನಿಬಂಧನೆಗಳಿಗೆ ವಿರುದ್ಧವಾದ ನಡವಳಿಕೆಗಳನ್ನು ತಿದ್ದುಪಡಿ ಮಾಡತಕ್ಕದ್ದು.

29. ಅಂಥ ಯಾವದಾದರೂ ನಿಯಾವುಕದ ಮೇರಿಗೆ ನಡಿಸಲ್ಪಟ್ಟ ಕೆಲಸವು ಪೂರೈಸಿದ ಮೇಲೆ, ಒಂದು ನ್ಯಾಯವಾದ ವಾಯಿದೆಯೊಳಗಾಗಿ, ಅಂಥ ಮನುಷ್ಯನು ಜೇರ್ವರ್ಕರಿಗೆ ಆಫಿಸಿನಲ್ಲಿ, ಬರಹವ್ಯೂಲಕ ಅಂಥ ಕೆಲಸವು ಪೂರೈಸಿದ ಬಗ್ಯೆ ನೋಟಿಸನ್ನು ತಂದು ಕೊಡತಕ್ಕದ್ದು ಯಾ ಕಳುಹಿಸತಕ್ಕದ್ದು. ಅಥವಾ ತಂದುಕೊಡುವಂತೆಯಾದರೂ ಯಾ ಕಳುಹಿಸುವಂತೆಯಾದರೂ ಮಾಡತಕ್ಕದ್ದು.

ತಿದ್ದುಪಾಡುಗಳು ಪೂರೈಸಿದ ಬಗ್ಯೆ ನೋಟಿಸ್.

30. ಒಂದು ಕಟ್ಟಡವನ್ನು ಕಟ್ಟುತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ಕಟ್ಟಡವನ್ನು ಕಟ್ಟಿದ್ದು ಪೂರೈಸಿದ ನಂತರ, ಒಂದು ತಿಂಗಳೊಳಗಾಗಿ, ಅಂಥ ಕಟ್ಟಡದ ಕಟ್ಟುವಿಕೆಯು ಪೂರೈಸಿದ ಬಗ್ಯೆ, ಲಿಖಿತವ್ಯೂಲಕ, ಜೇರ್ವರ್ಕರಿಗೆ ಆಫೀಸಿನಲ್ಲಿ, ನೋಟೀಸನ್ನು ತಂದುಕೊಡತಕ್ಕದ್ದು ಯಾ ಕಳುಹಿಸಿಕೊಡತಕ್ಕದ್ದು, ಅಥವಾ ತಂದುಕೊಡುವಂತೆ ಯಾಗಲಿ ಕಳುಹಿಸಿಕೊಡುವಂತೆಯಾಗಲಿ ಮಾಡತಕ್ಕದ್ದು.

ಕಟ್ಟಡಗಳು ಪೂರೈಸಿದ ಬಗ್ಯೆ ನೋಟಿಸ್.

377

31. ಉದ್ದೇಶಿಸಿರುವ ಹೊಸ ಬಡಾವಣೆಗಳೆಲ್ಲವೂ, ಮತ್ತು ಸಪಕಾರಯಾದ ಸಂದರ್ಭಗಳಿಗನುಗುಣವಾಗಿ ಷಹರ್‌ನಲ್ಲಿ ಎಲ್ಲಿ ಸಾಧ್ಯವೋ, ಅಂಥ ದರೋಬಸ್ತು ಪ್ರದೇಶಗಳಲ್ಲಿಯೂ, ಹೊಸದಾಗಿ ಕಟ್ಟಲ್ಪಡತಕ್ಕ ಪ್ರತಿಯೊಂದು ವಾಸದ ವಠಾರವು, ಸುತ್ತಮುತ್ತಲೂ ಹೊರಗಿನ ಗಾಳಿಯ ಸಂಪರ್ಕವನ್ನುಂಟಾಗಿರುವಂತೆ ಇರತಕ್ಕದ್ದು.

32. ಯಾವನು ಮೇಲ್ಕಂಡ ಉಪನಿಬಂಧನೆಗಳ ಸಮಾಧಾನಾರ್ಥವಾಗಿ, ಒಂದು ಹೊಸ ಕಟ್ಟಡದ ಬಗ್ಯೆ ಲೈಸೆನ್ಸನ್ನು ಕೊಡಲ್ಪಟ್ಟವನಾಗಿ, ಸದರಿ ಕಟ್ಟಡವನ್ನು ಆರು ತಿಂಗಳಿಗೆ ಮೇಲ್ಪಟ್ಟುಂಥಾ ಯಾವ ಕಾಲದ ಪರಿಯಂತರವಾಗಲಿ ಪೂರೈಸದೆ ಇರುತ್ತಾನೋ, ಅಂಥವನು ನೋಟಿಸು ಜಾರಿಯಾದ ನಂತರ ಸದರಿ ಕಟ್ಟಡವು ಪೂರ್ತಿಯಾಗುವದಕ್ಕೆ, ಟ್ರಸ್ಟಿಗಳಿಂದ ಗೊತ್ತುಮಾಡಲ್ಪಡುವ ಬಂದು ನ್ಯಾಯವಾದ ಗಡುವಿನಲ್ಲಿ ಅದನ್ನು ಮುಗಿಸಿ ಪೂರೈಸತಕ್ಕದ್ದು. ತಪ್ಪಿದಲ್ಲಿ, ಲಾಗವಡಿಗೂ ಮತ್ತು ನಷ್ಟಕ್ಕೂ ಮಾಲೀಕನನ್ನು ಗುರಿಪಡಿಸಿ, ಸದರಿ ಕಟ್ಟಡವನ್ನು ಮುಗಿಸುವದಕ್ಕೂ ಮತ್ತು ಅಂಥ ಕಾಂಗಾರಿಯ ಲಾಗವಡನ್ನು ಬರಮಾಡಿಕೊಳ್ಳುವದಕ್ಕೂ, ಅಥವಾ ಸದರಿ ಕಟ್ಟಡವನ್ನು ಕಿತ್ತುಹಾಕುವದಕ್ಕೂ, ಟ್ರಸ್ಟಿನವರು ಅರ್ಹರಾಗಿರುತ್ತಾರೆ.

33. ಉತ್ತಮವಾದ ಹವ ಯಾ ಆರೋಗ್ಯ, ಇವುಗಳ ನಿಮಿತ್ತವಾಗಿ ಕಟ್ಟಡವನ್ನು ರೂಪಾಂತರ ಪಡಿಸುವದಕ್ಕಾಗಲಿ ಯಾ ಗಾಳಿವಾಟವನ್ನು ಕಲ್ಪಿಸುವದಕ್ಕಾಗಲ, ಟ್ರಸ್ಟಿಗಳಿಂದ ಆಜ್ಞಾಪಿಸಲ್ಪಡಬಹುದಾದ ಯಾವ ಮನುಷ್ಯನಾದರು, ಆ ಮೇರಿಗೆ ಮಾಡತಕ್ಕ ಬಗ್ಯೆ ತನಿಗೆ ಚೇರ್‌ಮೆರಿಂದ ಕೊಡಲ್ಪಡುವ ನೋಟಿಸ್ ಜಾರಿಖಿನ ಬಂದು ತಿಂಗಳೊಳಗೆ, ಅಥವಾ ಚೇರ್‌ಮೆರಿಗೆ ತಡಾ ಸಂದರ್ಭಗಳ ಮೇರೆ ನೂಕ್ತವೆಂದು ತೋರುವಂಥ ಹೆಚ್ಚು ವಾಯಿದೆ ಳಗಾಗಿ, ಆ ಮೇರಿಗೆ ಮಾಡತಕ್ಕದ್ದು.

34. ಮೇಲ್ಕಂಡ ಬೈಲಾಸ್ ಯಾನೆ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡಿಯುವ ಪ್ರತಿಯೊಬ್ಬ ಮನುಷ್ಯನು 20 ರೂ ಸಾಯಿಗಳ ವರಿಗೆ ಆಗಬಹುದಾದ ಜುರ್ಮಾನೆಗೂ, ಮತ್ತು ನಡೆದುಕೊಂಡು ಬರುವ ತಪ್ಪಿತಕ್ಕೆ ಮೊದಲಿನ ತಪ್ಪು ಸ್ಥಾಪಿತವಾದ ನಂತರವಾಗಲಿ, ಅಥವಾ ನಿಬಂಧನೆಗೆ ವಿರುದ್ಧವಾಗಿ ನಡಿಯದಿರುವಂತೆ ಚೇರ್‌ಮೆರಿಂದ ಲಿಖಿತಮೂಲಕ ನೋಟಿಸ್ ತಲುಪಿದ ನಂತರವಾಗಲಿ, ಯಾವ ದಿನ ನಿಬಂಧನೆಗೆ ವಿರುದ್ಧವಾಗಿ ನಡಿಯುವದಾಗುತ್ತೋ, ಅಂಥ ಪ್ರತಿದಿನಕ್ಕೂ 10 ರೂಪಾಯಿಗಳ ವರಿಗೆ ಜುರ್ಮಾನೆಗೂ ಗುರಿಯಾಗುವನು.

ದಂಡನೆಗಳು.

35. ಮೇಲ್ಕಂಡ ಯಾವದಾದರೂ ಉಪನಿಬಂಧನೆಗಳ ಮೇರಿಗೆ, ಯಾವದಾದರು ಮಾಡುವಿಕೆಯು ಆಗಲಿ ಯಾ ಮಾಡದೆ ಇರುವಿಕೆಯು ಆಗಲಿ, ಅಥವಾ ಯಾವದಾದರೂ ನಡವಳಿಕೆಯ ಚೈತನ್ಯತ್ವವೇ ಆಗಲಿ, ಚೇರ್‌ಮೆರವರ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆಯ ಬಿಪ್ಪಿಕೆಯನ್ನು, ಆಕ್ಷೇಪಿಸಿರುವ ಪಕ್ಷದಲ್ಲಿ, ಚೇರ್‌ಮೆರಿಂದ ದಸ್ತಕ್ ಮಾಡಲ್ಪಟ್ಟು ಅವರ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆಯ ಬಿಪ್ಪಿಕೆಯನ್ನು ತಿಳಿಸುವ ಯಾ ತೋರ್ಪಡಿಸುವ ಬಂದು ಲಿಖಿತ ದಸ್ತ್ಯಾವೇಜು, ಅಂಥ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆ, ಯಾ ಬಿಪ್ಪಿಕೆಗೆ ಸಾಕಾದಷ್ಟು ಪ್ರಧಾನ ಸಾಕ್ಷ್ಯವಾಗಿರತಕ್ಕದ್ದು

ಅಧಿಕಾರ, ಕರ್ತವ್ಯ ಯ ಕೆಲಸದ ಚಲಾವಣೆ ಬಗ್ಯೆ ಸಾಕ್ಷ್ಯವು.

ಈ ಉಪನಿಬಂಧನೆಗಳ ಮೇರಿಗೆ, ಪರಿಮಾಣಗಳು, ವಿಧಿಸಲ್ಪಟ್ಟಿರುವ ದರೋಬಸ್ತು ಸಂದರ್ಭಗಳೆಲ್ಲವೂ ಸದರಿ ಪರಿಮಾಣಗಳನ್ನು ಆ ಬಗ್ಯೆ ದರಬಾಸ್ತು ಮಾಡಲ್ಪಟ್ಟಲ್ಲಿ, ಬದಲಾಯಿಸುವದಕ್ಕೆ ಅಪ್ಪಣೆ ಕೊಡಲು ಚೇರ್‌ಮೆರಿಗೆ ಅಧಿಕಾರವಿರತಕ್ಕದ್ದು.

Mysore Government Central Press, Bangalore.—1901.

378

1323

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಪ್ರಸಿದ್ಧ. [ನಂ: 36.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ॥ 8, ಸ॥ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕ್ಯಟ್ಕೋಲರವರು, ಪಬ್ಲಿಕ್ವರ್ಕ್ಸ್ ಆಫಿಸರ್ಗಳು, ಫಾರೆಸ್ಟು, ರೆಜಿಸ್ಟ್ರೇರ್ಷ ವ ಎಜ್ಯುಕೇರ್ಷ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜಿರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜಿರು, ಪೋಲೀಸ್ ಸೂಪರ್ಟೆಂಡೆಂಟರು, ಫಾರೆಸ್ಟು ಆಫಿಸರ್ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್ಗಳು ವಗ್ಯೆರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟ್ಆಫೀಸ್ ನೋಟಿಸ್ಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇರ್ಷಗಳು ವುತ್ತು ಅವುಗಳಿಂತೆ ಆದ ನಿಬಂಧನೆಗಳು.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನೆ ಭಾಗ.

ಮೈಸೂರು ಸೀಮೆಯ ಶ್ರೀಮಂ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 17—18ನೆ ಆಗಸ್ಟು 1904.

ನಂ. 1435—34-6—ಸ್ಯಾನಿಟೇರ್ಷ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ಮುರ್ತುಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಇದರಲೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.		ತಾಲ್ಲೂಕು.
1.	ಹಿರೆಗಿರಿಜಾ	... ಚಿಕ್ಕಮಗಳೂರು.
2.	ಕುರುಪಂಗಿ	.... ಡಿಟೋ
3.	ಲಕ್ಷ್ಮೆಂಪುರ	.. ಡಿಟೋ
4.	ಉಂಡದಿಹಳ್ಳಿ	... ಡಿಟೋ
5.	ಬಿಳಿಕಲ್ಹಳ್ಳಿ	ಡಿಟೋ
6.	ಸೂಗ್ನಹಳ್ಳಿ	.. ಡಿಟೋ
7.	ಕುನ್ನಾಲ್	... ಡಿಟೋ
8.	ಗುಡ್ಡೇನಹಳ್ಳಿ	.. ಡಿಟೋ
9.	ಹುಣಸವಳ್ಳಿ	.. ಡಿಟೋ
10.	ಚಿಕ್ಕಕುರುಬರಹಳ್ಳಿ	.. ಡಿಟೋ
11.	ಮುಗಲವಳ್ಳಿ	... ಡಿಟೋ
12.	ಚಿಕ್ಕಗಿರಿಜಾ	... ಡಿಟೋ
13.	ಉದ್ದೆಬೋರ್ನಹಳ್ಳಿ	.. ಡಿಟೋ
14.	ಸರಪನಹಳ್ಳಿ	.. ಚಿಕ್ಕಮಗಳೂರು.
15.	ಗಜ್ಜಗೊಂಡನಹಳ್ಳಿ	.. ತರೀಕೆರೆ.
16.	ಜಲ್ದಿಹಳ್ಳಿ	.. ಡಿಟೋ
17.	ಕೂಡ್ಲೂರು	... ಡಿಟೋ
18.	ಹೊನ್ನೆ	.. ಡಿಟೋ
19.	ನಾಗಾಪುರ	... ಡಿಟೋ
20.	ಹೊಸಹಳ್ಳಿ	... ಡಿಟೋ
21.	ನಾರಣಾಪುರ	.. ಡಿಟೋ
22.	ತಿಪ್ಪಗೇನಹಳ್ಳಿ	.. ಡಿಟೋ
23.	ಗಡಿಹಳ್ಳಿ	.. ಡಿಟೋ
24.	ಸಕ್ಕಾಟ್ಟಣ	.. ಕಡೂರು.
25.	ವಿಟಲಾಪುರ	.. ಡಿಟೋ

ತಾರೀಖು 17ನೆ ಆಗಸ್ಟ್ 1904.

ನಂ. 1424—58-2—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1893ನೆ ಫೆಬ್ರವರಿ 10ನೆ ಮಾರ್ಚಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಮೈಸೂರ ಡಿಸ್ಟ್ರಿಕ್ಟ್‌ನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1.	ಕೊತ್ತಗಾಲ	... ಟಿ. ನರಸೀಪುರ.	7.	ಹುಲ್ಲಮದನಹಳ್ಳಿ	ಗುಂಡ್ಲು ಪೇಟೆ.
2.	ದೊಡ್ಡಾಪುರ	ಡಿಟೋ	8.	ಅಂಬ್ಯಗಾಡ್ನ ಕೊಪ್ಪಲ್	... ಫೈಂಬ್ರಾಕ್ಸ್ನ (ಸಬ್ ತಾಲ್ಲೂಕು.)
3.	ದೊಡ್ಡ ಬಾಗಿಲ್	ಡಿಟೋ			
4.	ದೊಡ್ಡಬ್ಯಾಡ್ರಹಳ್ಳಿ	ಶ್ರೀರಂಗಪಟ್ಣ.	9.	ಲಾಲ್ಕದೇವನಪಳ್ಳಿ	.. ಯಡತೊರೆ.
5.	ಹುಲಿಪುರ	.. ಚಾಮರಾಜನಗರ.	10.	ಮುಬ್ಬಳ್ಳಿ	.. ನಂಜಿನಗೂಡು.
6.	ಗೋಪಾಲಪುರ	... ಗುಂಡ್ಲು ಪೇಟೆ.			

ತಾರೀಖು 19—20ನೆ ಆಗಸ್ಟ್ 1904.

ನಂ. 1494—16-4—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1893ನೆ ಫೆಬ್ರವರಿ 10ನೆ ಮಾರ್ಚಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಹಾಸನದ ಡಿಸ್ಟ್ರಿಕ್ಟ್‌ನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1.	ಹೊಳೆ ನರಸೀಪುರ ಟವನು	.. ಹೊಳೆನರಸೀಪುರ.	7.	ಒಡ್ಡರಹಟ್ಟಿ	.. ಅರಸೀಕೆರೆ.
2.	ಕಂದಲಿಕೊಪ್ಪಲು	.. ಹಾಸನ.	8.	ತಿರುಪತಿಹಳ್ಳಿ	... ಡಿಟೋ
3.	ಬಂಸವಳ್ಳಿ	ತಿಲೂರು (ಸಬ್ ತಾಲ್ಲೂಕು.)	9.	ಯಾಪಸಂದಿ	.. ದೇಲೂರು.
			10.	ದೇವಿಹಳ್ಳಿ	.. ಹಾಸನ.
4.	ಹನುಮನಹಳ್ಳಿ	.. ಡಿಟೋ	11.	ದೊಡ್ಡಬಸವನಹಳ್ಳಿ	... ಡಿಟೋ
5.	ಸಿದ್ದಾಪುರ	.. ಡಿಟೋ	12.	ಅಂಬುಗಟ್ಟು ಕೊಪ್ಪಲು	.. ಡಿಟೋ
6.	ತಿಮ್ಮನಕೊಪ್ಪಲು	... ಡಿಟೋ			

ತಾರೀಖು 20—22ನೆ ಆಗಸ್ಟ್ 1904.

ನಂ 1552—18-4—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮಾರ್ಚಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಕೋಲಾರ ಡಿಸ್ಟ್ರಿಕ್ಟ್‌ನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1.	ಮಂಜೇನಹಳ್ಳಿ	... ಗೋರಿಬಿದನೂರು.	6.	ಕಾವರ್ಹಳ್ಳಿ	.. ಚಿಕ್ಕಬಳ್ಳಾಪುರ.
2.	ಹಳೆಗುಡಿಪಂಡೆ	.. ಗುಡಿಬಂಡೆ (ಸಬ್ ತಾ||)	7.	ಮೂಡಪ್ಪನಹಳ್ಳಿ	... ಡಿಟೋ
3.	ಕಾವರೆಡ್ಡಿಹಳ್ಳಿ	... ಡಿಟೋ	8.	ಕಂಬಿಪುರ	... ಮಾಲೂರು.
4.	ಚಿಕ್ಕನಾರ್ಜೇರ್ಲು	.. ಡಿಟೋ	9.	ಹಂದಿಗೆರೆ	.. ಹಂದಿಗೆರೆ.
5.	ನೀಚಕಹಂದಹಳ್ಳಿ	.. ಡಿಟೋ	10.	ಮುಳಬಾಗಲ ಟವನು	.. ಮುಳಬಾಗಲು.

ತಾರೀಖು 22—23ನೆ ಆಗಸ್ಟ್ 1904.

ನಂ. 1602—17-9—ಸ್ಯಾನಿಟೇರ್ಸ, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ರೋಗ ತಗಲಿದ ಪ್ರದೇಶಗಳಾಗಿ ಆಗಾಗ್ಯೆ ಪ್ರಸಿದ್ಧಪಡಿಸಲ್ಪಟ್ಟ ಇದರಡೀ ಕಂಡ ಸ್ಥಳಗಳು 2 ತಿಂಗಳುಗಿಂತ ಜಾಸ್ತಿಯಾಗಿ ರೋಗವಿಲ್ಲದೆ ಇರುವದ್ದರಿಂದ ಅಂಥಾ ಪ್ರದೇಶಗಳ ಪಟ್ಟಿಯಿಂದ ವಜಾ ಮಾಡಲ್ಪಟ್ಟಿರುತ್ತವೆ :—

ತುಮಕೂರ ಡಿಸ್ಟ್ರಿಕ್ಟ್.

ಸ್ಥಳ.		ತಾಲ್ಲೂಕು.
1.	ಗೂಳೂರು ...	.. ತುಮಕೂರು.
2.	ಗೊಲ್ಲರಹಟ್ಟಿ (ಮುರಲೀನಹಳ್ಳಿಗೆ ಸೇರಿರುತ್ತೆ.)	.. ... ಡಿಟೋ
3.	ಉಪ್ಪಾರಪಾಳ್ಯ (ಚಿಕ್ಕ ತೊಟ್ಲಕೆರೆಗೆ ಸೇರಿರುತ್ತೆ.)	... .. ಡಿಟೋ
4.	ಮುತ್ತಸಂದ್ರ ...	.. ... ಡಿಟೋ
5.	ತುಮಕೂರ ಟವನು ..	... . ಡಿಟೋ
6.	ತಿಪಟೂರು ..	... . ತಿಪಟೂರು.
7.	ನೊಣವಿನಕೆರೆ ..	... . ಡಿಟೋ
8.	ಬಿದರೆ ..	.. .. .. ಗುಬ್ಬಿ.
9.	ತಿಂಗಳೂರು ..	.... ಮಧುಗಿರಿ.

380

1375

ತಾರೀಖು 20—22ನೆ ಆಗಸ್ಟು 1904.

ನಂ. 1554—30-4—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ಶಿವಮೊಗ್ಗ ಟವನು	..	ಶಿವಮೊಗ್ಗ.	19.	ದೊಡ್ಡಿಕೊಪ್ಪ	...	ಸೊರಬ.
2.	ಬಸವನ ಗಂಗೂರು	...	ಡಿಟೋ	20.	ದ್ವಾರವಳ್ಳಿ	...	ಡಿಟೋ
3.	ಮುಲ್ಲಕೆರೆ	..	ಡಿಟೋ	21.	ಹಿರೆಮೊಗದಿ	..	ಡಿಟೋ
4.	ಮಲಿಗೇನಹಳ್ಳಿ	..	ಡಿಟೋ	22.	ಹುರಳಿ	..	ಡಿಟೋ
5.	ನುಗ್ಗಿಹಳ್ಳಿ	..	ಚನ್ನಗಿರಿ.	23.	ಗಿಣಿವಾಲ	..	ಡಿಟೋ
6.	ರಾಜಗೊಂಡನಹಳ್ಳಿ	..	ಡಿಟೋ	24.	ಭಾರಂಗಿ	..	ಡಿಟೋ
7.	ಹಿರೆಮದಳು	..	ಡಿಟೋ	25.	ಬಂಕಸಾನ	...	ಡಿಟೋ
8.	ತ್ಯಾವಣಿಗೆ	..	ಡಿಟೋ	26.	ಕೊಳಗುಣಾಸಿ	..	ಡಿಟೋ
9.	ತಿಪ್ಪಗೊಂಡನಹಳ್ಳಿ	..	ಡಿಟೋ	27.	ಹೊನ್ನಾಳಿ	..	ಹೊನ್ನಾಳಿ.
10.	ಹರಲಕಟ್ಟೆ	..	ಡಿಟೋ	28.	ಬೆಲಗುತ್ತಿ	..	ಡಿಟೋ
11.	ಕಡಸನಹಳ್ಳಿ	...	ಷಿಕಾರಿಪುರ.	29.	ಮುಗಳಿಹಳ್ಳಿ	...	ಡಿಟೋ
12.	ಮಳವಳ್ಳಿ	...	ಡಿಟೋ	30.	ಕೋಡಿಕೊಪ್ಪ	...	ಡಿಟೋ
13.	ಸಿರಿಹಳ್ಳಿ	..	ಡಿಟೋ	31.	ಮಲಿಗೇನಹಳ್ಳಿ	..	ಡಿಟೋ
14.	ಮುಲುಕೊಪ್ಪ	..	ಡಿಟೋ	32.	ತೀರ್ಥಹಳ್ಳಿ	..	ತೀರ್ಥಹಳ್ಳಿ.
15.	ನರಸಾಪುರ	..	ಡಿಟೋ	33.	ಹುಮಚದಕಟ್ಟೆ	..	ಡಿಟೋ
16.	ಯಲಿವಾಳ	....	ಸೊರಬ.	34.	ಮಾಲೂರು	..	ಡಿಟೋ
17.	ಮುದಿದೊಡ್ಡಿಕೊಪ್ಪ	...	ಡಿಟೋ	35.	ಮುನಿಯೂರು	...	ಡಿಟೋ
18.	ನಿರಲಾಗಿ	....	ಡಿಟೋ				

ತಾರೀಖು 23—26ನೆ ಆಗಸ್ಟು 1904.

ನಂ. 1617—17-10—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21—96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು:—

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ಹುಲಿಕಟ್ಟೆ	...	ತಿಪಟೂರು.	7.	ಹರಿಯಪ್ಪನಪಾಳ್ಯ	..	ತುಮಕೂರು.
2.	ಅಜ್ಜಗಾನಹಳ್ಳಿ	...	ತುಮಕೂರು.	8.	ಕಿಟ್ಟಗಾನಹಳ್ಳಿ	...	ಡಿಟೋ
3.	ಹೆಬ್ಬೂರು	...	ಡಿಟೋ	9.	ಮೂಗನಾಯಿಕನಕೋಟೆ	...	ಗುಬ್ಬಿ.
4.	ಕರ	...	ಡಿಟೋ	10.	ಹಲಸಿನನಾಗನಹಳ್ಳಿ	..	ಡಿಟೋ
5.	ರಾವನಹಳ್ಳಿ	...	ಡಿಟೋ	11.	ಕಡಬಾ	...	ಡಿಟೋ
6.	ದೊಡ್ಡಗುಣಿ	...	ಡಿಟೋ	12.	ಸೂಳೆಕೆರೆ	...	ತುರುವೇಕೆರೆ ಸ|| ತಾ||

ತಾರೀಖು 31ನೆ ಆಗಸ್ಟ್—1ನೆ ಸೆಪ್ಟಂಬರ್ 1904.

ನಂ. 1833—17-12—ಸ್ಯಾನಿಟೇಷನ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇಷನ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇಷನ್‌ಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

	ಸ್ಥಳ.		ತಾಲ್ಲೂಕು.		ಸ್ಥಳ.		ತಾಲ್ಲೂಕು.
1.	ಅಮ್ಮನಘಟ್ಟಕ್ಕೆ ಸೇರಿದ ಗೊಲ್ಲರಹಟ್ಟಿ	..	ಗುಬ್ಬಿ.	2.	ಚೆನ್ನಸೆಟ್ಟಿಹಳ್ಳಿ	...	ಗುಬ್ಬಿ.

ತಾರೀಖು 7ನೆ ಸೆಪ್ಟಂಬರ್ 1904.

ನಂ. 1989—83-2—ಸ್ಯಾನಿಟೇಷನ್, ಮುಳಬಾಗಲನಲ್ಲಿ ಪ್ಲೇಗ್ ರೋಗವು ಇಧೆಯೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದಲೂ ಮತ್ತು ಅದರ ವ್ಯಾಪಕವನ್ನು ಅಡ್ಡೀಪಡಿಸಬೇಕಾಗಿರುವದ್ದರಿಂದಲೂ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 11ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ್ ತಾಲ್ಲೂಕು ಮುಳಬಾಗಲ್ ಟವನ್ನಲ್ಲಿರುವ ಹೈದರಲ್ಲಿ ದರ್ಗಾವಿನಲ್ಲಿ 1904ನೆ ಸೆಪ್ಟಂಬರ್ 11ರ ಲಾಗಾಯತು 29ರ ವರಿವಿಗೆ ನಡೆಯುವ ಉರ್ಸಿಗೆ ಹೊರಗಿನಿಂದ ಜನಗಳು ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡೀ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಉರ್ಸಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 31ನೆ ಆಗಸ್ಟು—1ನೆ ಸೆಪ್ಟಂಬರ್ 1904.

ನಂ. 1835-35-6—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ್ ಅನುಸರಿಸಿ 1898ನೆ ಫೆಬ್ರವರಿ 10ನೆ ಮರ್ಕುಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರ್ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷ್‌ಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

	ಸ್ಥಳ.	ತಾಲ್ಲೂಕು.		ಸ್ಥಳ.	ತಾಲ್ಲೂಕು.
1.	ಭರ್ಮಸಾಗರ	... ಚಿತ್ರದುರ್ಗ.	8.	ಕವಾಡಿಗರ ಹಟ್ಟಿ	... ಚಿತ್ರದುರ್ಗ.
2.	ಕೋಗುಂಡಿ	... ಡಿಟೋ	9.	ಹಲಿಯೂರು	... ಡಿಟೋ
3.	ಬಲ್ಲೆಕಟ್ಟೆ	.... ಡಿಟೋ	10.	ಜಗಳೂರು ಗೊಲ್ಲರಹಟ್ಟಿ	.. ಜಗಳೂರು.
4.	ಕಾಟಹಳ್ಳಿ	... ಡಿಟೋ	11.	ಸುಳ್ಳೋಬನಹಳ್ಳಿ	.. ಡಿಟೋ
5.	ಹೊಸಹಳ್ಳಿ ಗೊಲ್ಲರಹಟ್ಟಿ	... ಡಿಟೋ	12.	ಮೆದ್ದೇರು	.. ಹೊಳಲಕೆರೆ.
6.	ಸಿದ್ದಾಪುರ ಗೊಲ್ಲರಹಟ್ಟಿ	.. ಡಿಟೋ	13.	ಕಡೂರು	.. ಡಿಟೋ
7.	ಜಾಲಿಕಟ್ಟೆ	.. ಡಿಟೋ			

ತಾರೀಖು 2—3ನೆ ಸೆಪ್ಟಂಬರ್ 1904.

ನಂ. 1889-22-15—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ಯಾತ್ರಾರ್ಥವಾಗಿ ಹೋಗುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ಉಚ್ಚಂಗಮ್ಮನ ಉತ್ಸವ.	ಉಚ್ಚಂಗಿ ದುರ್ಗ.	ಹರಪನಹಲ್ಲಿ	ಬಳ್ಳಾರಿ.	5—10—04	25—10—04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎನ್‌ಡಾರ್ಸ್‌ಮೆಂಟ್‌ನಂ. 1094-ಪಿ., ತಾ॥ 27-8-04.

ತಾರೀಖು 2—3ನೆ ಸೆಪ್ಟಂಬರ್ 1904.

ನಂ. 1890—22-16—ಸ್ಯಾನಿಟೇರ್ಷ್, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಉತ್ಸವಕ್ಕೆ ರೋಗತಗಲಿದ *ಪ್ರದೇಶಗಳಿಂದ ಜನಗಳು ಬರುವದನ್ನು ಮದರಾಸು ಗವರ್ನಮೆಂಟಿನವರು ಅಡ್ಡೀಪಡಿಸುತ್ತಾರೆ :—

ಜಾತ್ರೆಯ ಹೆಸರು.	ಸ್ಥಳ.	ತಾಲ್ಲೂಕು.	ಡಿಸ್ಟ್ರಿಕ್ಟು.	ತಾರೀಖು.		ಅಥಾರಿಟಿ.
				ಯಾವ ಲಾಗಾಯತು.	ಯಾವ ವರಿವಿಗೆ.	
ತಳಕಾವೇರಿ ಉತ್ಸವ.	ಮಾಯವರಂ.	...	ತಂಜಾವೂರು.	10—10—04	14—11—04	ಫಸ್ಟ್ ಅಸಿಸ್ಟೆಂಟ್ ರೆಸಿಡೆಂಟರವರ ಎನ್‌ಡಾರ್ಸ್‌ಮೆಂಟ್ ನಂ. 1092-ಪಿ., ತಾ॥ 27-8-04

* ಷರಾ:—ಮದರಾಸು ಪ್ರೆಸಿಡೆನ್ಸಿಯ ಅನಂತಪುರ, ಬಳ್ಳಾರಿ, ಕೊಯಿಮುತ್ತೂರು, ಕಡಪ, ಉತ್ತರ ಆರ್ಕಾಡು, ಸೇಲಂ, ದಕ್ಷಿಣ ಕನ್ನಡ, ವ ನೀಲಗಿರಿ ಡಿಸ್ಟ್ರಿಕ್ಟುಗಳು ಮತ್ತು ಮೈಸೂರ ಸಂಸ್ಥಾನ.

ತಾರೀಖು 31ನೆ ಆಗಸ್ಟು 1904.

ನಂ. ಜು. 611—ಪೊಲೀಸ್. 54-2, ಪೊಲೀಸ್ ಅಸಿಸ್ಟೆಂಟ್ ಸೂಪರ್ಟಿಂಡೆಂಟರಾದ ಮೆ॥ ಸಿ. ಡಿ. ರಾಮಸ್ವಾಮಯ್ಯನವರು ಫ್ರೆಂಚ್‌ರಾಕ್ಸ್ ಸಬ್ ಡಿವೀಜನಿಗೆ ವರ್ಗ ಮಾಡಲ್ಪಟ್ಟಿರುತ್ತಾರೆ.

ನಂ. 1781—19-5—ಎಜ್ಯು., ಲ್ಯಾಂಡ್ ಅಕ್ವಿಜೇಷ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನೆಂದರೆ, ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಮನೆಗಳು ಮತ್ತು ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಚನ್ನಗಿರಿಯಲ್ಲಿ ಆಂಗ್ಲೋ ವರ್ನಾಕ್ಯುಲರ್ ಪಾಠಶಾಲೆಯನ್ನು ಕಟ್ಟುವ ಬಗ್ಗೆ ಬೇಕಾಗಿರುತ್ತದೆ. ಆವಮೊಗ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರು ಸದರೀ ಜಮೀನುಗಳನ್ನು ಹೊಂದುವ ಬಗ್ಗೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮಾಲೀಕರ ಹೆಸರು.	ತೆಗದುಕೊಳ್ಳಬೇಕಾಗಿರುವ ಸ್ವತ್ತಿನ ವಿವರ.	ವಿಸ್ತೀರ್ಣ ಗಜಗಳು.		ಚಕ್ಕುಬಂದಿ.			
						ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
ಶಿವಮೊಗ್ಗೆ	ಚನ್ನಗಿರಿ	ಚನ್ನಗಿರಿ	ಚನ್ನಗಿರಿ	1. ಜಲಾಲ್‌ಖಾ ..	3 ಅಂಕಣಗಳ ಹೆಂಚಿನ ಮನೆ ..	8	33	ಸೈಯದ್ ಇಮಾಮಿನ ಖಾಲಿ ಜಮೀನು	ಗರೀಬ್‌ಷಾವಿನ ಮನೆ	ರಸ್ತೆ	ರಸ್ತೆ
				2. ಡಿಟೋ ..	ಖಾಲಿ ಜಮೀನು ..	10	33				
				3. ಬೊಮ್ಮ್ಯ ಬಿ ದುಗ್ಗ .	3 ಅಂಕಣಗಳ ಹುಲ್ಲಿನ ಮನೆ ..	10	33	ಚೆನ್ನನ ಮನೆ	ಸರ್ಕಾರ ಜಮೀನು	ಡಿಟೋ	ಡಿಟೋ
				4. ದಲಾಲ್ ಖಾ ...	ಡಿಟೋ ...	10	33	ಮುಸ್ತ್ರ್ಸಾಬಿಯ ಮನೆ	ಸಿಲೆಮ್ರ್ಸಾಬಿಯ ಮನೆ	ಡಿಟೋ	ಡಿಟೋ
				5. ಮುಸ್ತ್ರ್ಸಾಬ್ ...	1½ ಅಂಕಣದ ಹುಲ್ಲಿನ ಮನೆ	10	33	ಹವಿಾದ್‌ಖಾನಿನ ಮನೆ	ದಲಾಲ್‌ಖಾನಿನ ಮನೆ	ಡಿಟೋ	ಡಿಟೋ
				6. ಹವಿಾದ್ ಖಾ .	ಡಿಟೋ	5	33	ಗರೀಬ್‌ಷಾವಿನ ಮನೆ	ಮುಸ್ತ್ರ್ಸಾಬಿಯ ಮನೆ	ಡಿಟೋ	ಡಿಟೋ
				7. ಫಕೀರ್‌ಸಾಬ್	ಡಿಟೋ ...	5	33	ಜಲಾಲ್‌ಖಾನಿನ ಮನೆ	ಹವಿಾದ್‌ಖಾನಿನ ಮನೆ	ಡಿಟೋ	ಡಿಟೋ
				8. ಮರಿಲಿಂಗ .	1 ಅಂಕಣದ ಹುಲ್ಲಿನ ಮನೆ .	10	33	ರಸ್ತೆ	ಸಂಣಾನಿಂಗನ ಮನೆ	ಡಿಟೋ	ಡಿಟೋ
				9. ಸಂಣಾನಿಂಗ ..	ಡಿಟೋ ...	10	33	ಮರಿಲಿಂಗನ ಮನೆ	ಚೆಂಣನ ಮನೆ	ಡಿಟೋ	ಡಿಟೋ
				10. ಚೆಂಣ ..	3 ಅಂಕಣಗಳ ಹುಲ್ಲಿನ ಮನೆ	10	33	ಸಂಣಾನಿಂಗನ ಮನೆ	ಬೊಮ್ಮ್ಯನ ಮನೆ	ಡಿಟೋ	ಡಿಟೋ
				11. ದೊಡ್ಡಪೀರು	ಖಾಲಿ ಜಮೀನು	10	33	ಸರ್ಕಾರ ಬಂಜರ್	ಬುಡ್ನಾಸಾಬಿಯ ಜಮೀನು	ಡಿಟೋ	ಡಿಟೋ
				12. ಸೈಯದ್ ಇಮಾಂ	ಡಿಟೋ ..	8	33	ಬೊಮ್ಮ್ಯನ ಮನೆ	ಜಲಾಲ್‌ಖಾನಿನ ಜಮೀನು	ಡಿಟೋ	ಡಿಟೋ
				13. ಸಿಲೇಮ್ರ್ಸಾಬಿಯ ಹೆಂಡತಿಯ ಪರವಾಗಿ ಮುಸ್ತ್ರ್ಸಾಬ್.	ಡಿಟೋ ...	10	33	ದಲಾಲ್‌ಖಾನಿನ ಮನೆ	ಸರ್ಕಾರ ರಸ್ತೆ	ಡಿಟೋ	ಡಿಟೋ
				14. ಬುಡ್ನಾಸಾಬ್	ಡಿಟೋ	20	33	ಬುಡ್ನಾಸಾಬಿಯ ಮನೆ	ಸರ್ಕಾರ ಬಂಜರ್	ಡಿಟೋ	ಡಿಟೋ
				15. ಮ್ಯೂನಿಸಿಪಲ್ ಪೀರ್ವ ಬುಡ್ನಾಸಾಬ್	ಡಿಟೋ ...	10	33	ಹರಿಹರ ಬುಡ್ನಾಸಾಬಿಯ ಜಮೀನು.	ಮಾಯಿಕೊಂಡ ಬುಡ್ನಾಸಾಬಿಯ ಜಮೀನು	ಡಿಟೋ	ಡಿಟೋ
				16. ಹರಿಹರದ ಬುಡ್ನಾಸಾಬ್	ಡಿಟೋ	10	33	ಪೀರ್‌ಸಾಬಿಯ ಜಮೀನು	ಬುಡ್ನಾಸಾಬಿಯ ಜಮೀನು	ಡಿಟೋ	ಡಿಟೋ
				17. ಹುಸೇನ್‌ಸಾಬ್	ಡಿಟೋ ...	10	33	ರಸ್ತೆ	ಸರ್ಕಾರ ಬಂಜರ್	ಡಿಟೋ	ಡಿಟೋ

ತಾರೀಖು 31ನೆ ಆಗಸ್ಟು—1ನೆ ಸೆಪ್ಟಂಬರ್ 1904.

ನಂ. 1820—9-1—ಮೆ., ಅಸಿಸ್ಟೆಂಟ್ ಸರ್ಜರಾದ ಮೆ॥ ಜಿ. ಎಲ್. ಲಕ್ಷ್ಮಣಸಾಮಿ, ಎಲ್. ಎಂ. ಎಸ್., ಯವರಿಗೆ 1904ನೆ ಜೂಲೈ 29ನೆ ಮಾರ್ಕಂ ಜ. 6561ನೆ ಮತ್ತು 1904ನೆ ಜುಲೈ 16ನೆ ಮಾರ್ಕಂ 336—9-2ನೆ ನಂಬರ್ ಇಸ್ತಿಹಾರ್ನ್ನ ಮೆಗಳಲ್ಲಿ ಮಂಜೂರ್ಮಾಡಲ್ಪಟ್ಟಿದ್ದ ಪ್ರಿವಿಲೇಜ್ ರಜಾವನ್ನು ಅವರು 1904ನೆ ಮೇ 24ನೆ ತಾರೀಖಿನಲ್ಲಿ ಉಪಯೋಗಿಸಿಕೊಂಡು 1904ನೆ ಆಗಸ್ಟು 13ನೆ ತಾರೀಖಿನ ಪೂರ್ವಾಹ್ನದಲ್ಲಿ ಬೆಂಗಳೂರಲ್ಲಿರುವ ಮೆಟರ್ನಿಟಿ ಆಸ್ಪತ್ರೆಯಲ್ಲಿನ ತಮ್ಮ ಕೆಲಸಕ್ಕೆ ಪುನಃ ಸೇರಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾ ಭಾಗವು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 31ನೆ ಆಗಸ್ಟು—1ನೆ ಸೆಪ್ಟಂಬರ್ 1904.

ನಂ. 1848—124-3—ಮ್ಯು., ಮೃತಪಟ್ಟ ಮೆ॥ ಸಿ. ರಾಮಚಂದ್ರರಾಯರಿಗೆ ಬದಲಾಗಿ ಅಡ್ವೊಕೇಟರಾದ ಮೆ॥ ಎಸ್. ಸೀತಾರಾಮಯ್ಯನವರು ಶಿವಮೊಗ್ಗ ಟರ್ವ ಮ್ಯುನಿಸಿಪಲ್ ಬೋರ್ಡಿನ ಮೆಂಬರಾಗಿ ನೊಕರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 2ನೆ ಸೆಪ್ಟಂಬರ್ 1904.

ನಂ. ಪಾ. 638—ಸಿ. 4-6, ಕ್ರಿಮಿನಲ್ ಪ್ರೊಸೀಜರ್ ಕೋಡಿನ 12ನೆ ಸೆಕ್ಷನ್ ಅನುಸರಿಸಿ ಕಡೂರು ಡಿಸ್ಟ್ರಿಕ್ಟಿನ ಅಸಿಸ್ಟೆಂಟ್ ಕಮಿಷನರ್ ಮ ಎರಡನೇ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಮೆ॥ ಟಿ. ಚೊಕ್ಕಣ್ಣನವರು ಮೊದಲನೇ ಕ್ಲಾಸಿನ ಮ್ಯಾಜಿಸ್ಟ್ರೇಟರಾಗಿ ನೊಕರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 2ನೆ ಸಪ್ಟಂಬರ್ 1904.

ನಂ. 1879—ಲೋ. ಫಂ. 16—98, ಸ್ರ 1904ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನ್ 6ನೆ ಸೆಕ್ಷನಿನ ನಿಯಮಗಳನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ಕಂಡ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಚಿತ್ರದುರ್ಗದಲ್ಲಿ ಮುಸಲ್ಮಾನರ ಖಬರಸ್ತಾನವನ್ನು ಬಡಾಯಿಸುವ ಬಗ್ಗೆ ಬೇಕಾಗಿರುತ್ತವೆ:—

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಮೂಲೀಕರ ಹೆಸರು.	ಜಮೀನಿನವರ.	ಸರ್ವೆ ನಂ.	ವಿಸ್ತೀರ್ಣ. ಎ.	ಗು.	ಆಕಾರ. ರೂ.	ಆ.	ಪೈ	ತಗದುಕೊಳ್ಳಬೇಕಾದ ವಿಸ್ತೀರ್ಣ. ಎ.	ಗು.	ಸೆ.	ಚಕ್ಕುಬಂದಿ. ಉತ್ತರ.	ದಕ್ಷಿಣ.	ಪೂರ್ವ.	ಪಶ್ಚಿಮ.
ಚಿತ್ರದುರ್ಗ	ಚಿತ್ರದುರ್ಗ	ಚಿತ್ರದುರ್ಗ	ನೇರಲಹಳ್ಳಿ	ಮೊಹದೀನ್ ಸಾಬಿಯು ನು ಗ ಮಹಮದ್ ಹುಸೇನ್ ಸಾಬಿ.	ಖುಷ್ಕಿ ಸರ್ವೆ ನಂ. 68. ವಜೀಫ್ಹೂಟ್ ಖರಾಬ್.		7	34	1	12	0	2	1	ಸರ್ವೆ ನಂ. 69	ಸರ್ವೆ ನಂ. 71	ರಂಗದೇವನಹಳ್ಳಿಗೆ ಹೋಗುವ ರಸ್ತೆ	ಸರ್ವೆ ನಂ. 68ರ ಭಾಗ
					ಬಾಕಿ ..		6	16										
				ಗೋವಿಂದಪ್ಪನ ಮಗ ಖಂಡೆರಾವ್ (ಪಟ್ವೇದಾರಿ). ರಾಮಚಂದ್ರರಾವ್ (ಹಿಡುವಳೀದಾರ್).	ಖುಷ್ಕಿ ಸರ್ವೆ ನಂ. 69. ವಜೀಫ್ಹೂಟ್ ಖರಾಬ್.		0	26	0	4	0	0	22	ಸರ್ವೆ ನಂ. 66	ಸರ್ವೆ ನಂ. 68	ಸರ್ವೆ ನಂ. 68	ಸರ್ವೆ ನಂ. 66 ಮ 88
					ಬಾಕಿ ...		0	4										
							0	22										

ತಾರೀಖು 3ನೆ ಸೆಪ್ಟಂಬರ್ 1904.

ನಂ. ಜ. 1321—125—1, ಸ್ಟೇಟ್ ಹುಜೂರು ಟ್ರೆಜರಿ ಚಾರ್ಜಿನ ಆಫಿಸರ್ ಮ ಸ್ಟ್ಯಾಂಪ್ ಸೂಪರ್ಡೆಂಟೆಂಡೆಂಟರಾದ ಮೆ॥ ಬಿ. ಗೋಪಾಲಯ್ಯಂಗಾರ್ರಿಗೆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರವರ ದರ್ಜೆ ಮ ಸ್ಥಾನವನ್ನು ಕೊಡಲ್ಪಟ್ಟಿರುತ್ತೆ.

ತಾರೀಖು 3ನೆ ಸೆಪ್ಟಂಬರ್ 1904.

ನಂ. 1925—124-4—ಮ್ಯು., ಸ್ರ 1904ನೆ ಏಪ್ರಿಲ್‌ನಲ್ಲಿ ನೌಕರಿಯ ಕಾಲವು ಪೂರೈಸಿದ ಮತ್ತು ಶಿವಮೊಗ್ಗ ಟರ್ವ ಮ್ಯುನಿಸಿಪಲ್ ಬೋರ್ಡಿನ ಮೆಂಬರಾದ ಮೆ॥ ಟಿ. ಭೀಮರಾಯರು ಇನ್ನೂ ಐದು ವರುಷಗಳ ಕಾಲದ ವರಿಗೆ ಪುನಃ ನೊಕರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 5—6ನೆ ಸೆಪ್ಟಂಬರ್ 1904.

ನಂ. 1970—ಲೋ. ಫಂ. 197-92, ಮೈಸೂರು ಸಿಟಿ ಇಂಪ್ರೂವ್‌ಮೆಂಟ್ಸ್ ಟ್ರಸ್ಟ್ ಬೋರ್ಡಿಗೆ ಕುಮಕಿ ಕೊಟ್ಟಿದ್ದ ಮೆ|| ಸಿ. ಎಸ್. ಕೃಷ್ಣಸಾಮಿ ಅಯ್ಯರ್ ಯವರಿಗೆ ಬದಲಾಗಿ ಬೆಂಗಳೂರ ಡಿವೀಜನಿಗೆ ಸೇರಿದ ಓವರ್ಸೀರ್ ಮೆ|| ವಿ. ಲಕ್ಷ್ಮಣರಾಯರು ಮೈಸೂರ ಸಿಟಿ ಮ್ಯೂನಿಸಿಪಾಲಿಟಿಯ ಎಕ್ಜಿಕ್ಯೂಟಿವ್ ಇನ್‌ಜನಿಯರಾಗಿ ಮೊಕರರ್ಮಾಡಲ್ಪಟ್ಟಿರುತ್ತಾರೆ.

ತಾರೀಖು 6ನೆ ಸೆಪ್ಟಂಬರ್ 1904.

ನಂ. ಜ. 1389—126-03, ಇದರಿಂದ ಸಮಸ್ತ ಜನಗಳ ತಿಳುವಳಿಕೆ ಬಗ್ಯೆ ಪ್ರಸಿದ್ಧಪಡಿಸುವದೇನಂದರೆ ಈ ವರ್ಷ ಮೈಸೂರಲ್ಲಿ ಪ್ರಜಾ ಪ್ರತಿನಿಧಿ ಸಭೆಯು ಪ್ರಾರಂಭಿಸುವ ತಾರೀಖು 1904ನೆ ಅಕ್ಟೋಬರ್ 22ರಿಂದ (ಆಶ್ವೀಜ ಶುದ್ಧ ತ್ರಯೋದಶಿ) ಅಕ್ಟೋಬರ್ 21ಕ್ಕೆ (ಆಶ್ವೀಜ ಶುದ್ಧ ದ್ವಾದಸಿ) ಬದಲಾಯಿಸಲ್ಪಟ್ಟಿರುತ್ತೆ.

ತಾರೀಖು 17ನೆ ಆಗಸ್ಟು 1904.

ನಂ. ರೆ. 1423-155-3, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೀಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದರಡೀ ವಿವರಿಸಲ್ಪಟ್ಟ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ ಕೊರಟಗೆರೆ ಸಬ್ ತಾಲ್ಲೂಕಿನ ಮಧ್ಯ ವೆಂಕಟಾಪುರ ಗ್ರಾಮವನ್ನು ಆರೋಗ್ಯಕರವಾದ ಸ್ಥಳಕ್ಕೆ ಬದಲಾಯಿಸುವ ಬಗ್ಯೆ ಬೇಕಾಗಿರುತ್ತವೆ. ಮತ್ತು ತುಮಕೂರ ಡಿಸ್ಟ್ರಿಕ್ಟಿನ ಮೊದಲನೇ ಜನರಲ್ ಅಸಿಸ್ಟೆಂಟ್ ಕಮೀಷನರಾದ ಮೆ|| ಸಿ. ಶೇಷಾದ್ರಯ್ಯಂಗಾರ್ರು ಮೇಲ್ಕಂಡ ರೆಗ್ಯುಲೇಷನಿನ 3 (c) ವ 7ನೆ ಸೆಕ್ಷನ್‌ಗಳನುಸರಿಸಿ ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ನಂಬರ್.	ಹೆಸರು.	ಖಾತೇದಾರ್ರ ಹೆಸರು.	ಸರ್ವೆ ನಂ. ವಿವರ.			ಆಕಾರ.			ತೆಗೆದುಕೊಳ್ಳಬೇಕಾಗಿರುವ ಜಮೀನು.					ಚಕ್ಕುಬಂದಿ.			
									ಎಕರಗಳು.		ಆಕಾರ.			ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
			ನಂ.	ಎ.	ಗು.	ರೂ	ಆ.	ಪೈ.	ಎ.	ಗು.	ರೂ	ಆ.	ಪೈ.				
1	ಮಧ್ಯ ವೆಂಕಟಾಪುರ.	ಹನುಮ	1ನೆ ನಂ. ಭಾಗ.	2	0	1	8	0	2	0	1	8	0	ಹಳ್ಳ ಮತ್ತು ತಿಮ್ಮನ ಜಮೀನಿನ ಸರ್ವೆ ನಂ. 2ರ ಭಾಗ.	ಕಾಮನ ಜಮೀನಿನ ಸರ್ವೆ ನಂ. 2ರ ಭಾಗ	ತಿಮ್ಮನ ಜಮೀನಿನ ಸರ್ವೆ ನಂ. 2ರ ಭಾಗ.	ನರಸಿಂಹನ ಜಮೀನಿನ ಸರ್ವೆ ನಂ. 1ರ ಭಾಗ
2	ಡಿಟೋ ...	ತಿಮ್ಮ	2ನೆ ನಂ. ಭಾಗ.	4	0	4	8	0	4	0	4	8	0	ಖಾತೆದಾರ್ರ ಸರ್ವೆ ನಂ. 2ರ ಭಾಗ ಮತ್ತು ಗಂಡೂರು ಶ್ರೀಕಂಠನ ಇನಾಂ ಜಮೀನಿನ ಸರ್ವೆ ನಂ. 27	ಕಾಯಂಣನ ಜಮೀನಿನ ಸರ್ವೆ ನಂ. 2ರ ಭಾಗ.	ಆಂಜನೇಯಸ್ವಾಮಿಯ ಜಮೀನಿನ ಸರ್ವೆ ನಂ. 20 ಮತ್ತು ವೆಂಕಟರಾಂಭಟ್ಟರ ಭಟ್ಟಮಾನ್ಯದ ಸರ್ವೆ ನಂ. 22	ಗುರುರಾಯಾಚಾರ್ ಮತ್ತು ಹನುಮನ ಜಮೀನಿನ ಸರ್ವೆ 1ರ ಭಾಗ

ತಾರೀಖು 3ನೆ ಸೆಪ್ಟಂಬರ್ 1904.

ನಂ. ಫೈ. 1351—ಜ. ಫೈ. 42-04, ಕಂಟ್ರೋಲರ್ರವರ ಚೀಫ್ ಅಸಿಸ್ಟೆಂಟರಾದ ಮೆ|| ಟಿ. ವೈಯ್ಯಾಪುರಿ ಚೆಟ್ಟಿಯವರಿಗೆ 1904ನೆ ಜುಲೈ 18ನೆ ಮರ್ಕುಂ ಫೈ. 320—ರೆ. ಫೈ. 142-96ನೆ ಮತ್ತು 1904ನೆ ಆಗಸ್ಟ್ ಗುರ್ರೇ ಮರ್ಕುಂ ಫೈ. 697—ಜ. 42-04ನೆ ನಂಬರು ಇಸ್ತಿಹಾರ್ನಾಮೆಗಳಲ್ಲಿ ಮಂಜೂರ್ಮಾಡಲ್ಪಟ್ಟಿದ್ದ ಎರಡು ತಿಂಗಳ ರಜಾದೊಂದಿಗೆ ಇನ್ನೂ ಒಂದು ತಿಂಗಳ ರಜಾ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ಮೈಸೂರ ಸರ್ವಿಸ್ ರೆಗ್ಯುಲೇಷನ್‌ಗಳ 218ನೆ ಆರ್ಟಿಕಲ್ ಅನುಸರಿಸಿ ಕೊಡಲ್ಪಟ್ಟಿರುತ್ತೆ.

ತಾರೀಖು 19ನೆ ಆಗಸ್ಟ್ 1904.

ನಂ. ರೆ. 1537-413-2--1903-04, ಸನ್ 1894ನೆ ಇಸವಿಯ VIIನೆ ನಂಬರ್ ಲ್ಯಾಂಡ್ ಅಕ್ವಿಜೇಷನ್ ರೆಗ್ಯುಲೇಷನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವ್ವದೇನಂದರೆ, ಇದರಡೀ ಕಂಡ ಜಮೀನುಗಳು ಕೋಲಾರ ಡಿಸ್ಟ್ರಿಕ್ಟಿನ ಕೋಲಾರ ತಾಲ್ಲೂಕಿನಲ್ಲಿ ಹೊಸತಮಕ ಗ್ರಾಮವನ್ನುಂಟುಮಾಡಲಿಕ್ಕೆ ಬೇಕಾಗಿರುತ್ತವೆ. ಮತ್ತು ಸದರೀ ರೆಗ್ಯುಲೇಷನಿನ 7ನೆ ಸೆಕ್ಷನ್ ಅನುಸರಿಸಿ ಡೆಪ್ಯುಟಿ ಕಮೀಷನರವರು ಸದರೀ ಜಮೀನುಗಳನ್ನು ಹೊಂದುವ ಬಗ್ಯೆ ಹುಕುಂ ಪಡೆಯಲು ಅಧಿಕಾರ ಕೊಡಲ್ಪಟ್ಟಿರುತ್ತಾರೆ :—

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬಳಿ	ಗ್ರಾಮ	ಹಿಡುವಳೀದಾರ್ ಯಾ ಖಾತೇದಾರ್ರ ಹೆಸರು.	ಜಮೀನಿನ ತಪಶೀಲು. ಸರ್ವೆ ನಂ.	ಜಮೀನಿನ ಕ್ಷೇತ್ರ ಎ.	ಜಮೀನಿನ ಕ್ಷೇತ್ರ ಗು.	ಜಮೀನಿನ ಕ್ಷೇತ್ರ ರೂ	ಜಮೀನಿನ ಕ್ಷೇತ್ರ ಆ.	ಜಮೀನಿನ ಕ್ಷೇತ್ರ ಪೈ.	ಬೇಕಾಗಿರುವ ಜಮೀನಿನ ವಿಸ್ತೀರ್ಣ. ಸರ್ವೆ ನಂ.	ಬೇಕಾಗಿರುವ ಜಮೀನಿನ ವಿಸ್ತೀರ್ಣ. ಎ.	ಬೇಕಾಗಿರುವ ಜಮೀನಿನ ವಿಸ್ತೀರ್ಣ. ಗು.	ಚಕ್ಕುಬಂದಿ. ಪೂರ್ವ. ಸರ್ವೆ ನಂ.	ಚಕ್ಕುಬಂದಿ. ಪಶ್ಚಿಮ. ಸರ್ವೆ ನಂ.	ಚಕ್ಕುಬಂದಿ. ಉತ್ತರ. ಸರ್ವೆ ನಂ.	ಚಕ್ಕುಬಂದಿ. ದಕ್ಷಿಣ. ಸರ್ವೆ ನಂ.
ಕೋಲಾರ	ಕೋಲಾರ	ಕೋಲಾರ	ತಮಕ	ತಿಮ್ಮಯ್ಯ ಬಿನ್ ಚಂಗಪ್ಪ, ಲಡ್ಡೀಖಾನ್.	ಖುಷ್ಕಿ 126	4	5	8	0	0	126	2	6	128	125	126	127
				ನರಸ ಬಿನ್ ಗಂಗ, ಚಂಬಾರ್.	ಖುಷ್ಕಿ 128 / 1	2	24	5	8	0	128	2	34	129	126	128	127
				ವೆಂಕಟರವಣ ಬಿನ್ ವೆಂಕಟಗ.	ಖುಷ್ಕಿ 128 / 2	2	28				ಜುಮ್ಲಾ...	5	0				

ತಾರೀಖು 5ನೆ ಸೆಪ್ಟಂಬರ್ 1904.

ನಂ. ರೆ. 2046—ಲ್ಯಾ. ರೆ. 138—04-2, ಪ್ರೊಬೇಷನೆರಿ ಅಸಿಸ್ಟೆಂಟ್ ಕಮೀಷನರಾದ ಮೆ॥ ನರಸಿಂಗರಾವ್ ಪೂರ್ಣಯ್ಯನವರಿಗೆ 1904ನೆ ಏಪ್ರೆಲ್ 5ನೆ ಮರ್ಕುಂ ರೆ. 3030—ರೆ. ಫೈ. 5-1903ನೆ ನಂಬರೊಡನೆ ಆಖೈರಾಗುವ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ 7 ತಿಂಗಳು 11 ದಿನಗಳ ರಜಾದೊಂದಿಗೆ ಇನ್ನೂ 6 ತಿಂಗಳು ತಲಬಿಲ್ಲದ ಎಕ್‌ಸ್ಟ್ರಾಆರ್ಡಿನೆರಿ ರಜಾ ಕೊಡಲ್ಪಟ್ಟಿರುತ್ತೆ.

ತಾರೀಖು 5ನೆ ಸೆಪ್ಟಂಬರ್ 1904.

ನಂ. ರೆ. 2061—ಲ್ಯಾ. ರೆ. 70-04-4, ಚಿತ್ರದುರ್ಗದ ತಾಲ್ಲೂಕಿನ ಅಮಲ್‌ದಾರ್ರಾದ ಮೆ॥ ವಿ. ಪಾರ್ಥಸಾರಥಿ ಅಯ್ಯಂಗಾರ್ರಿಗೆ 1904ನೆ ಆಗಸ್ಟು 9ನೆ ಮರ್ಕುಂ ರೆ. 1100—70—2ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ರಜಾವನ್ನು ಅವರು 1904ನೆ ಜುಲೈ 18ನೆ ತಾರೀಖಿನ ಪೂರ್ವಾಹ್ನದಲ್ಲಿ ಉಪಯೋಗಿಸಿಕೊಂಡು 1904ನೆ ಜುಲೈ 30ನೆ ತಾರೀಖಿನ ಪೂರ್ವಾಹ್ನದಲ್ಲಿ ಕೆಲಸಕ್ಕೆ ವಾಪಸು ಬಂದಿರುತ್ತಾರಾಗಿ ಉಪಯೋಗಿಸಿಕೊಳ್ಳದ ರಜಾಭಾಗವಂದರೆ 19 ದಿನಗಳು ಇದರಿಂದ ರದ್ದು ಮಾಡಲ್ಪಟ್ಟಿರುತ್ತೆ.

ತಾರೀಖು 6ನೆ ಸೆಪ್ಟಂಬರ್ 1904.

ನಂ. ರೆ 2125—ಫಾ. 53—04-4, ಮೈಸೂರು ಸ್ವಾಸಿ ರೆಗುಲೇಷನ್‌ಗಳ 188ನೆ ಆರ್ಟಿಕಲ್ ಅನುಸರಿಸಿ ಮೈಸೂರ ಸೀಮೆಯ ಫಾರಸ್ಟ್ ಸೆಟ್ಲಮೆಂಟ್ ಆಫಿಸರಾದ ಮೆ॥ ಎ. ಆನಂದರಾಯರಿಗೆ 1904ನೆ ಸೆಪ್ಟಂಬರ್ ಗುರ್ರೆ ಲಾಗಾಯತು ಯಾ ಅವರು ಉಪಯೋಗಿಸಿಕೊಳ್ಳುವ ಇತರ ತಾರೀಖಿನಾರಭ್ಯ 10 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಬಿ. ಕೆ. ವೆಂಕಟವರದಯ್ಯಂಗಾರ್,
ಜನರಲ್ ವ ರವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟೆರಿ.

ಜಿಯೋಲಾಜಿಕಲ್.

ಇಸ್ತಿಹಾರ್ನಾಮಾ

ಅಶುದ್ಧ.

ತಾರೀಖು 31ನೆ ಆಗಸ್ಟು 1904.

ನಂ. 181—ಎಸ್., ಮೈಸೂರ ಜಿಯೋಲಾಜಿಕಲ್ ಇಲಾಖೆಯ ಅಸಿಸ್ಟೆಂಟ್ ಭೂರಚನಾ ಶಾಸ್ತ್ರಜ್ಞರಾದ ಮೆ॥ ಬಿ. ಜಯರಾಂ ಯವರಿಗೆ 1904ನೆ ಮಾರ್ಚಿ 30ನೆ ಮರ್ಕುಂ 580—ಎಸ್. ನೆ ನಂಬರಿ (ಜಿಯೋಲಾಜಿಕಲ್) ಗವರ್ನಮೆಂಟಿನ ಇಸ್ತಿಹಾರ್ನಾಮೆಯಲ್ಲಿ ಕೊಟ್ಟಿದ್ದ ಪ್ರಿವಿಲೇಜ್ ರಜಾ ಸದರಿ ಇಸ್ತಿಹಾರ್ನಾಮೆಯಲ್ಲಿ ಕಂಡ 1904ನೆ ಮೇ ಗುರ್ರೆ ತಾರೀಖಿನಾರಭ್ಯ ಎಂಬದಕ್ಕೆ ಬದಲಾಗಿ 1904ನೆ ಜೂನ್ ಗುರ್ರೆ ತಾರೀಖಿನಾರಭ್ಯ ಜಾರೀಲಿ ಬರುತ್ತೆ.

ಹುಕುಂ ಬಮೋಜೀಬ್,
ಡಬ್ಲ್ಯೂ. ಎಫ್. ಸ್ಮೀತ್,
ಜಿಯೋಲಾಜಿಕಲ್ ಇಲಾಖೆಯ ಗವರ್ನಮೆಂಟ್ ಸೆಕ್ರಿಟೆರಿ.

ಮುಜರ್ಯೆ ಇಲಾಖಾ.

ಇಸ್ತಿಹಾರ್ನಾಮೆ.

ತಾರೀಖು 31ನೆ ಆಗಸ್ಟು—5ನೆ ಸೆಪ್ಟಂಬರು 1904ನೆ ಇಸವಿ.

ನಂಬರು 840, ಮೈಸೂರು ಶ್ರೀಮನ್ ಮಹಾರಾಜರವರ ಸಂಸ್ಕೃತ ಪಾಠಶಾಲೆಯಲ್ಲಿ ಈ ಸಂವತ್ಸರ ಭಾದ್ರಪದ ಶುದ್ಧ ಪಾಡ್ಯಮೀ ಅಂದರೆ 1904ನೆ ಸೆಪ್ಟಂಬರು 10ನೆ ತಾರೀಖು ಲಾಗಾಯಿತು ನಡಿಯುವ ಸಂಸ್ಕೃತ ವಿದ್ವತ್ಪರೀಕ್ಷಾಗಳ ಕಾಲ ಮುಂತಾದ ತಪ್ಸೀಲುಗಳನ್ನು ಇದರಡಿ ನಮೂದಿಸಿರುತ್ತೆ :—

I. ವೇದ.

ದಿವಸಗಳು.	ಋಗ್ವೇದ.	ಫಲ ಸಂಖ್ಯೆ	ಯಜುರ್ವೇದ.	ಫಲ ಸಂಖ್ಯೆ	ಸಾಮವೇದ.	ಫಲ ಸಂಖ್ಯೆ
ಮೊದಲನೆ ದಿವಸ.	ಸಂಹಿತಾ	100	ಸಂಹಿತಾ	100	ಛಂದಅರ್ಚಿಕಾ	30
					ಸಾಮಸಂಹಿತಾ	50
					ಪದಸಂಹಿತಾ	30
ಎರಡನೆ ದಿವಸ...	ಪದ	100	ಪದ	60	ಊಹಾ	120
			ಕ್ರಮ	60		
ಮೂರನೆ ದಿವಸ..	ಕ್ರಮ	100	ಬ್ರಾಹ್ಮಣ	50	ಪದಪಾಠ	40
			ಆರಣ್ಯಕ	30	ರಹಸ್ಯ	30
ನಾಲ್ಕನೆ ದಿವಸ...	ಜಟಾ	....	ಘನ	..	ತಾಂಡ್ಯಬ್ರಾಹ್ಮಣ ಛಾಂದೋಗ್ಯೋಪನಿಷತ್	
	ಅಥವಾ		ಅಥವಾ		ಅಥವಾ	
	ಪೂರ್ವಾಪರ ಪ್ರಯೋಗ	100	ಪೂರ್ವಾಪರ ಪ್ರಯೋಗ	100	ಪೂರ್ವಾಪರ ಪ್ರಯೋಗ	100
ಐದನೆ ದಿವಸ ...	ಪ್ರಾತಿಶಾಖ್ಯ	...	ಪ್ರಾತಿಶಾಖ್ಯ ಮತ್ತು ವರ್ಣಕ್ರಮ		ಋಕ್‌ತಂತ್ರ ವ್ಯಾಕರಣ ಫಲ್ಲಸೂತ್ರ	
	ಅಥವಾ		ಅಥವಾ		ಅಥವಾ	
	ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	100	ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	100	ಪೂರ್ವಾಪರ ಸೂತ್ರಗಳು ಮತ್ತು ಮಂತ್ರಗಳು	100
		500		500		500

II. ವೇದ ಭಾಷ್ಯ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—3	ಸಿದ್ಧಾಂತ ಕೌಮುದೀ (ಭಾಷಾ) ...	60
	3-30—5-30	ಡಿಟೋ (ವೈದಿಕ ಮತ್ತು ಸ್ವರ)	60
ಎರಡನೆ ದಿವಸ ...	1—3-30	ಶ್ರಾಂತಸೂತ್ರ	80
	4—6	ವಾಚಾ ಪರೀಕ್ಷೆ	...
ಮೂರನೆ ದಿವಸ ...	1—5-30	ವೇದಭಾಷ್ಯ (2 ಪ್ರಶ್ನೆ ಪತ್ರಿಕೆಗಳು)	...
ನಾಲ್ಕನೆ ದಿವಸ ...	1—[illegible]-30	ಡಿಟೋ ಡಿಟೋ	...
ಐದನೆ ದಿವಸ ...	1—3	ಡಿಟೋ	300
	3—6	ವಾಚಾ ಪರೀಕ್ಷೆ	125
			625
		ಎರಡನೆ ಭಾಗ.	
ಆರನೆ ದಿವಸ ...	1—3	ಮುಕ್ತಾವಳಿ (ತರ್ಕ)	60
	3-30—5-30	ಜೈಮಿನಿಯ ನ್ಯಾಯಮತ	60
ಏಳನೆ ದಿವಸ ..	1—3	ಡಿಟೋ	60
	3-30—5-30	ಡಿಟೋ	60
ಎಂಟನೆ ದಿವಸ ...	1—3	ನಿರುಕ್ತ	60
	3—6	ವಾಚಾ ಪರೀಕ್ಷೆ	75
			375
			1,000

III. ಯಜ್ಞಿಕ ಪ್ರಯೋಗ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ	1—4	ಗೃಹ್ಯ ಸೂತ್ರ	100
	4 6	ವಾಚಾ ಪರೀಕ್ಷೆ	..
ಎರಡನೆ ದಿವಸ ...	1—3	ಗೃಹ್ಯ ಮಂತ್ರಗಳು	50
	3-30—5-30	ಗೃಹ್ಯಪ್ರಯೋಗ (ವಾ.ಚಾ)	50
ಮೂರನೆ ದಿವಸ ...	1 —3-30	ಆಪದ್ಸೂತ್ರ ಮಂತ್ರ ಸಹಿತ	80
	4—5-30	ಆಪದ್ಪ್ರಯೋಗ (ವಾಚಾ)	40
ನಾಲ್ಕನೆ ದಿವಸ	1—3	ಧರ್ಮಸೂತ್ರ	60
	3-30 5-30	ಡಿಟೋ	60
ಐದನೆ ದಿವಸ ..	1—3	ಬ್ರಹ್ಮಮೇಧ ವಾ ಶ್ರಾದ್ಧಸೂತ್ರ ವಾ ಗೃಹ್ಯಪರಿಶಿಷ್ಟ ...	60
	3—6	ವಾಚಾ	125
			— 625
		ಎರಡನೆ ಭಾಗ.	
ಆರನೆ ದಿವಸ ..	1— 3-30	ಶ್ರಾಂತಸೂತ್ರ I	80
	4—6	ಶ್ರಾಂತಪ್ರಯೋಗ (ವಾಚಾ)	...
ಏಳನೆ ದಿವಸ ...	1—3-30	ಶ್ರಾಂತಸೂತ್ರ II	80
		ಶ್ರಾಂತಪ್ರಯೋಗ (ವಾಚಾ)	100
ಎಂಟನೆ ದಿವಸ ..	1—2-30	ಪರಿಭಾಷಾಸೂತ್ರ	40
	4—6	ವಾಚಾ ಪರೀಕ್ಷೆ	75
			— 375
			1,000

IV. ಧರ್ಮಶಾಸ್ತ್ರ.

		ಮೊದಲನೆ ಭಾಗ.	
ಮೊದಲನೆ ದಿವಸ	1—4	ಗೃಹ್ಯ ಸೂತ್ರ	100
	4—6	ವಾಚಾ ಪರೀಕ್ಷೆ	...
ಎರಡನೆ ದಿವಸ ..	1—3	ಗೃಹ್ಯ ಮಂತ್ರಗಳು	50
	3-30 —5-30	ಗೃಹ್ಯಪ್ರಯೋಗ (ವಾಚಾ)	50
ಮೂರನೆ ದಿವಸ ..	1 — 3-30	ಅಪರಸೂತ್ರಗಳು ಮಂತ್ರಸಹಿತ	80
	4—5-30	ಅಪರಪ್ರಯೋಗ (ವಾಚಾ)	40
ನಾಲ್ಕನೆ ದಿವಸ ...	1—3	ಧರ್ಮಸೂತ್ರ ...	60
	3-30—5-30	ಡಿಟೋ	60
ಐದನೆ ದಿವಸ	1—3	ಬ್ರಹ್ಮಮೇಧ, ವಾ ಶ್ರಾದ್ಧಸೂತ್ರ, ವಾ ಗೃಹ್ಯಪರಿಶಿಷ್ಟ ...	60
	3—6	ವಾಚಾ ಪರೀಕ್ಷೆ	125
			— 625
		ಎರಡನೆ ಭಾಗ.	
ಆರನೆ ದಿವಸ ..	1—3-30	ಶ್ರಾಂತ ಸೂತ್ರ I.	80
	4—6	ಶ್ರಾಂತಪ್ರಯೋಗ (ವಾಚಾ)	.
ಏಳನೆ ದಿವಸ .	1—3-30	ಶ್ರಾಂತ ಸೂತ್ರ II.	80
	4—6	ಶ್ರಾಂತಪ್ರಯೋಗ (ವಾಚಾ)	100
ಎಂಟನೆ ದಿವಸ ...	1—2-30	ಪರಿಭಾಷ್ಯಸೂತ್ರ	40
	1—6	ವಾಚಾ ಪರೀಕ್ಷೆ ...	75
			— 375

V. ಜ್ಯೋತಿಷ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ	1—4	ಲೀಲಾವತಿ	80
	4—6	ವಾಚಾ ಪರೀಕ್ಷೆ	...
ಎರಡನೆ ದಿವಸ	1—4	ಬೀಜಗಣಿತ	80
	4—6	ವಾಚಾ ಪರೀಕ್ಷೆ	..
ಮೂರನೆ ದಿವಸ	1—3	ಗೋಳಾಧ್ಯಾಯ	60
	3-30—5-30	ಡಿಟೋ	60
ನಾಲ್ಕನೆ ದಿವಸ	1—3	ಬೃಹಜ್ಜಾತಕ	75
	3-30—5-30	ಡಿಟೋ	75
ಐದನೆ ದಿವಸ	1—3-30	ಜ್ಞಾನಪ್ರದೀಪಿಕಾ	70
	4—6	ವಾಚಾ ಪರೀಕ್ಷೆ	125
			625
		ಎರಡನೆ ಭಾಗ.	
ಆರನೆ ದಿವಸ	1—3	ಶ್ರೀಪತಿ ಪದ್ಧತಿ	70
	3-30—5-30	ವಿದ್ಯಾಮಾಧವ್ಯ	70
ಏಳನೆ ದಿವಸ	1—3	ಗ್ರಹಗಣಿತ	60
	3-30—5-30	ಗ್ರಹಲಾಘವ ವ ಪ್ರಲೀಭಾಗಿ	40
ಎಂಟನೆ ದಿವಸ	1—3	ಬೃಹತ್ಸಂಹಿತಾ	60
	3-30—6	ವಾಚಾ ಪರೀಕ್ಷೆ	75
			375
			1,000

VI. ವೈದ್ಯ.

		ಮೊದಲನೆ ಭಾಗ.	
ಮೊದಲನೆ ದಿವಸ	1—3-30	ಧನ್ವಂತರಿ ನಿಘಂಟು	75
	4—6	ಅಷ್ಟಾಂಗಹೃದಯ	60
ಎರಡನೆ ದಿವಸ	1—3	ಡಿಟೋ	60
	3-30—5	ಸುಶ್ರುತ	50
ಮೂರನೆ ದಿವಸ	1—4	ಶಾರ್ಙಧರ ಸಂಹಿತಾ	90
	4—6	ವಾಚಾ ಪರೀಕ್ಷೆ	...
ನಾಲ್ಕನೆ ದಿವಸ	1—4	ಮಾಧವ ನಿಧಾನ	90
	4—6	ವಾಚಾ ಪರೀಕ್ಷೆ	100
ಐದನೆ ದಿವಸ	1—6	ಕರ್ಮಾಭ್ಯಾಸ	100
			625
		ಎರಡನೆ ಭಾಗ.	
ಆರನೆ ದಿವಸ	1—3-30	ಚರಕ	75
	4—6	ಕರ್ಮಾಭ್ಯಾಸ	...
ಏಳನೆ ದಿವಸ	1—3-30	ಚರಕ	75
	4—6	ಕರ್ಮಾಭ್ಯಾಸ	50
ಎಂಟನೆ ದಿವಸ	1—4	ರಸರತ್ನಾಕರ	100
	4—6	ವಾಚಾ ಪರೀಕ್ಷೆ	75
			375
			1,000

VII. ವ್ಯಾಕರಣ.

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
		ಮೊದಲನೆ ಭಾಗ.	
ಮೊದಲನೆ ದಿವಸ ...	1—4	ಸಿದ್ಧಾಂತ ಕೌಮುದಿ	100
	4—6	ವಾಚಾ ಪರೀಕ್ಷೆ	
ಎರಡನೆ ದಿವಸ ..	1—4	ಮನೋರಮಾ ಕಲ್ಪದ್ರುಮ ಸಹಿತಾ ...	100
	4—6	ವಾಚಾ ಪರೀಕ್ಷೆ ...	...
ಮೂರನೆ ದಿವಸ ..	1—3	ಶಬ್ದಕೌಸ್ತುಭ	60
	3-30—5-30	ಪರಿಭಾಷೇಂದುಶೇಖರ . ..	60
ನಾಲ್ಕನೆ ದಿವಸ ..	1—3	ಶಬ್ದೇಂದುಶೇಖರ	60
	3-30 – 5-30	ಡಿಟೋ .. .	60
ಐದನೆ ದಿವಸ ..	1—3	ಡಿಟೋ	60
	3—6	ವಾಚಾ ಪರೀಕ್ಷೆ	125
			——625
		ಎರಡನೆ ಭಾಗ.	
ಆರನೆ ದಿವಸ ...	1—4	ಶಬ್ದೇಂದುಶೇಖರ	100
	4—6	ವಾಚಾ ಪರೀಕ್ಷೆ .. .	.
ಏಳನೆ ದಿವಸ ..	1—3	ಮಹಾಭಾಷ್ಯ	70
	3-30 – 5-30	ಡಿಟೋ	70
ಎಂಟನೆ ದಿವಸ ..	1—3	ಭೂಷಣಸಾರ . ..	60
	3—6	ವಾಚಾ ಪರೀಕ್ಷೆ	75
			—— 375
			1,000

VIII. ನ್ಯಾಯಶಾಸ್ತ್ರ (ನವೀನ).

		ಮೊದಲನೆ ಭಾಗ.	
ಮೊದಲನೆ ದಿವಸ ..	1—3-30	ದಿನಕರೀಯ	70
	4—5-30	ಸಿದ್ಧಾಂತ ಲಕ್ಷಣ ..	40
ಎರಡನೆ ದಿವಸ ..	1—3-30	ಪಂಚಲಕ್ಷಣೀ ಮತ್ತು ಚತುರ್ದಶ ಲಕ್ಷಣೀ .	80
	4—5-30	ಪಕ್ಷತಾ	50
ಮೂರನೆ ದಿವಸ ...	1—3	ಅವಯವ	70
	3-30—5-30	ಸಾಮಾನ್ಯನಿರುಕ್ತಿ	60
ನಾಲ್ಕನೆ ದಿವಸ ..	1—3-30	ಸವ್ಯಭಿಚಾರ, ಸತ್ಪ್ರತಿಪಕ್ಷ ಮತ್ತು ಬಾಧವಿಭಾಜಕ ...	80
	4—6	ವಾಚಾ ಪರೀಕ್ಷೆ	...
ಐದನೆ ದಿವಸ ..	1—3	ವ್ಯುತ್ಪತ್ತಿವಾದ ..	50
	4—6	ವಾಚಾ ಪರೀಕ್ಷೆ	125
			—— 625
		ಎರಡನೆ ಭಾಗ.	
ಆರನೆ ದಿವಸ ..	1—3	ವ್ಯುತ್ಪತ್ತಿವಾದ	60
	3-30—5-30	ಡಿಟೋ	60
ಏಳನೆ ದಿವಸ ..	1—4	ಶಕ್ತಿವಾದ	100
	4—6	ವಾಚಾ ಪರೀಕ್ಷೆ	...
ಎಂಟನೆ ದಿವಸ ...	1—3-30	ಪ್ರಾಮಾಣ್ಯವಾದ	80
	3-30—6	ವಾಚಾ ಪರೀಕ್ಷೆ	75
			—— 375
			1,000

390

1385

IX. ನ್ಯಾಯಶಾಸ್ತ್ರ (ಪ್ರಾಚೀನ).

ದಿವಸಗಳು.	ಕಾಲ.	ವಿಷಯಗಳು.	ಫಲ ಸಂಖ್ಯೆ.
ಮೊದಲನೆ ದಿವಸ ..	1—4	ಪ್ರಶಸ್ತಪಾದ ಭಾಷ್ಯ	100
	4—6	ವಾಚಾ ಪರೀಕ್ಷೆ	...
ಎರಡನೆ ದಿವಸ ...	1—4	ನ್ಯಾಯಸೂತ್ರಭಾಷ್ಯ	100
	4—6	ವಾಚಾ ಪರೀಕ್ಷೆ	...
ಮೂರನೆ ದಿವಸ ..	1—4	ಉದ್ಯೋತಕಾರ ವಾರ್ತಿಕ	100
	4—6	ವಾಚಾ ಪರೀಕ್ಷೆ	....
ನಾಲ್ಕನೆ ದಿವಸ ..	1—4	ಉದ್ಯೋತಕಾರ ವಾರ್ತಿಕ	100
	4—6	ವಾಚಾ ಪರೀಕ್ಷೆ	100
			500

X. ಸಾಂಖ್ಯ.

ಮೊದಲನೆ ದಿವಸ ...	1—3	ಸಾಂಖ್ಯಪ್ರವಚನ ಭಾಷ್ಯ	60
	3-30—5-30	ಡಿಟೋ	60
ಎರಡನೆ ದಿವಸ ...	1—3	ಸಾಂಖ್ಯತತ್ವ ಕೌಮುದಿ	60
	3—6	ವಾಚಾ ಪರೀಕ್ಷೆ	...
ಮೂರನೆ ದಿವಸ ..	1—4	ಯೋಗಭಾಷ್ಯ ವಾಚಸ್ಪತ್ಯ ಸಹಿತ	100
	4—6	ವಾಚಾ ಪರೀಕ್ಷೆ	100
ನಾಲ್ಕನೆ ದಿವಸ ..	1—3	ಯೋಗವಾರ್ತಿಕ	60
	3-30—5-30	ಡಿಟೋ	60
			500

XI. ಪೂರ್ವ ಮೀಮಾಂಸ.

		ಭಾಗ I.	
ಮೊದಲನೆ ದಿವಸ ..	1—3	ಭಾಟ್ಟ ದೀಪಿಕ	75
	3-30—5-30	ಡಿಟೋ	75
ಎರಡನೆ ದಿವಸ ...	1—3	ಡಿಟೋ	75
	3-30—5-30	ಡಿಟೋ	75
ಮೂರನೆ ದಿವಸ ..	1—4	ಭಾಟ್ಟಕೌಸ್ತುಭ	100
	4—6	ವಾಚಾ ಪರೀಕ್ಷೆ	....
ನಾಲ್ಕನೆ ದಿವಸ ..	1—4	ಭಾಟ್ಟಕೌಸ್ತುಭ	100
	4—6	ವಾಚಾ ಪರೀಕ್ಷೆ	...
ಐದನೆ ದಿವಸ ..	1—6	ವಾಚಾ ಪರೀಕ್ಷೆ	125
			625
		ಭಾಗ II.	
ಆರನೆ ದಿವಸ	1—3	ಭಾಟ್ಟರಹಸ್ಯ	70
	3-30—5-30	ಡಿಟೋ	70
ಏಳನೆ ದಿವಸ	1—3	ಸಬರಭಾಷ್ಯ	70
	3—6	ವಾಚಾ ಪರೀಕ್ಷೆ	...
ಎಂಟನೆ ದಿವಸ ..	1—4	ಸಬರಭಾಷ್ಯ	90
	4—6	ವಾಚಾ ಪರೀಕ್ಷೆ	75–375
			1,000

XII. ಉತ್ತರ ಮೀಮಾಂಸೆ (ವೇದಾಂತ).

ದಿವಸಗಳು.	ಕಾಲ.	ವಿಷಯಗಳು.			ಫಲ ಸಂಖ್ಯೆ.
		ಭಾಗ I.			
ಮೊದಲನೆ ದಿವಸ ..	1– 3-30	ಉಪನಿಷದ್-ಭಾಷ್ಯ-(ಈಶ ಮತ್ತು ಬೃ. ಉ.) ..	..		70
	4—6	ಡಿಟೋ (ತೈತ್ತಿರೀಯ. ಉ.) ..	..		50
ಎರಡನೆ ದಿವಸ .	1—3-30	ಡಿಟೋ (ಕೇನ ಮತ್ತು ಛಾಂದೋಗ್ಯ) ..			60
	4—6	ಡಿಟೋ (ಕಠಕ ಮತ್ತು ಐತರೇಯ) ..			50
ಮೂರನೆ ದಿವಸ ...	1—3	ಡಿಟೋ (ಪ್ರಶ್ನ, ಮುಂಡಕ ಮತ್ತು ಮಾಂಡೂಕ್ಯ) ..			50
	3-30—5-30	ಗೀತಭಾಷ್ಯ (1—6 ಅಧ್ಯಾಯಗಳು) ..		...	50
ನಾಲ್ಕನೆ ದಿವಸ ..	1—4	ಡಿಟೋ (7—18 ಅಧ್ಯಾಯಗಳು) ...		..	70
	4—6	ವಾಚಾ ಪರೀಕ್ಷೆ ...	...	..	100–500
		ಭಾಗ II.			
ಐದನೆ ದಿವಸ ...	1—3-30	ಬ್ರಹ್ಮಸೂತ್ರ ಭಾಷ್ಯ (ಅಧ್ಯಾಯ I—1) ...		..	80
	4—6	ವಾಚಾ ಪರೀಕ್ಷೆ ...	..	...	
ಆರನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (1-2—4) ..		..	80
	4—6	ವಾಚಾ ಪರೀಕ್ಷೆ ...	...	..	....
ಏಳನೆ ದಿವಸ ..	1—3-30	ಬ್ರಹ್ಮಸೂತ್ರ ಭಾಷ್ಯ (IIನೆ ಅಧ್ಯಾಯ) ...		...	100
	4—6	ವಾಚಾ ಪರೀಕ್ಷೆ ..	..	...	100
ಎಂಟನೆ ದಿವಸ ...	1—3-30	ಬ್ರಹ್ಮಸೂತ್ರಭಾಷ್ಯ (IIIನೆ ಅಧ್ಯಾಯ) ...		...	80
	4—6	ಡಿಟೋ (IVನೆ ಅಧ್ಯಾಯ) ...		...	60–500
					1,000

XIII. ಸಾಹಿತ್ಯ.

		ಭಾಗ I.			
ಮೊದಲನೆ ದಿವಸ ..	1—3	ಚಂಪು ...	...	...	60
	3-30— 5-30	ನಾಟಕ ...	..	...	60
ಎರಡನೆ ದಿವಸ ..	1—3	ಕಾವ್ಯಪ್ರಕಾಶ ..	..	..	60
	3-30—5-30	ಕುವಲಯಾನಂದ ಮತ್ತು ವೈತ್ತರತ್ನಾಕರ ...		..	50
ಮೂರನೆ ದಿವಸ ...	1—4	ಸಿದ್ಧಾಂತ ಕೌಮುದಿ ..	....	...	80
	4-30—5-30	ಜ್ಯೋತಿಷ	..	..	20
ನಾಲ್ಕನೆ ದಿವಸ ...	1—2-30	ಪ್ರಾಕೃತ ...	...	..	40
	3—5	ಮುಕ್ತಾವಳಿ ..	...	..	50
ಐದನೆ ದಿವಸ ...	1—3	ಉಪನ್ಯಾಸ ...	...	...	40
	3—5	ತರ್ಜಮೆ ...	..	..	40
		ವಾಚಾ ಪರೀಕ್ಷೆ ...	..	....	125–625
		ಭಾಗ II.			
ಆರನೆ ದಿವಸ ..	1—3	ಉಪನಿಷತ್ತುಗಳು ಮತ್ತು ಗೀತ ...		...	50
	3-30—5-30	ಆಪಸ್ತಂಭ ಮತ್ತು ಮನು ..	...	..	50
ಏಳನೆ ದಿವಸ	1—3	ಭಾರತ, ಭಾಗವತ ಮತ್ತು ಯೋಗವಾಸಿಷ್ಠ ...		..	50
	3-30—5-30	ಸಾಂಖ್ಯ ಮತ್ತು ಯೋಗ ...		..	50
ಎಂಟನೆ ದಿವಸ ..	1 3	ವೀರಮಾನಸ ಮತ್ತು ಅದ್ವೈತ ಪರಿಭಾಷ ...		..	50
	3-30—5-30	ಯತೀಂದ್ರಮತದೀಪಿಕ ಮತ್ತು ದ್ವೈತಪದಾರ್ಥ ಸಂಗ್ರಹ		...	50
		ವಾಚಾ ಪರೀಕ್ಷೆ	...	...	75–375
					1,000

ಹುಕುಂ ಖಮೋಜೀಬ್,

ಎಲ್. ಅನಂತಸ್ವಾಮಿರಾವ್, ಸೆಕ್ರಟರಿ.

ಮೈಸೂರ ಗೆಜೆಟ್.

ಸಂ. 39.] ಸರ್ಕಾರದಿಂದ ಫಾಯಿಷ್ ಆದ್ದು. [ನಂ. 36.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ|| 8, ಸನ್ 1904.

IIನೆ ಭಾಗ.

ಇಂಡ್ಯಗವರ್ನ್ ಮೆಂಟ್, ರೆಸಿಡೆಂಟರು, ಚೀಫ ಜಡ್ಜೀರು ವಗೈರೇರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ವಿದ್ಯಾಭ್ಯಾಸದ ಇಲ್ಲಾಖಾ.

ನೋಟಿಫಿಕೇಷನ್ ಡಿ. ನಂಬರು 9.

ತಾರೀಖು 29ನೆ ಮಾಹೆ ಆಗಸ್ಟು ಸನ್ 1904ನೆ ಇಸವಿ.

ಮೈಸೂರು ಸೀಮೆಯ ಶ್ರೀಮನ್ ಮಹಾರಾಜಾ ಸಾಹೇಬರವರ ಗವರ್ನ್ ಮೆಂಟ್ ಸನ್ ಮಜಕೂರು ಆಗಸ್ಟು 6—8ನೆ ಮರ್ಕುಂ 1091—10—5—Ed., ನೆ ನಂಬರು ನೋಟಿಫಿಕೇಷನ್ ಅನ ಸರಿಸಿ ಮೈಸೂರು ಸೀಮೆಯ ದೇಶಭಾಷೆಯ ಗವರ್ನ್ ಮೆಂಟ್ ತಾಲ್ಲೂಕು, ತಾಲ್ಲೂಕು ಬ್ರಾಂಚ್, ಮತ್ತು ಹೋಬಳಿ ಸ್ಕೂಲ್‌ಗಳಲ್ಲಿ ಓದುವ ಹೊಲೆಯರು, ಮಾದಿಗರು, ಲಂಬಾಣಿಯವರು, ಕೊರಚರು, ಕೊರಮರು ಮತ್ತು ನಾಯಿಂದರು ಈ ಜಾತಿಯ ವಿದ್ಯಾರ್ಥಿಗಳಿಗೆ 1904ನೆ ಇಸವಿ ಜುಲೈ ಗುರ್ರೇ ಲಾಗಾಯಿತು ಎರಡು ವರ್ಷಗಳ ಕಾಲ ಸ್ಕೂಲ್ ಫೀ ಮಾಫ್ ಮಾಡಿರುತ್ತೆ.

ಪ್ರಕಟನ ಪತ್ರಿಕೆ.

ಮೈಸೂರು ದೇಶೀಯ ಪರೀಕ್ಷೆಗಳು.

ಸನ್ 1904ನೆ ಇಸವಿ ಸೆಪ್ಟಂಬರ್ ತಾರೀಖು 2ನೆ ಡಿ. ನಂಬರು 10.

ಮೈಸೂರು ದೇಶೀಯ ಪರೀಕ್ಷೆಗಳು ಸನ್ 1904ನೆ ಇಸವಿ ನವಂಬರು ತಿಂಗಳು ಮಂಗಳವಾರ ಹದಿನೈದನೇ ತಾರೀಖಿನಿಂದ ಆರಂಭವಾಗಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವವು :—

ಪರೀಕ್ಷೆಗಳು ಇದರಡೀ ಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು :—

ಮೈಸೂರು ಲೋವರ್ ಸೆಕಂಡರಿ ಪರೀಕ್ಷೆ.

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೊದಲನೇ ದಿವಸ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ.	60
		ಸಂಸ್ಕೃತದ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30ರ ವರೆಗೆ.	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಭಾಷಾಂತರೀಕರಣ—ಇಂಗ್ಲಿಷ್, ಸಂಸ್ಕೃತ, ಫಾರಸಿ	
		ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳಂಥಾವರಿಗೆ	35
	2—35ರಿಂದ 3—5 ವರೆಗೆ.	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಉಕ್ತಲೇಖನ—ಇಂಗ್ಲೀಷ್	15
		ಸಂಸ್ಕೃತ ; ಫಾರಸಿ	10
	3—10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಕೈಬರವಣಿಗೆ—ಇಂಗ್ಲೀಷ್ ; ಸಂಸ್ಕೃತ ; ಫಾರಸಿ ..	10
	3—45ರಿಂದ 4—15 ವರೆಗೆ	ಉರ್ದು ಉಕ್ತಲೇಖನ	10
	4—20ರಿಂದ 4—50 ವರೆಗೆ	ಉರ್ದು ಕೈಬರವಣಿಗೆ	10

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಎರಡನೇ ದಿವಸ	10ರಿಂದ 1ರ ವರಗೆ	ಕನ್ನಡ ಪ್ರಥವ ಅಥವಾ ದ್ವಿತೀಯ ಭಾಷೆ – ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ .	100
		ಫಾರಸಿ ದ್ವಿತೀಯ ಭಾಷೆ — ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
	2ರಿಂದ 5ರ ವರೆಗೆ	ಸಂಸ್ಕೃತ ದ್ವಿತೀಯ ಭಾಷೆ— ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
		ಲಾರ್ಟ್ ದ್ವಿತೀಯ ಭಾಷೆ ಲಾರ್ಟ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	120
		ದೇಶಭಾಷೆ ಪ್ರಥವ ಅಥವಾ ದ್ವಿತೀಯ ಭಾಷೆ— ತೆಲುಗು, ಮತ್ತು ಉರ್ದು, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100
ಮೂರನೇ ದಿವಸ	10ರಿಂದ 12 ವರೆಗೆ	ಅಂಕಗಣಿತ	100
	12–5ರಿಂದ 12–35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ಮತ್ತು ತೆಲುಗು ಅಕ್ಷರ ಸಂಯೋಜನ	10
	12–40ರಿಂದ 1–10ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ— ಕನ್ನಡ ಮತ್ತು ತೆಲುಗು ಕೈ ಬರವಣಿಗೆ	10
	2ರಿಂದ 3–30ವರೆಗೆ	ಆರೋಗ್ಯ ಶಾಸ್ತ್ರ)	100
	3–45ರಿಂದ 4–15 ವರೆಗೆ	ಐಚ್ಛಿಕ ದ್ವಿತೀಯ ಭಾಷೆ — ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ	10
	4–20ರಿಂದ 4—50 ವರೆಗೆ	ಐಚ್ಛಿಕ ದ್ವಿತೀಯ ಭಾಷೆ — ಸಂಸ್ಕೃತ ಮತ್ತು ಫಾರಸಿ ಕೈ ಬರವಣಿಗೆ	10
ನಾಲ್ಕನೇ ದಿವಸ.	10ರಿಂದ 1ರ ವರೆಗೆ	ಚರಿತ್ರೆ, ಭೂಗೋಳಶಾಸ್ತ್ರ) ಮತ್ತು ಭೂಪಠ ಬರೆಯುವುದು	120
	2ರಿಂದ 3–35 ವರೆಗೆ	ವ್ಯವಸಾಯ ಶಾಸ್ತ್ರ)	100
ಐದನೇ ದಿವಸ ...	10ರಿಂದ 11—30 ವರೆಗೆ	ಕ್ಷೇತ್ರಗಣಿತ	100
	11–35ರಿಂದ 1–5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ)	100
	2 ರಿಂದ 3—30 ವರೆಗೆ	ಹೊಲಿಗೆ	50
		ಆಂಗ್ಲೇಯರ ಚರಿತ್ರೆ	100
	3—35ರಿಂದ 5—5ವರಗೆ	ವಾಕಶಾಸ್ತ್ರ)	50
		ಗೃಹಕೃತ್ಯ ನಡೆಯಿಸುವ ಕ್ರಮ	100

ಮೈಸೂರು ದೇಶಭಾಷೆಯ ಅಪ್ಪರ್ ಸೆಕಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯಗಳು.	ಅಂಕಗಳು.
ಮೊದಲನೇ ದಿನ	10 - 1	ಪ್ರಥಮ ಭಾಷೆ — ಕನ್ನಡ ಅಥವಾ ಉರ್ದು ಗ್ರಂಥಗಳು	60 } 130
	2—4	ಅದೇ ಡಿಟೋ ಪ್ರಾಥವ್ಯಾಕರಣ	40 }
	4·5—5·5	ಅದೇ ಡಿಟೋ ಪ್ರಬಂಧರಚನೆ	30 }
ಎರಡನೇ ದಿನ ...	10 — 1	ಪ್ರಥಮ ಅಥವಾ ದ್ವಿತೀಯ ಭಾಷೆ — ಪರ್ಷಿಯನ್ ಗ್ರಂಥಗಳು	60 } 130
	2 — 4	ಡಿಟೋ ಡಿಟೋ ವ್ಯಾಕರಣ	40 }
	4·5—5·5	ಡಿಟೋ ಡಿಟೋ ಪರ್ಷಿಯನ್ ಭಾಷೆಗೆ ಭಾಷಾಂತರೀಕರಣ	30 }
ಮೂರನೇ ದಿನ ..	10—1	ದ್ವಿತೀಯ ಭಾಷೆ — ಸಂಸ್ಕೃತ ಅಥವಾ ಅರಾಬಿಕ್, ಗ್ರಂಥಗಳು, ವ್ಯಾಕರಣ, ಪದವಿನ್ಯಾಸ, ಭಾಷಾ ಶೈಲಿ	60 } 130
	2—5	ಭಾಷಾಂತರೀಕರಣ ...	70 }

ದಿನ.	ಘಂಟೆ.	ವಿಷಯಗಳು.			ಅಂಕಗಳು.	
ನಾಲ್ಕನೇ ದಿನ ...	10—12	ರೇಖಾಗಣಿತ, ಕ್ಷೇತ್ರಗಣಿತ	..	...	40	120
	1—3·30	ಅಂಕಗಣಿತ	.. ..	..	50	
	3·35—5·5	ಬೀಜಗಣಿತ	... .	..	30	
ಐದನೇ ದಿನ ...	10—12	ಪ್ರಾಕೃತಿಕ ಶಾಸ್ತ್ರ (Physical science)		..	40	120
	1—3	ಆರೋಗ್ಯಶಾಸ್ತ್ರ	..	...	40	
	3·5—5·5	ಕೃಷಿಶಾಸ್ತ್ರ	..	..	40	
ಆರನೇ ದಿನ ...	10—1	ಚರಿತ್ರೆ	...	...	50	100
	2—5	ಭೂಗೋಳ ಶಾಸ್ತ್ರ	...	...	50	
				ಒಟ್ಟು		600

ಪರೀಕ್ಷೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಐದನೇ ದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ನಾಟಕ ಪಂಡಿತ ಪರೀಕ್ಷೆ.

ದಿನ.	ಘಂಟೆ.	ವಿಷಯಗಳು.			ಅಂಕಗಳು.	
ಮೊದಲನೇ ದಿನ ...	10—1	ಕನ್ನಡ ವ್ಯಾಕರಣ	..	....	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ		....	80	
ಎರಡನೇ ದಿನ ..	10—1	ಕನ್ನಡ ಗ್ರಂಥಗಳು ಮೊದಲನೇ ಪತ್ರಿಕೆ	...	...	100	400
	2—5	ಅದೇ ಎರಡನೇ ಪತ್ರಿಕೆ	...	...	100	
ಮೂರನೇ ದಿನ ...	10—1	ಅದೇ ಮೂರನೇ ಪತ್ರಿಕೆ	..	...	100	
	2—5	ಅದೇ ನಾಲ್ಕನೇ ಪತ್ರಿಕೆ	...	...	100	
ನಾಲ್ಕನೇ ದಿನ	10—1	ಕನ್ನಡ ಪ್ರಬಂಧರಚನೆ	...	...	100	
	2—5	ಭಾಷಾಂತರೀಕರಣ	...	...	100	
ಐದನೇ ದಿನ ...	10—1	ಸಂಸ್ಕೃತ ವ್ಯಾಕರಣ	...	...	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ	....	...	120	
ಆರನೇ ದಿನ ..	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ	...	...	100	200
	2—5	ಅದೇ ಎರಡನೇ ಪತ್ರಿಕೆ		..	100	

ಇದರಲ್ಲಿ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು:—

(1) ಪರೀಕ್ಷೆಯು ಆರಂಭಿಸುವದಕ್ಕೆ ನಿಶ್ಚಿತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳೆದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲ್ಲಾರದ್ದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟು ಬಂದನಂತರ ಪುನಹ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು, ಅಲ್ಲದೆ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟು ಬರುವದಕ್ಕೆ ಸಹ ಅವಕಾಶ ಕೊಡ್ಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ಸಂಗತಿಯು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರಗಳನ್ನಾಗಲಿ, ತೆಗೆದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡಲ್ಪಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡೆಸುತ್ತಿರುವದಾಗಿಯಾಗಲಿ ಕಂಡು ಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ನಡವಳಿತವು ಇನ್ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವುದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರೆಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯು ಹೆಸರು, ರಿಜಿಸ್ಟರ್ ನಂಬರಿ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಷಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,
ಇನ್ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನೆ ಆಗಸ್ಟು 1904ನೆ ಇಸವಿ.

24. ಬಂದು ಕಟ್ಟಡದ ಸಂಬಂಧವಾಗಿ ಕಕ್ಕಸನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ಕಕ್ಕಸನ್ನು ಅದರ ಪ್ರವೇಶದ ಕಡೆ ವಿನಹ ಪ್ರತಿಯೊಂದು ಕಡೆಯಲ್ಲೂ, ಅಡ್ಡಗಲದಲ್ಲಿ 3 ಅಡಿಗೆ ಕಡಿಮೆ ಇಲ್ಲದ, ಮತ್ತು ಅಂತರಿಕ್ಷಕ್ಕೆ ತೆರೆಯಲ್ಪಟ್ಟು, ಖಾಲಿ ಸ್ಥಳವು ಬಿಟ್ಟಿರುವಂತೆ ಕಟ್ಟತಕ್ಕದ್ದು. ಅಂಥ ಪ್ರವೇಶದ ಕಡೆ, ಅಂಥ ಕಕ್ಕಸಿನೊಳಗೆ ಹೋಗುವ ಗ್ಯಾಲರಿ ಯಾನೆ ಅಂತರ್ದ್ವಾರ ಯಾ ಮಾರ್ಗವು, ಅಗಲದಲ್ಲಿ 2 ಅಡಿಗೆ ಕಡಿಮೆ ಇಲ್ಲದಂತೆಯೂ, ಮತ್ತು ಉಭಯ ಪಾರ್ಶ್ವದಲ್ಲೂ ಹೊರಗಡೆಯ ಗಾಳಿಗೆ ತೆರೆಯಲ್ಪಟ್ಟದ್ದಾಗಿಯೂ, ಇರತಕ್ಕದ್ದು.

ಕಕ್ಕಸುಗಳ ಸುತ್ತಲು ಇರಬೇಕಾದ ಬೈಲು ಪ್ರದೇಶ.

25. ಬಂದು ಕಟ್ಟಡದ ಸಂಬಂಧವಾಗಿ ಕಕ್ಕಸನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು ಜೇರ್ಮರ್ರಿಗೆ ಸಮಾಧಾನವಾಗುವಂತೆ ಗಾಳಿ ಚಲನೆಗೆ ಸಾಕಾದಷ್ಟು ದ್ವಾರ ಯಾ ದ್ವಾರಗಳನ್ನು ಅಂಥ ಕಕ್ಕಸಿಗೆ ಇಡತಕ್ಕದ್ದು. ಅಂಥ ದ್ವಾರ ಯಾ ದ್ವಾರಗಳು, ಮೇಲ್ಛಾಗಕ್ಕೆ ಸಾಧ್ಯವಾದ ಮಟ್ಟಿಗೂ ಸವಿಾಪದಲ್ಲಿರುವದಾಗಿಯೂ, ಮತ್ತು ನೇರವಾಗಿ ಹೊರಗಿನ ಗಾಳಿಯ ಸಂಪರ್ಕವನ್ನು ಉಂಟಾದ್ದಾಗಿಯೂ, ಇರತಕ್ಕದ್ದು.

ಕಕ್ಕಸುಗಳ ಗಾಳಿಯ ಚಲನೆ.

26. ಯಾವ ಮನುಷ್ಯನಾದರೂ ಹಳ್ಳ ಯಾ ಹೊಸ ಕಕ್ಕಸಿನ ಮೇಲ್ಗಡೆ ಮತ್ತೊಂದು ಕಕ್ಕಸು ಯಾ ಸ್ನಾನದ ಸ್ಥಳ ಯಾ ಬಚ್ಚಲುಮನೆ, ಇವುಗಳನ್ನು ವಿನಹಾ ಯಾವ ಕೊಠಡಿಯನ್ನು ಯಾ ಕಟ್ಟಣವನ್ನು ಕಟ್ಟಕೂಡದು.

ಕಕ್ಕಸಿನ ಮೇಲೆ ಯಾವ ಕೊಠಡಿಯು ಕಟ್ಟಲ್ಪಡಕೂಡದು.

27. ಬಂದು ಮನೆಯ ಆವರಣದೊಳಗೆ ಮತ್ತು ಅದರ ಸವಿಾಪದಲ್ಲಿ ಇರತಕ್ಕ ಗಲೀಜಾದ ಪಾಯಿಖಾನೆ ಗುಂಡಿಗಳು ವ ಕೊಚ್ಚೆ ಗುಂಡಿಗಳು, ವಿಶೇಷ ಸಂದರ್ಭ ಯಾ ಸಂದರ್ಭಗಳಲ್ಲಿ ಮಯಿದೆಯನ್ನು ಬಡಾಯಿಸತಕ್ಕದ್ದು ಅವಶ್ಯಕವೆಂದು ಜೇರ್ಮರ್ರು ಎಣಿಸಿದ ಹೊರ್ತು, ಸದರಿ ಜೇರ್ಮರ್ರಿಂದ ಆ ಬಗ್ಗೆ ಕೊಡಲ್ಪಡುವ ನೋಟೀಸಿನ ಎರಡು ದಿನಗಳೊಳಗಾಗಿ, ಪಾಕ್ ಮಾಡಲ್ಪಟ್ಟು ಮುಚ್ಚಲ್ಪಡತಕ್ಕದ್ದು.

ಪಾಯಿಖಾನೆ ಗುಂಡಿಗಳನ್ನು ಪಾಕೀಜು ಮಾಡುವಿಕೆ.

28. ಕಟ್ಟಣದ ಕಾಮಗಾರಿ ನಡಿಯುತ್ತಿರುವಾಗಾಗಲೀ, ಅಥವಾ ಕಟ್ಟಡವು ಪೂರೈಸಿದ ಮೇಲಾಗಲೀ ಯಾವದಾದರು ಯುಕ್ತವಾದ ಕಾಲದಲ್ಲಿ, ಜೇರ್ಮರ್ರಿಂದ, ಅಂಥಾ ಕಟ್ಟಣದ ಕಟ್ಟುವಿಕೆಯು ಹೊಸ ಕಟ್ಟಡಗಳಿಗೆ ಸಂಬಂಧಿಸುವ ಯಾವದಾದರೂ ಉಪನಿಬಂಧನೆಗೆ ವಿರೋಧವಾಗಿರಬದುದಾದಂಥ ವಿಷಯವನ್ನು ನವೂದು ಮಾಡಿರುವದಾಗಿಯೂ, ಮತ್ತು ನವೂದು ಮಾಡಲ್ಪಡುವ ಯುಕ್ತವಾದ ಬಂದು ಗಡವಿನಲ್ಲಿ ಯಾವದಾದರೂ ಮಾಡಿರುವದನ್ನು ಯಾ ಬಿಟ್ಟಿರುವದನ್ನೂ, ಸದರಿ ಉಪನಿಬಂಧನೆಗೆ ಅನುಗುಣವಾಗಿ ಸರಿಪಡಿಸುವಂತೆ ನಿಯಮಿಸುವದಾಗಿಯೂ, ಇರುವ ನೋಟೀಸನ್ನು ಯಾವ ಮನುಷ್ಯನು ಹೊಂದುತ್ತಾನೆಯೋ, ಅಂಥ ಮನುಷ್ಯನು, ಅಂಥ ವ್ಯಕ್ತಿಯೊಂದು ಸಂದರ್ಭದಲ್ಲೂ, ಸದರಿ ನಿಯಮಾವಳಿಗಳು ಅಂಥ ಕಟ್ಟಣದ ಕಟ್ಟುವಿಕೆಯು ಅಂಥ ಯಾವದಾದರು ಉಪನಿಬಂಧನೆಗೆ ವಿರುದ್ಧವಾಗಿರಬಹುದಾದ ಅಂಶಗಳಿಗೆ ಎಷ್ಟರಮಟ್ಟಿಗೆ ಸಂಬಂಧಿಸುತ್ತವೋ, ಅಷ್ಟರ ಮಟ್ಟಿಗೆ, ಅಂಥ ನೋಟೀಸಿನಲ್ಲಿ ನವೂದಾದ ವಾಯಿದೆಯೊಳಗಾಗಿ, ಅದರಲ್ಲಿನ ನಿಯಮಾವಳಿಗಳಿಂದೊಂದರ ಮೇರಿಗೂ, ನಡೆದುಕೊಳ್ಳತಕ್ಕದ್ದು.

ಉಪನಿಬಂಧನೆಗಳಿಗೆ ವಿರುದ್ಧವಾದ ನಡವಳಿಕೆಗಳನ್ನು ತಿದ್ದುಪಡಿ ಮಾಡತಕ್ಕದ್ದು.

29. ಅಂಥ ಯಾವದಾದರೂ ನಿಯಮಾವಳಿಯ ಮೇರಿಗೆ ನಡಿಸಲ್ಪಟ್ಟ ಕೆಲಸವು ಪೂರೈಸಿದ ಮೇಲೆ, ಬಂದು ನ್ಯಾಯವಾದ ವಾಯಿದೆಯೊಳಗಾಗಿ, ಅಂಥ ಮನುಷ್ಯನು ಜೇರ್ಮರ್ರಿಗೆ ಆಫೀಸಿನಲ್ಲಿ, ಬರಹವ್ಯೂಲಕ ಅಂಥ ಕೆಲಸವು ಪೂರೈಸಿದ ಬಗ್ಗೆ ನೋಟೀಸನ್ನು ತಂದು ಕೊಡತಕ್ಕದ್ದು ಯಾ ಕಳುಹಿಸತಕ್ಕದ್ದು. ಅಥವಾ ತಂದುಕೊಡುವಂತೆಯಾದರೂ ಯಾ ಕಳುಹಿಸುವಂತೆಯಾದರೂ ಮಾಡತಕ್ಕದ್ದು.

ತಿದ್ದುಪಾಡುಗಳು ಪೂರೈಸಿದ ಬಗ್ಗೆ ನೋಟೀಸ್.

30. ಬಂದು ಕಟ್ಟಡವನ್ನು ಕಟ್ಟತಕ್ಕ ಪ್ರತಿಯೊಬ್ಬ ಮನುಷ್ಯನು, ಅಂಥ ಕಟ್ಟಡವನ್ನು ಕಟ್ಟಿದ್ದು ಪೂರೈಸಿದ ನಂತರ, ಬಂದು ತಿಂಗಳೊಳಗಾಗಿ, ಅಂಥ ಕಟ್ಟಡದ ಕಟ್ಟುವಿಕೆಯು ಪೂರೈಸಿದ ಬಗ್ಗೆ, ಲಿಖಿತವ್ಯೂಲಕ, ಜೇರ್ಮರ್ರಿಗೆ ಆಫೀಸಿನಲ್ಲಿ, ನೋಟೀಸನ್ನು ತಂದುಕೊಡತಕ್ಕದ್ದು ಯಾ ಕಳುಹಿಸಿಕೊಡತಕ್ಕದ್ದು, ಅಥವಾ ತಂದುಕೊಡುವಂತೆಯಾಗಲಿ ಕಳುಹಿಸಿಕೊಡುವಂತೆಯಾಗಲಿ ಮಾಡತಕ್ಕದ್ದು.

ಕಟ್ಟಡಗಳು ಪೂರೈಸಿದ ಬಗ್ಗೆ ನೋಟೀಸ್.

ಖ 15

31. ಉದ್ದೇಶಿಸಿರುವ ಹೊಸ ಬಡಾವಣೆಗಳೆಲ್ಲವೂ, ಮತ್ತು ಸಹಕಾರಿಯಾದ ಸಂದರ್ಭಗಳಿಗನುಗುಣವಾಗಿ ಷಹರ್‌ನಲ್ಲಿ ಎಲ್ಲಿ ಸಾಧ್ಯವೋ, ಅಂಥ ದರೋಬಸ್ತು ಪ್ರದೇಶಗಳಲ್ಲಿಯೂ, ಹೊಸದಾಗಿ ಕಟ್ಟಲ್ಪಡತಕ್ಕ ಪ್ರತಿಯೊಂದು ವಾಸದ ವಠಾರವು, ಸುತ್ತಮುತ್ತಲೂ ಹೊರಗಿನ ಗಾಳಿಯ ಸಂಪರ್ಕವನ್ನುಂಟಾಗಿರುವಂತೆ ಇರತಕ್ಕದ್ದು.

32. ಯಾವನು ಮೇಲ್ಕಂಡ ಉಪನಿಬಂಧನೆಗಳ ಸಮಾಧಾನಾರ್ಥವಾಗಿ, ಒಂದು ಹೊಸ ಕಟ್ಟಡದ ಬಗ್ಯೆ ಲೈಸೆನ್ಸನ್ನು ಕೊಡಲ್ಪಟ್ಟವನಾಗಿ, ಸದರಿ ಕಟ್ಟಡವನ್ನು ಆರು ತಿಂಗಳಿಗೆ ಮೇಲ್ಪಟ್ಟುಂಥಾ ಯಾವ ಕಾಲದ ಪರಿಯಂತರವಾಗಲಿ ಪೂರೈಸದೆ ಇರುತ್ತಾನೋ, ಅಂಥವನು ನೋಟಸ್ ಜಾರಿಯಾದ ನಂತರ ಸದರಿ ಕಟ್ಟಡವು ಪೂರ್ತಿಯಾಗುವದಕ್ಕೆ, ಟ್ರಸ್ಟಿಗಳಿಂದ ಗೊತ್ತುಮಾಡಲ್ಪಡುವ ಒಂದು ನ್ಯಾಯವಾದ ಗಡುವಿನಲ್ಲಿ ಅದನ್ನು ಮುಗಿಸಿ ಪೂರೈಸತಕ್ಕದ್ದು. ತಪ್ಪಿದಲ್ಲಿ, ಲಾಗವಡಿಗೂ ಮತ್ತು ನಷ್ಟಕ್ಕೂ ಮಾಲೀಕನನ್ನು ಗುರಿಪಡಿಸಿ, ಸದರಿ ಕಟ್ಟಡವನ್ನು ಮುಗಿಸುವದಕ್ಕೂ ಮತ್ತು ಅಂಥ ಕಾಂಗಾರಿಯ ಲಾಗವಡನ್ನು ಬರವಾಡಿಕೊಳ್ಳುವದಕ್ಕೂ, ಅಥವಾ ಸದರಿ ಕಟ್ಟಡವನ್ನು ಕಿತ್ತುಹಾಕುವದಕ್ಕೂ, ಟ್ರಸ್ಟಿಗಳವರು ಅರ್ಹರಾಗಿರುತ್ತಾರೆ.

33. ಉತ್ತಮವಾದ ಹವ ಯಾ ಆರೋಗ್ಯ, ಇವುಗಳ ನಿಮಿತ್ತವಾಗಿ ಕಟ್ಟಡವನ್ನು ರೂಪಾಂತರ ಪಡಿಸುವದಕ್ಕಾಗಲಿ ಯಾ ಗಾಳಿವಾಟವನ್ನು ಹಲ್ಪಿಸುವದಕ್ಕಾಗಲಿ, ಟ್ರಸ್ಟಿಗಳಿಂದ ಆಜ್ಞಾಪಿಸಲ್ಪಡುಹುದಾದ ಯಾವ ಮನುಷ್ಯನಾದರು, ಆ ಮೇರಿಗೆ ಮಾಡತಕ್ಕ ಬಗ್ಯೆ ತನಿಗೆ ಚೇರ್ಮೆರಿಂದ ಕೊಡಲ್ಪಡುವ ನೋಟಸ್ ತಾರೀಖಿನ ಒಂದು ತಿಂಗಳೊಳಗೆ, ಅಥವಾ ಚೇರ್ಮೆರಿಗೆ ಆಯಾ ಸಂದರ್ಭಗಳ ಮೇರೆ ಸೂಕ್ತವೆಂದು ತೋರುವಂಥ ಹೆಚ್ಚು ವಾಯಿದೆ ವಳಗಾಗಿ, ಆ ಮೇರಿಗೆ ಮಾಡತಕ್ಕದ್ದು.

ದಂಡನೆಗಳು.

34. ಮೇಲ್ಕಂಡ ಬೈಲಾಸ್ ಯಾನೆ ಉಪನಿಬಂಧನೆಗಳಿಗೆ ವಿರುದ್ಧವಾಗಿ ನಡಿಯುವ ಪ್ರತಿಯೊಬ್ಬ ಮನುಷ್ಯನು 20 ರೂಪಾಯಿಗಳ ವರೆಗೆ ಆಗಬಹುದಾದ ಜುರ್ಮಾನೆಗೂ, ಮತ್ತು ನಡೆದುಕೊಂಡು ಬರುವ ತಪ್ಪಿತಕ್ಕೆ ಮೊದಲಿನ ತಪ್ಪು ಸ್ಥಾಪಿತವಾದ ನಂತರವಾಗಲಿ, ಅಥವಾ ನಿಬಂಧನೆಗೆ ವಿರುದ್ಧವಾಗಿ ನಡಿಯದಿರುವಂತೆ ಚೇರ್ಮೆರಿಂದ ಲಿಖಿತವಾಗಿಕ ನೋಟಸ್ ತಲಪಿದ ನಂತರವಾಗಲಿ, ಯಾವ ಬಿನ ನಿಬಂಧನೆಗೆ ವಿರುದ್ಧವಾಗಿ ನಡಿಯುವಹಾಗುತ್ತೋ, ಅಂಥ ಪ್ರತಿದಿನಕ್ಕೂ 10 ರೂಪಾಯಿಗಳ ವರೆಗೆ ಜುರ್ಮಾನೆಗೂ ಗುರಿಯಾಗುವನು.

ಅಧಿಕಾರ, ಕರ್ತವ್ಯ ಯ ಕೆಲಸದ ಜವಾಬಿಕೆ ಬಗ್ಯೆ ಸಾಕ್ಷ್ಯವು.

35. ಮೇಲ್ಕಂಡ ಯಾವದಾದರೂ ಉಪನಿಬಂಧನೆಗಳ ಮೇರಿಗೆ, ಯಾವದಾದರು ಮೊಡುವಿಕೆಯು ಆಗಲಿ ಯಾ ಮುಡಪಿ ಇರುವಿಕೆಯು ಆಗಲಿ, ಅಥವಾ ಯಾವದಾದರೂ ನಡವಳಿಕೆಯ ಚೈತನ್ಯತ್ವವೇ ಆಗಲಿ, ಚೇರ್ಮೆರವರ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆಯಾ ಒಪ್ಪಿಕೆಯನ್ನು, ಆಕ್ರಯಿಸಿರುವ ಪಕ್ಷದಲ್ಲಿ, ಚೇರ್ಮೆರಿಂದ ದಸ್ತತಃ ಮುಡಪಲ್ಪಟ್ಟು ಅವರ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆಯ ಒಪ್ಪಿಕೆಯನ್ನು ತಿಳಿಸುವ ಯಾ ತೋರ್ಪಡಿಸುವ ಒಂದು ಲಿಖಿತ ದಸ್ತ್ಯೆವೇಜು, ಅಂಥ ಮಂಜೂರಾತಿ, ಅನುಮತಿ, ಅಂಗೀಕಾರ, ಅಪ್ಪಣೆ, ತಿಳುವಳಿಕೆ, ಯಾ ಒಪ್ಪಿಕೆಗೆ ಸಾಕಾದ ಪ್ರಥಮ ಸಾಕ್ಷ್ಯವಾಗಿರತಕ್ಕದ್ದು

ಈ ಉಪನಿಬಂಧನೆಗಳ ಮೇರಿಗೆ, ಪರಿಮಾಣಗಳು, ವಿಧಿಸಲ್ಪಟ್ಟಿರುವ ದರೋಬಸ್ತು ಸಂದರ್ಭಗಳೆಲ್ಲವೂ ಸದರಿ ಪರಿಮಾಣಗಳನ್ನು ಆ ಬಗ್ಯೆ ದರಾಬಸ್ತು ಮಾಡಲ್ಪಟ್ಟಲ್ಲಿ, ಬದಲಾಯಿಸುವದಕ್ಕೆ ಅಪ್ಪಣೆ ಕೊಡಲು ಚೇರ್ಮೆರಿಗೆ ಅಧಿಕಾರವಿರತಕ್ಕದ್ದು.

Mysore Government Central Press, Bangalore.—1901.

412

1407

ಮೈಸೂರ ಗೆಜಿಟ್.

ಸಂ. 39.] ಸರ್ಕಾರದಿಂದ ಪ್ರಾಯಿಷ್ ಆದ್ದು. [ನಂ. 37.

ಬೆಂಗಳೂರು, ಗುರುವಾರ, ಸೆಪ್ಟಂಬರ್ ತಾ॥ 15, ಸ್ಯ 1904.

☞ ಭಾಗಗಳನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಗೆ ಬೇರೆ ಬೇರೆಯಾಗಿ ಪುಟ ಸಂಖೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೆ ಭಾಗ—ಮೈಸೂರು ಸೀಮೆಯ ಶ್ರೀಮಂತ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

2ನೆ ಭಾಗ—ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೆ ವ ಇನಾಂ ಸೂಪರ್ಟೆಂಡೆಂಟರು, ಕ್ಯಟೋಲರವರು, ಪಬ್ಲಿಕ್ವರ್ಕ್ಸ್ ಆಫಿಸರ್ಗಳು, ಫಾರೆಸ್ಟು, ರೆಜಿಸ್ಟ್ರೇರ್ಷ ವ ಎಡ್ಯುಕೇರ್ಷ ಇನ್ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪಲ್ಬೋರ್ಡು ಪ್ರಸಿಡೆಂಟರು ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜೀರು, ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೋಲೀಸ್ ಸೂಪರ್ಟೆಂಡೆಂಟರು, ಫಾರಸ್ಟು ಆಫಿಸರ್ಗಳು ಇವರುಗಳಿಂದ ಕೊಡೋಣಾದ ಇಸ್ತಿಹಾರ್ಗಳು ವಗೈರೆ ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫೀಸ್ ನೋಟಸ್ಗಳು.

3ನೆ ಭಾಗ—ಲೆಜಿಸ್ಲೇಟಿವ್ ರೆಗ್ಯುಲೇರ್ಷಗಳು ಮತ್ತು ಅವುಗಳಂತೆ ಆದ ನಿಬಂಧನೆಗಳು—ಇಲ್ಲಾ.

4ನೆ ಭಾಗ—ಸರ್ಕಾರೀ ಕಾಗದಪತ್ರಗಳು—ಇಲ್ಲಾ.

1ನ ಭಾಗ.

ಮೈಸೂರು ಸೀಮೆಯ ಶ್ರೀಮಂತ ಮಹಾರಾಜಾ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್ನಾಮೆಗಳು.

ಜನರಲ್ ಮತ್ತು ರೆವಿನ್ಯೂ.

ತಾರೀಖು 23—26ನೆ ಆಗಸ್ಟು 1904.

ನಂ. 1617—17-10—ಸ್ಯಾನಿಟೇರ್ಷ, ಇದರಿಂದ ಸಮುಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ತಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21—96ನೆ ನಂಬರಿ ಇಸ್ತಿಹಾರ್ನಾಮೆಗಳ್ಳೂಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ತುಮಕೂರು ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳುಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.		ತಾಲ್ಲೂಕು.	ಸ್ಥಳ.		ತಾಲ್ಲೂಕು.
1. ಹುಲಿಕಟ್ಟೆ	...	ತಿಪಟೂರು.	7. ಹರಿಯಪ್ಪನಪಾಳ್ಯ	..	ತುಮಕೂರು.
2. ಅಜ್ಜಗಾನಹಳ್ಳಿ	...	ತುಮಕೂರು.	8. ಕಿಟ್ಟಗಾನಹಳ್ಳಿ	...	ಡಿಟೋ
3. ಹೆಬ್ಬೂರು	...	ಡಿಟೋ	9. ಮೂಗನಾಯಕನಕೋಟೆ	...	ಗುಬ್ಬಿ.
4. ಕರ	...	ಡಿಟೋ	10. ಹಲಸಿನನಾಗನಹಳ್ಳಿ		ಡಿಟೋ
5. ರಾವನಹಳ್ಳಿ	...	ಡಿಟೋ	11. ಕಡಬಾ	...	ಡಿಟೋ
6. ದೊಡ್ಡಗುಣಿ	...	ಡಿಟೋ	12. ಸೂಳೆಕೆರೆ	...	ತುರುವೇಕೆರೆ ಸ್ಟೇ॥ತಾ॥

ತಾರೀಖು 31ನೆ ಆಗಸ್ಟು—1ನೆ ಸೆಪ್ಟಂಬರ್ 1904.

ನಂ. 1833—17-12—ಸ್ಯಾನಿಟೇರ್ಷ, ಇದರಿಂದ ಸಮುಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರುವರಿ 10ನೆ ಮುಕ್ತಂ 9383—ಮಿ. ಫೈ. 21-96ನೆ ಮತ್ತು 9384—ಮಿ. ಫೈ. 21-96ನೆ ನಂಬರಿ ಇಸ್ತಿಹಾರ್ನಾಮೆಗಳ್ಳೂಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ತುಮಕೂರ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳುಗಿ ಎಣಿಸಲ್ಪಡತಕ್ಕದ್ದು:—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಅಮ್ಮನಘಟ್ಟಕ್ಕೆ ಸೇರಿದ ಗೊಲ್ಲರಹಟ್ಟಿ..	ಗುಬ್ಬಿ.	2. ಚೆನ್ನಸೆಟ್ಟಿಹಳ್ಳಿ	... ಗುಬ್ಬಿ.

ತಾರೀಖು 7ನೆ ಸೆಪ್ಟಂಬರ್ 1904.

ನಂ. 1959—83-2—ಸ್ಯಾನಿಟೇರ್ಷ, ಮುಳಬಾಗಲನಲ್ಲಿ ಪ್ಲೇಗ್ ರೋಗವು ಇಧೆಯೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದಲೂ ಮತ್ತು ಅದರ ವ್ಯಾಪಕವನ್ನು ಅಡ್ಡೀಪಡಿಸಬೇಕಾಗಿರುವದ್ದರಿಂದಲೂ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 11ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, ಕೋಲಾರ ಡಿಸ್ಟ್ರಿಕ್ಟು ಮುಳಬಾಗಲ್ ತಾಲ್ಲೂಕು ಮುಳಬಾಗಲ್ ಟವನ್ನಲ್ಲಿರುವ ಹೈದರಲ್ಲಿ ದರ್ಗಾವಿನಲ್ಲಿ 1:04ನೆ ಸೆಪ್ಟಂಬರ್ 11ರ ಲಾಗಾಯ್ತು 29ರ ವರಿವಿಗೆ ನಡೆಯುವ ಉರ್ಸಿಗೆ ಕೂರಗಿನಿಂದ ಜನಗಳು ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡೀ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಉರ್ಸಿಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 31ನೆ ಆಗಸ್ಟು — 1ನೆ ಸೆಪ್ಟಂಬರ್ 1904.

ನಂ. 1635-83-6—ಸ್ಯಾನಿಟೇರ್ಷ, ಇದರಿಂದ ಸರ್ವಸ್ತ ಜನಗಳ ತಿಳುವಳಿಕೆ ಬಗ್ಗೆ ಪ್ರಸಿದ್ಧಪಡಿಸುವದೇನಂದರೆ, ಸಾಂಕ್ರಾಮಿಕ ರೋಗಗಳ ರೆಗ್ಯುಲೇರ್ಷ ಅನುಸರಿಸಿ 1898ನೆ ಫೆಬ್ರವರಿ 10ನೆ ನಂಬರ್ 9383—ಮಿ. ಫೈ. 21—96ನೆ ಮತ್ತು 9384—ಮಿ. ಫೈ. 21-96ನೆ ನಂಬರ ಇಸ್ತಿಹಾರ್ನಾಮೆಗಳೊಡನೆ ಕೊಡಲ್ಪಟ್ಟ ರೆಗ್ಯುಲೇರ್ಷಗಳ ಉದ್ದೇಶಗಳಿಗೋಸ್ಕರ ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಇದರಡೀ ಕಂಡ ಸ್ಥಳಗಳು ರೋಗ ತಗಲಿದ ಪ್ರದೇಶಗಳಾಗಿ ಎಣಿಸಲ್ಪಡತಕ್ಕದ್ದು :—

ಸ್ಥಳ.	ತಾಲ್ಲೂಕು.	ಸ್ಥಳ.	ತಾಲ್ಲೂಕು.
1. ಭರ್ಮಸಾಗರ	ಚಿತ್ರದುರ್ಗ.	8. ಕವಾಡಿಗರ ಹಟ್ಟಿ	ಚಿತ್ರದುರ್ಗ.
2. ಕೋಣಂಡಿ	ಡಿಟೋ	9. ಹಲಯೂರು	ಡಿಟೋ
3. ಬಲ್ಲೇಕಟ್ಟೆ	ಡಿಟೋ	10. ಜಗಳೂರು ಗೊಲ್ಲರಹಟ್ಟಿ	ಜಗಳೂರು.
4. ಕಾಟೇಹಳ್ಳಿ	ಡಿಟೋ	11. ಸುಳ್ಳೇಬನಹಳ್ಳಿ	ಡಿಟೋ
5. ಹೊಸಹಳ್ಳಿ ಗೊಲ್ಲರಹಟ್ಟಿ	ಡಿಟೋ	12. ಮುದ್ದೇರು	ಹೊಳಲಕೆರೆ.
6. ಸಿದ್ದಾಪುರ ಗೊಲ್ಲರಹಟ್ಟಿ	ಡಿಟೋ	13. ಕಡೂರು	ಡಿಟೋ
7 ಜಾಲಿಕಟ್ಟೆ	ಡಿಟೋ		

ತಾರೀಖು 7—8ನೆ ಸೆಪ್ಟಂಬರ್ 1904.

ನಂ. (2017) 80-2—ಸ್ಯಾನಿಟೇರ್ಷ, ಕಡೂರು ಡಿಸ್ಟ್ರಿಕ್ಟಿನ ತ್ರಿಂಗೇರಿಯಲ್ಲಿ ನಡೆಯುವ ನವರಾತ್ರಿ ಉತ್ಸವದ ಸಂದರ್ಭದಲ್ಲಿ ಮಂಗಳೂರಿನಿಂದಲೂ ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಜನಗಳು ಸದರಿ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯ ಉಂಟೆಂದು ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ, 1897ನೇ ಇಸವಿಯ ಸಾಂಕ್ರಾಮಿಕರೋಗಗಳ 11ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, 1904ನೆ ಅಕ್ಟೋಬರ್ 9ರ ಲಾಗಾಯ್ತು 24ರ ವರಿವಿಗೆ ಮಂಗಳೂರಿನಿಂದಲೂ ಮತ್ತು ಪ್ಲೇಗ್ ರೋಗ ತಗಲಿದ ಇತರ ಪ್ರದೇಶಗಳಿಂದಲೂ ಜನಗಳು ಸದರಿ ಸ್ಥಳಕ್ಕೆ ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡಿ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರೀ ಉತ್ಸವಕ್ಕೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 8—9ನೆ ಸೆಪ್ಟಂಬರ್ 1904.

ನಂ. 2045—81-2—ಸ್ಯಾನಿಟೇರ್ಷ, ಚಿತ್ರದುರ್ಗ ಡಿಸ್ಟ್ರಿಕ್ಟ ಚಳ್ಳಕೆರೆ ತಾಲ್ಲೂಕಿನ ಗೌರಸಮುದ್ರ ಗ್ರಾಮದಲ್ಲಿ ನಡೆಯುವ ಜಾತ್ರೆಯ ಸಂದರ್ಭದಲ್ಲಿ ಪ್ಲೇಗ್‌ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳದಲ್ಲಿ ಸೇರಲಿಕ್ಕೆ ಬಿಡಲ್ಪಟ್ಟರೆ ಪ್ಲೇಗ್ ರೋಗವು ವ್ಯಾಪಿಸುವ ಅಪಾಯವುಂಟೆಂದು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರಿಗೆ ನಿಷ್ಕರ್ಷೆಯಾಗಿರುವದ್ದರಿಂದ, 1897ನೆ ಇಸವಿಯ ಸಾಂಕ್ರಾಮಿಕ ರೋಗಗಳ 11ನೆ ನಂಬರ್ ರೆಗ್ಯುಲೇಷನ್ನಿಂದ ತಮಗೆ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ, 1904ನೆ ಸೆಪ್ಟಂಬರ್ 13ರ ಲಾಗಾಯ್ತು 15ರ ವರಿವಿಗೆ ಪ್ಲೇಗ್ ರೋಗ ತಗಲಿದ ಪ್ರದೇಶಗಳಿಂದ ಜನಗಳು ಸದರೀ ಸ್ಥಳಕ್ಕೆ ಬರುವದನ್ನು ಮೈಸೂರು ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಡ್ಡಿ ಪಡಿಸುತ್ತಾರೆ.

ಈ ಇಸ್ತಿಹಾರ್ನಾಮೆಗೆ ವ್ಯತಿರಿಕ್ತವಾಗಿ ಸದರಿ ಜಾತ್ರೆಗೆ ಹೊರಡುವ ದರೋಬಸ್ತು ಜನಗಳು ವಾಪಸು ಕಳುಹಿಸಲ್ಪಡುವರು.

ತಾರೀಖು 8ನೆ ಸೆಪ್ಟಂಬರ್ 1904.

ನಂ. ಜು. 694—ಸಿ. 73—2, ಸ|| 1883ನೆ ಇಸವಿಯ 1ನೆ ನಂಬರ್ ಮೈಸೂರ ಸಿವಿಲ್ ಕೋರ್ಟುಗಳ ರೆಗ್ಯುಲೇಷನಿನ 4ನೆ ಸೆಕ್ಷನ್ನಿಂದ ಕೊಡಲ್ಪಟ್ಟ ಅಧಿಕಾರಗಳ ಚಲಾವಣೆಯಲ್ಲಿ ಬೆಂಗಳೂರು ಮತ್ತು ಮೈಸೂರು ಎರಡು ಸ್ಥಳಗಳಲ್ಲಿ ಒಂದೊಂದು ಎರಡನೇ ಅಡಿಷನಲ್ ಮುನ್‌ಸಿಫ್ ಕೋರ್ಟನ್ನು 6 ತಿಂಗಳ ವರಿವಿಗೆ ಸ್ಥಾಪಿಸಲ್ಪಡತಕ್ಕದ್ದೆಂದು ಮೈಸೂರ ಸೀಮೆಯ ಘನವನ್ನೈದಿದ ಶ್ರೀಮನ್ ಮಹಾರಾಜಾ ಸರ್ಕಾರದವರು ಅಪ್ಪಣೆ ಕೊಡುತ್ತಾರೆ.

2. ಈಗ ಛಾಫ್ ಕೋರ್ಟಿಗೆ ಸೇರಿದ ಜುಡಿಷಿಯಲ್ ಪ್ರೊಬೇಷನರಾದ ಮೆ" ಎಸ್. ಹಿರಣ್ಣಯ್ಯ, ಎಂ. ಎ., ಬಿ. ಎಲ್., ಯವರು ಮೈಸೂರ ಎರಡನೆ ಅಡಿಷನಲ್ ಮುನ್‌ಸಿಫರಾಗಿಯೂ ಮತ್ತು ಮೆ" ಡಿ. ಕೆ. ರಾಮರಾವ್, ಬಿ. ಎ., ಬಿ. ಎಲ್., ಯವರು ಬೆಂಗಳೂರ ಎರಡನೆ ಅಡಿಷನಲ್ ಮುನ್‌ಸೀಫರಾಗಿಯೂ ಹಂಗಾಮಿ ತರೀಕು ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 8—9ನೆ ಸೆಪ್ಟಂಬರ್ 1904.

ನಂ. 2047—95—4—ಮ್ಯುನಿ., ಮೃತಪಟ್ಟ ಮೆ" ಆದೋಣಿ ನರಸಿಂಗಪ್ಪನವರಿಗೆ ಬದಲಾಗಿ ಮೆ" ಖಬಗಿ ದುರ್ಗಪ್ಪನವರು ಮೊಳಕಾಲ್ಮೂರು ಮ್ಯುನಿಸಿಪಲ್ ಜೋರ್ಡಿನ ಮೆಂಬರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 8—9ನೆ ಸೆಪ್ಟಂಬರ್ 1904.

ನಂ. 2049—131—2—ಮ್ಯುನಿ., ಕಾಲಾತಿಕ್ರಮಣದಿಂದ ತಮ್ಮ ಸ್ಥಾನವು ಬಿಟ್ಟು ಹಿರಿಯೂರು ಮ್ಯುನಿಸಿಪಲ್ ಕೋರ್ಡಿನ ಮೆಂಬರಾದ ಮೆ" ಸಿ. ಎಸ್. ಕೃಷ್ಣಪ್ಪನವರು ಇನ್ನೂ 5 ವರ್ಷಗಳ ಕಾಲ ಪುನಃ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 7ನೆ ಸೆಪ್ಟಂಬರ್ 1904.

ನಂ. ಫೈ. 1443, ಲ್ಯಾಂಡ್ ಅಕ್ವಿಜೇಷನ್ ರಗ್ಯುಲೇಪನಿನ 6ನೆ ಸೆಕ್ಷನ್ ಅನುಸರಿಸಿ ಇದರಿಂದ ಪ್ರಸಿದ್ಧಪಡಿಸುವದೇನಂದರೆ, ಇದಕ್ಕೆ ಜಂಟಿಸಿರುವ ಷೆಡ್ಯೂಲಿನಲ್ಲಿ ವಿವರಿಸಲ್ಪಟ್ಟ ಇದರಡಿ ಕಂಡ ಮನೆಗಳು ವ ಜಮೀನುಗಳು ಸರ್ಕಾರ ಕೆಲಸಕ್ಕೆ ಅಂದರೆ, ಮೈಸೂರು ಷಹರು ಖಿಲ್ಲೆ ಮೊಹಲ್ಲಾದಲ್ಲಿರುವ ಅರಮನೆಯ ಸುತ್ತಲು ಅಭಿವೃದ್ಧಿ ಪಡಿಸುವ ಬಗ್ಯೆ ಬೇಕಾಗಿರುತ್ತವೆ ;—

ಜಂಜರ್ ನಂ.	ಡೋರ್ ನಂ.	ಮಾಲೀಕರ ಹೆಸರು.	ತೆಗದುಕೊಳ್ಳಬೇಕಾಗಿರುವ ಸ್ವತ್ತಿನ ವಿವರ.	ವಿಸ್ತೀರ್ಣ ಅಡಿಗಳು. ಪೂರ್ವ ಪಶ್ಚಿಮ	ಉತ್ತರ ದಕ್ಷಿಣ	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
1	74	ಕೃಷ್ಣಶೆಟ್ಟಿಯ ಮಗ ಅರವೇಟಿ ವೆಂಕಟರಾಯಸೆಟ್ಟಿ.	11 ಅಂಕಣಗಳ ಕೆಳಗಿನ ಮಹಡಿ, 1 ಅಂಕಣದ ತಾರಸಿ, 9 ಅಂಕಣಗಳ ತಖ್ತಪೋಷು, 2 ಅಂಕಣಗಳ ತಖ್ತಪೋಷು ವ ತಾರಸಿ, 8 ಅಂಕಣಗಳ ಮೇಲಮಹಡಿ, 4 ಅಂಕಣಗಳ ತಖ್ತಪೋಷು, 3½ ಅಂಕಣಗಳ ತಖ್ತಪೋಷು ವ ತಾರಸಿ, 2 ಅಂಕಣಗಳ 3ನೆ ಮಹಡಿ ಹೆಂಚಿನ ಕೈಸಾಲೆ.	56 7½	9 16	ಕೋಟೆ ದೊಡ್ಡ ರಸ್ತೆ	ಬಕ್ಷಿ ವೀರಪ್ಪಾಜಿಯವರ ಮನೆ	ಬಕ್ಷಿ ವೀರಪ್ಪಾಜಿಯವರ ಮನೆ	ಸಿಂಗಮ್ಮನ ಮನೆ
2	73 72 ವ 71	ಮೃತಪಟ್ಟ ಸಾಹುಕಾರ್ ಕೇಶವಾಚಾರ್ರ ಹೆಂಡತಿ ಸಿಂಗಮ್ಮ	18 ಅಂಕಣಗಳ ಕೆಳಗಿನ ಮಹಡಿ, 12 ಅಂಕಣಗಳ ತಖ್ತಪೋಷು, 3 ಅಂಕಣಗಳ ತಖ್ತಪೋಷು ವ ತಾರಸಿ, 3 ಅಂಕಣಗಳ ತಾರಸಿ, 15 ಅಂಕಣಗಳ ಮೇಲ ಮಹಡಿ, 9 ಅಂಕಣಗಳ ತಖ್ತಪೋಷು, 3 ಅಂಕಣಗಳ ತಖ್ತಪೋಷು ವ ತಾರಸಿ.	56	17½	ಡಿಟೋ	ಡಿಟೋ	ವೆಂಕಟ್ರಾಯಚೆಟ್ಟಿಯ ಮನೆ	ಮುನಿಸಾಮಿಸೆಟ್ಟಿಯ ಮನೆ
3	70 ವ 69	ವೆಂಕಟರಮಣ ಸೆಟ್ಟಿಯ ಮಗ ಮುನಿಸಾಮಿ ಸೆಟ್ಟಿ.	12 ಅಂಕಣಗಳ ಕೆಳಗಿನ ಮಹಡಿ, 11 ಅಂಕಣಗಳ ತಾರಸಿ, 11 ಅಂಕಣಗಳ ಮೇಲಮಹಡಿ, 11 ಅಂಕಣಗಳ ತಾರಸಿ, 8 ಅಂಕಣಗಳ ಅರ್ಧ ಎತ್ತರವಾದ ಹೆಂಚಿನ ಮಾಳಿಗೆ, ಭಾವಿ ಮತ್ತು ಖಾಲಿ ಜಮೀನು.	56	11¼	ಡಿಟೋ	ಡಿಟೋ ಮತ್ತು ದೇವಕಿಬಾಯಿಯ ಮನೆ	ಸಿಂಗಮ್ಮನ ಮನೆ	ದೇವಕಿಬಾಯಿಯ ಮನೆ
4	68	ಮೃತಪಟ್ಟ ದೇವಕಿ ಬಾಯಿ	30 ಅಂಕಣಗಳ ಕೆಳಗಿನ ಮಹಡಿ, 16 ಅಂಕಣಗಳ ತಖ್ತಪೋಷು, 10 ಅಂಕಣಗಳ ತಖ್ತಪೋಷು ವ ತಾರಸಿ, 4 ಅಂಕಣಗಳ ತಾರಸಿ, 2 ಅಂಕಣಗಳ ಹೆಂಚಿನ ಕೈಸಾಲೆ, 27½ ಅಂಕಣಗಳ ಮೇಲ ಮಹಡಿ, 4½ ಅಂಕಣಗಳ ತಖ್ತಪೋಷು ವ ತಾರಸಿ, 2 ಅಂಕಣಗಳ ತಾರಸಿ, 8 ಅಂಕಣಗಳ ½ ಎತ್ತರವಾದ ಹೆಂಚಿನ ಮೂರನೆ ಮಹಡಿ, 2 ಅಂಕಣಗಳ ತಾರಸಿ ಮತ್ತು ಬಂದು ಭಾವಿ.	66½ 7 15	45 14 12	ಡಿಟೋ	ಬಕ್ಷಿ ವೀರಪ್ಪಾಜಿಯವರ ತಬೇಲೆ ಮತ್ತು ಮನೆ	ಮುನಿಸಾಮಿಸೆಟ್ಟಿಯ ಮನೆ	ಗಲ್ಲಿ
5	...	ಬಕ್ಷಿ ವೀರಪ್ಪಾಜಿ ಅರಸಿನವರು.	16 ಅಂಕಣಗಳ ಹೆಂಚಿನ ಮನೆ, 6 ಅಂಕಣಗಳ ಹೆಂಚಿನ ಕೈಸಾಲೆ, 8 ಅಂಕಣಗಳ ಮೇಲಮಹಡಿ, 8 ಅಂಕಣಗಳ ½ ಎತ್ತರವಾದ ಹೆಂಚಿನ ಕೈಸಾಲೆ, 7 ಅಂಕಣಗಳ ತಖ್ತಪೋಷು, ಭಾವಿ ಮತ್ತು ಖಾಲಿ ಜಮೀನು.	21 31 19 19	107 38 14½ 20	ಅವರ ಸ್ವಂತಮನೆ ಮತ್ತು ದೇವಕೀಬಾಯಿಯ ಮನೆ	ಅರಮನೆ ಜಮೀನು	ಜಮೀನು ಮತ್ತು ಅವರ ಸ್ವಂತ ಮನೆ	ಗಲ್ಲಿ ಮತ್ತು ಅರಮನೆ ಕಟ್ಟಡ

1407

414

ಜಂಜರ್ ನಂ.	ಡೋರ್ ನಂ.	ಮಾಲೀಕರ ಹೆಸರು.	ತೆಗದುಕೊಳ್ಳಬೇಕಾಗಿರುವ ಸ್ವತ್ತಿನ ವಿವರ.	ವಿಸ್ತೀರ್ಣ ಅಡಿಗಳು. ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.	ಚಕ್ಕುಬಂದಿ. ಪೂರ್ವ.	ಪಶ್ಚಿಮ.	ಉತ್ತರ.	ದಕ್ಷಿಣ.
6	718	ಮರಿಲಿಂಗಯ್ಯನ ಮಗ ಜವರಂಣ.	24 ಅಂಕಣಗಳ ಕೆಳಗಿನ ಮಹಡಿ, 11½ ಅಂಕಣಗಳ ತಖ್ತಪೋಷು, 3 ಅಂಕಣಗಳ ಜೊಂಬಿನ ಅಟ್ಟ, 5 ಅಂಕಣಗಳ ತಾರಸಿ, 10 ಅಂಕಣಗಳ ಮೇಲಮಹಡಿ, 5 ಅಂಕಣಗಳ ¾ ಎತ್ತರವಾದ ಮಾಳಿಗೆ, 1 ಅಂಕಣದ ಹೆಂಚಿನ ಕೈಸಾಲೆ, 9 ಅಂಕಣಗಳ ತಖ್ತಪೋಷು, ಮತ್ತು ಖಾಲಿ ಜಮೀನು.	41	34	ಮೆ॥ ಸಿದ್ದರಾಜೆ ಅರಸಿನವರ ಮನೆ	ಗಲ್ಲಿ	ಹೊನ್ನಪ್ಪ, ಪಾಪಂಣಿ, ತಿಮ್ಮಯ್ಯ ಮತ್ತು ಮರಿಯಂಣ ಇವರುಗಳಿಗೆ ಸೇರಿದ ಮನೆಗಳು	ಗಲ್ಲಿ
7	717	ವೆಂಕಟಪ್ಪನ ಮಕ್ಕಳಾದ ಹೊನ್ನಪ್ಪ, ಪಾಪಂಣಿ ಮತ್ತು ತಿಮ್ಮಯ್ಯ.	10 ಅಂಕಣಗಳ ಕೆಳಗಿನ ಮಹಡಿ, 9¾ ಅಂಕಣಗಳ ತಖ್ತಪೋಷು, 10 ಅಂಕಣಗಳ ಮೇಲ ಮಹಡಿ, 10 ಅಂಕಣಗಳ ತಖ್ತಪೋಷು, ಮತ್ತು ಖಾಲಿ ಜಮೀನು.	19	30½	ಮರಿಯಂಣನ ಮನೆ	ಡಿಟೋ	ಗಲ್ಲಿ	ಜವರಂಣನ ಮನೆ
8	716	ಲಕ್ಷ್ಮಿಪತಯ್ಯನ ಮಗ ರಿಸಾಲ್‌ದಾರ್ ಮರಿಯಂಣ.	15 ಅಂಕಣಗಳ ಕೆಳಗಿನ ಮಹಡಿ, 14½ ಅಂಕಣಗಳ ತಖ್ತಪೋಷು ವ ತಾರಸಿ, 6 ಅಂಕಣಗಳ ಮೇಲಿನ ಮಹಡಿ, 4 ಅಂಕಣಗಳ ತಖ್ತಪೋಷು, 1 ಅಂಕಣದ ಜಿಂಕು ತಗಡು ಹಾಕಿದ ಕೈಸಾಲೆ, 1 ಅಂಕಣದ ಹೆಂಚಿನ ಕೈಸಾಲೆ, ಮತ್ತು ಖಾಲಿ ಜಮೀನು.	21½	30½	ಮೆ॥ ನಾರಾಯಣರಾಯರ ಮನೆ	ಹೊನ್ನಪ್ಪ, ಪಾಪಂಣಿ ಮತ್ತು ತಿಮ್ಮಪ್ಪ ಇವರಿಗೆ ಸೇರಿದ ಮನೆ	ಇವರಿಗೂ ಮತ್ತು ಹೊನ್ನಪ್ಪ, ಪಾಪಂಣಿ ವ ತಿಮ್ಮಪ್ಪ ಇವರುಗಳಿಗೆ ಸೇರಿದ ಬಹುತ್ವದ ಪಾಯಿಖಾನೆ ಜಮೀನು	ಡಿಟೋ
9	..	ಹೊನ್ನಪ್ಪ, ಪಾಪಂಣಿ, ತಿಮ್ಮಪ್ಪ ಮತ್ತು ಮರಿಯಮ್ಮ	ಮಂಣಿನ ಪೌಳಿಗೋಡೆ ಸಹಿತವಾಗಿ ಪಾಯಿಖಾನೆ ಖಾಲಿ ಜಮೀನು.	15	4½	ಡಿಟೋ	ಗಲ್ಲಿ	ಕೊಟ್ಟಿಗೆ ತಿಮ್ಮಪ್ಪನ ಮನೆ	ರಿಸಾಲ್‌ದಾರ್ ಮರಿಯಂಣನ ಮನೆ
10	715	ಹನುಮಂತಯ್ಯನ ಮಗ ಕೊಟ್ಟಿಗೆ ಕೆಂಪಯ್ಯ.	6 ಅಂಕಣಗಳ ಹೆಂಚಿನ ಮನೆ, 7 ಅಂಕಣಗಳ ಹೆಂಚಿನ ಕೈಸಾಲೆ, ಮತ್ತು ಮಂಣಿನ ಪೌಳಿಗೋಡೆ ಸಹಿತವಾಗಿ ಖಾಲಿ ಜಮೀನು.	20 13	40 26	ಕೊಟ್ಟಿಗೆ ತಿಮ್ಮಪ್ಪನ ಮನೆ	ಡಿಟೋ	ಗಲ್ಲಿ	ಗಲ್ಲಿ
11	714	ವೆಂಕಟರಮಣಪ್ಪನ ಮಗ ಕೊಟ್ಟಿಗೆ ತಿಮ್ಮಪ್ಪ.	ಮುಂಭಾಗದ ಮನೆ 11 ಅಂಕಣದ ಕೆಳಗಿನ ಮಹಡಿ, 10½ ಅಂಕಣಗಳ ತಖ್ತಪೋಷು, 9 ಅಂಕಣಗಳ ಮೇಲಮಹಡಿ, 2 ಅಂಕಣಗಳ ಹೆಂಚಿನ ಕೈಸಾಲೆ, 9 ಅಂಕಣಗಳ ತಖ್ತಪೋಷು, ಹಿಂಭಾಗದ ಮನೆ, 9 ಅಂಕಣಗಳ ಕೆಳಗಿನ ಮಹಡಿ, 3 ಅಂಕಣಗಳ ತಖ್ತಪೋಷು ವ ತಾರಸಿ, 6 ಅಂಕಣಗಳ ತಖ್ತಪೋಷು, 6 ಅಂಕಣಗಳ ಮೇಲಮಹಡಿ, 6 ಅಂಕಣಗಳ ತಖ್ತಪೋಷು, ಭಾವಿ 1 ಮತ್ತು ಖಾಲಿ ಜಮೀನು.	22½	65	ಹರಿರಾಯರ ಮನೆ	ಕೊಟ್ಟಿಗೆ ಕೆಂಪಯ್ಯನ ಮನೆ ಮತ್ತು ಜಮೀನು	ಡಿಟೋ	ಹೊನ್ನಪ್ಪ, ಪಾಪಂಣಿ, ತಿಮ್ಮಪ್ಪ ವ ಮರಿಯಂಣ ಇವರುಗಳಿಗೆ ಸೇರಿದ ಪಾಯಿಖಾನೆ ಜಮೀನು ಮತ್ತು ಕೆಂಪಯ್ಯನ ಮನೆ

ತಾರೀಖು 7ನೆ ಸೆಪ್ಟಂಬರ್ 1904.

ನಂ. ರೆ. 2157 — ಫಾ. 19—03-3, ಸ್ಞ 1897ನ ಇಸವಿಯ ನವೆಂಬರ್ 6ನೆ ಪುರ್ಸ್ತಂ 4098—ಫಾ. ಫೈ. 40—95ನೆ ನಂಬರ್ ಇಸ್ತಿಹಾರ್ನಾಮೆಯಿಂದ 1878ನೆ ಇಸವಿಯ ಫಾರೆಸ್ಟ್ ರೂಲುಗಳ 16ನೆ ಸೆಕ್ಷನಿನ ನಿಯಮಗಳನುಸಾರ ಪ್ಯೋಯಲ್ ರಿಜರ್ವಾಗಿ ಫಾರೆಸ್ಟ್ ಕ್ಞಸರ್ವೇಟರವರ ಅಧಿಕಾರದಲ್ಲಿಯೂ ಮತ್ತು ಆಡಳಿತದಲ್ಲಿಯೂ ಇಡಲ್ಪಟ್ಟ ಬೆಂಗಳೂರು ಡಿಸ್ಟ್ರಿಕ್ಟ್ ಕಾಣಕಾಣ ಹಳ್ಳಿ ತಾಲ್ಲೂಕಿನಲ್ಲಿರುವ ಬುಟ್ಟಗುಂಡೀಯನ ಬೆಟ್ಟನಾದ ಡಿಸ್ಟ್ರಿಕ್ಟ್ ಫಾರೆಸ್ಟ್ ರವಿನ್ಯೂ ಇಲಾಖೆಯ ಅಧಿಕಾರಕ್ಕೆ ಇದರಿಂದ ಪುನಃ ಇಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಬಿ. ಕೆ. ವೆಂಕಟವತದಯ್ಯಂಗಾರ್,
ಜಸತಲ್ ಹ ರೆವಿನ್ಯೂ ಇಲಾಖೆಗಳ ಗವರ್ನಮೆಂಟ್ ಸೆಕ್ರಿಟರಿ.

ಮುಜರೈ.

ಇಸ್ತಿಹಾರ್ನಾಮಾ.

ತಾರೀಖು 9ನೆ ಸೆಪ್ಟಂಬರ್ 1904.

ನಂ. 1012 ಮು. ಫೈ. 54—01, ಸ್ಞ 1894ನೆ ಏಪ್ರಿಲ್ 27ನೆ ಪುರ್ಸ್ತಂ 915ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಮೊಕರರ್ರಾಡಲ್ಪಟ್ಟವರಿಗೆ ಬದಲಾಗಿ ಇದರಡಿ ಕಂಡ ಜನಗಳು ಮಾಗಡಿ ತಾಲ್ಲೂಕಿನ ಸಾಖನದುರ್ಗದಲ್ಲಿರುವ ಶ್ರೀ ನರಸಿಂಹ ಸ್ವಾಮಿ ದೇವಸ್ಥಾನದ ಕೆಲಸಗಳನ್ನು ಮೇಲ್ವಿಚಾರಣೆ ಮಾಡುವ ಬಗ್ಗೆ ಧರ್ಮದರ್ಶಿಗಳಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

1. ಮು|| ರಾ|| ರಾ|| ಚನ್ನಪ್ಪನವರು.
2. ಮು|| ರಾ|| ರಾ|| ಪಟೀಲ್ ಚಿಕ್ಕ ಈರೇಗೌಡರು.

ಹುಕುಂ ಬಮೋಜೀಬ್,
ಎಲ್. ಅನಂತಸ್ವಾಮಿರಾವ್,
ಮುಜರೈ ಇಲಾಖೆಯ ಸೆಕ್ರಿಟರಿ.

417

1413

ಮೈಸೂರ ಗಜೆಟ್ಟು.

ಸಂ. 39.] ಸರ್ಕಾರದಿಂದ ಘೋಷಿತ ಆದ್ದು. [ನಂ. 37.

ಬೆಂಗಳೂರು, ಗುರುವಾರ, ಸೆಪ್ಟೆಂಬರ್ ತಾ|| 15, ಸ|| 1904.

IIನೆ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಜೀಫ್ ಜಡ್ಜ್‌ಗಳು ವಗ್ಗೈಕೆಗಳಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ವಿದ್ಯಾಭ್ಯಾಸದ ಇಲಾಖೆ.

ಪ್ರಕಟನ ಪತ್ರಿಕೆ.

ಮೈಸೂರು ದೇಶೀಯ ಪರೀಕ್ಷೆಗಳು.

ಸ|| 1904ನೆ ಇಸವಿ ಸೆಪ್ಟಂಬರ್ ತಾರೀಖು 2ನೆ ಡಿ. ನಂಬರು 10.

ಮೈಸೂರು ದೇಶೀಯ ಪರೀಕ್ಷೆಗಳು ಸ|| 1904ನೆ ಇಸವಿ ನವಂಬರು ತಿಂಗಳು ಮಂಗಳವಾರ ಹದಿನೈದನೇ ತಾರೀಖಿನಿಂದ ಆರಂಭವಾಗಿ ಪ್ರತಿ ಡಿಸ್ಟ್ರಿಕ್ಟಿನ ಮುಖ್ಯಸ್ಥಳ (Head-quarters) ದಲ್ಲಿಯೂ ಮತ್ತು ಚಿಕ್ಕಬಳ್ಳಾಪುರದಲ್ಲಿಯೂ, ಚನ್ನಪಟ್ಟಣದಲ್ಲಿಯೂ ನಡೆಯಿಸಲ್ಪಡುವವು :—

ಪರೀಕ್ಷೆಗಳು ಇದರಲ್ಲೇ ಕಂಡ ಕಾಲ ಮತ್ತು ವಿಷಯಗಳ ಕ್ರಮಗಳನ್ನನುಸರಿಸಿ ನಡೆಯಿಸಲ್ಪಡುವವು :—

ಮೈಸೂರು ಲೋಯರ್ ಸೆಕಂಡರಿ ಪರೀಕ್ಷೆ.

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಮೊದಲನೇ ದಿವಸ	10ರಿಂದ 12—30 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಇಂಗ್ಲಿಷ್ ವ್ಯಾಕರಣ ಮತ್ತು ಭಾಷಾಗ್ರಂಥ.	60
		ಸಂಸ್ಕೃತ ಮತ್ತು ಫಾರಸಿಯ ವ್ಯಾಕರಣ ಮತ್ತು ಭಾಷಾ ಗ್ರಂಥಗಳು	65
	1—30ರಿಂದ 2—30ರ ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಭಾಷಾಂತರೀಕರಣ—ಇಂಗ್ಲಿಷ್, ಸಂಸ್ಕೃತ, ಫಾರಸಿ	
		ಇಂಗ್ಲಿಷ್ ಪ್ರಬಂಧರಚನೆ, ಇಂಗ್ಲೀಷನ್ನು ದೇಶಭಾಷೆಯಾಗಿ ಉಳ್ಳವರಿಗೆ	35
	2—35ರಿಂದ 3-5 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಉಕ್ತಲೇಖನ – ಇಂಗ್ಲೀಷ್	15
		ಸಂಸ್ಕೃತ ; ಫಾರಸಿ	10
	3—10ರಿಂದ 3—40 ವರೆಗೆ	ಪ್ರಥಮ ಅಥವಾ ಆವಶ್ಯಕ ಭಾಷೆ—	
		ಕೈಬರವಣಿಗೆ – ಇಂಗ್ಲೀಷ್ ; ಸಂಸ್ಕೃತ ; ಫಾರಸಿ ..	10
	3—45ರಿಂದ 4—15 ವರೆಗೆ	ಉರ್ದು ಉಕ್ತಲೇಖನ	10
	4—20ರಿಂದ 4—50 ವರೆಗೆ	ಉರ್ದು ಕೈಬರವಣಿಗೆ	10

ದಿವಸ.	ಕಾಲ.	ವಿಷಯಗಳು.	ಅಂಕಗಳು.
ಎರಡನೇ ದಿವಸ	10ರಿಂದ 1ರ ವರೆಗೆ	ಕನ್ನಡ ಪ್ರಥಮ ಅಥವಾ ದ್ವಿತೀಯ ಭಾಷೆ—	
		ಕನ್ನಡ ವ್ಯಾಕರಣ, ಭಾಷಾಗ್ರಂಥ ಮತ್ತು ಪ್ರಬಂಧರಚನೆ	100
		ಫಾರಸಿ ದ್ವಿತೀಯ ಭಾಷೆ —	
		ಫಾರಸಿ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ...	100
	2ರಿಂದ 5ರ ವರೆಗೆ	ಸಂಸ್ಕೃತ ದ್ವಿತೀಯ ಭಾಷೆ—	
		ಸಂಸ್ಕೃತ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ ..	100
		ಲಾರ್ಡ್ ದ್ವಿತೀಯ ಭಾಷೆ	
		ಲಾರ್ಡ್ ವ್ಯಾಕರಣ, ಭಾಷಾಗ್ರಂಥ ಮತ್ತು ಭಾಷಾಂತರೀಕರಣ .	120
		ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ—	
		ತೆಲುಗು, ಮತ್ತು ಉರ್ದು, ವ್ಯಾಕರಣ, ಭಾಷಾಗ್ರಂಥಗಳು ಮತ್ತು ಪ್ರಬಂಧರಚನೆ	100
ಮೂರನೇ ದಿವಸ	10ರಿಂದ 12 ವರೆಗೆ	ಅಂಕಗಣಿತ	100
	12–5ರಿಂದ 12–35 ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ —	
		ಕನ್ನಡ ಮತ್ತು ತೆಲುಗು ಅಕ್ಷರ ಸಂಯೋಜನ	10
	12–40ರಿಂದ 1–10ವರೆಗೆ	ದೇಶಭಾಷೆ ಪ್ರಥಮ ಅಥವಾ ದ್ವಿತೀಯ ಭಾಷೆ —	
		ಕನ್ನಡ ಮತ್ತು ತೆಲುಗು ಕೈ ಬರವಣಿಗೆ	10
	2ರಿಂದ 3–30ವರೆಗೆ	ಆರೋಗ್ಯ ಶಾಸ್ತ್ರ	100
	3–45ರಿಂದ 4–15 ವರೆಗೆ	ಐಚ್ಛಿಕ ದ್ವಿತೀಯ ಭಾಷೆ —	
		ಸಂಸ್ಕೃತ ಮತ್ತು ಫಾರಸಿ ಅಕ್ಷರ ಸಂಯೋಜನ	10
	4–20ರಿಂದ 4–50 ವರೆಗೆ	ಐಚ್ಛಿಕ ದ್ವಿತೀಯ ಭಾಷೆ —	
		ಸಂಸ್ಕೃತ ಮತ್ತು ಫಾರಸಿ ಕೈ ಬರವಣಿಗೆ	10
ನಾಲ್ಕನೇ ದಿವಸ.	10ರಿಂದ 1ರ ವರೆಗೆ	ಚರಿತ್ರೆ, ಭೂಗೋಳಶಾಸ್ತ್ರ ಮತ್ತು ಭೂಪಠ ಬರೆಯುವುದು	120
	2ರಿಂದ 3–35ರ ವರೆಗೆ	ವ್ಯವಸಾಯ ಶಾಸ್ತ್ರ	100
ಐದನೇ ದಿವಸ ...	10ರಿಂದ 11–30 ವರೆಗೆ	ಕ್ಷೇತ್ರಗಣಿತ	100
	11–35ರಿಂದ 1–5 ವರೆಗೆ	ಪ್ರಾಕೃತಿಕ ಭೂಗೋಳ ಶಾಸ್ತ್ರ	100
	2 ರಿಂದ 3—30 ವರೆಗೆ	ಹೂಲಿಗ	50
		ಆಂಗ್ಲೇಯರ ಚರಿತ್ರೆ	100
	3—35ರಿಂದ 5—5ರವರೆಗೆ	ಪಾಕಶಾಸ್ತ್ರ	50
		ಗೃಹಕೃತ್ಯ ನಡಯಿಸುವ ಕ್ರಮ	100

ಮೈಸೂರು ದೇಶಭಾಷೆಯು ಅಪ್ಪರ್ ಸೆಕಂಡರಿ ಪರೀಕ್ಷೆ.

ದಿನ.	ಘಂಟೆ.	ವಿಷಯಗಳು.	ಅಂಕಗಳು.
ಮೊದಲನೇ ದಿನ	10 - 1	ಪ್ರಥಮ ಭಾಷೆ — ಕನ್ನಡ ಅಥವಾ ಉರ್ದು ಗ್ರಂಥಗಳು	60
	2—4	ಅದೇ ಡಿಟೋ ಫ್ರೌಢವ್ಯಾಕರಣ	40
	4·5—5 5	ಅದೇ ಡಿಟೋ ಪ್ರಬಂಧರಚನೆ	30
ಎರಡನೇ ದಿನ ...	10—1	ಪ್ರಥಮ ಅಥವಾ ದ್ವಿತೀಯ ಭಾಷೆ — ಪರ್ಷಿಯ್ ಗ್ರಂಥಗಳು	60
	2—4	ಡಿಟೋ ಡಿಟೋ ವ್ಯಾಕರಣ	40
	4·5—5·5	ಡಿಟೋ ಡಿಟೋ ಪರ್ಷಿಯ್ ಭಾಷೆಗೆ ಭಾಷಾಂತರೀಕರಣ	30
ಮೂರನೇ ದಿನ...	10—1	ದ್ವಿತೀಯ ಭಾಷೆ — ಸಂಸ್ಕೃತ ಅಥವಾ ಅರಾಬಿಕ್, ಗ್ರಂಥಗಳು, ವ್ಯಾಕರಣ, ಪದವಿನ್ಯಾಸ, ಭಾಷಾ ಶೈಲಿ	60
	2—5	ಭಾಷಾಂತರೀಕರಣ ...	70

ದಿನ.	ಘಂಟೆ.	ವಿಷಯಗಳು.	ಅಂಕಗಳು.	
ನಾಲ್ಕನೇ ದಿನ ...	10—12	ರೇಖಾಗಣಿತ, ಕ್ಷೇತ್ರಗಣಿತ ...	40	120
	1—3·30	ಅಂಕಗಣಿತ ...	50	
	3·35—5·5	ಬೀಜಗಣಿತ ...	30	
ಐದನೇ ದಿನ ...	10—12	ಪ್ರಾಕೃತಿಕ ಶಾಸ್ತ್ರ (Physical science)	40	120
	1—3	ಆರೋಗ್ಯಶಾಸ್ತ್ರ ...	40	
	3·5—5·5	ಕೃಷಿಶಾಸ್ತ್ರ ...	40	
ಆರನೇ ದಿನ ...	10—1	ಚರಿತೆ ...	50	100
	2—5	ಭೂಗೋಳ ಶಾಸ್ತ್ರ ...	50	
			ಜುಮ್ಲಾ	600

ಪರೀಕ್ಷೆಯರಿಗೆ ಹೊಲಿಗೆಯಲ್ಲಿಯೂ ಸಂಗೀತದಲ್ಲಿಯೂ ಪರೀಕ್ಷೆಯು ಏಳನೇದಿನ ತತ್ಪೂರ್ವ ಪ್ರಕಟಿಸಲ್ಪಡುವ ಸ್ಥಳ, ಕಾಲಗಳಲ್ಲಿ ನಡೆಯುವುದು.

ಕರ್ನಾಟಕ ಪಂಡಿತ ಪರೀಕ್ಷೆ.

ದಿನ.	ಘಂಟೆ.	ವಿಷಯಗಳು.	ಅಂಕಗಳು.	
ಮೊದಲನೇ ದಿನ ...	10—1	ಕನ್ನಡ ವ್ಯಾಕರಣ ...	120	200
	2—5	ಕನ್ನಡ ಛಂದಸ್ಸು ಮತ್ತು ಅಲಂಕಾರ ...	80	
ಎರಡನೇ ದಿನ ...	10—1	ಕನ್ನಡ ಗ್ರಂಥಗಳು ಮೊದಲನೇ ಪತ್ರಿಕೆ ...	100	400
	2—5	ಅದೇ ಎರಡನೇ ಪತ್ರಿಕೆ ...	100	
ಮೂರನೇ ದಿನ ...	10—1	ಅದೇ ಮೂರನೇ ಪತ್ರಿಕೆ ...	100	
	2—5	ಅದೇ ನಾಲ್ಕನೇ ಪತ್ರಿಕೆ ...	100	
ನಾಲ್ಕನೇ ದಿನ ...	10—1	ಕನ್ನಡ ಪ್ರಬಂಧರಚನೆ ...	100	
	2—5	ಭಾಷಾಂತರೀಕರಣ ...	100	
ಐದನೇ ದಿನ ...	10—1	ಸಂಸ್ಕೃತ ವ್ಯಾಕರಣ ...	80	200
	2—5	ಸಂಸ್ಕೃತ ಛಂದಸ್ಸು ಮತ್ತು ಅಲಂಕಾರ ...	120	
ಆರನೇ ದಿನ ...	10—1	ಸಂಸ್ಕೃತ ಗ್ರಂಥಗಳು ಮೊದಲನೇ ಪತ್ರಿಕೆ ...	100	200
	2—5	ಅದೇ ಎರಡನೇ ಪತ್ರಿಕೆ ...	100	

ಇದರಡಿ ಕಂಡ ನಿಬಂಧನೆಗಳಿಗೆ ವಿದ್ಯಾರ್ಥಿಗಳು ಮುಖ್ಯವಾಗಿ ಗಮನವನ್ನು ಕೊಡತಕ್ಕದ್ದು:—

(1) ಪರೀಕ್ಷೆಯು ಆರಂಭಿಸುವದಕ್ಕೆ ಕ್ಲಿಪ್ತವಾದ ಕಾಲ ಮೊದಲು ಅರ್ಧ ಘಂಟೆ ಆಗುವ ವರೆಗೂ ಪರೀಕ್ಷಾ ಕೊಠಡಿಯನ್ನು ಬಿಡಲು ಯಾವ ದಿವಸದಲ್ಲಿಯಾಗಲಿ ಯಾವ ವಿದ್ಯಾರ್ಥಿಗೂ ಅಪ್ಪಣೆ ಕೊಡಲ್ಪಡುವದಿಲ್ಲವು. ಮತ್ತು ಅಂಥಾ ಅರ್ಧ ಘಂಟೆ ಕಳದ ಮೇಲೆ ಬರುವ ಯಾವ ವಿದ್ಯಾರ್ಥಿಗಳಿಗೂ ಪ್ರವೇಶಕ್ಕೆ ಅವಕಾಶ ಹುಟ್ಟಲಾರದು.

(2) ಪರೀಕ್ಷೆ ಆಗುತ್ತಿರುವ ಕಾಲದಲ್ಲಿ ಪರೀಕ್ಷಾ ಕೊಠಡಿಯನ್ನು ಒಂದಾವರ್ತಿ ಬಿಟ್ಟುಬಂದನಂತರ ಪುನಹ ಪ್ರವೇಶಿಸಲು ಯಾವ ವಿದ್ಯಾರ್ಥಿಗೂ ಅವಕಾಶ ಉಂಟಾಗಲಾರದು. ಅಲ್ಲದ ತನ್ನ ಉತ್ತರ ಕಾಗದಗಳನ್ನು ಸಂಪೂರ್ತಿಯಾಗಿ ಕೊಟ್ಟವಿನಹ ಪರೀಕ್ಷಾ ಸ್ಥಳವನ್ನು ಬಿಟ್ಟುಬರುವದಕ್ಕೆ ಸಹ ಅವಕಾಶ ಕೊಡುವದಿಲ್ಲವು.

(3) ಯಾವ ವಿದ್ಯಾರ್ಥಿಯೇ ಆಗಲಿ ಮತ್ತೊಬ್ಬ ವಿದ್ಯಾರ್ಥಿಯೊಡನೆ ಮಾತನಾಡುತ್ತಲಿದ್ದದ್ದಾಗಿಯಾಗಲಿ ಅಥವಾ ಇನ್ಯಾವ ವಿಧದಿಂದಲಾದರೂ ಬಳಸುತ್ತಿರುವದಾಗಿಯಾಗಲಿ ಕಂಡುಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೂಡ್ಲೆ ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ಸಂಗತಿಯು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(4) ಪರೀಕ್ಷಾ ಕೊಠಡಿಯೊಳಕ್ಕೆ ಸ್ಲೇಟುಗಳನ್ನಾಗಲಿ, ರೂಲರುಗಳನ್ನಾಗಲಿ, ಪುಸ್ತುಕಗಳನ್ನಾಗಲಿ, ಬರದ ಕಾಗದಗಳನ್ನಾಗಲಿ, ಅಥವಾ ಇನ್ಯಾವ ವಿಧವಾದ ಕಾಗದ ಪತ್ರವನ್ನಾಗಲಿ, ತೆಗೆದುಕೊಂಡು ಹೋಗಲು ಯಾವ ವಿದ್ಯಾರ್ಥಿಗಳಿಗೂ ಯಾವ ಸಂದರ್ಭದಲ್ಲಿಯೂ ಅವಕಾಶ ಕೊಡುವದಿಲ್ಲವು. ಯಾವ ವಿದ್ಯಾರ್ಥಿಯಾಗಲಿ, ಈ ನಿಬಂಧನೆಗೆ ವಿರುದ್ಧವಾಗಿ ಆಚರಿಸುತ್ತಿರುವದಾಗಿಯಾಗಲಿ ಅಥವಾ ಇನ್ಯಾವ ಅಕೃತ್ಯಗಳನ್ನು ನಡೆಸುತ್ತಿರುವದಾಗಿಯಾಗಲಿ ಕಂಡುಹಿಡಿಯಲ್ಪಟ್ಟರೆ ಅಂಥಾ ವಿದ್ಯಾರ್ಥಿಯು ಕೊಠಡಿಯಿಂದ ಹೊರಗೆ ಹೊರಡಿಸಲ್ಪಡುವದಲ್ಲದೆ ಸದರೀ ನಡವಳಿತವು ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರಿಗೆ ರಿಪೋರ್ಟು ಮಾಡಲ್ಪಡುವದು.

(5) ವಿದ್ಯಾರ್ಥಿಯು ತನ್ನ ಪತ್ರವನ್ನು ಪೂರೈಸಿದ ಮೇಲೆ ತನ್ನ ಸ್ಥಳದಲ್ಲಿಯೇ ಇದ್ದು ನಿಂತು ಸೂಪರ್ಣಿಟೆಂಡೆಂಟರು ಕಾಗದಗಳನ್ನು ತೆಗದುಕೊಳ್ಳುವ ವರೆಗೂ ಹಾಗೆಯೇ ನಿಂತಿರತಕ್ಕದ್ದು. ಯಾವದನ್ನಾದರೂ ಕೇಳಲಪೇಕ್ಷಿಸುವ ಯಾವ ವಿದ್ಯಾರ್ಥಿಯೇ ಆಗಲಿ ಮೇಲೆ ಹೇಳಿದ ರೀತಿ ನಡೆಸತಕ್ಕದ್ದೇ ಹೊರ್ತು ತನ್ನ ಸ್ಥಳವನ್ನು ಸರ್ವಥಾ ಬಿಡಕೂಡದು.

(6) ವಿದ್ಯಾರ್ಥಿಯ ಹೆಸರು, ರಿಜಿಸ್ಟರ್ ನಂಬರ್ ಇವುಗಳನ್ನು ಬರೆಯದೇ ಕಳುಹಿಸಲ್ಪಟ್ಟ ಯಾವ ಪತ್ರಿಕೆಯೂ ಪರೀಕ್ಷಿಸಲ್ಪಡುವದಿಲ್ಲವು.

(7) ಪ್ರಶ್ನೆ ಪತ್ರಗಳು ವಿನಹ ಯಾವ ಕಾಗದಗಳನ್ನಾಗಲಿ ಪರೀಕ್ಷಾ ಕೊಠಡಿಯಿಂದ ಹೊರಗೆ ತೆಗದುಕೊಂಡು ಹೋಗಲು ವಿದ್ಯಾರ್ಥಿಗಳಿಗೆ ಅಪ್ಪಣೆ ಕೊಡುವದಿಲ್ಲವು.

(8) ವಿದ್ಯಾರ್ಥಿಗಳು ಕಾಗದಗಳನ್ನ ಹರಿಯದಂತೆಯೂ ಮತ್ತು ನೆಲದ ಮೇಲೆ ಕಾಗದಗಳನ್ನ ಬಿಸಾಡದಂತೆಯೂ ನಿಷೇಧಿಸಲ್ಪಟ್ಟಿರುತ್ತಾರೆ. ಕೆಟ್ಟುಹೋದ ವಿಸಿಷ್ಟ ಕಾಗದಗಳೂ ವಿದ್ಯಾರ್ಥಿಯು ಬರೆಯುತ್ತಲಿದ್ದ ಮೇಜಿನಮೇಲೆಯೇ ಬಿಡಲ್ಪಡಬೇಕು.

ಎಚ್. ಜೆ. ಭಾಭಾ,

ಇನ್‌ಸ್ಪೆಕ್ಟರ್ ಜನರಲ್ ಆಫ್ ಎಡ್ಯುಕೇಷನ್.

ಫಾರೆಸ್ಟ್ ಇಲಾಖಾ.

ಸಂದಲ್ ಹರಾಜು ನೋಟಿಫಿಕೇಷನ್.

ತಾರೀಖು 18ನೆ ಆಗಸ್ಟು 1904ನೆ ಇಸವಿ.

ಇದರಿಂದ ಸಮಸ್ತ ಜನರಿಗು ತಿಳಿಯಪಡಿಸುವದೇನಂದರೆ :—ಮೈಸೂರು ಸರಕಾರದ ಶ್ರೀಗಂಧದ ಸಾಲೆಯಾನ ನಡಿಯತಕ್ಕ ಹರಾಜು ಈ ಕೆಳಗ ನಮೂದಿಸಿರುವ ಕೋಠಿಗಳಲ್ಲಿ ಅದರದರ ಬಾಜೂದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರು ಅಥವಾ ಅವರಿಂದ ನೇಮಿಸಲ್ಪಡುವ ಇತರ ಆಫಿಸರು ಮತ್ತು ಡಿಸ್ಟ್ರಿಕ್ಟು ಫಾರೆಸ್ಟು ಆಫಿಸರುಗಳಿಂದ ನಡಿಸಲ್ಪಡುವದು :—

ಡಿಸ್ಟ್ರಿಕ್ಟು.	ಕೋಠಿ.	ಹರಾಜು ತಾರೀಖು.	ಮೊತ್ತ ಟನ್‌ಗಳು ಸ್ವಲ್ಪ ಹೆಚ್ಚು ಕಡಿಮೆ.	ಷರಾ.
ಮೈಸೂರು ...	ಹುಣಸೂರು ...	1904ನೆ ಇಸವಿ ನವಂಬರ್ ತಾರೀಖು 19	500	
ಡಿಟೋ	ಶ್ರೀರಂಗಪಟ್ಣ	ಡಿಟೋ ಡಿಟೋ 23	240	
ಬೆಂಗಳೂರು ...	ಬೆಂಗಳೂರು ..	ಡಿಟೋ ಡಿಟೋ 26	120	ಕೋಲಾರ್ ಮತ್ತು ತುಮಕೂರು ಡಿಸ್ಟ್ರಿಕ್ಟು ಸಂದಲ್ ಶೇರಿರುತ್ತೆ.
ಹಾಸನ ...	ಹಾಸನ ..	1904ನೆ ಇಸವಿ ಡಿಶಂಬರ್ ತಾರೀಖು 1	200	
ಕಡೂರು ..	ಚಿಕ್ಕಮಗಳೂರು ..	ಡಿಟೋ ಡಿಟೋ 5	200	
ಡಿಟೋ ..	ತರೀಕೆರೆ ..	ಡಿಟೋ ಡಿಟೋ 8	250	
ಶಿವಮೊಗ್ಗ ...	ಶಿವಮೊಗ್ಗ ...	ಡಿಟೋ ಡಿಟೋ 12	440	ಕಡೂರು ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟು ಸಂದಲ್ ಶೇರಿರುತ್ತೆ.
ಡಿಟೋ ..	ಸಾಗರ ..	ಡಿಟೋ ಡಿಟೋ 15	175	
ಡಿಟೋ ..	ತೀರ್ಥಹಳ್ಳಿ ..	ಡಿಟೋ ಡಿಟೋ 19	175	ಕಡೂರು ಡಿಸ್ಟ್ರಿಕ್ಟು ಸಂದಲ್ ಶೇರಿರುತ್ತೆ.

2. ಪ್ರತಿಬಂದು ಕೋಠಿಯಲ್ಲಿಯು ಹರಾಜು ಮಾಡಲ್ಪಡುವ ಸಂದಲ್ ಲಾಟು ಮತ್ತು ಮೊತ್ತ ವಗೈರೆ ತಪಶೀಲು ಐಯಿಂದ ಇದೇ ಸಾಲ್ ಅಕ್ಟೋಬರು ಆಖೈರು ವಳಗಾಗಿ ಫಾಯಿಷು ಮಾಡಲ್ಪಡುತ್ತದೆ.

ಎಂ. ಮುತ್ತಂಣ,

ಕನ್‌ಸರ್ವೇಟರಿ ಆಫ್ ಫಾರೆಸ್ಟ್‌ಸ್ ಇನ್ ಮೈಸೂರು.

ತಾರೀಖು 2ನೆ ಸೆಪ್ಟಂಬರ್ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಮೈಸೂರು ಡಿಸ್ಟ್ರಿಕ್ಟಿಗೆ ಸೇರಿದ ಇದರಡೀ ಕಂಡ ತಾಲ್ಲೂಕುಗಳ ಡಿಸ್ಟ್ರಿಕ್ಟು ಫಾರೆಸ್ಟುಗಳಲ್ಲಿಯೂ ಹಿಡುವಳಿ ಇಲ್ಲದ ಆಕಾರ ಕಂಡ ಜಮೀನುಗಳು ಅಡಗಿರುವ ಸರ್ಕಾರಿ ಬಂಜರು ಜಮೀನುಗಳಲ್ಲಿಯೂ ಅಮೃತಮಹಲ್ ಮತ್ತು ಪಬ್ಲಿಕ್ ಕ್ಯಾಟಲ್ ಕಾವಲುಗಳಲ್ಲಿಯೂ ಗ್ರಾಮ ಬೇಲಿಗಳ ಅಮರಾಯಿ ಮತ್ತು ಅಮರಾಯಿ ಬೇಲಿಗಳಲ್ಲಿಯೂ ದೊರೆಯುವ ಪಸಾರೆ ಹುಟ್ಟುವಳಿಗಳನ್ನು 1904ನೆ ಇಸವಿ ಅಕ್ಟೋಬರು 1ನೆ ತಾರೀಖು ಲಾಗಾಯಿತು 1905ನೆ ಇಸವಿ ಸೆಪ್ಟಂಬರು 30ನೆ ತಾರೀಖಿನ ವರಿಗೆ ಜಮಾಯಿಸುವ ಹಕ್ಕುದಾರಿಯು ಬಹಿರಂಗವಾದ ಹರಾಜು ಮೂಲಕ ತಾಲ್ಲೂಕುವಾರಾಗಿ ಈ ಕೆಳಗೆ ವಿವರಿಸಿರುವ ಆಫಿಸರವರಿಂದ ಈ ಕೆಳಗೆ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ವಿಕ್ರಯಿಸಲ್ಪಡುವದು :—

ತಾಲ್ಲೂಕು ಹೆಸರು.	ಹರಾಜು ತಾರೀಖು.	ಹರಾಜು ಸ್ಥಳ.	ಹರಾಜು ಮಾಡಿಸತಕ್ಕ ಆಫಿಸರು.
ಯಡತೊರೆ	21—9—1904	ಆಯಾಯ ತಾಲ್ಲೂಕು ಹೆಡಕ್ವಾರ್ಟರ್ಸ್ ಕಚೇರಿಯಲ್ಲಿ.	ಆಯಾಯ ತಾಲ್ಲೂಕು ಅಮಲ್ದಾರ್ರವರು ಮತ್ತು ಫಾರೆಸ್ಟು ರೇಂಜಾಫಿಸರವರು.
ಹುಣಸೂರು	22—9—1904		
ಹೆಗ್ಗಡದೇವನಕೋಟೆ	24—9—1904		
ಗುಂಡ್ಲುಪೇಟೆ	21—9—1904		
ಚಾಮರಾಜನಗರ	22—9—1904		
ನಂಜನಗೂಡು	26—9—1904		
ಟಿ. ನರಸೀಪುರ	23—9—1904		
ಮೈಸೂರು	21—9—1904		
ಮಳವಳ್ಳಿ	21—9—1904		
ಮಂಡ್ಯ	24—9—1904		
ಶ್ರೀರಂಗಪಟ್ಟ	26—9—1904		
ನಾಗಮಂಗಲ	28—9—1904		
ಕೃಷ್ಣರಾಜಪೇಟೆ	30—9—1904		

ಹುಟ್ಟುವಳಿ ತಪಶೀಲು.

1. ತಾರೇಕಾಯಿ, 2. ಶೀಗೇಕಾಯಿ, 3. ಅರಟವಾಳದಕಾಯಿ, 4. ದಿಂಡುಗದ ಗೋಂದು, 5. ಕಾಡು ಅರಸಿನ, 6. ಜೇನುಮೇಣ, 7. ಜೇನುತುಪ್ಪ, 8. ಕಪಿಲಾರಂಗು, 9. ಪತಂಗ, 10. ಮಡ್ಡಿ, 11. ಚಿಲ್ಲದಬೀಜ, 12. ಹಾಲುಮಡ್ಡಿ, 13. ಚಗಚೇಬೀಜ, 14. ಹೊಂಗೇಬೀಜ, 15. ಗೇರುಬೀಜ, 16. ಸಾರಗದಕೊಂಬು, 17. ಗುಗ್ಗಳ, 18. ಅಳಲೇಕಾಯಿ, 19. ಬೇಲದಹಂಣು, 20. ಅರಗು, (ನಾರಾಯಣದುರ್ಗ ಸ್ಟೇಟ್ ಫಾರೆಸ್ಟು ವಿನಹಾ) 21. ಶೀತಾಫಲದಹಣ್ಣು, 22. ಬೆಂಡೆನಾರು; ಈ ಕೆಳಗೆ ವಿವರಿಸಿರುವ ಸ್ಥಳಗಳ ಅಳಲೇಕಾಯಿ ಶೇರಿಯಿಲ್ಲಾ :—

ನಾಗಮಂಗಲದ ತಾಲ್ಲೂಕು ಬಾಬತು :—1. ಗರುಡಾಪುರ, 2. ಗರಕಹಳ್ಳಿ, 3. ಬಾಲನಹಳ್ಳಿ, 4. ಕೊರನಗುಂಡಿ, 5. ಇಂಡಸಹಳ್ಳಿ, 6. ಮಾರಹಳ್ಳಿ, 7. ಬೊಗಾದಿ.

ಶ್ರೀರಂಗಪಟ್ಟದ ತಾಲ್ಲೂಕು ಬಾಬತು :—1. ಗುಜಗಾನಹಳ್ಳಿ, 2. ಸಿಂಗಾಪುರ, 3. ಪಗಡೆಕಲ್ಲಹಳ್ಳಿ, 4. ಜೋಡಿ ರಾಂಪುರ, 5. ಕೊಂಡಹಳ್ಳಿ, 6. ನಾರಣಾಪುರ, 7. ಮಡನಹಳ್ಳಿ, 8. ಕಲ್ಲಕೆರೆ, 9. ಮೇಲುಕೋಟೆ, 10. ಕನಗಾನಹಳ್ಳಿ, 11. ತಾಳಿಕೆರೆ.

ಕೃಷ್ಣರಾಜಪೇಟೆ ತಾಲ್ಲೂಕು ಬಾಬತು :—1. ಹಾಲಗೆರೆ, 2. ಹೊಸಹಳ್ಳಿ, 3. ಸಿಂಗಾಪುರ, 4. ಚಟಂಗೆರೆ, 5. ಕಂಡಹಳ್ಳಿ, 6. ಸಿಂಗಾಪುರ, 7. ವಸಂತಪುರ, 8 ಮಾದಿಗರಹೊಸಹಳ್ಳಿ, 9. ಚಾಮಲಾಪುರ, 10. ಸಿಂದಘಟ್ಟ, 11. ಕೊಡಗಹಳ್ಳಿ, 12. ಚಾಗಿನಕೆರೆ, 13. ಬೊಪ್ಪನಹಳ್ಳಿ.

2. ಚಡ ದರಖಾಸ್ತುದಾರನು ಹರಾಜು ಅವನ ಹೆಸರಿಗೆ ಮಂಜೂರಾದ ಕೂಡ್ಲೆ ಇಜಾರೆ ಮೊಬಲಗು ಪೈಕಿ ಶೇಕಡಾ 25ರಂತೆ ಆಗುವ ಮೊಬಲಗನ್ನು ಠೇವಣಿ ಕಟ್ಟತಕ್ಕದ್ದು. ಅಲ್ಲದೆ ಕಂಟ್ರಾಕ್ಟು ಷರತ್ತು ಮೇರೆ ನಡಿಯಲು ತಕ್ಕ ಖಾತರಿ ಜಾಮೀನು ಸಹ ಕೊಡಬೇಕು. ಹಾಗೆ ಮಾಡದೆ ತಪ್ಪಿದಲ್ಲಿ ಕೂಡ್ಲೆ ಬಾಬು ಎರಡನೇ ದಫ ಹರಾಜು ಮಾಡಲ್ಪಟ್ಟು ಅದರಿಂದ ಉಂಟಾಗುವ ನಷ್ಟಕ್ಕೆ ಅವನನ್ನು ಗುರಿಪಡಿಸುತ್ತೆ. ಮತ್ತು ಸದರೀ ಲುಕ್ಸಾನ್ ರೆವಿನ್ಯೂ ಡಿಮ್ಯಾಂಡಿನಂತೆ ವಸೂಲು ಮಾಡಿಕೊಳ್ಳಲ್ಪಡುತ್ತೆ.

3. ಮಂಜೂರ್ಮಾಡಲ್ಪಟ್ಟ ದರಖಾಸ್ತುದಾರನು 1904ನೆ ಅಕ್ಟೋಬರ್ 1ರಲ್ಲಿ ಬಾಬು ರೂಢಿಸಿಕೊಳ್ಳಲು ಪ್ರವೇಶಿಸತಕ್ಕದ್ದು. ಮತ್ತು ಕಂಟ್ರಾಕ್ಟು ಮೊಬಲಗು ಪೈಕಿ ಉಳಿದ ಮೊಬಲಗನ್ನು ಮತ್ತು ಕಂಟ್ರಾಕ್ಟು ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಒಂದು ಆಣೆಯಂತೆ ಆಗುವ ಲೋಕಲ್ ಸೆಸ್ ಮೊಬಲಗನ್ನು ಸಹ ಮೂರು ಸಮವಾದ ಖಿಸ್ತುಗಳಲ್ಲಿ ಅಂದರೆ :—

1904ನೆ ಇಸವಿ ಡಿಸೆಂಬರ್ 31ನೆ ತಾರೀಖು.

1905ನೆ ಇಸವಿ ಮಾರ್ಚ್ 31ನೆ ತಾರೀಖು.

1905ನೆ ಇಸವಿ ಜೂನ್ 1ನೆ ತಾರೀಖುಗಳಲ್ಲಿ ಪಾವತಿ ಮಾಡತಕ್ಕದ್ದು. ಕ್ಲಿಪ್ತವಾದ ತಾರೀಖುಗಳಲ್ಲಿ ಖಿಸ್ತುಗಳನ್ನು ಪಾವತಿ ಮಾಡದೆ ಇದ್ದಲ್ಲಿ ಶೇಕಡಾ ಸಾಲಿಯಾನಾ 6 ರೂಪಾಯಿಮೇರೆ ಬಡ್ಡಿ ಕಟ್ಟಲ್ಪಡುತ್ತೆ.

4. ಕಂಟ್ರಾಕ್ಟುದಾರನು ಯಾವ ಒಂದು ಖಿಸ್ತನ್ನು ಪಾವತಿ ಮಾಡದೆ ತಪ್ಪಿದರೂ ಅಥವಾ ಪಾವತಿ ಮಾಡಲು ಸಾವಕಾಶ ಮಾಡಿದರೂ 1905ನೆ ಜೂನ್ ಆಖೈರ ವರಿಗೆ ಉಳಿದಿರುವ ಕಾಲದಲ್ಲಿ ಬಾಬು ಜಮಾಯಿಸುವ ಹಕ್ಕು ಹರಾಜು ಮಾಡಲ್ಪಡುವದು. ಮತ್ತು ಅವನ ಡಿಪಾಜಟ್ಟು ಮೊಬಲಗು ಸರಕಾರಕ್ಕೆ ದಂಡವಾಗಿ ಶೇರಿಸಿಕೊಳ್ಳಲ್ಪಡುವದು. ಪರಂತು ತಪ್ಪಿಹೋದ ಕಂಟ್ರಾಕ್ಟುದಾರನು ಮತ್ತು ಜಾಮೀನ್‌ದಾರನು ಸಹ ಅದರಿಂದ ಉಂಟಾಗುವ ನಷ್ಟಕ್ಕೆ ಗುರಿಮಾಡಲ್ಪಡುವರು.

5. ಹಿಡುವಳಿ ಜಮೀನುಗಳಲ್ಲಿ ಇರತಕ್ಕ ಮರಗಳ ಮತ್ತು ಸ್ವಂತ ಅಮರಾಯಿಗಳಲ್ಲಿ ದೊರಿಯುವ ಫಲವನ್ನು ರೂಢಿಸಲು ಹಕ್ಕು ಇರುವದಿಲ್ಲ.

6. ಇನಾಂದಾರರ ಸ್ಥಿರಪಟ್ಟ ಹಕ್ಕುದಾರೀ ವಿಷಯದಲ್ಲಿ ಕಂಟ್ರಾಕ್ಟುದಾರರು ಪ್ರವೇಶಿಸತಕ್ಕದ್ದಲ್ಲ.

7. ಗ್ರಾಮ ಅಮರಾಯಿ ಫಲ ಹುಟ್ಟುವಳಿಗಳು ಮೇಲ್ಕಂಡ ಇಜಾರೆಯಲ್ಲಿ ಅಡಗಿರುವದಿಲ್ಲ

8. ಹರಾಜು, ಮೈಸೂರು ಡಿಸ್ಟ್ರಿಕ್ಟು ಡೆಪ್ಯೂಟಿ ಕಮೀರ್ಷರವರ ಮಂಜೂರಾತಿಗೆ ಒಳಪಟ್ಟದ್ದಾಗಿದೆ.

9. ಕಂಟ್ರಾಕ್ಟುದಾರನ ಅಥವಾ ಅವನ ಕಡೆ ಕೂಲಿ ಜನಗಳ ಅಜಾಗ್ರತೆಯಿಂದ ಜಂಗಲಿಗೆ ಬೀಳುವ ಬೆಂಕಿ ಅಪಾಯದಿಂದ ಉಂಟಾಗುವ ನಷ್ಟಕ್ಕೆ ಕಂಟ್ರಾಕ್ಟುದಾರನು ಜವಾಬುದಾರನಾಗಿರುತ್ತಾನೆ.

ಸಿ. ಅಪ್ಪಯ್ಯ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್, ಮೈಸೂರು ಡಿಸ್ಟ್ರಿಕ್ಟು.

ತುಮಕೂರು ಡಿಸ್ಟ್ರಿಕ್ಟು.

ಇಸ್ತಿ ಹಾರ್‌ನಾಮಾ.

ತಾರೀಖು 25ನೆ ಜುಲೈ 1904.

ಇದರಿಂದ ತಿಳಿಯಪಡಿಸುವದೇನಂದರೆ, ಈ ಕೆಳಗೆ ವಿವರಿಸಿರುವ ರಿಜಿಸ್ಟ್ರಾದ ದಸ್ತೈವಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಈ ಕೆಳಗೆ ನಮೂದಾಗುವ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ವಾರಸುದಾರರು ಹಾಜರಾಗಿ ವಾಪಸು ಪಡಿಯದೆ ನಿಂತಿರುತ್ತವೆ. ಈ ತಾರೀಖು ಲಾಗಾಯಿತು ಒಂದು ತಿಂಗಳೊಳಗಾಗಿ ಸದರಿ ದಸ್ತೈವಜು ಹಾಜರ್ಮಾಡಿದವರಾಗಲಿ ಅವರ ಪ್ರತಿನಿಧಿಗಳಾಗಲಿ ಅಥವಾ ದಸ್ತೈವಜುಗಳಿಗೆ ಬಾಧ್ಯತವುಳ್ಳವರಾಗಲಿ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಹಾಜರಾಗಿ ತಮ್ಮ ದಸ್ತೈವಜುಗಳನ್ನು ವಾಪಸುಪಡಿಯಬೇಕು. ತಪ್ಪಿದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಮೇರಿಗೆ ಸದರಿ ದಸ್ತೈವಜುಗಳು ನಾಶಪಡಿಸಲ್ಪಡುತ್ತವೆ :—

ಸಬ್ ರಿಜಿಸ್ಟ್ರಿ ಆಫೀಸ್ ಹೆಸರು.	ಬುಕ್ಕು ನಂಬರು.	ದಸ್ತಾವೇಜುಗಳ ನಂಬರು ಮತ್ತು ಸಾಲ್.	ದಸ್ತಾವೇಜು ಬರಿಯಲ್ಪಟ್ಟ ತಾರೀಖು.	ದಸ್ತಾವೇಜು ರಿಜಿಸ್ಟರ್ ಮಾಡಿದ ತಾರೀಖು.	ದಸ್ತಾವೇಜು ಬರದುಕೊಟ್ಟವರ ಹೆಸರು.	ದಸ್ತಾವೇಜು ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
ತುಮಕೂರು ಸಬ್ ರಿಜಿಸ್ಟ್ರಿ ಆಫೀಸು.							
ತುಮಕೂರು ...	I	756 / 1901—1902	28—2—1902	1—3—1902	1. ನರಚಲ 1. ಪುಟ್ಟಹನುಮ	ವಸಂತಮ್ಮ	80 ರೂಪಾಯಿನ ವ್ಯವಸ್ಥಾ ಪತ್ರಾ.
ಶಿರಾ ಸಬ್ ರಿಜಿಸ್ಟ್ರಿ ಆಫೀಸು.							
ಶಿರಾ ...	I	304 / 1901—1902	12—12—1901	12—2—1902	ದೊಡ್ಡಗೂಳದ ಬಳೆ ನಂಜಪ್ಪನ ಮಗ ನಂಜಪ್ಪ	ದೊಡ್ಡಗೂಳದ ಗುರುಸಿದ್ದಪ್ಪನ ಮಗ ಸಿದ್ದಪ್ಪ.	25 ರೂಪಾಯಿನ ಕ್ರಯ.
ಗುಬ್ಬಿ ಸಬ್ ರಿಜಿಸ್ಟ್ರಿ ಆಫೀಸು.							
ಗುಬ್ಬಿ ...	I	625 / 1901—1902	14—11—1901	5—3—1902	ಮುಗಳಿಕುಪ್ಪೆ ತಿಮ್ಮಪ್ಪನ ಮಗ ಜವರೆಗೌಡ.	ಲೋಕನಹಳ್ಳಿ ರಾಜಸೆಟ್ರ ಮಗ ವೀರಂಣಸೆಟ್ಟಿ.	200 ರೂಪಾಯಿನ ಆಧಾರ.
	II	13 / 1901—1902	9—2—1900	ತಿರಸ್ಕರಿಸಿದ ತಾರೀಖು 7—4—1902	ದೊಡ್ಡಗುಣಿ ನಂಜಪ್ಪನ ಮಗ ನೊಣವಿನ ಕೆರೆ ಪ್ರಭೈಯ್ಯ.	ದೊಡ್ಡಗುಣಿ ಮರಳಪ್ಪ, ಸಿದ್ದಯ್ಯ ಸಹ.	800 ರೂಪಾಯಿನ ವ್ಯವಸ್ಥಾ ಪತ್ರ.

ಬಿ. ಭೀಮರಾವ್, ಫಾರ ರಿಜಿಸ್ಟ್ರಾರ್.

ಹಾಸನದ ಡಿಸ್ಟ್ರಿಕ್ಟು.

ತಾರೀಖು 7ನೆ ಸೆಪ್ಟೆಂಬರ್ 1904.

2 ವರುಷಕ್ಕಿಂತಲೂ ಅಧಿಕಕಾಲ ಈ ಕೆಳಗೆ ನಮೂದಿಸಿರುವ ಸಬ್ ರಿಜಿಸ್ಟ್ರಾರ್ ಆಫೀಸುಗಳಲ್ಲಿ ಬೇವಾರ್ಸಾಗಿರುವ ದಸ್ತಾವೇಜುಗಳನ್ನ ಹಾಜರು ಮಾಡಿದವರೆ ಆಗಲಿ ಅಥವಾ ಇವರಿಂದ ಅಧಿಕಾರ ಹೊಂದಿದ ಮುತಾಲೀಕರೆ ಆಗಲಿ ಈ ಇಸ್ತಿಹಾರ್ ತಾರೀಖು ಲಾಗಾಯಿತು ಒಂದು ತಿಂಗಳ ಒಳಗಾಗಿ ಆಯಾಯ ಸಬ್ ರಿಜಿಸ್ಟ್ರಾರ್ ರೂಬರೂಬ್ ಹಾಜರಾಗಿ ತೆಗದುಕೊಳ್ಳದಿದ್ದರೆ ಮೈಸೂರು ಸೀಮೆಯ ಹ|| ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ 27—8—1873ನೆ ಮರ್ಕುಂ 66—114ನೆ ನಂ. ಸರ್‌ಕ್ಯೂಲರ್ ಆರ್‌ಡರ್ ಮೇರೆ ಈ ಕೆಳಗೆ ನಮೂದಾಗುವ ದಸ್ತಾವೇಜುಗಳನ್ನು ನಾಶಪಡುಸುತ್ತೆ :—

ಸಂ.	ಸಬ್ ರಿಜಿಸ್ಟ್ರಾರ್ ಆಫೀಸಿನ ಹೆಸರು.	ಬುಕ್ಕಿನ ನಂಬರು.	ದಸ್ತಾವೇಜಿನ ನಂಬರು.	ದಸ್ತಾವೇಜು ಹುಟ್ಟಿದ ತಾರೀಖು.	ದಸ್ತಾವೇಜು ರಿಜಿಸ್ಟ್ರಾದ ತಾರೀಖು.	ಬರದುಕೊಟ್ಟವರ ಹೆಸರು.	ಬರಸಿಕೊಂಡವರ ಹೆಸರು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತು.
1	ಹಾಸನ	I	602 / 1901—02	2—11—1899	2 — 6 — 1902	ಶ್ರವಣಬೆಳಗುಳದ ಕೋನಪ್ಪನ ಮಗ ನಂಜೈಯ್ಯ	ಸಾಲಿಗ್ರಾಮದಲ್ಲಿ ವಾಸವಾಗಿರುವ ಶ್ರವಣಬೆಳಗುಳದ ತುಕ್ಕಂಣನ ಮಗ ತುಕ್ಕಂಣ	ದತ್ತು ಸ್ವೀಕಾರ ಪತ್ರ
2	ಡಿಟೋ ...	I	649 / 1901—02	12— 6—1902	18— 6—1902	ಕಂಶಿಕದ ತಿಮ್ಮಪ್ಪಾವಧಾನಿಗಳ ಮಗ ಚನ್ನಪ್ಪಾವಧಾನಿ	ಕಂಶಿಕದ ವೆಂಕಟಕೃಷ್ಣೈಯ್ಯನವರ ಮಗ ಅಪ್ಪಾಜೈಯ್ಯ	ಪತ್ರದ ಡಿಕಿರೀ ಮೊಬಲಗು ಪಾವತಿ ಮಾಡಿರುವದಾಗಿ ರಶೀತಿ
3	ಮಂಜರಾಬಾದು	IV	17 / 1901—02	2— 5—1902	6— 5—1902	ಉಮ್ಮರಸಾಬಿ ಮಗ ಹಯಾತ್‌ಸಾಬಿ ಉರಫ್ ಮಿಯ್ಯಾಸಾಬಿ	ಬ್ಯಾದನ ಎಸ್ಟೇಟ್ ಕಾಫೀಪ್ಲಾಂಟರು ಮೆ|| ಪಿಟಕ್ ಸಾಹೇಬರು	150 ರೂಪಾಯಿನ ನವಕರೀ ಕರಾರು
4	ಡಿಟೋ ..	I	238 / 1901—02	15— 5—1900	12— 2—1902	ಹಾನಬಾಳು ಈರೇಗೌಡನ ಮಗ ಚವಡೆಗೌಡ	ಕ್ಯಾಮನಹಳ್ಳಿಕರೆ ರಾಮೇಗೌಡರ ಮಗ ರಾಮೇಗೌಡ	130 ರೂಪಾಯಿನ ಕ್ರಯಪತ್ರ
5	ಡಿಟೋ ..	I	287 / 1901—02	14—11—1901	15— 3—1902	ಹೇರೂರು ನಂಜೇಗೌಡನ ಮಗ ನಿಂಗೇಗೌಡ	ಉಚ್ಚಂಗಿ ತಮ್ಮಯ್ಯನವರ ಮಗ ನರಸಿಂಮೈಯ್ಯ.	90 ರೂಪಾಯಿನ ಕ್ರಯಪತ್ರ
6	ಡಿಟೋ	I	366 / 1901—02	10— 1—1902	10— 5 1902	ಕುಡುದಲೆ ಮಹಮ್ಮದು ಇಸಬ್ ಉರಫ್ ಪೀರಾಸಾಬಿ	ಈತನ ಹೆಂಡತಿ ಫಾತ್ಮಾಬಿ	300 ರೂಪಾಯಿನ ವ್ಯವಸ್ಥಾಪತ್ರ
7	ಡಿಟೋ	I	376 / 1901—02	19— 5 —1902	23— 5 1902	ತೊಡ್ಲಹಳ್ಳಿ ಮರಿಶಿದ್ದನ ಹೆಂಡತಿ ನಿಂಗಿ	ಬೆಳಗೋಡು ಪ್ಯಾಟೆ ಪುಟ್ಟಪ್ಪ ಶೆಟ್ಟರ ಮಗ ಬಶೆಟ್ಟಪ್ಪ	100 ರೂಪಾಯಿನ ಆಧಾರ ಪತ್ರ
8	ಡಿಟೋ ...	II	8 / 1901—02	8— 7—1901	ತಿರಸ್ಕರಿಸಿದ ತಾರೀಖು 12— 3—1902	ಹಲ್ಸುಲಿಗೆ ಚನ್ನೀರಾಚಾರೀ ಮಗ ಹುಚ್ಚಾಚಾರಿ	ಹಲ್ಸುಲಿಗೆ ಹನುಮೇಗೌಡನ ಮಗ ತಿರುಮಲೆಗೌಡ	12 ರೂಪಾಯಿನ ಕ್ರಯಪತ್ರ
9	ಡಿಟೋ ...	II	11 / 1901—02	25 — 8—1901	28— 4—1902	ಸಂತಹಳ್ಳಿ ವಕ್ಕಲಿಗರ ಅಂಣೆಗೌಡನ ಮಗ ಕಾಳೇಗೌಡ	ನಂದಿಹಳ್ಳಿ ವಕ್ಕಲಿಗರ ಸುಬ್ಬೆಗೌಡರ ಮಗ ಬಸವೆಗೌಡ	98 ರೂಪಾಯಿನ ಇಳಿಭೋಗ್ಯ
10	ಡಿಟೋ	II	16 / 1901—02	26—10—1901	30— 6—1902	ಬಿಳೀಮಗ್ಗದ ಫಲಾರಿಜೆಟ್ಟ ಮಗ ತಿರುಮಲಜೆಟ್ಟ	ಬೆಡಗಿನ ಹುಲಗಳಲೆ ಶಿದ್ದಂಣನ ಮಗ ಶಿದ್ದಿಂಗಪ್ಪ ಯಾನೆ ದೊಡ್ಡಪ್ಪ	300 ರೂಪಾಯಿನ ಕ್ರಯಪತ್ರ
11	ಬೇಲೂರು ...	I	262 / 1901—02	..	30—1 —1902	ಹೀರಗುಪ್ಪೆಯಲ್ಲಿರುವ ಈರೇಗೌಡನ ಮಗ ಮಲ್ಲೆಗೌಡ	ಹೀರಗುಪ್ಪೆಯಲ್ಲಿರುವ ಬೈಗೂರು ದೇವಡೈಯ್ಯನವರ ಮಗ ಪುಟ್ಟಂಣೈಯ	100 ರೂಪಾಯಿಗಳ ಭೋಗ್ಯಪತ್ರ
12	ಅರ್ಕಲ್‌ಗೂಡು ..	I	874 / 1901—02	4—4 —1902	5—4 —1902	ಕಟ್ಟೆಪುರದಲ್ಲಿರುವ ಶಾ|| ವೆಂಕಟನರಸೈಯ್ಯನವರ ಮಕ್ಕಳು 1. ನರಸುಂಹೈಯ್ಯ, 2. ಸುಬ್ರಾಯ, 3. ಕಾಶಿಪತೈಯ್ಯ, 4. ನಾರಣಪ್ಪ	ಕಟ್ಟೆಪುರದಲ್ಲಿರುವ ಶಾ|| ವೆಂಕಟನರಸೈಯ್ಯನವರ ಮಕ್ಕಳು 1. ನಸುಂಹೈಯ್ಯ, 2. ಸುಬ್ರಾಯ, 3. ಕಾಶೀಪತೈಯ್ಯ, 4. ನಾರಣಪ್ಪ	900 —12 - 0 ಕಿಮ್ಮತುವುಳ್ಳ ವಿಭಾಗ ಸಾಧನ
13	ಡಿಟೋ ...	II	9 / 1901—02	14— 8—1901	17— 4—1902	ಶಣವಿನಕುಪ್ಪೆಯಲ್ಲಿರುವ ಬಸವೆಗೌಡನ ಮಗ ಪುಟ್ಟೆಗೌಡ	ಮರೂರಲ್ಲಿರುವ ಶ್ರೀಕಂಠೈಯ್ಯನವರ ಮಗ ರಾಮಂಣ	150 ರೂಪಾಯಿನ ಆಧಾರ ಪತ್ರ

ಪಿ. ಆರ್. ಡಬ್ಲ್ಯೂ. ವೆದರಾಲ್, ರಿಜಿಸ್ಟ್ರಾರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 31ನೆ ಆಗಸ್ಟು 1904.

ಶಿವಮೊಗ್ಗ ಡಿಸ್ಟ್ರಿಕ್ಟ್ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ಈ ಕೆಳಗೆ ಕಾಣಿಸಿರುವ ದಸ್ತಾವೇಜುಗಳು ಎರಡು ವರುಷಗಳಿಗೆ ಮೇಲ್ಪಟ್ಟು ಬೇವಾರಸಾಗಿ ನಿಂತಿವೆ. ಈ ನೋಟಿಫಿಕೇಷನ್ ಪ್ರಕಟಿಸಿದ ಲಾಗಾಯಿತು ಒಂದು ತಿಂಗಳೊಳಗಾಗಿ ಅವುಗಳನ್ನು ಸಂಬಂಧಪಟ್ಟವರು ಆಯಾಯ ಸಬ್ ರಿಜಿಸ್ಟ್ರಾರುಗಳಿಂದ ವಾಪಸು ಪಡಿಯಬಹುದು. ಹಾಗೆ ಮಾಡದೆ ತಪ್ಪಿದರೆ ರಿಜಿಸ್ಟ್ರೇಷನ್ ರೆಗ್ಯುಲೇಷನ್ 85ನೆ ಸೆಕ್ಷನ್ ಅನುಸರಿಸಿ ದಸ್ತಾವೇಜುಗಳನ್ನು ನಾಶಪಡಿಸುತ್ತೇವಾಗಿ ಇದರಿಂದ ತಿಳಿಯಪಡಿಸಿ ಇದೆ : —

ನಂಬರು.	ಸಬ್ ರಿಜಿಸ್ಟ್ರಿ ಆಫೀಸಿನ ಹೆಸರು.	ರಿಜಿಸ್ಟ್ರಿ ಮಾಡಿಸಿದ ಅಧಿಕಾರಿಯ ಪಟ್ಟಿ ನಂಬರು.	ಪ್ರತಿ ದಸ್ತಾವೇಜಿನ ನಂಬರು.	ದಸ್ತಾವೇಜನ್ನು ಬರೆದ ತಾರೀಖು.	ರಿಜಿಸ್ಟರಾದ ಅಥವಾ ರಿಜಿಸ್ಟ್ರೇಷನ್ ನಿರಾಕರಿಸಿದ ತಾರೀಖು.	ಬರೆದುಕೊಟ್ಟವರ ಹೆಸರು ಮತ್ತು ವಿಳಾಸ.	ಬರೆಸಿಕೊಂಡವರ ಹೆಸರು ಮತ್ತು ವಿಳಾಸ.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1	ಚನ್ನಗಿರಿ ..	I	493 1901—02	11— 6—1902	11— 6—1902	ಹಾವನೂರ ಮುದಿಕೊಟ್ರಪ್ಪನ ಮಗ ಮುರಿಗೆಪ್ಪ, ಕರೆಕಟ್ಟೆವಾಸಿ	ಈರಭದ್ರಪ್ಪ, ಬಳ್ಳಾರಿ ಜಿಲ್ಲಾ, ರಾಯದುರ್ಗದ ವಾಸಿ.	400 ರೂಪಾಯಿನ ತೋರಡವು ಪತ್ರ.
2	ಹೊನ್ನಾಳಿ ...	I	275 1901—02	4— 4—1902	7— 4—1902	ಬಸಪ್ಪ	ಇಮಾಮುಸಾಬ	ಸಾಗುವಳಿ ಕರಾರು 15 ರೂಪಾಯಿನಂತೆ
	ಡಿಟೋ	I	42 1902—03	7— 7—1902	21— 7—1902	ಮುದಿಸುಜ್ಜನ ಮಗ ರೇವಣಪ್ಪ	ರೇವಣಪ್ಪ ಯಾನೆ ಕೊತವಾಲ್	40 ರೂಪಾಯಿನ ಕ್ರಯ ಪತ್ರ
3	ತೀರ್ಥಹಳ್ಳಿ ..	I	154 1901—02	26—10—1901	10— 1—1902	ಸುಬ್ಬರಾವ್, ಸ್ಕೂಲ್ ಮಾಸ್ಟರ್, ತಿರಳಕೊಪ್ಪದ ವಾಸಿ	ಷಡಾಕ್ಷರಪ್ಪ, ಸಂಗೂರು—ತಿರಳಕೊಪ್ಪದ ವಾಸಿ.	50 ಡಿಟೋ
	ಡಿಟೋ ...	II	4 1900—01	25— 4—1900	28—12—1900	ಯಲ್ಲಾ ಬಿನ್ ಹುಚ್ಚಣ್ಣ, ನರಸಾಪುರದ ವಾಸಿ	ಮುರಿಗೆಪ್ಪ, ಚಿಕ್ಕೇರೂರು ವಾಸಿ	60 ರೂಪಾಯಿ ತೋರಡವು ಪತ್ರ
	ಡಿಟೋ ...	II	4 1901—02	25— 2—1901	2—11—1901	ಮಾಳಿ ಕೋಂ ನಿಂಗಕಟ್ಟಿ, ಅವಟಿಕೊಪ್ಪದ ವಾಸಿ	ನಿಂಗಣ್ಣ ಬಿನ್ ದೊಡ್ಡಪ್ಪ, ಯಲವಳ್ಳಿ ವಾಸಿ	100 ರೂಪಾಯಿ ಕ್ರಯಪತ್ರ
	ಡಿಟೋ ...	II	5 1900—01	25— 4—1900	28—12—1900	ಸಣಯಲ್ಲ ಬಿನ್ ಹುಚ್ಚಣ್ಣ, ನರಸಾಪುರದ ವಾಸಿ	ಮುರಿಗೆಪ್ಪ, ಚಿಕ್ಕೇರೂರ ವಾಸಿ	60 ರೂಪಾಯಿ ತೋರಡವು ಪತ್ರ
4	ಸಾಗರ ..	I	221 1901—02	2— 3—1902	5— 3—1902	ಗೋಪಾಲಪ್ಪ ಬಿನ್ ಲಿಂಗಪ್ಪ, ಕೆಳದಿ ವಾಸಿ	ಶಾಮರಾವ್ ಬಿನ್ ಸುಬ್ಬರಾವ್, ಕೆಳದಿ ವಾಸಿ	150 ರೂಪಾಯಿ ಆಧಾರ ಪತ್ರ
	ಡಿಟೋ .	IV	101 1901—02	19— 6—1902	19— 6—1902	ತಿಮ್ಮಾ ಬಿನ್ ಕೊಲ್ಲ, ಶಿಂಗಂದೂರು ಹಗ್ಗೆ ಬೈಲುವಾಸಿ	ಕೇಪಗೌಡಯಪ್ಪ, ಗುಂಡಪ್ಪ ಬಿನ್ ಕೃಷ್ಣಯ್ಯ, ಬಾಳೆಮನೆ ವಾಸಿ	100 ರೂಪಾಯಿ ಸೂಲದ ಪತ್ರ
5	ನಗರ .	I	126 1900—01	30— 3—1901	1— 4—1901	ರಾಮು ಬಿನ್ ತಿಮ್ಮಾ, ಹಲ್ಕುಂಜಿವಾಸಿ	ಬಡಗಿ ಲೋಕಾಚಾರಿ ಬಿನ್ ಈರಾಚಾರಿ, ಮೇಲಗಳ್ಳಿ ವಾಸಿ	50 ರೂಪಾಯಿ ಕ್ರಯ ಪತ್ರ

	ಡಿಟೋ ..	I	6 / 1901—02	11—7—1901	13—7—1901	ಕಂಚಿಕೆರೆ ದೇವಪ್ಪ ಬಿನ್ ಅಪ್ಪಣ್ಣಯ್ಯ	ಸೂರಮ್ಮ, ಮಂಜಯ್ಯ ಬಿನ್ ಶೇಷಯ್ಯ	ಸಾಲಿಯಾನಾ 25 ರೂಪಾಯಿ ಗೇಣಿಕೊಡುವದಾಗಿ 12 ವರುಷದ ಕರಾರು.
	ಡಿಟೋ ..	IV	7 / 1900—01	14—4—1900	11—8—1900	ದೊಡ್ಡೀರ ಬಿನ್ ವೆಂಕಟ, ಹುಂಚದ ವಾಶಿ	ಧರಣಪ್ಪ ಬಿನ್ ಮಂಜಪ್ಪ, ಹುಂಚದ ವಾಶಿ	140 ರೂಪಾಯಿನ ಮೈಸಾಲದ ಪತ್ರ.
	ಡಿಟೋ ..	IV	24 / 1901—02	16-10—1899	29-1—1902	ಹನುಮ ಬಿನ್ ಹುಚ್ಚ, ಮಳಲಿಬೈಲು ವಾಶಿ	ಚನ್ನಬಸಪ್ಪಗೌಡ ಬಿನ್ ತಮ್ಮಣ್ಣಯ್ಯಗೌಡ, ಹೊಸಕೊಪ್ಪದ ವಾಶಿ	100 ರೂಪಾಯಿನ ಮೈಸಾಲದ ಪತ್ರ.
	ಡಿಟೋ ..	II	4 / 1901—02	30—7—1901	1—4—1902	ಚವಡಿಮಗಳು ತಿಪ್ಪಿ, ನೆಲಗಳಲೆ ವಾಶಿ	ಖಾದ್ರಪಾಚ, ವಲ್ಲದ ವುಮ್ಮರಸಾಬ್	60 ರೂಪಾಯಿನ ನವುಕರಿ ಕರಾರು.
6	ತೀರ್ಥಹಳ್ಳಿ ...	I	224	20—1—1902	21—1—1902	ರಾಮಚಂದ್ರಾಚಾರಿ	1. ಗಣೇಶರಾವ್, 2. ರಾಮರಾವ್	400 ರೂಪಾಯಿ ತೋರಡವು ಪತ್ರ.
	ಡಿಟೋ ..	I	239	3-12—1901	28—1—1902	ತಮ್ಮುಜೋಯಿಸ	ರಾಂಭಟ್ಟ	150 ರೂಪಾಯಿ ಕ್ರಯಪತ್ರ.
	ಡಿಟೋ ..	I	288	28—2—1902	28—2—1902	ರಾಮಾಜೋಯಿಸಯಾನೆ ರಾಮಂಣ	ದೊಡ್ಡ ಬಸಪ್ಪ	280 ರೂಪಾಯಿ ದೀಡುಪತ್ರ.
	ಡಿಟೋ ...	I	329	3—3—1902	3—4—1902	ಪುಟ್ಟಪ್ಪಯಾನೆ ವೆಂಕಟರಮಣಯ್ಯ	1. ಆಗುಂಬೆ ನಾಗೇಶರಾವ್, 2. ರಾಮರಾವ್	1,800 ರೂಪಾಯಿ ದೀಡುಪತ್ರ.
		I	389	23-1—1902	3—6—1902	ಬೆಳಗೋಡು ಕೊಲ್ಲ	ಭೀಮನಕಟ್ಟೆ ನಾರಾಯಣಾಚಾರ್ರು	25 ರೂಪಾಯಿ ಕ್ರಯಪತ್ರ.
	ಡಿಟೋ ...	I	418	10—4—1901	25—6—1902	ನಗರವಳ್ಳಿ ರಂಗಭಟ್ಟ	ಸಾವಿತ್ರಮ್ಮನ ತಾಯಿ ವೆಂಕಮ್ಮ	150 ರೂಪಾಯಿನ ಜೀವನಾಂಶದ ಪತ್ರ.
	ಡಿಟೋ ...	I	19	10—7—1902	10—7—1902	ರಂಗಂಣ	ವೀರ	199-9-9 ಸಂದದಕ್ಕೆ ಕೊಟ್ಟ ರಶೀತಿ.
	ಡಿಟೋ ...	I	21	22—1—1902	11-7-1902	1. ವೆಂಕಟಯ್ಯ 2. ಹಿರಿಯಣ್ಣಯ್ಯ	ಮುಳಬಾಗಲು ಮಠದ ಗೋಪಾಲ ಕೃಷ್ಣದೇವರು	ವರುಷ 1ರ 28 ಮಣ ಅಡಿಕೆ ಕೊಡುತ್ತಾ 25 ವರುಷ ಸಾಗುವಳಿ ಮಾಡುವದಾಗಿ ಗೇಣಿ ಕರಾರು.
7	ಕುಂಶಿ. ...	II	1 / 1899—00	31—7—1899	26—9—1899	ಹೋಬ್ಯ ಬಿನ್ ಧರ್ಮ	ರಂಗಂಣ	ನವುಕರಿ ಮಾಡುವದಾಗಿ 72 ರೂಪಾಯಿ ಮುಂಗಡ ತೆಗದುಕೊಂಡದ್ದು.
	ಡಿಟೋ ..	I	105 / 1899—00	14—4-1900	16—4-1900	ಕಾಳಕ್ಕ, ಕಮ್ಮಾರ ಲಿಂಗಣ್ಣನ ಹೆಂಡತಿ	ಸಣ್ಣ ಹನುಮ	120 ರೂಪಾಯಿ ತೋರಡವು ಪತ್ರ.
	ಡಿಟೋ ..	I	9 / 1901—02	26—7—1901	27—7—1901	ನಗರದ ರಾಮಾಚಾರ್ಯ	ಶ್ರೀನಿವಾಸಾಚಾರ್, ಆಯನೂರು ಸ್ಕೂಲ್ ಮಾಸ್ಟರ್	50 ರೂಪಾಯಿ ತೋರಡವು ಪತ್ರ.
	ಡಿಟೋ	I	14 / 1901—02	5—8-1901	13-8-1901	1. ಕೆಂಚಂಣನ ಹೆಂಡತಿ ಹಳದಕ್ಕ ಈತನ ಮಗ ಮಂಜಾ 2. ಲಕ್ಷ್ಮಕ್ಕ, 3. ಕರಿಯ, 4. ಹಳದ		200 ರೂಪಾಯಿನ ವ್ಯವಸ್ಥಾಪತ್ರ.

ಎಂ. ಎಸ್. ನಾರಾಯಣರಾವ್,
ಡಿಸ್ಟ್ರಿಕ್ಟು ರಿಜಿಸ್ಟ್ರಾರ್.

ಕೋಲಾರ ಡಿಸ್ಟ್ರಿಕ್ಟ್.

ಇಸ್ತಿಹಾರ್ನಾಮೊ.

ತಾರೀಖು 1ನೆ ಸೆಪ್ಟಂಬರು 1904ನೆ ಇಸವಿ.

* ಮಾಜೀನಸ್ಲಲ್ಲಿ ನವೊದುವಾಡಿ ಇತಕ್ಕ ಇನಾಂ ಗ್ರಾಮಗಳು, ಸರ್ಕಾರಕ್ಕೆ ಬರಬೇಕಾದ ಬಾಕಿ ಪೊಬಲಗಿಗೋಸ್ಕರವಾಗಿ

* 1. ಖಾಯಂಗುತ್ತಾ ಲಿಂಗಾಪುರ—ವೇಮಗಲ್ ಹೋಬಳಿ
2. ಜೋಡಿ ಸೋಮಾಶಾಸ್ತ್ರಿ ಹೂಸೂರು—ಹೋಳೂರು ಹೋಬಳಿ ... } ಕೋಲಾರ ತಾಲ್ಲೂಕು.
3. ಜೋಡಿ ಸುಬ್ಬಪ್ಪಂಟಿ—ತ್ಯಾಕಲ್ ಹೋಬಳಿ .. ಮಾಲೂರು ತಾಲ್ಲೂಕು.

ತಾಲ್ಲೂಕ ಅಮಲ್ದಾರ್ರ ಕಛೇರಿಯಲ್ಲಿ 1904ನೆ ಇಸವಿ ಅಕ್ಟೋಬರು ಮಾಹೆ 31ನೆ ತಾ|| ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತವೆಂದು ಇದರಿಂದ ಪ್ರತಿಬಂಧಪಡಿಸಲ್ಪಟ್ಟಿದೆ.

(ಹೆಚ್ಚಿನ ತಪಶೀಲ್ ಒಕ್ಕೆ 1904ನೆ ಮಾರ್ಚಿ 36ನೆ ನಂಬರ್ ಮೈಸೂರ ಗೆಜೆಟಿನ 2ನೆ ಭಾಗದ 522, 521, 520ನೆ ನಂಬರ್ ಪೇಜ್ ನೋಡತಕ್ಕದ್ದು.)

ಕೆ. ಪಿ. ಪುಟ್ಟಣ್ಣಾ ಚೆಟ್ಟಿ,
ಡೆಪ್ಯೂಟಿ ಕಮಿಷನರ್.

ಶಿವಮೊಗ್ಗಾ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ 1904—1905ನೆ ಇಸವಿ ವಿ|| ಅರ್ಜೀ ನಂಬರ್ 18.

ಶಿವಮೊಗ್ಗೆಯಲ್ಲಿ ವಾಸವಾಗಿದ್ದ ಮೃತಪಟ್ಟ ಶ್ರೀನಿವಾಸಾಚಾರ್ಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಗಾಜನೂರು ಕೃಷ್ಣಾಚಾರ್ರು, ಗಾಜನೂರು ಭೀಮಾಚಾರ್ರು, ಮೃತಪಟ್ಟ ಸದರೀ ಶ್ರೀನಿವಾಸಾಚಾರ್ರಿಗೆ ಖಾಸಾ ಮಕ್ಕಳು ಆಗಬೇಕೆಂಬ ಹಕ್ಕುದಾರಿ ಮೇಲೆ ಶಿವಮೊಗ್ಗಾ ಸ್ಥಳದ ಕೃಷ್ಣಾಚಾರ್ರು, ಭೀಮಾಚಾರ್ರು, ಶಿವಮೊಗ್ಗಾ ವಾಸಸ್ಥರಾಗಿ ಮೃತಪಟ್ಟ ಶ್ರೀನಿವಾಸಾಚಾರ್ರ ಜಿಂದಗಿ ಬಗ್ಯಾಗಿ ಬರತಕ್ಕ (146—12—0) ರೂಪಾಯಿಗಳ ಸೂಲವನ್ನು ವಸೂಲ್ ಮಾಡುವದಕ್ಕೆ ಸ್ 1901ನೆ ಇಸವಿ VIIನೆ ನಂಬರ್ ರಗ್ಯುಲೇಷ್ನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಕೃಷ್ಣಾಚಾರ್ರ, ಭೀಮಾಚಾರ್ರ ಅರ್ಜಿಯನ್ನು ಸ್ 1904ನೆ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 23ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ಶ್ರೀನಿವಾಸಾಚಾರ್ರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯುವಡಿಸಿ ಇದೆ.

ಸ್ 1904ನೆ ಇಸವಿ ಸಪ್ಟಂಬರ್ ತಿಂಗಳು 6ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಎಸ್. ವೆಂಕಟವರದ ಅಯ್ಯಂಗಾರ್.
ಡಿಸ್ಟ್ರಿಕ್ಟ್ ಜಡ್ಜ್.

ಮೈಸೂರು ಸೆಬ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ 1904—1905ನೆ ಇಸವಿ ಅರ್ಜೀ ನಂಬರ್ 44.

ಮೃತಪಟ್ಟ ವೆಂಕಟಸುಬ್ಬಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಕೃಷ್ಣರಾಜಪ್ಯಾಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿ ಕುಪ್ಪಹಳ್ಳಿಯಲ್ಲಿರುವ ವೆಂಕಟಸುಬ್ಬಯ್ಯನವರ ಹೆಂಡತಿ ತಿಮ್ಮಕ್ಕಾ ಮೈನರ್, ಗಾರ್ಡಿಯರ್ ತಂದೆ ನಾಗಪ್ಪಯ್ಯಾ, ಮೃತಪಟ್ಟ ಸದರೀ ವೆಂಕಟಸುಬ್ಬಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಕುಪ್ಪಹಳ್ಳಿ ವಾಸಸ್ಥರಾಗಿ ಮೃತಪಟ್ಟ ವೆಂಕಟಸುಬ್ಬಯ್ಯನವರ ಜಿಂದಗಿ ಬಗ್ಯಾಗಿ ಬರತಕ್ಕ ಸೂಲವನ್ನು ವಸೂಲ್ಮಾಡುವದಕ್ಕೆ ಸ್ 1901ನೆ ಇಸವಿ 7ನೆ ರೆಗ್ಯುಲೇಷ್ನ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟಸುಬ್ಬಯ್ಯನವರ ಅರ್ಜಿಯನ್ನು ಸ್ 1904ನೆ ಇಸವಿ ನವಂಬರ್ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೇಲ್ಕಂಡವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯುವಡಿಸಿ ಇದೆ.

ಸ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಂ ನಮ್ಮ ದಸ್ತಖತ್ತೊಡನೆ ಕೊಡೋಣಾಗಿದೆ.

ಸನ್ 1904—1905ನೆ ಇಸವಿ ಅರ್ಜೀ ನಂಬರ್ 57.

ಮೃತಪಟ್ಟ ವೆಂಕಟರಮಣಶಾಸ್ತ್ರಿಗಳವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಮೈಸೂರು ಕೃಷ್ಣರಾಜ ಮೊಹಲ್ಲಾ ಹಳೆ ಅಗ್ರಹಾರದಲ್ಲಿ ತಮ್ಮಯ ಸುಬ್ಬಣನವರ ಬೀದಿಯಲ್ಲಿರುವ ವೆಂಕಟರಮಣಶಾಸ್ತ್ರಿಗಳ ಹೆಂಡತಿ ನಿಂಗಮ್ಮಾ, ಮೃತಪಟ್ಟ ಸದರೀ ವೆಂಕಟರಮಣಶಾಸ್ತ್ರಿಗಳವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಮೇಲ್ಕಂಡವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1904ನೆ ಇಸವಿ ನವಂಬರು ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ವೆಂಕರಮಣಶಾಸ್ತ್ರಿಗಳವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1904—1905ನೆ ಇಸವಿ ಅರ್ಜೀ ನಂಬರ್ 92.

ಮೃತಪಟ್ಟ ಗುಂಡಮ್ಮ ಉರುಫ್ ರಂಗಮ್ಮನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರರು ಮೈಸೂರು ಲಷ್ಕರಿ ಮೊಹಲ್ಲಾದಲ್ಲಿರುವ ಶಿಂಗಭಟ್ಟರ ಮಗಳು ಗುಂಡಮ್ಮ ಉರುಫ್ ನರಸಮ್ಮನ ಮಗ ಸುಮಾರು 7 ವರುಷದ ಸುಬ್ರಾಯ ಮೈನರ್, ಗಾರ್ಡಿಯನ್ ತಂದೆ ದಾಸಂಭಟ್ಟರು, ಮೃತಪಟ್ಟ ಸದರೀ ಗುಂಡಮ್ಮ ಉರುಫ್ ರಂಗಮ್ಮನವರಿಗೆ ಮಗನಾಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ವಾಸಸ್ಥರಾಗಿ ಮೃತಪಟ್ಟ ಮೇಲ್ಕಂಡವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಗುಂಡಮ್ಮ ಉರುಫ್ ರಂಗಮ್ಮನವರ ಅರ್ಜಿಯನ್ನು ಸನ್ 1904ನೆ ಇಸವಿ ನವಂಬರ್ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೇಲ್ಕಂಡವರ ಆಸ್ತಿಗೆ ಹಕ್ಕುದಾರರಾದ ವಿಶಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 560.

ಮೃತಪಟ್ಟ ಶೀತಾರಾಮಯ್ಯನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಚಾಮರಾಜನಗರದಲ್ಲಿರುವ ಪವತಿ ದಿಡ್ಡೆಪುರದ ಶೀತಾರಾಮಯ್ಯನವರ ಹೆಂಡತಿ ಸಾವಿತ್ರಮ್ಮಾ, ಮೃತಪಟ್ಟ ಸದರೀ ಶೀತಾರಾಮಯ್ಯನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಾಮರಾಜನಗರ ವಾಸಸ್ಥರಾಗಿ ಮೃತಪಟ್ಟ ಮೇಲ್ಕಂಡವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಶೀತಾರಾಮಯ್ಯನವರ ಅರ್ಜಿಯನ್ನು ಸನ್ 1904ನೆ ಇಸವಿ ನವಂಬರ್ ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರಿ ಮೃತಪಟ್ಟ ಮೇಲ್ಕಂಡವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರು ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಸನ್ 1903—1904ನೆ ಇಸವಿ ಅರ್ಜೀ ನಂಬರ್ 593.

ಮೃತಪಟ್ಟ ಮೊಹರ್ದೀನ್‌ಸಾಬರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಗುಂಡ್ಲು ತಾಲ್ಲೂಕು ಕಸಬೆಯಲ್ಲಿ ಇರುವ ಪವತಿ ಮೊಹರ್ದೀನ್ ಸಾಹೇಬರ ಹೆಂಡತಿ ಸುಮಾರು 40 ವರುಷ ವಯಸ್ಸಿನ ಖಾದರ್‌ಬೀಬಿ, (2) ಇವರ ಮಗಳು 24 ವಯಸ್ಸಿನ ವೀರಾಂಬಿ, (3) ಸುಮಾರು 17½ ವಯಸ್ಸಿನ ಹಯಾತ್‌ಬಿ, (4) 15½ ವಯಸ್ಸಿನ ಮಾಜಾನ್‌ಬಿ, (5) ಸುಮಾರು 6 ವರುಷದ ಖಾಸಂಬಿ, 3—4—5 ಮೈನರ್, ಗಾರ್ಡಿಯನ್ ತಾಯಿ 1ನೆ ಅರ್ಜಿದಾರ್ ಖಾದರ್‌ಬೀಬಿ, ಮೃತಪಟ್ಟ ಸದರೀ ಮೊಹರ್ದೀನ್‌ಸಾಬರಿಗೆ ಹೆಂಡತಿ, ಮಕ್ಕಳು, ಆಗಬೇಕೆಂಬ ಹಕ್ಕುದಾರಿ ಮೇಲೆ ಮಳವಳ್ಳಿ ಮತ್ತು ಗುಂಡ್ಲುಪೇಟೆ ವಾಸಸ್ಥರಾಗಿ ವೀರರಾಜಪೇಟೇಲಿ ಮೃತಪಟ್ಟ ಮೊಹರ್ದೀನ್‌ಸಾಬರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ ಸನ್ 1901ನೆ ಇಸವಿ 7ನೆ ರೆಗ್ಯುಲೇಷನ್ ಪ್ರಕಾರ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರಿ ದರಖಾಸ್ತುದಾರರಾದ ಮೇಲ್ಕಂಡವರ ಅರ್ಜಿಯನ್ನು ಸನ್ 1904ನೆ ಇಸವಿ ನವಂಬರು ತಿಂಗಳು ತಾರೀಖು 1ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಮೊಹರ್ದೀನ್‌ಸಾಬರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರು ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸನ್ 1904ನೆ ಇಸವಿ ಸೆಪ್ಟಂಬರ್ ತಿಂಗಳು 7ನೆ ತಾರೀಖಿನಲ್ಲಿ ಕೋರ್ಟು ಮೊಹರ್ನಿಶಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಬಿ. ಎಸ್. ಕ್ರಿಷ್ಣಸ್ವಾಮಿ ಅಯ್ಯಂಗಾರ್,
ಆಕ್ಟಿಂಗ್ ಸಬ್ ಜಡ್ಜ್.

ಚಿಕ್ಕಬಳ್ಳಾಪುರ ಮ್ಯುನಿಸಿಫ್ ಕೋರ್ಟ್‌ನಲ್ಲಿ.

ಸ್ಸ 1903-04ನೆ ಇಸವಿ ದಿವಾಳಿ ವ್ಯಾಜ್ಯದ ಮಿಸಲೇನಿಯಸ್ ನಂ. 457.

ಚಿಕ್ಕಬಳ್ಳಾಪುರದಲ್ಲಿರುವ ದಿವಾಳಿಯಾದ ಡಿಕ್ರಿ ದೇಣೇದಾರ ಚಿಕ್ಕಬಳ್ಳಾಪುರದ ಮ್ಯುನಿಸೀಫ್‌ಕೋರ್ಟು ಅಮೀನಾ ನಾರಣಪ್ಪನವರ ವಿಷಯದಲ್ಲಿ—

ಈ ವಿಷಯವು ಮ್ಯುನಿಸೀಫರವರಗಳಾದ A. ನರಸಿಂಹ್ಮಯ್ಯಂಗಾರ್, B. A., B. L., ಎಸ್ಕ್ವಯರ್ ಮತ್ತು S. ಹಿರಿಯಣ್ಣಯ್ಯ, M. A., B. L., ಎಸ್ಕ್ವಯರ್ ರವರಗಳ ರೂಬರೂಬ್ ದಿವಾಳಿಯಾದ ನಾರಣಪ್ಪನವರ ಸಮಕ್ಷದಲ್ಲಿ ಸುತ್ತು ದಿವಾಳಿದಾರನ ಲೇಣೆದಾರರ ಗೈರಹಾಜರ್, ದರ್ಖಾಸ್ತು ಮಾಡಲ್ಪಟ್ಟಿತು ಮತ್ತು ಸ್ಸ 1904ನೆ ಇಸವಿ ಜುಲೈ 27ನೆ ತಾರೀಖಿನ ಬಾಬತ್ತು ರಿಸೀವರಾದ ಈ ಕೋರ್ಟ್ ಡಿ! ನಾಜರ್ ರಾಮಚಂದ್ರರಾಯರು ಸರಟಿಫಿಕೇಟ್ ಓದಲಾಯಿತು ಇದೇ ವಿಷಯದಲ್ಲಿ ಸ್ಸ 1901ನೆ ಇಸವಿ ಜುಲೈ 22ನೆ ತಾರೀಖಿನಲ್ಲಿ ಈ ಕೋರ್ಟಿನಿಂದ ಮಾಡಲ್ಪಟ್ಟ ಹುಕುಂ ಮೇರಿಗೆ ಪಟ್ಟಿಯಲ್ಲಿ ಕಂಡ ಯಾವ ಸಾಲಗಳಿಗೂ ಸಂಬಂಧ ದಿವಾಳಿಯಾದವರನ್ನು ಎಲ್ಲಾ ಜವಾಬ್ದಾರಿಯಿಂದಲೂ ನಿಖಾಲಸ್ಮಾಡಿರುವದಲ್ಲದೆ ಆ ಬಗ್ಗೆ ಸದರೀಯವರನ್ನು ದಸ್ತಗಿರಿ ಮಾಡಿ ಕೈದು ಮಾಡುವದರ ದೆಶೆಯಿಂದಲೂ ಬಿಡಗಡೇ ಮಾಡಿ ಇರುವದಾಗಿ ಇದರಿಂದ ಹುಕ್ಕುಂ ಮಾಡಲ್ಪಟ್ಟಿ ಇದೆ.

ಜನರಲ್ ನಂಬರು.	ಲೇಣೇದಾರರ ಹೆಸರು.	ಸಾಲದ ಮೊಬಲಗು.			ಸಾಲಗಳ ಸ್ವಭಾವ.
		ರೂ.	ಆ.	ಪೈ.	
1	ಚಿಕ್ಕಬಳ್ಳಾಪುರದ ದ್ರವ್ಯಾಭಿವೃದ್ಧಿ ಬ್ಯಾಂಕಿಗೆ	214	2	6	ಡಿಕ್ರಿ ಬಾಬತು
2	ಡಿಟೋ ಅದಾಲತ್ತು ಬ್ಯಾಂಕಿಗೆ	50	0	0	ಡಿಟೋ
3	ಡಿಟೋ ಲೈಫ್ ಇನ್‌ಷ್ಯೂರೆನ್ಸ್ ಕಂಪೆನಿಗೆ	125	0	0	ಡಿಟೋ
4	ಡಿಟೋ ಆಂಜನೇಯ ಸ್ವಾಮಿ ಬ್ಯಾಂಕಿಗೆ	72	0	0	ಡಿಟೋ
5	ಡಿಟೋ ಲಕ್ಷ್ಮೀಸಹಾಯದ ಬ್ಯಾಂಕಿಗೆ	17	0	0	ಡಿಟೋ
6	ಡಿಟೋ ಶುಭಾದಿಕರ್ಮ ಧನಾಭಿವೃದ್ಧಿ ಬ್ಯಾಂಕಿಗೆ ...	150	0	0	ಡಿಟೋ
7	ಡಿಟೋ ವಂಕಟ್ರಮಣಸ್ವಾಮಿ ಬ್ಯಾಂಕಿಗೆ	250	0	0	ಡಿಟೋ
8	ಬಲಗಾ ವಂಕಟಯ್ಯವೈಯ್ಯನವರಿಗೆ	21	0	0	ಡಿಟೋ
9	ಸುಬ್ರಹ್ಮಣ್ಯೇಶ್ವರಸ್ವಾಮಿ ಬ್ಯಾಂಕಿಗೆ	120	0	0	ಪತ್ರದ ಬಾಬತು
10	ಪುಟ್ಟಿ ನಾರಾಯಣಸ್ವಾಮಿ ಶೆಟ್ಟಗೆ	65	0	0	ಡಿಟೋ
11	ವಂಕಾಯಲ ಲಕ್ಷ್ಮಕ್ಕನವರಿಗ	330	0	0	ಭೋಗ್ಯದ ಬಾಬತು
	ಡಿಟೋ ಪುವರಿಗೆ ಬಡ್ಡೀ ಶೇರಿ	275	0	0	ನಗಾಧಾರ
12	ಮಾಳಿಗಪ್ಪನವರಿಗೆ	110	0	0	ಡಿಟೋ
	ಜುಮ್ಲಾ ..	1,799	2	6	

ಸ್ಸ 1904ನೆ ಇಸವಿ ಆಗಸ್ಟು ಮಾಹೆ 27ನೆ ತಾರೀಖಿನಲ್ಲಿ ಕೋರ್ಟು ಮೊಹರ್ ನಮ್ಮ ದಸ್ತಖತ್ತು ನಿಸಿ ಕೊಡಲ್ಪಟ್ಟಿದೆ.

ಎಸ್. ಹಿರಿಯಣ್ಣಯ್ಯ, ಮ್ಯುನಿಸೀಫ್.

Mysore Government Central Press, Bangalore —1901.